ಶಿವಮೊಗ್ಗ ಶನಿವಾರ, 30 ಮೇ 2026 ಸಂಪುಟ 17, ಸಂಚಿಕೆ 36, ಪುಟಗಳು 12
▸epaper.hosadigantha.com ▸hosadigantha.com ₹4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ RNI: KAR KAN 2010/64051

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಈ ಬಾರಿ ಮುಂಗಾರು ದುರ್ಬಲ: ಐಎಂಡಿ
♦ಪುಟ ೭



ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಶುಕ್ರವಾರ ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿರುವ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. ರಾಜ್ಯಪಾಲ ಥಾವರ್ ಚಂದ್ ಗೆಹಲೋತ್, ರವಿಶಂಕರ್ ಗುರೂಜಿ ಜತೆಯಲ್ಲಿದ್ದರು.

ಕಿರುಸುದ್ದಿ

ಭೀಮಾ ತೀರದಲ್ಲಿ 6 ಜನರ ಭೀಕರ ಹತ್ಯೆ
♦ಪುಟ ೯

ನೀಟ್ ಪರೀಕ್ಷೆ: ಮೋದಿ ಖುದ್ದು ಮೇಲ್ವಿಚಾರಣೆ
♦ಪುಟ ೭

ಮದುವೆಯಾಗುವುದೇಕೆ? ವಧು ಅವಮಾನಿಸುವುದೇಕೆ?
♦ಪುಟ ೭

ಹೈಕೋರ್ಟ್‌ಗಳಲ್ಲಿ ತೀರ್ಪು ವಿಳಂಬಕ್ಕೆ ಸುಪ್ರೀಂಕೋರ್ಟ್ ಬ್ರೇಕ್
♦ಪುಟ ೭

ಇಂದು ಸಂಜೆ 4 ಗಂಟೆಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ

ಡಿ.ಕೆ.ಶಿವಕುಮಾರ್ ಹೆಸರು ಪ್ರಸ್ತಾಪಿಸಲಿರುವ ಸಿದ್ದರಾಮಯ್ಯ

ಡಿಕೆಶಿಗೆ ಇಂದು ಪಟ್ಟ

♦**ಬೆಂಗಳೂರು:** ರಾಜ್ಯ ರಾಜಕೀಯ ಬೆಳವಣಿಗೆ ಅಂತಿಮ ಹಂತ ತಲುಪಿದ್ದು, ಶನಿವಾರ(ಮೇ 30) ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕನ ಆಯ್ಕೆಗಾಗಿ ಸಭೆ ನಡೆಯಲಿದೆ. ಈ ಸಭೆಯಲ್ಲಿ ಶಾಸಕಾಂಗ ಪಕ್ಷದ ನೂತನ ನಾಯಕರಾಗಿ ಡಿ.ಕೆ. ಶಿವಕುಮಾರ್ ಆಯ್ಕೆಯಾಗುವುದು ಖಚಿತವಾಗಿದ್ದು, ಸಿದ್ದರಾಮಯ್ಯ ಅವರ ಮುಖಾಂತರವೇ ಶಿವಕುಮಾರ್ ಹೆಸರು ಪ್ರಸ್ತಾಪಿಸಿ ಅನುಮೋದನೆ ಪಡೆಯಲು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸಿದೆ.

ಹೊಸದಿಲ್ಲಿಗೆ ತೆರಳಿರುವ ಸಿದ್ದರಾಮಯ್ಯ ಶುಕ್ರವಾರವೇ ಬೆಂಗಳೂರಿಗೆ ವಾಪಸ್ಸಾಗಿದ್ದು, ಡಿ.ಕೆ. ಶಿವಕುಮಾರ್ ಇಂದು (ಶನಿವಾರ) ದಿಲ್ಲಿಯಿಂದ ಮರಳಿದ ಬಳಿಕ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕಾಂಗ್ರೆಸ್ ಶಾಸಕಾಂಗ ಸಭೆ ನಿಗದಿಪಡಿಸಲಾಗಿದೆ. ಶನಿವಾರ ಸಂಜೆ ನಾಲ್ಕು ಗಂಟೆಗೆ ಸಭೆ ನಡೆಯಲಿದ್ದು, ಸದ್ಯ ದಿಲ್ಲಿಗೆ ಹೋಗಿರುವ ಹಾಗೂ ಮತಕ್ಷೇತ್ರದಲ್ಲಿರುವ ಶಾಸಕರಿಗೆ ಬೆಂಗಳೂರಿನಲ್ಲಿರುವಂತೆಯೇ ಸೂಚಿಸಲಾಗಿದೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಾರ್ಯದರ್ಶಿ ಅಲ್ಲಮಪ್ರಭು ಪಾಟೀಲ್ ತಿಳಿಸಿದ್ದಾರೆ.

ಸಿಎಲ್‌ಪಿ ಸಭೆಯಲ್ಲಿ ಎಐಸಿಸಿ ವೀಕ್ಷಕರಾಗಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಭಾಗಿಯಾಗಲಿದ್ದಾರೆ. ಈ ಶಾಸಕಾಂಗ ಸಭೆಯಲ್ಲಿ ಧನ್ಯವಾದ ಭಾಷಣದ ಬಳಿಕ ಸಿದ್ದರಾಮಯ್ಯ ಈ ನೂತನ ನಾಯಕನ ಹೆಸರು ಸೂಚಿಸಲಿದ್ದು, ಶಾಸಕರ ಅನುಮೋದನೆ ಪಡೆದು ಶಿಷ್ಟಾಚಾರದ ಪ್ರಕಾರ ಒಗ್ಗಟ್ಟಿನಿಂದ ನೂತನ ನಾಯಕನನ್ನು ಆಯ್ಕೆ ಮಾಡಲಾಗುತ್ತದೆ. ➡ಪುಟ ೮



ಸೋನಿಯಾ ಗಾಂಧಿಯ ದಿಲ್ಲಿ ನಿವಾಸದಲ್ಲಿ ಶುಕ್ರವಾರ ರಾಹುಲ್‌ರನ್ನು ಭೇಟಿಯಾದ ಡಿ.ಕೆ.ಶಿವಕುಮಾರ್.

> ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಯಶಸ್ವಿ, ಪ್ರಭಾವಶಾಲಿ ಹಾಗೂ ದೀರ್ಘಾವಧಿ ಮುಖ್ಯಮಂತ್ರಿಯಾಗಿ ಜನಮಾನಸದಲ್ಲಿ ನೆಲೆಸಿರುವ ಸಿದ್ದರಾಮಯ್ಯನವರು ರಾಜಕಾರಣದ ಧೀಮಂತ ನಾಯಕ.
> ■ **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಸಿದ್ದರಾಮಯ್ಯ ರಾಜೀನಾಮೆ ಅಂಗೀಕರಿಸಿದ ರಾಜ್ಯಪಾಲ

ವೈಯಕ್ತಿಕ ಕಾರಣದಿಂದ ಮಧ್ಯಪ್ರದೇಶಕ್ಕೆ ತೆರಳಿದ್ದ ರಾಜ್ಯಪಾಲ ಗೆಹಲೋತ್ ಅವರು ಸಿಎಂ ಸ್ಥಾನಕ್ಕೆ ಸಿದ್ದರಾಮಯ್ಯ ನೀಡಿದ್ದ ರಾಜೀನಾಮೆ ಅಂಗೀಕರಿಸಿದ್ದಾರೆ. ➡ಪುಟ ೮

ಸಿದ್ದರಾಮಯ್ಯ - ರಾಹುಲ್ ಆಲಿಂಗನ

ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ಭೇಟಿಯ ವೇಳೆ ಸಿದ್ದರಾಮಯ್ಯ ಅವರು ಅತ್ಯಂತ ಭಾವನಾತ್ಮಕವಾಗಿ ಆಲಿಂಗನ ಮಾಡಿದ ಪ್ರಸಂಗವೂ ನಡೆಯಿತು. ಸೋನಿಯಾ ಅವರ ನಿವಾಸದಲ್ಲಿಯೇ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಸಿದ್ದರಾಮಯ್ಯ ಅವರು, ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅಲ್ಲದೇ ರಾಹುಲ್ ಗಾಂಧಿ ಕೂಡಾ ಮುಂದಿನ ದಿನಗಳಲ್ಲಿ ಪಕ್ಷ ನಿಮ್ಮನ್ನು ಗೌರವಯುತವಾಗಿ ನಡೆಸಿಕೊಳ್ಳುತ್ತದೆ ಎಂಬ ಭರವಸೆ ನೀಡಿದ್ದಾರೆ ಎನ್ನಲಾಗಿದೆ. ➡ಪುಟ ೮

ಸಿದ್ದರಾಮಯ್ಯ ಜತೆ ಡಿ.ಕೆ.ಶಿವಕುಮಾರ್ ಊಟ

ದಿಲ್ಲಿ ಖಾಸಗಿ ಹೋಟೆಲ್‌ನಲ್ಲಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿದ ಡಿ.ಕೆ.ಶಿವಕುಮಾರ್, ಅವರೊಂದಿಗೆ ಊಟ ಸವಿದಿದ್ದಾರೆ. ಜತೆಗೆ ಯತೀಂದ್ರ, ಕೆ.ಎಚ್. ಮುನಿಯಪ್ಪ ಸಹ ಉಪಸ್ಥಿತರಿದ್ದು, ಈ ವೇಳೆ ಮಹತ್ವದ ವಿಷಯಗಳು ಚರ್ಚೆಯಾಗಿವೆ ಎನ್ನಲಾಗಿದೆ.

ಪದಗ್ರಹಣಕ್ಕೆ ಭದ್ರತೆ ಬಿಗಿ

ರಾಜ್ಯದ ನೂತನ ಸಿಎಂ ಪ್ರಮಾಣವಚನ ಸ್ವೀಕಾರ ಸಮಾರಂಭದ ಹಿನ್ನೆಲೆ ಬೆಂಗಳೂರು ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಮಹತ್ವದ ಸಭೆ ನಡೆದಿದೆ. ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ ಜಂಟಿ ಆಯುಕ್ತರು, ಡಿಸಿಪಿಗಳು ಭಾಗಿಯಾಗಿದ್ದು, ಸಮಾರಂಭಕ್ಕೆ ಬಿಗಿ ಭದ್ರತೆ ಒದಗಿಸಲು ಸಕಲ ಸಿದ್ಧತೆ ಕೈಗೊಂಡಿದ್ದಾರೆ.

ಕಿರುಸುದ್ದಿ

ಜಿಲ್ಲೆಯಲ್ಲಿ ಕಾಂಗ್ರೆಸ್ ದೌರ್ಜನ್ಯ: ಬಿಜೆಪಿ ಖಂಡನೆ:

ಮೂಡಿಗೆರೆ: ಅಧಿಕಾರದ ಮದದಿಂದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ನಾಯಕರ ದೌರ್ಜನ್ಯವನ್ನು ಬಿಜೆಪಿ ತೀವ್ರವಾಗಿ ಖಂಡಿಸುತ್ತದೆ ಎಂದು ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಜೆ.ಎಸ್. ರಘು ತಿಳಿಸಿದ್ದಾರೆ.



ಅವರು ಸೋಮವಾರ ಹೇಳಿಕೆಯಲ್ಲಿ ತಿಳಿಸಿ, ಜಿಲ್ಲೆಯಲ್ಲಿ ಕಾಂಗ್ರೆಸ್ಸಿಗರ ಸುಳ್ಳು ಭರವಸೆ ಮತ್ತು ಕುತಂತ್ರದಿಂದ 5 ಶಾಸಕರು ಜಯಗಳಿಸಿದ ಮೇಲೆ ಜಿಲ್ಲೆಯಲ್ಲಿ ತಮ್ಮದೇ ಸಾಮ್ರಾಜ್ಯವೆನ್ನುವಂತೆ ಅಧಿಕಾರ ನಡೆಸುತ್ತಿದ್ದಾರೆ. ಈ ಹಿಂದೆ ಸಿ.ಟಿ. ರವಿ ಹಿಂದೆ ಶಾಸಕರಾಗಿದ್ದ ಸಂದರ್ಭದಲ್ಲಿ 5.5 ಸಾವಿರ ಕೋಟಿ ಅನುದಾನ ತಂದು ಕಾಮಗಾರಿ ಪ್ರಾರಂಭಿಸಿದ್ದರು. ಕಾಂಗ್ರೆಸ್ ಶಾಸಕರ ಆಯ್ಕೆಯಾದ ಬಳಿಕ ಕಾಮಗಾರಿ ಹೆಸರು ಮತ್ತು ಸ್ಥಳ ಬದಲಾವಣೆ ಮಾಡಿ, ತಾವೇ ಅನುದಾನ ತಂದಿದ್ದು ಎಂದು ಸುಳ್ಳು ಹೇಳುತ್ತಿದ್ದಾರೆ. ಅಲ್ಲದೇ ತನ್ನ ಸಹಚರರಿಗೆ ಕಾಮಗಾರಿ ಹಂಚಿ ಲಾಭ ಮಾಡಿಕೊಳ್ಳುತ್ತಿದ್ದಾರೆ. ಈ ಕಾಮಗಾರಿಗಳನ್ನು ಎಂಎಲ್‌ಸಿ ಸಿ.ಟಿ. ರವಿ ಅವರು ವೀಕ್ಷಣೆಗೆ ತೆರಳಿದಾಗ, ಕಾಂಗ್ರೆಸ್ ಕಾರ್ಯಕರ್ತರು ಹಲ್ಲೆಗೆ ಯತ್ನಿಸಿದ್ದಲ್ಲದೇ ಪೊಲೀಸರನ್ನು ಬಳಸಿಕೊಂಡು ಕೇಸು ದಾಖಲಿಸಿರುವುದು ಖಂಡನೀಯ ಎಂದು ಹೇಳಿದ್ದಾರೆ. ಶೃಂಗೇರಿಯಲ್ಲಿ ವಿಧಾನಸಭೆ ಕ್ಷೇತ್ರದ ಮರುಎಣಿಕೆಯಲ್ಲಿ ಬಿಜೆಪಿ ಗೆದ್ದಿರುವುದು ಜಗತ್‌ಜಾಹಿರಾಗಿದ್ದಲ್ಲದೇ ಅವರ ಕೂಡ ಬಯಲಾಗಿದೆ. ಸೋಲನ್ನು ಒಪ್ಪಿಕೊಳ್ಳದೇ ನ್ಯಾಯಾಲಯಕ್ಕೆ ಹೋಗಿ ತಡೆ ತಂದುಕೊಂಡಿದ್ದಾರೆ. ಅವರದ್ದೇ ಸರಕಾರ ಇದ್ದರೂ ಅಧಿಕಾರಿಗಳು ಬಿಜೆಪಿ ಪರವಾಗಿ ಕೆಲಸ ಮಾಡಿದ್ದಾರೆಂದು ಜನರ ದಾರಿ ತಪ್ಪಿಸುತ್ತಿರುವುದು ನಾಚಿಗೇಡಿನ ಸಂಗತಿ. ರಾಜ್ಯದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ದೌರ್ಜನ್ಯ ಮಿತಿ ಮೀರುತ್ತಿದೆ. ಇದು ಕಾಂಗ್ರೆಸ್‌ನ ಅವನತಿ ಪುಷ್ಟಿ ಸಿಗುತ್ತಿದ್ದು, ಮುಂದಿನ ಚುನಾವಣೆಯಲ್ಲಿ ಬಿಜೆಪಿ ಗೆಲವು ಸಾಧಿಸುವ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿದು ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲಿದ್ದಾರೆಂದು ಹೇಳಿದರು.

ಉಪೇಂದ್ರ ನಾಯ್ಕ್ ನಿಧನ

ಶೃಂಗೇರಿ: ಮೆಣಸೆ ಗ್ರಾಮ ಪಂಚಾಯಿತಿಯ ಮೆಣಸೆಯ ಉಪೇಂದ್ರ ನಾಯ್ಕ್ (73) ಶುಕ್ರವಾರ ನಿಧನರಾಗಿದ್ದಾರೆ. ಇವರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ.

ಇಂದು ಪ್ರತಿಭಟನೆ

ಶೃಂಗೇರಿ: ಕರ್ನಾಟಕ ಪ್ರಗತಿಪರ ಸಂಘಟನೆ ಹಾಗೂ ಜಾತ್ಯತೀತ ಪಕ್ಷದ ಒಕ್ಕೂಟದಿಂದ ಮೇ.30ರಂದು ಕರ್ನಾಟಕ ಪ್ರತಿರೋಧ ಪ್ರತಿಭಟನಾ ಸಭೆ ಸಂತೆ ಮೈದಾನದಲ್ಲಿ ಬೆಳಗ್ಗೆ 11ಕ್ಕೆ ಏರ್ಪಡಿಸಿದೆ.

ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ

ಚಿಕ್ಕಮಗಳೂರು: ಚಿಕ್ಕಮಗಳೂರು ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳ ಪಿಯುಸಿ, ಐಟಿಐ ಮತ್ತು ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪ.ಜಾ ಮತ್ತು ಪ.ವರ್ಗದ ಪಿಯುಸಿ, ಸಮಾನಾಂತರ ಡಿಪ್ಲೊಮಾ, ಐಟಿಐ ಕೋರ್ಸಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ 2026-27ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಪ್ರವರ್ಗ-1, ಎಸ್.ಸಿ ಮತ್ತು ಎಸ್.ಟಿ.ಯವರಿಗೆ 2.50 ಲಕ್ಷ ರೂ. ಹಾಗೂ 2ಬಿ, 3ಎ, 3ಬಿಯವರಿಗೆ 1 ಲಕ್ಷ ರೂ. ಮಿತಿಯೊಳಗಿರಬೇಕು. ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಸಂಪರ್ಕಿಸಿ ಜೂನ್ 15ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು. ತಾಲ್ಲೂಕುವಾರು ವಿದ್ಯಾರ್ಥಿ ನಿಲಯಗಳ ವಿವರ ಹಾಗೂ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲಾತಿಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ ಅನ್ನು ನೋಡಬಹುದು. ಹೆಚ್ಚಿನ ವಿವರಕ್ಕೆ ದೂರವಾಣಿ (ಸಂಖ್ಯೆ 8050770004) ಯನ್ನು ಸಂಪರ್ಕಿಸಬಹುದು.

ಸಾಂಸ್ಕೃತಿಕ ಸೌರಭ ಕಾರ್ಯಕ್ರಮ

ಚಿಕ್ಕಮಗಳೂರು: 2026-27ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಾಂಸ್ಕೃತಿಕ ಸೌರಭ, ಯುವ ಸೌರಭ, ಚಿಗುರು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯೋಜಿಸಲಾಗಿದೆ. ಇದುವರೆಗೂ ಇಲಾಖೆಯಲ್ಲಿ ನೋಂದಾಯಿಸದೇ ಇರುವ ಕಲಾವಿದರುಗಳು ತಮ್ಮ ಅರ್ಹತೆಯ ಪ್ರಮಾಣ ಪತ್ರಗಳೊಂದಿಗೆ (ಆಕಾಶವಾಣಿಯ ಬಿ, ಬಿ-ಹೈ ಮತ್ತು ಎ ಗ್ರೇಡ್ ಕಲಾವಿದರು, ಸಂಗೀತ ಮತ್ತು ನೃತ್ಯ ಪ್ರಕಾರಗಳಲ್ಲಿ ಗಳಿಸಿದ ಪರೀಕ್ಷೆಗಳ ಪ್ರಮಾಣಪತ್ರಗಳೊಂದಿಗೆ) ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕುವೆಂಪು ಕಲಾಮಂದಿರ, ಚಿಕ್ಕಮಗಳೂರು ಇಲ್ಲಿಗೆ ಜೂನ್ 15ರ ಒಳಗಾಗಿ ಅರ್ಜಿ ಸಲ್ಲಿಸಲು ಕೋರಿದೆ. ಮಾಹಿತಿಗೆ 08262-298172 ಅನ್ನು ಸಂಪರ್ಕಿಸಬಹುದು.



ಮೂಡಿಗೆರೆ ಪಟ್ಟಣದ ಸರಕಾರಿ ಪದವಿಪೂರ್ವ ಕಾಲೇಜಿನ ಅಭಿವೃದ್ಧಿ ಸಮಿತಿ ಪದಾಧಿಕಾರಿಗಳು, ಪ್ರಾಂಶುಪಾಲರು ಹಾಗೂ ಉಪನ್ಯಾಸಕರು 2026-27ನೇ ಸಾಲಿನ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಸೋಮವಾರ ಗುಲಾಬಿ ಹೂ ನೀಡುವ ಮೂಲಕ ಸಿಹಿ ವಿತರಿಸಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಪ್ರಾಂಶುಪಾಲ ಬಿ.ಮಹೇಶ್ ಉಪನ್ಯಾಸಕರಾದ ಸಾಧಿಕ್ ಉಲ್ ಬೇಗಮ್, ಆನಂದ್, ಪ್ರಸಾದ್ ಬಕ್ಕಿ, ಆದರ್ಶ್, ರಘು, ದೀಪ್ತಿ, ಶ್ವೇತಾ, ಅರ್ಪಿತಾ, ಸುಮಾ, ಬಿಂದು ಉಪಸ್ಥಿತರಿದ್ದರು.

ಅಜ್ಜಂಪುರ ತಾಲೂಕಿನ ರೈಲ್ವೆ ಸ್ಟೇಷನ್‌ನಲ್ಲಿ ನಿಗದಿತ ಸಮಯಕ್ಕೆ ರೈಲು ಬಾರದೆ ಇದ್ದ ಕಾರಣ ಪ್ರಯಾಣಿಕರ ಬಿರು ಬಿಸಿಲಿಗೆ, ಕುಡಿಯುವ ನೀರು ಇಲ್ಲದೆ, ನೆರಳಿನ ಆಸರೆಯೂ ಇಲ್ಲದೆ ತತ್ತರಿಸಿದರು. ಇನ್ನಾದರೂ ಜನಪ್ರತಿನಿಧಿಗಳು ಇತ್ತ ಗಮನಹರಿಸಿ ಪ್ರಯಾಣಿಕರ ಸುಖ ಪ್ರಯಾಣಕ್ಕೆ ಬೇಕಾದ ವ್ಯವಸ್ಥೆ ಕಲ್ಪಿಸಬೇಕೆಂದು ಮನವಿ ಮಾಡಿದ್ದಾರೆ.



ಸರಣಿ ರಜೆ | ಗಿರಿ ತಪ್ಪಲಿಗೆ ದೊಡ್ಡ ಸಂಖ್ಯೆಯಲ್ಲಿ ಆಗಮಿಸುತ್ತಿರುವ ಪ್ರವಾಸಿಗರು

ಮಳೆಗೆ ಚಿಗುರಿದ ಪ್ರವಾಸೋದ್ಯಮ





ಚಿಕ್ಕಮಗಳೂರು: ಬಿರುಬೇಸಿಗೆ ಹಿನ್ನೆಲೆಯಲ್ಲಿ ಸೊರಗಿದ್ದ ಜಿಲ್ಲೆಯ ಪ್ರವಾಸೋದ್ಯಮ ಒಂದೆರಡು ಹದ ಮಳೆಯ ಪರಿಣಾಮ ಇದೀಗ ಚೇತರಿಸಿ ಕೊಳ್ಳುತ್ತಿದೆ.

ಬಕ್ರೀದ್ ಹಬ್ಬದ ಜೊತೆಯಲ್ಲೇ ಸರಣಿ ರಜೆಗಳು ಬಂದ ಕಾರಣ ಐಟಿ ಉದ್ಯೋಗಿಗಳು ವಾರಾಂತ್ಯದ ರಜೆ ಕಳೆಯಲು ಗಿರಿ ತಪ್ಪಲಿಗೆ ದೊಡ್ಡ ಸಂಖ್ಯೆಯಲ್ಲಿ ಆಗಮಿಸಿದ್ದಾರೆ. ಗಿರಿ ಭಾಗದ ನಿಸರ್ಗ ತಾಣಗಳಿಗೆ ಭೇಟಿ ನೀಡಲು ಬೆಳಗ್ಗೆ ಮತ್ತು ಸಂಜೆ ಎರಡು ಪಾಳಿಗೆ ತಲಾ 600 ವಾಹನಗಳ ಪ್ರವೇಶಕ್ಕೆ ಪೂರ್ಣ ಪ್ರಮಾಣದಲ್ಲಿ ಆನ್‌ಲೈನ್ ಬುಕ್ಕಿಂಗ್ ಆಗುತ್ತಿದೆ.

ಶುಕ್ರವಾರ ಬೆಳಗ್ಗೆ ಏಕ ಕಾಲಕ್ಕೆ ಪ್ರವಾಸಿಗರ ವಾಹನಗಳು ಆಗಮಿಸಿದ ಹಿನ್ನೆಲೆಯಲ್ಲಿ ದತ್ತಪೀಠ ಮಾರ್ಗದ ಕವಿಕಲ್ ಗಂಡಿ ಸಮೀಪ ನವಿಲು ಗುಡ್ಡದ ಬಳಿ ವಾಹನಗಳ ದೊಡ್ಡ ಸರತಿ ಕಂಡು ಬಂತು. ಅಲ್ಲಲ್ಲಿ ಟ್ರಾಫಿಕ್ ಜಾಮ್ ಉಂಟಾಯಿತು.

ಝರಿ ಫಾಲ್ಸ್, ಹೊನ್ನಮ್ಮನ ಹಳ್ಳ, ಸೀತಾಳಯ್ಯನಗಿರಿ, ಮುಳ್ಳಯ್ಯನಗಿರಿ, ದತ್ತಪೀಠ, ಗಾಳಿಕೆರೆ, ಮಾಣಿಕ್ಯಾಧಾರ ಇನ್ನಿತರೆ ತಾಣಗಳಲ್ಲಿ ಪ್ರವಾಸಿಗರ ಕಲರವ ಕಂಡುಬಂತು.

ಬಿರು ಬೇಸಿಗೆ ಹಿನ್ನೆಲೆಯಲ್ಲಿ ಕಳೆದೆರಡು ತಿಂಗಳು ಗಿರಿ ಪ್ರದೇಶ ಸೇರಿದಂತೆ ಜಿಲ್ಲೆಯ ಇತರೆ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರಲಿಲ್ಲದೆ ಭಣಗುಡುವಂತಾಗಿತ್ತು, ಹೋಟೆಲ್, ರೆಸಾರ್ಟ್, ಹೋಂಸ್ಟೇಗಳಿಗೆ ಅತಿಥಿಗಳೇ ಇರಲಿಲ್ಲ. ಪ್ರವಾಸಿಗರನ್ನೇ ಅವಲಂಬಿಸಿದ್ದ ಬಾರ್ ಅಂಡ್ ರೆಸ್ಟೋರೆಂಟ್‌ಗಳು ಸೇರಿದಂತೆ ಇತರೆ ವ್ಯಾಪಾರ ವಹಿವಾಟುಗಳೂ ಕ್ಷೀಣಿಸಿದ್ದವು.

ಇದೀಗ ಕಳೆದ 15 ದಿನಗಳಲ್ಲಿ ಗಿರಿ ಭಾಗ ಸೇರಿದಂತೆ ಜಿಲ್ಲೆಯ ವಿವಿಧೆಡೆ ಒಂದೆರಡು ಹದಮಳೆ ಆಗಿರುವುದರಿಂದ ಬಿಸಿಲ ಧಗೆ ತಗ್ಗಿದೆ. ಅಲ್ಲದೆ ಮಳೆ ಕಾರಣಕ್ಕೆ ಗಿರಿ ಭಾಗದಲ್ಲಿ ಮತ್ತೆ ಹಸಿರು ಚಿಗುರೊಡೆಯುತ್ತಿದೆ. ತಂಪಾಗಿ ಆಹ್ಲಾದಕರವಾಗಿರುವ ವಾತಾವರಣವನ್ನು ಪ್ರವಾಸಿಗರು ಆಸ್ವಾಧಿಸುತ್ತಿದ್ದಾರೆ.

ಇನ್ನು ಶಾಲಾ ಮಕ್ಕಳಿಗೆ ರಜೆ ಮುಗಿಯುತ್ತಿದ್ದು, ಇದೇ ಕೊನೆಯ ವಾರಾಂತ್ಯವಾಗಿರುವ ಹಿನ್ನೆಲೆಯಲ್ಲಿ ಪೋಷಕರು ಮಕ್ಕಳೊಂದಿಗೆ ಅಂತಿಮ ಹಂತದ ಪ್ರವಾಸದ ಯೋಜನೆಯನ್ನು ಪೂರ್ಣಗೊಳಿಸುತ್ತಿದ್ದಾರೆ. ಈ ಕಾರಣಕ್ಕೆ ಧಾರ್ಮಿಕ ಕ್ಷೇತ್ರಗಳು ಸೇರಿದಂತೆ ನಿಸರ್ಗ ತಾಣಗಳಲ್ಲಿ ಹೆಚ್ಚಿನ ಪ್ರವಾಸಿಗರು ಕಂಡುಬರುತ್ತಿದ್ದಾರೆ.

ಕೆಲವೇ ದಿನಗಳಲ್ಲಿ ಮುಂಗಾರು ಪ್ರವೇಶ ಪಡೆಯಲಿದೆ. ಮುಂಗಾರಿನ ವೈಭವವನ್ನು ಕಣ್ತುಂಬಿಕೊಳ್ಳಲೆಂದೇ ಒಂದಷ್ಟು ಮಂದಿ ಪ್ರವಾಸಿಗರು ಕಾತರಿಸುತ್ತಿರುವ ಹಿನ್ನೆಲೆಯಲ್ಲಿ ಈಗಿನಿಂದಲೇ ಪ್ರವಾಸೋದ್ಯಮ ಚಟುವಟಿಕೆಗಳು ಚೇತರಿಸಿಕೊತ್ತಿರುವದು ಅನುಭವಕ್ಕೆ ಬರುತ್ತಿದೆ ಎಂದು ಹೋಂಸ್ಟೇ ಮಾಲೀಕರು ಅಭಿಪ್ರಾಯಿಸುತ್ತಾರೆ.

> ಬೇಸಿಗೆ ಕಾರಣಕ್ಕೆ ಜಿಲ್ಲೆಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಕಡಿಮೆ ಆಗಿತ್ತು. ಇದೀಗ ಮಳೆ ಸುರಿಯಲಾರಂಭಿಸಿ ತಂಪಿನ ಜೊತೆಗೆ ಗಿರಿ ಪ್ರದೇಶದಲ್ಲಿ ಮಂಜು ಮುಸುಕಿದ ವಾತಾವರಣವಿದ್ದು, ಪ್ರವಾಸ ಹಮ್ಮಿಕೊಳ್ಳುವವರಿಗೆ ಪೂರಕವಾಗಿರುವ ಕಾರಣ ಪ್ರವಾಸಿಗರ ಭೇಟಿ ಹೆಚ್ಚಿದೆ.
> ■ ಲೋಹಿತ್, ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ

> ಎಲ್ಲೆಡೆ ಬೇಸಿಗೆ ತಾಪಮಾನ ಹೆಚ್ಚಿದ್ದ ಕಾರಣಕ್ಕೆ ಪ್ರವಾಸದ ಯೋಜನೆ ಮುಂದೂಡಿದ್ದೆವು. ಇದೀಗ ಮಲೆನಾಡು ಜಿಲ್ಲೆಗಳಲ್ಲಿ ಮಳೆಯಾಗುತ್ತಿರುವ ಬಗ್ಗೆ ಜಾಲತಾಣಗಳಲ್ಲಿ ಹಂಚಿಕೊಂಡ ಮಾಹಿತಿಗಳನ್ನು ಗಮನಿಸಿ ಗಿರಿ ಪ್ರವಾಸ ಹಮ್ಮಿಕೊಂಡಿದ್ದೇವೆ. ಇದು ನಮ್ಮ ಪ್ರಿಯವಾದ ತಾಣ.
> ■ ಶರತ್ ಕುಮಾರ್, ಬೆಂಗಳೂರು

ದಿಗಂತ ವಿಶೇಷ

ಚಿಕ್ಕಮಗಳೂರಿಂದ- ಶೃಂಗೇರಿ, ವಿರಾಜ್‌ಪೇಟೆ ಬೈಂದೂರು ರಸ್ತೆಯಲ್ಲಿ ಕಸ

ರಾಜ್ಯ ಹೆದ್ದಾರಿಯ ಪಕ್ಕದಲ್ಲೇ ಕಸದ ರಾಶಿ

▸▸ ಪ್ರವೀಣ್ ಓಂಕಾರ್



ಬಾಳೆಹೊನ್ನೂರು: ಬಯಲು ನಾಡು, ಮಲೆನಾಡು ಹಾಗೂ ಕರಾವಳಿಯವರೆಗೂ ಸ್ವಚ್ಛ ಭಾರತ್ ಯೋಜನೆಯನ್ನು ಅನುಷ್ಠಾನಗೊಳಿಸುವುದು ಸರ್ಕಾರಕ್ಕೆ ಸವಾಲಾಗೇ ಉಳಿದಿದೆ. ಚಿಕ್ಕಮಗಳೂರಿಂದ, ಶೃಂಗೇರಿಯವರೆಗಿನ ರಾಜ್ಯ ಹೆದ್ದಾರಿಯ ಅಕ್ಕಪಕ್ಕದಲ್ಲಿ ಕಸದ ರಾಶಿ ಗೋಚರಿಸುತ್ತಿದೆ. ವಿರಾಜ್ ಪೇಟೆ ಬೈಂದೂರು ರಾಜ್ಯ ಹೆದ್ದಾರಿಯ ಎಲೆಕಲ್ಲಿನ ರಸ್ತೆ ಪಕ್ಕದಲ್ಲಿ ಅಲ್ಲಲ್ಲಿ ಕಸದ ರಾಶಿ ಬಿದ್ದಿದೆ.

ಪುರಾಣ ಪ್ರಸಿದ್ಧ ಶ್ರೀ ಮಾರ್ಕಾಂಡೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆಯ ಆನೆ ಬಿದ್ದ ಹಳ್ಳದ ಪಕ್ಕದ ದಂಡೆಯಲ್ಲಿ ಕಸದ ರಾಶಿ ಬಿದ್ದಿದ್ದು ಬೇಸಿಗೆಯಲ್ಲಿ ಕಸದ ರಾಶಿಗೆ ಬೆಂಕಿಕೊಟ್ಟು ವಾಯುಮಾಲಿನ್ಯವಾಗುತ್ತಿದೆ. ಮಳೆಗಾಲದಲ್ಲಿ ಪ್ರವಾಹ ಬಂದಾಗ ಆನೆ ಬಿದ್ದ ಹಳ್ಳದ ಮೂಲಕ ಭದ್ರೆಯ ಒಡಲು ಸೇರುತ್ತಿದೆ. ಬಾಳೆಹೊನ್ನೂರಿನ ಭದ್ರಾ ನದಿ ಸೇತುವೆ ಮುಂಭಾಗದಲ್ಲಿ ಕಸದ ರಾಶಿ ಬಿದ್ದಿದ್ದು, ಪ್ರವಾಸಿಗರನ್ನು ಸ್ವಾಗತಿಸುತ್ತಿದೆ. ರಾತ್ರಿಯ ವೇಳೆ ಕೆಲವು ಕೋಳಿ ಅಂಗಡಿಯವರು ಕೋಳಿ ತ್ಯಾಜ್ಯವನ್ನು ಭದ್ರಾ ನದಿ ಸೇತುವೆಯಿಂದ ನದಿಗೆ ಹಾಕುತ್ತಿದ್ದಾರೆ. ಸೇತುವೆ ಕೊಂಚ ದೂರದಲ್ಲಿ ಮೊಸಳೆಗಳು ವಾಸ್ತವ್ಯ ಹೂಡಿದೆ.

ಹಲಸೂರು ಗ್ರಾಮದ ಮೀಸಲು ಅರಣ್ಯದಲ್ಲೂ ಸಹ ಕಸ ಹಾಕುವ ಕೇಂದ್ರವಾಗಿದ್ದರೆ, ಚಿಕ್ಕಅಗ್ರಹಾರ ಅರಣ್ಯ ಇಲಾಖೆ ವ್ಯಾಪ್ತಿಯ ದಾವಣ ಗ್ರಾಮದಲ್ಲಿ ಕುದುರೆಗುಂಡಿಗೆ ಸಂಪರ್ಕ ಕಲ್ಪಿಸುವ ರಸ್ತೆ ಪಕ್ಕದಲ್ಲಿ ಕಸ ಕೊಳೆತು ಗಬ್ಬು ನಾರುತ್ತಿದೆ. ಬನ್ನೂರು ಗ್ರಾಮದ ಹೊಳೆಬಾಗಿಲು ಸಮೀಪ ಭದ್ರಾ ನದಿ ದಂಡೆಯಲ್ಲಿ ನಾಗರಿಕರು ಕಸ ಹಾಕುವ ಕೇಂದ್ರವನ್ನಾಗಿಸಿ ಕೊಂಡಿದ್ದಾರೆ. ಕೊಪ್ಪ ಸಮೀಪದ ಕುಂಚೂರು ಘಾಟಿಯಲ್ಲಿ ಕಸ ಹಾಗೂ ಕೋಳಿ ತ್ಯಾಜ್ಯ ಹಾಕುತ್ತಿದ್ದು, ಕೊಳೆತು ವಾಸನೆ ಬರುತ್ತಿದೆ.

ಉಡುಪಿ ಜಿಲ್ಲೆ ಕುಂದಾಪುರಕ್ಕೆ ಹೋಗುವ ಮಾರ್ಗದ ಸೋಮೇಶ್ವರ ಅಭಯಾರಣ್ಯದಲ್ಲೂ ಸಹ ಕಸದ ರಾಶಿ ಬೆಳೆದು ನಿಂತಿದೆ. ಕೋಟೇಶ್ವರ ಸಮೀಪ ತೆಕ್ಕಟ್ಟೆ ಬೀಚ್ ನಲ್ಲಿ ಕೋಳಿ ಪುಕ್ಕಗಳು ತೇಲಾಡುತ್ತಿದೆ. ಎಲ್ಲೆಡೆಯೂ ಕಸ ಇಲೇವಾರಿ ಮಾಡುವ ಬಗ್ಗೆ ನಿರಾಸಕ್ತಿ ಹಾಗೂ ಕಾನೂನು ಪಾಲಿಸದೆ ಇರುವುದು ಸ್ವಚ್ಛ ಭಾರತ ಯೋಜನೆ ಅನುಷ್ಠಾನಕ್ಕೆ ಹಿನ್ನಡೆ ಎಂದು ಭಾವಿಸಬಹುದಾಗಿದೆ. ಇತ್ತಿಚೆಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆಯವರು ಬಾಳೆಹೊನ್ನೂರಿಗೆ ಬಂದಿದ್ದು, ರೈತಯೊಂದಿಗೆ ಸಂವಾದ ಕಾರ್ಯಕ್ರಮ ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ಸಾಮಾಜಿಕ ಕಾರ್ಯಕರ್ತ ಸಿಗದಾಳು ಅರವಿಂದರವರು ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿ ಕಸ ಹಾಕುವುದರಿಂದ ವನ್ಯ ಜೀವಿಗಳಿಗೆ ತೊಂದರೆಯಾಗುವ ಬಗ್ಗೆ ಪ್ರಸ್ತಾಪಿಸಿದಾಗ ಸಚಿವರು ಉತ್ತರಿಸಿ ಇದು ಕೇವಲ ಕಾಡಾನೆ ಸಂಘರ್ಷದ ಬಗ್ಗೆ ಚರ್ಚಿಸಲು ಸಭೆ ಕರೆಯಲಾಗಿದೆ ಎಂದು ತಿಳಿಸಿದರು.

> ಶೃಂಗೇರಿ, ಬೆಂಗಳೂರು ರಾಜ್ಯ ಹೆದ್ದಾರಿಯ ಹೇರೂರು ಗ್ರಾಪಂ ವ್ಯಾಪ್ತಿಯಲ್ಲಿ ರಸ್ತೆ ಪಕ್ಕದಲ್ಲೇ ಕಸವನ್ನು ಹಾಕಿದ್ದು, ಗಬ್ಬು ನಾರುತ್ತಿದೆ. ದೊಡ್ಡಾನೆ ಗಣಪತಿಕಟ್ಟೆ ಸಮೀಪ ಸುಮಾರು 100 ಮೀ. ವ್ಯಾಪ್ತಿಯಲ್ಲಿ ಕಸ ಹಾಕುವ ಕೇಂದ್ರವಾಗಿದ್ದು, ಈ ಬಗ್ಗೆ ಯಾರು ಗಮನ ಹರಿಸುತ್ತಿಲ್ಲ. ದೇವದಾನ ಗ್ರಾಪಂ ವ್ಯಾಪ್ತಿಯ ಬಿಳುಕೊಪ್ಪ ಸಮೀಪ ಬಸವನ ಕೋಟೆ ಮೀಸಲು ಅರಣ್ಯದಲ್ಲಿ ಕಸ ಹಾಕುವ ಕೇಂದ್ರವಾಗಿದೆ.

ಹಿಂದೂ ಜನಜಾಗೃತಿ ವೇದಿಕೆ ಒತ್ತಾಯ

ಶಾಲೆಗಳಲ್ಲಿ ಹಿಜಾಬ್‌ಗೆ ಅವಕಾಶ ನೀಡದಿರಿ

ಮೂಡಿಗೆರೆ: ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಹಿಜಾಬ್‌ಗೆ ಅವಕಾಶ ನೀಡುವ ಹಾಗೂ ಕೇಸರಿ ಶಾಲು ನಿರ್ಬಂಧಿಸುವ ನಿರ್ಧಾರವನ್ನು ತಕ್ಷಣ ಹಿಂಪಡೆಯಬೇಕೆಂದು ಹಾಗೂ ಅಕ್ರಮ ಗೋ ಸಾಗಾಟಕ್ಕೆ ಕಡಿವಾಣ ಹಾಕಬೇಕೆಂದು ಒತ್ತಾಯಸಿ ಹಿಂದೂ ಜನಜಾಗೃತಿ ವೇದಿಕೆ ಮುಖಂಡರು ಸೋಮವಾರ ತಹಶೀಲ್ದಾರ್ ಎಸ್.ಅಶ್ವಿನಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ರಾಜ್ಯ ಸರಕಾರ ಶಾಲೆ ಹಾಗೂ ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡಿ, ಕೇಸರಿ ಶಾಲು ಧರಿಸುವುದಕ್ಕೆ ನಿರ್ಬಂಧ ವಿಧಿಸಿರುವುದು ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಗಂಭೀರ ಚರ್ಚೆಗೆ ಕಾರಣವಾಗಿದೆ. ಈ ನಿರ್ಧಾರ ಸಮಾನತೆ, ಧರ್ಮನಿರಪೇಕ್ಷತೆ ಹಾಗೂ ಏಕರೂಪದ ಸಮವಸ್ತ್ರ ನೀತಿಗೆ ವಿರುದ್ಧವಾಗಿದೆ. 2022ರಲ್ಲಿ ಉಡುಪಿಯಲ್ಲಿ ಆರಂಭವಾದ ಹಿಜಾಬ್ ವಿವಾದವು ರಾಜ್ಯದಾದ್ಯಂತ ಉದ್ವಿಗ್ನ ಪರಿಸ್ಥಿತಿಯನ್ನು ನಿರ್ಮಿಸಿತ್ತು ಈ ಪ್ರಕರಣದ ಕುರಿತು ನ್ಯಾಯಾಲಯ ಶಾಲೆ-ಕಾಲೇಜುಗಳಲ್ಲಿ ನಿಗದಿತ ಸಮವಸ್ತ್ರವನ್ನು ಪಾಲಿಸಬೇಕೆಂದು ಸೂಚಿಸಿತ್ತು. ಹಿಜಾಬ್ ಪ್ರಕರಣ ಸುಪ್ರಿಂ ಕೋರ್ಟ್‌ನಲ್ಲಿ ಬಾಕಿಯಿದೆ. ಆದರೂ ಸರಕಾರ ಹಿಜಾಬ್‌ಗೆ ಅವಕಾಶ ನೀಡಿ, ಕಾನೂನು ಉಲ್ಲಂಘಿಸಿದೆ.

ಹಿಜಾಬ್‌ಗೆ ಅವಕಾಶ ನೀಡಿದರೆ ಇತರೆ ಸಮುದಾಯದ ವಿದ್ಯಾರ್ಥಿಗಳು ಸಹ ತಮ್ಮ ಧಾರ್ಮಿಕ ಚಿಹ್ನೆಗಳನ್ನು ಪ್ರದರ್ಶಿಸುವ ಸಾಧ್ಯತೆ ಇರುತ್ತದೆ. ಇದರಿಂದ ಶಿಕ್ಷಣದ ಮಹತ್ವ ಕಳೆದುಕೊಳ್ಳುತ್ತದೆ. ಹಾಗಾಗಿ ಹಿಜಾಬ್‌ಗೆ ಅವಕಾಶ ನೀಡಬಾರದು. ಅಲ್ಲದೇ ಗೋ ಕಳ್ಳತನ, ಗೋಮಾಂಸ ಮಾರಾಟ ಹೆಚ್ಚುತ್ತಿದೆ. ಇದಕ್ಕೂ ಕೂಡ ಅಡಿವಾಣ ಹಾಕಬೇಕೆಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಸಂಜಯ್ ಕೊಟ್ಟಿಗೆಹಾರ, ಬಸವರಾಜ್, ರಘು ಮೂಡಿಗೆರೆ, ಶರತ್ ಮಾಕೋನಹಳ್ಳಿ, ಧರ್ಮರಾಜ್ ಬಿನ್ನಡಿ ಉಪಸ್ಥಿತರಿದ್ದರು.



ನಿವೇಶನ ಕಲ್ಪಿಸಲು ಒತ್ತಾಯಿಸಿ ನಿವೇಶನ ರಹಿತರ ಪ್ರತಿಭಟನೆ

ಗುಡಿಸಲು ನಿರ್ಮಿಸಿ ಅದರಲ್ಲೇ ವಾಸ್ತವ್ಯ

ಮೂಡಿಗೆರೆ: ತಾಲೂಕಿನ ಗೋಣಿಬೀಡು ಗ್ರಾಪಂ ವ್ಯಾಪ್ತಿಯ ಸರ್ವೆ ನಂಬರ್ 144ರಲ್ಲಿ ನಿವೇಶನಕ್ಕೆ ಕಾಯ್ದಿರಿಸಿದ ಜಾಗದಲ್ಲಿ ಗುಡಿಸಲು ನಿರ್ಮಿಸಿ ಅಲ್ಲೇ ವಾಸ್ತವ್ಯ ಹೂಡಲು ನಿರ್ಧರಿಸಿ ನಿವೇಶನ ರಹಿತರು ಪ್ರತಿಭಟನಾ ಧರಣಿ ಆರಂಭಿಸಿದ್ದಾರೆ.

ವಸತಿಗಾಗಿ ಹೋರಾಟ ವೇದಿಕೆ ಮತ್ತು ಟಿಯುಸಿಐ ನೇತೃತ್ವದಲ್ಲಿ ಪ್ರತಿಭಟನೆ ಆರಂಭವಾಗಿದ್ದು, ನಿವೇಶನ ರಹಿತರು ಕಳೆದ ಹತ್ತು ವರ್ಷದಿಂದ ನಿವೇಶನಕ್ಕೆ ಕಾಯ್ದಿರಿಸಿದ ಭೂಮಿಯಲ್ಲಿ ನಿವೇಶನ ಕಲ್ಪಿಸಲು ಒತ್ತಾಯಿಸಿ ಹೋರಾಟ ನಡೆಸುತ್ತಿದ್ದಾರೆ. ಆದರೆ ಪಂಚಾಯಿತಿ ಆಡಳಿತ ಮತ್ತು ತಾಲೂಕು ಆಡಳಿತ ಸೂಕ್ತ ಕ್ರಮವಹಿಸಿದೆ ಇರುವುದರಿಂದ ಇಂದು ನಿವೇಶನ ರಹಿತರು ಗುಡಿಸಲು ನಿರ್ಮಿಸಿಕೊಂಡು ವಾಸಿಸಲು ಮುಂದಾಗಿರುವುದಗಿ ಪ್ರತಿಭಟನಕಾರರು ತಿಳಿಸಿದ್ದಾರೆ.

ನಿವೇಶನಕ್ಕೆ ಸಂಬಂಧಿಸಿದಂತೆ ಕಳೆದ ತಿಂಗಳು ತಾಲೂಕುಪಂಚಾಯಿತಿಎದುರುಪ್ರತಿಪಟನಾಧರಣಿ ಮಾಡಿ ನಿವೇಶನಕ್ಕೆ ಕಾಯ್ದಿರಿಸುವ ಜಾಗದಲ್ಲಿ ಈಗಾಗಲೇ ಒಬ್ಬ ಪ್ರಭಾವಶಾಲಿ ಮನೆ ನಿರ್ಮಿಸಿದ್ದು ಇದನ್ನು ತೆರವುಗೊಳಿಸುವಂತೆ ಒತ್ತಾಯಿಸಿ ಮನವಿ ಪತ್ರ ಸಲ್ಲಿಸಲಾಗಿತ್ತು. ತಾಪಂ ಮತ್ತು ಗ್ರಾಪಂ ಅಧಿಕಾರಿಗಳು ಕ್ರಮ ಜರುಗಿಸಿರಲಿಲ್ಲ ಹೀಗಾಗಿ ಅನಿವಾರ್ಯ ಕಾರಣಗಳಿಂದ ಈಗಾಗಲೇ ಕೂಲಿ ಲೈನಿನಲ್ಲಿ ವಾಸಿಸುವ ಹಾಗೂ ಬಾಡಿಗೆಮನೆ ವಾಸಿಗಳಿಗೆ ನಿವೇಶನ ಕಲ್ಪಿಸುವಂತೆ ದಾಖಲಾತಿಗಳೊಂದಿಗೆ ಗೋಣಿಬೀಡು ಗ್ರಾಪಂಗೆ ಅರ್ಜಿ ಸಲ್ಲಿಸಲಾಗಿತ್ತು.

ಆದರೆ ಗ್ರಾಪಂ ಆಡಳಿತ ಪ್ರಭಾವಿಗಳ ಒತ್ತಡಕ್ಕೆ ಮಣಿದು ಯಾವುದೇ ಕ್ರಮ ಜರುಗಿಸಿಲ್ಲ. ಹೀಗಾಗಿ ನಿವೇಶನ ರಹಿತರೆಲ್ಲ ಒಂದಾಗಿ ಗುಡಿಸಲು ನಿರ್ಮಿಸಿ ಹೋರಾಟ ರೂಪಿಸಿದ್ದಾರೆ. ಈ ಹೋರಾಟಕ್ಕೆ ಸಿಪಿಐಎಂಎಲ್ ತಾಲೂಕು ಮತ್ತು ಜಿಲ್ಲಾ ಸಮಿತಿ ಸೇರಿದಂತೆ ಹಲವು ಪ್ರಗತಿಪರ ಸಂಘಟನೆಗಳು ಬೆಂಬಲಿಸಿವೆ.

ಸ್ಥಳದಲ್ಲಿ ಗುಡಿಸಲು ನಿರ್ಮಿಸಿ ಸಮಸ್ಯೆ ಬಗೆಹರಿಸುವವರೆಗೆ ಗುಡಿಸಲಿನಲ್ಲಿ ವಾಸ ಮಾಡಲು ನಿರ್ಧರಿಸಲಾಗಿದೆ. ಮೂಡಿಗೆರೆ ತಾಲೂಕಿನಲ್ಲಿ ಕಂದಾಯ ಭೂಮಿ ಗೋಮಾಳ, ಗೈರಾಣೆ, ಗೋಮಾಳ, ಕೆರೆಯಂಗಳ, ಹುಲ್ಲು ಬನ, ಊರು ಉಡುಬಿ ಸೇರಿದಂತೆ ಎಲ್ಲ ಭೂಮಿಗಳು ಉಳ್ಳವರ ಪಾಲಾಗಿದ್ದು ನಿವೇಶನಕ್ಕೆ ಜಾಗ ಇಲ್ಲದಂತಾಗಿದೆ ರಾಜಕಾರಣಿಗಳು ತಮ್ಮ ಸ್ವಾರ್ಥ ರಾಜಕೀಯಕ್ಕಾಗಿ ಸುಳ್ಳುಗಳನ್ನೇ ಹೇಳುತ್ತಾ ಕಾಲಹರಣ ಮಾಡುತ್ತಿದ್ದಾರೆ ಹೀಗಾಗಿ ಜನರು ಅನಿವಾರ್ಯ ಕಾರಣಗಳಿಂದ ಸರ್ಕಾರಿ ಭೂಮಿಯಲ್ಲಿ ವಾಸಿಸಲು ಕಾರಣವಾಗಿದೆ.

ಸಿಪಿಐ(ಎಂ.ಎಲ್) ರಾಜ್ಯ ಕಾರ್ಯದರ್ಶಿ ಬಿ.ರುದ್ರಯ್ಯ ತಿಳಿಸಿದ್ದಾರೆ.

ತಾಲೂಕಿನ ಗೋಣಿಬಿಡು ಗ್ರಾ.ಪಂ. ವ್ಯಾಪ್ತಿಯ ಮಣ್ಣೆಕೆರೆ ಗ್ರಾಮದ ಸರ್ವೆ ನಂಬರ್ 144ರಲ್ಲಿ 3.20 ಎಕರೆ ಸರ್ಕಾರಿ ಭೂಮಿಯನ್ನು ಕಳೆದ ಹತ್ತು ವರ್ಷದ ಹಿಂದೆ ನಿವೇಶನಕ್ಕೆ ಕಾಯ್ದಿರಿಸಲಾಗಿತ್ತು. ಅಲ್ಲಿ ಭೂಮಿ ಹಂಚಿಕೆಗೆ ಒತ್ತಾಯಿಸಿ ಹಲವು ವರ್ಷಗಳಿಂದ ಹೋರಾಡುತ್ತಿದ್ದರೂ ಪ್ರಯೋಜನವಾಗಿಲ್ಲ. ಹಾಗಾಗಿ ಇಲ್ಲಿಯೇ ಗುಡಿಸಲು ನಿರ್ಮಿಸಿ ವಾಸ್ತವ್ಯ ಹೂಡಲು ನಿರ್ಧರಿಸಲಾಗಿದೆ. ಅಧಿಕಾರಿಗಳು ಸ್ಥಳಕ್ಕೆ ಬಂದು ಸಮಸ್ಯೆ ಬಗೆಹರಿಸುವವರೆಗೂ ಹೋರಾಟ ಮುಂದುವರೆಯಲಿದೆ ಎಂದು ಹೇಳಿದರು.

ಟಿಯುಸಿಐ ಜಿಲ್ಲಾಧ್ಯಕ್ಷ ಕೆ.ಕೆ.ಕೃಷ್ಣಪ್ಪ ಮಾತನಾಡಿ, ಇನ್ನಾದರೂ ಅಧಿಕಾರಿಗಳು ಎಚ್ಚೆತ್ತುಕೊಂಡು ನಿವೇಶನ ರಹಿತರ ಸಮಸ್ಯೆ ಬಗೆಹರಿಸಬೇಕೆಂದು ಒತ್ತಾಯಿಸಿದರು.

ಸಿಪಿಐಎಂಎಲ್ ಜಿಲ್ಲಾ ಕಾರ್ಯದರ್ಶಿ ಸಂದೀಪ್, ಗೋಣಿಬೀಡು ಹೋಬಳಿ ವಸತಿಗಾಗಿ ಹೋರಾಟ ವೇದಿಕೆ ಕಾರ್ಯದರ್ಶಿ ರಾಜೇಶ್, ಉಮೇಶ್, ಸುರೇಶ್, ಗೋಪಾಲ್, ಕೃಷ್ಣ, ಜಾನಕಿ, ಯಶೋದಾ ಮತ್ತಿತರರಿದ್ದರು.



ಟಿಎಪಿಸಿಎಂಎಸ್ ಚುನಾವಣೆ: ಶೇ.95ರಷ್ಟು ಮತದಾನ

ಶೃಂಗೇರಿ: ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ನಿರ್ದೇಶಕ ಸ್ಥಾನಕ್ಕೆ ಶುಕ್ರವಾರ ರೈತ ಭವನದಲ್ಲಿ ನಡೆದ ಚುನಾವಣೆ ಶೇ.95ರಷ್ಟು ಮತದಾನ ನಡೆದಿದೆ.

ಟಿಎಪಿಸಿಎಂಎಸ್‌ನಲ್ಲಿ 14 ನಿರ್ದೇಶಕ ಸ್ಥಾನವಿದ್ದು, ಮೂರು ಸ್ಥಾನಕ್ಕೆ ಅವಿರೋಧ ಆಯ್ಕೆ ನಡೆದಿತ್ತು.11 ನಿರ್ದೇಶಕ ಸ್ಥಾನಕ್ಕೆ ಚುನಾವಣೆ ನಡೆದಿದ್ದು, 23 ಸ್ಪರ್ಧಾಳುಗಳು ಸ್ಪರ್ಧೆಯಲ್ಲಿದ್ದರು. ಮತದಾನ ಶಾಂತಿಯುತವಾಗಿ ಮುಕ್ತಾಯಗೊಂಡಿದೆ. ಒಟ್ಟು 682 ಮತದಾರರು ಇದ್ದು ಇದರಲ್ಲಿ 652 ಮತದಾರರು ಮತ ಚಲಾಯಿಸುವ ಮೂಲಕ ಉತ್ತಮ ಮತದಾನ ನಡೆದಿದೆ.

ತಾಲೂಕಿನ 9 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದ ಮತದಾರರನ್ನು ಬೇಟಿಯಾಗಿ ಮತ ಯಾಚಿಸುವುದೇ ಅಭ್ಯರ್ಥಿಗಳಿಗೆ ಸವಾಲು ಆಗಿತ್ತು. ಎರಡು ತಂಡಗಳಾಗಿ ಚುನಾವಣೆ ಎದುರಿಸಿದ ಗುಂಪು ಅಲ್ಲದೇ ಭಾನುಪ್ರಕಾಶ್‌ರವರು ಏಕಾಂಗಿಯಾಗಿ ಸ್ಪರ್ಧೆ ನಡೆಸಿದ್ದಾರೆ.

ಬೆಳಗ್ಗೆ 9ಕ್ಕೆ ಆರಂಭವಾದ ಮತದಾನ ಮಧ್ಯಾಹ್ನ 4ರವರೆಗೂ ನಡೆದಿದ್ದು, ಗ್ರಾಮೀಣ ಪ್ರದೇಶದಲ್ಲಿದ್ದ ಮತದಾರರನ್ನು ಕರೆ ತರುವ ಕಾಯಕ ಕೊನೆಯವರೆಗೂ ನಡೆಯಿತು. ದೂರದ ಬೆಂಗಳೂರು ಮತ್ತಿತರ ಕಡೆಯಿಂದ ಬಂದು ಕೆಲ ಮತದಾರರು ಮತ ಚಲಾಯಿಸಿದ ಬಗ್ಗೆ ವರದಿಯಾಗಿದೆ.

ತಹಶೀಲ್ದಾರ್ ಅನೂಪ್ ಸಂಜೋಗ್ ಚುನಾವಣೆ ಉಸ್ತುವಾರಿಯಲ್ಲಿದ್ದು, ಸ್ಥಳದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಮತದಾನಕ್ಕೆ ಎರಡು ವಿಭಾಗ ಮಾಡಲಾಗಿದ್ದು, ನೂಕು ನುಗ್ಗಲು ಆಗದಂತೆ ಕ್ರಮ ಕೈಗೊಳ್ಳಲಾಗಿತ್ತು. ಮತದಾನ ಮುಗಿದ ನಂತರ ರೈತ ಭವನದಲ್ಲಿ ಮತ ಎಣಿಕೆ ನಡೆಯಲಿದ್ದು, ಫಲಿತಾಂಶ ತಡ ರಾತ್ರಿ ಹೊರಬೀಳಲಿದೆ.

> **ಚುನಾವಣಾ ಕಾವು**
> ಸ್ಥಳೀಯ ಚುನಾವಣೆ ಇಲ್ಲದೆ ವರ್ಷಗಟ್ಟಲೇ ಆಗಿದ್ದು, ಇಂದಿನ ಚುನಾವಣಾ ಕಾವು ಜೋರಾಗಿ ಇತ್ತು. ಟಿಎಪಿಸಿಎಂಎಸ್‌ನ ರೈತ ಭವನದಲ್ಲಿ ಮತದಾನ ನಡೆದಿದ್ದು, ರಾಜಕೀಯ ಪಕ್ಷಗಳು ಚುನಾವಣೆಯನ್ನು ಪ್ರತಿಷ್ಠೆಯಾಗಿ ಪರಿಗಣಿಸಿ, ರಾಜಕೀಯ ಮುಖಂಡರು ಮತದಾನ ಕೇಂದ್ರದ ಬಳಿ ಜಮಾಯಿಸಿದ್ದರು.



ಹೊರಗುತ್ತಿಗೆ ನೌಕರರ ಸೌಕರ್ಯಕ್ಕೆ ಶ್ರಮಿಸುತ್ತೇನೆ: ನಯನಾ

ಮೂಡಿಗೆರೆ: ಹೊರ ಗುತ್ತಿಗೆದಾರರ ಕನಿಷ್ಠವೇತನ ನೀಡಲು ಸರಕಾರ ನಿರ್ಧರಿಸಿದೆ. ಅದನ್ನು ಶೀಘ್ರದಲ್ಲೇ ಜಾರಿಗೊಳಿಸಬೇಕೆಂದು ಸರಕಾರಿ ಹೊರ ಗುತ್ತಿಗೆ ನೌಕರರ ಸಂಘದ ಜಿಲ್ಲಾಧ್ಯಕ್ಷ ಅಧ್ಯಕ್ಷ ಎಲ್.ಮಂಜುನಾಥ್ ಮನವಿ ಮಾಡಿದರು.

ಅವರು ಭಾನುವಾರ ಪಟ್ಟಣದ ತಾ.ಪಂ. ಸಭಾಂಗಣದಲ್ಲಿ ಸರಕಾರಿ ಹೊರ ಗುತ್ತಿಗೆ ನೌಕರರ ಸಂಘದಿಂದ ಏರ್ಪಡಿಸಿದ್ದ ಹೊರ ಗುತ್ತಿಗೆದಾರರ ಕುಂದುಕೊರತೆ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾನ ವೇತನವಿಲ್ಲದೇ ಕಡಿಮೆ ವೇತನದ ಜತೆಗೆ ಉದ್ಯೋಗ ಭದ್ರತೆ ಇಲ್ಲ. ಸಮಯಕ್ಕೆ ವೇತನ ಸಿಗುತ್ತಿಲ್ಲ. ಪಿಎಫ್, ಇಎಸ್‌ಐ ವೈದ್ಯಕೀಯ ಸೌಲಭ್ಯ, ರಜೆ ಮುಂತಾದ ಹಕ್ಕುಗಳು ಸಿಗುತ್ತಿಲ್ಲ. ಭವಿಷ್ಯದ ಭದ್ರತೆ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲದೇ ಸಂಕಷ್ಟದಲ್ಲಿ ಕೆಲಸ ಮಾಡುವ ಸ್ಥಿತಿ ಉಂಟಾಗಿದೆ. ಮೂಡಿಗೆರೆ ತಾಲೂಕಿನ ದಿನೇಶ್ ಎಂಬುವರು ಚಿಕ್ಕಮಗಳೂರು ಮೀನುಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಅನಾರೋಗ್ಯದ ಕಾರಣ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಾಗಿದ್ದರಿಂದ ಅವರನ್ನು ಕೆಲಸದಿಂದ ತೆಗೆಯಲಾಗಿದೆ. ಇದರಿಂದ ಅವರ ಕುಟುಂಬ ನಿರ್ವಹಣೆ ಕಷ್ಟವಾಗಿದೆ. ಅವರನ್ನು ಮತ್ತೆ ಕೆಲಸಕ್ಕೆ ನೇಮಿಸಬೇಕೆಂದು ಒತ್ತಾಯಿಸಿದರು.



ಬಳಿಕ ಶಾಸಕಿ ನಯನಾ ಮೋಟಮ್ಮ ಮಾತನಾಡಿ, ಹೊರ ಗುತ್ತಿಗೆದಾರರ ಸರಕಾರದ ಹಾಗೂ ಇಲಾಖೆಗಳ ಆಧಾರ ಸ್ತಂಭವಾಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲದೇ ಒತ್ತಡದಿಂದ ಕೆಲಸ ಮಾಡುತ್ತಿದ್ದಾರೆ. ಇದರಿಂದ ನನಗೆ ಹೊರ ಗುತ್ತಿಗೆದಾರರ ಮೇಲೆ ಅತಿಯಾದ ಕಾಳಜಿ ಇದೆ. ಸರಕಾರ ಕನಿಷ್ಟವೇತನ ಜಾರಿ ಮಾಡಲು ಕ್ಯಾಬಿನೆಟ್‌ನಲ್ಲಿ ಪಾಸಾದ ಮೇಲೆ ಅದು ಕಾರ್ಯರೂಪಕ್ಕೆ ಬಂದೇ ಬರುತ್ತದೆ. ಜತೆಗೆ ಹೊರ ಗುತ್ತಿಗೆದಾರರಿಗೆ ಮೂಲ ಸೌಕರ್ಯ ಒದಗಿಸಲು ಸರಕಾರದ ಗಮನ ಸೆಳೆಯುತ್ತೇನೆಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸರಕಾರಿ ಹೊರ ಗುತ್ತಿಗೆ ನೌಕರರ ಸಂಘದ ತಾಲೂಕು ಅಧ್ಯಕ್ಷೆ ಬಿ.ಎಲ್. ಶೈಲಾ ವಹಿಸಿದ್ದರು. ಜಿಲ್ಲಾ ಉಪಾಧ್ಯಕ್ಷ ಗಿರೀಶ್, ಗೌರವಾಧ್ಯಕ್ಷ ಮಣಿಕುಮಾರ್, ಕಳಸ ಘಟಕದ ಉಪಾಧ್ಯಕ್ಷ ಮಣಿಕಂಠ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್, ತಾಲೂಕು ಪ್ರಧಾನ ಕಾರ್ಯದರ್ಶಿ ದಿನೇಶ್, ಕಾರ್ಯದರ್ಶಿ ಭಾರ್ಗವಿ, ಜೀವಿತಾ, ರಘು, ಕಲಾ ರವಿ ಮತ್ತಿತರರಿದ್ದರು.

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಚಿತ್ರದುರ್ಗ: ಚಿತ್ರದುರ್ಗ ನಗರ ಉಪವಿಭಾಗ ಕಾರ್ಯ ಮತ್ತು ಪಾಲನಾ ಘಟಕ-3ರ ವ್ಯಾಪ್ತಿಯಲ್ಲಿನ ಚಿತ್ರದುರ್ಗ 220/66/11 ಕೆ.ವಿ ಎಸ್.ಆರ್.ಎಸ್‌ನಿಂದ ವಿದ್ಯುತ್ ಪೂರೈಕೆಯಾಗುವ ಎಫ್-1 ಕಾಪರ್‌ನ್ಸ್ ಮಾರ್ಗದಲ್ಲಿ ನಿರ್ವಹಣಾ ಕೆಲಸ ಇರುವುದರಿಂದ ಇದೇ ಮೇ 30 ರಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಚಿತ್ರದುರ್ಗ ನಗರ ಉಪ ವಿಭಾಗ ಘಟಕ-3ರ ಪ್ರದೇಶದ ವ್ಯಾಪ್ತಿಯ ಕುಂಚಿಗನಹಾಳ್, ಡಿ.ಎಸ್.ಹಳ್ಳಿ, ಎಣ್ಣೆಗೆರೆ, ಕ್ಯಾದಿಗೆರೆ, ಓರಗುಂಟನಮಾಳಿಗೆ, ಕಸವನಹಳ್ಳಿ, ಇಂಗಳದಾಳ್, ಕುರುಮರಡಿಕೆರೆ, ಕೆನ್ನೆಡಲು, ಬಾಪೂಜಿ ಕಾಲೋನಿ ಗ್ರಾಮಗಳಿಗೆ ಹೊಂದಿಕೊಂಡಂತಹ ಪ್ರದೇಶಗಳಲ್ಲಿ ಗ್ರಾಮಗಳ ವಿದ್ಯುತ್ ಹಾಗೂ ಐ.ಪಿ. ವಿದ್ಯುತ್ ವ್ಯತ್ಯಯವಾಗಲಿದೆ. ಗ್ರಾಹಕರು ಸಹಕರಿಸಬೇಕು ಎಂದು ಬೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಇಂದು ಪುನಶ್ಚೇತನ ಕಾರ್ಯಾಗಾರ

ಚಿತ್ರದುರ್ಗ: ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹಾಸ್ಟೆಲ್ ಅಡುಗೆಯವರಿಗೆ, ಸಹಾಯಕರಿಗೆ ಹಾಗೂ ರಾತ್ರಿ ಕಾವಲುಗಾರರಿಗೆ ಒಂದು ದಿನದ ಪುನಶ್ಚೇತನ ಕಾರ್ಯಗಾರವನ್ನು ಮೇ 30ರಂದು ಬೆಳಗ್ಗೆ 11.30ಕ್ಕೆ ಚಿತ್ರದುರ್ಗ ನಗರದ ಸರ್ಕಾರಿ ಕಲಾ ಕಾಲೇಜು ಪಕ್ಕದ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ ನಂತರದ ಪಿಯುಸಿ ಬಾಲಕಿಯರ ಬಿ ವಿದ್ಯಾರ್ಥಿ ನಿಲಯದಲ್ಲಿ ಆಯೋಜಿಸಲಾಗಿದೆ.

ಆಯ್ದ ಸ್ಥಳಗಳಲ್ಲಿ ಸಸಿ ನೆಡುವ ಸಪ್ತಾಹ

ಚಿತ್ರದುರ್ಗ: ನಗರದ ಶ್ರೀ ಮುರುಘರಾಜೇಂದ್ರ ಬೃಹನ್ಮಠ, ಎಸ್.ಜೆ.ಎಂ. ವಿದ್ಯಾಪೀಠ, ಎಸ್.ಜೆ.ಎಂ. ಯುನಿವರ್ಸಿಟಿ ಹಾಗು ಅರಣ್ಯ ಇಲಾಖೆ ಸಹಯೋಗದಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಮೇ 30 ರಿಂದ ಜೂನ್ 05 ರವರೆಗೆ 7 ದಿನಗಳ ಕಾಲ ಪ್ರತಿದಿನ ಬೆಳಗ್ಗೆ 7 ಗಂಟೆಗೆ ಚಿತ್ರದುರ್ಗ ನಗರ ಹಾಗೂ ಸುತ್ತಮುತ್ತಲಿನ ಆಯ್ದ ಸ್ಥಳಗಳಲ್ಲಿ ಸಸಿ ನೆಡುವ ಸಪ್ತಾಹ ಹಮ್ಮಿಕೊಳ್ಳಲಾಗಿದೆ.

ಮೇ 30 ರಂದು ಪ್ರಾಥಮಿಕ ಆರೋಗ್ಯ ಕೇಂದ್ರ, ಲಕ್ಷ್ಮೀಸಾಗರ ಇಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ನೀರು ಮತ್ತು ಪರಿಸರ ವಿಷಯ ಕುರಿತು ಚಿಂತನೆ ನಂತರ ಸಸಿ ನೆಡುವ ಕಾರ್ಯಕ್ರಮ. ಮೇ 31 ರಂದು ನಗರದ ಜೋಗಿಮಟ್ಟಿ ಗೇಟ್ ಬಳಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪರಿಸರಕ್ಕಾಗಿ ಜೀವನಶೈಲಿ ಬದಲಾವಣೆ ವಿಷಯ ಚಿಂತನೆ ಹಾಗೂ ಸಸಿಗಳನ್ನು ನೆಡಲಾಗುವುದು. ಜೂ.01 ರಂದು ಬಾಪೂಜಿ ಸಮನ್ವಯ ಪ್ರೌಢಶಾಲೆ, ಮಲ್ಲಾಪುರ, ಎನ್.ಹೆಚ್. 50, ಚಿತ್ರದುರ್ಗ ಇಲ್ಲಿ ನಡೆಯಲಿದೆ. ವಾಯು ಮಾಲಿನ್ಯ ಕುರಿತ ವಿಷಯ ಚಿಂತನೆ ನಂತರ ಗಿಡಗಳನ್ನು ನಡಲಾಗುವುದು. ಜೂ.02 ರಂದು ಪ್ಲಾಸ್ಟಿಕ್‌ನ ದುಷ್ಪರಿಣಾಮಗಳು ವಿಷಯ ಕುರಿತು ಚಿಂತನೆ ಮತ್ತು ಗಿಡ ನೆಡುವ ಕಾರ್ಯಕ್ರಮ ಕೆ.ಪಿ.ಟಿ.ಸಿ.ಎಲ್. ವಿದ್ಯುತ್ ವಿತರಣಾ ಕೇಂದ್ರ, ಜಾನುಕೊಂಡ ಇಲ್ಲಿ ನಡೆಯಲಿದೆ.

ಜೂ.03 ರಂದು ಜೋಗಿಮಟ್ಟಿ ರಸ್ತೆಯ ಅನ್ನಪೂರ್ಣೇಶ್ವರಿ ದೇವಾಲಯ ಹತ್ತಿರ ಗಿಡ ನೆಡುವ ಮತ್ತು ಪರಿಸರ ಸಂರಕ್ಷಣೆಯಲ್ಲಿ ಸಂಘ-ಸಂಸ್ಥೆಗಳ ಪಾತ್ರ ಕುರಿತು ಚಿಂತನೆ ನಡೆಯಲಿದೆ. ಜೂ.04ರಂದು ಶ್ರೀ ಸಾಯಿ ಲೇಔಟ್, ಕವಾಡಿಗರಹಟ್ಟಿ, ರಾಜೀವಗಾಂಧಿ ಆಶ್ರಯ ಬಡಾವಣೆ, ಚಿತ್ರದುರ್ಗ ಇಲ್ಲಿ ಪಂಚಭೂತಗಳು ಹಾಗೂ ಪರಿಸರ ವಿಷಯ ಚಿಂತನೆ ಮತ್ತು ಗಿಡ ನೆಡುವ ಕಾರ್ಯಕ್ರಮ ಆಯೋಜಿಸಲಾಗಿದೆ.

ಜೂ.05ರಂದು ಶೀಬಾರದ ಜಗದ್ಗುರು ಶ್ರೀಗುರುಪಾದ ಮುರುಘರಾಜೇಂದ್ರ ಸ್ವಾಮಿಗಳವರ ಸ್ಮರಣಾರ್ಥ ನಡೆಯುವ ಜಾತ್ರಾ ಪ್ರದೇಶದಲ್ಲಿ ಸಮಾರೋಪ ಸಮಾರಂಭ ನಡೆಯಲಿದೆ. ಮಣ್ಣಿನ ಉಳಿವು ವಿಷಯ ಚಿಂತನೆ ಹಾಗೂ ಗಿಡ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಮಠದ ಪ್ರಕಟಣೆ ತಿಳಿಸಿದೆ.

ಜೂ. 1ಕ್ಕೆ ಬಿ. ರಾಮಾಂಜನೇಯ ಅವರಿಗೆ ಬೀಳ್ಕೊಡುಗೆ

ಚಿತ್ರದುರ್ಗ: ಚಿತ್ರದುರ್ಗ ಜಿಲ್ಲೆಯಲ್ಲಿ ಭೂದಾಖಲೆಗಳ ಉಪನಿರ್ದೇಶಕರಾಗಿ ಸೇವೆ ಸಲ್ಲಿಸಿ ವಯೋ ನಿವೃತ್ತಿ ಹೊಂದಿರುವ ಬಿ.ರಾಮಾಂಜನೇಯ ಅವರಿಗೆ ಬೀಳ್ಕೊಡುಗೆ ಸಮಾರಂಭವನ್ನು ಜೂನ್ 01ರಂದು ಸಂಜೆ 5.30ಕ್ಕೆ ಚಿತ್ರದುರ್ಗ ನಗರದ ಎನ್.ಹೆಚ್-48ರ ಸರ್ವೀಸ್ ರಸ್ತೆಯಲ್ಲಿರುವ ಕೆಇಬಿ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ.

ಮುಖ್ಯ ಅತಿಥಿಗಳಾಗಿ ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಆಯುಕ್ತ ವೆಂಕಟರಾಜ, ಜಿಲ್ಲಾಧಿಕಾರಿ ಟಿ.ವೆಂಕಟೇಶ್, ಭೂ ದಾಖಲೆಗಳ ಹೆಚ್ಚುವರಿ ನಿರ್ದೇಶಕ ಕೆ.ಜಯಪ್ರಕಾಶ್, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಬೆಂಗಳೂರು ವಿಭಾಗ ಪ್ರಾದೇಶಿಕ ಭೂ ದಾಖಲೆಗಳ ಜಂಟಿ ನಿರ್ದೇಶಕ ಎಸ್.ನಿಸಾರ್ ಅಹ್ಮದ್ ಭಾಗವಹಿಸುವರು. ಚಿತ್ರದುರ್ಗ ಭೂ ದಾಖಲೆಗಳ ಸಹಾಯಕ ನಿರ್ದೇಶಕ ಏಕನಾಥ್ ವಿ.ಆರ್.ಎಮ್ ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಶ್ರೀಕಾಂತಾನಂದ ಸ್ವಾಮೀಜಿ ಬ್ರಹ್ಮೋಪದೇಶ ಮಹೋತ್ಸವ

ಹೊಸದುರ್ಗ: ಪಟ್ಟಣದ ಸದ್ಗುರು ಸೇವಾಶ್ರಮದಲ್ಲಿ ಶ್ರೀಕಾಂತಾನಂದ ಸ್ವಾಮೀಜಿ ಅವರ 26ನೇ ವರ್ಷದ ಬ್ರಹ್ಮೋಪದೇಶ ಮಹೋತ್ಸವದ ಅಂಗವಾಗಿ ಗುರುವಾರ 108 ದಂಪತಿಗಳಿಂದ ಅನಘದತ್ತ ವ್ರತ ಭಕ್ತಿಭಾವದಿಂದ ಹಾಗೂ ಧಾರ್ಮಿಕ ವಿಧಿವಿಧಾನಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಪೂರ್ಣಕುಂಭ ಸ್ವಾಗತ ಹಾಗೂ ಧ್ವಜಾರೋಹಣದ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಬಳಿಕ 108 ದಂಪತಿಗಳಿಂದ ಅನಘದತ್ತ ವ್ರತ ಪೂಜೆ ನೆರವೇರಿಸಲಾಯಿತು. ಮಠದ ವತಿಯಿಂದ ಭಾಗವಹಿಸಿದ ದಂಪತಿಗಳಿಗೆ ವಸ್ತ್ರಗಳು ಹಾಗೂ ಪೂಜಾ ಸಾಮಗ್ರಿಗಳನ್ನು ವಿತರಿಸಲಾಯಿತು.



ಇದೇ ಸಂದರ್ಭದಲ್ಲಿ ಐದು ಮಹಿಳೆಯರಿಗೆ ಬಾಗಿನ ವಿತರಣೆ ಮಾಡಲಾಯಿತು. ಗುರುವಂದನಾ ಕಾರ್ಯಕ್ರಮ, ಪಲ್ಲಕ್ಕಿ ಉತ್ಸವದಲ್ಲಿ ಭಕ್ತರ ಜಯಘೋಷಗಳು ಮೊಳಗಿದವು. ಶ್ರೀಗಳ ಪಲ್ಲಕ್ಕಿಯನ್ನು ಭಕ್ತರು ಹೊತ್ತು ಭಕ್ತಿ ಸಮರ್ಪಿಸಿದರು.

ಶಾಸಕ ಗೋವಿಂದಪ್ಪಗೆ ಸಚಿವ ಸ್ಥಾನ ನೀಡಲು ಒತ್ತಾಯ

ಹೊಸದುರ್ಗ: ನಾಲ್ಕು ಬಾರಿ ಶಾಸಕರಾಗಿ ಜನಪರ ಸೇವೆ ಮಾಡಿರುವ ಹಿರಿಯ ಶಾಸಕ ಬಿ.ಜಿ . ಗೋವಿಂದಪ್ಪ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಹೊಸದುರ್ಗ ತಾಲೂಕು ಕಾಂಗ್ರೆಸ್ ಮುಖಂಡರು ಒತ್ತಾಯಿಸಿದರು.

ಪಟ್ಟಣದ ಶಾಸಕರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಹಮ್ಮದ್ ಇಸ್ಮಾಯಿಲ್ ಮಾತನಾಡಿ, ನಮ್ಮ ನಾಯಕರಾದ ಗೋವಿಂದಪ್ಪ ಅವರು ನಾಲ್ಕು ಬಾರಿ ಶಾಸಕರಾಗಿ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ್ದಾರೆ. ವಿಶೇಷವಾಗಿ ಭದ್ರ ಮೇಲ್ದಂಡೆ ಯೋಜನೆ ಸೇರಿದಂತೆ ಜಿಲ್ಲೆಯ ನೀರಾವರಿ ಹಾಗೂ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಅವರ ಅನುಭವ ಮತ್ತು ಪಕ್ಷ ನಿಷ್ಠೆಯನ್ನು ಪರಿಗಣಿಸಿ ಸಚಿವ ಸ್ಥಾನ ನೀಡಬೇಕು. ಸಚಿವ ಸ್ಥಾನ ಸಂಬಂಧ ತಾಲೂಕಿನ ನೂರು ಪ್ರಮುಖರ ನಿಯೋಗದೊಂದಿಗೆ ವರಿಷ್ಠರನ್ನು ಭೇಟಿಯಾಗಿ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಟಿಎಪಿಸಿಎಂಸಿ ಅಧ್ಯಕ್ಷ ಕಾರೇಹಳ್ಳಿ ಬಸವರಾಜ್ ಮಾತನಾಡಿದರು. ಈ ಸಂದರ್ಭದಲ್ಲಿ ಪದ್ಮನಾಭ್, ಲೋಕೇಶಪ್ಪ, ಎಂ.ಪಿ. ಶಂಕರ್, ಅಲ್ತಾಫ್ ಪಾಷ, ಕೊಂಡಾಪುರ ಬೈರೇಶ್, ಗುತ್ತಿಗಟ್ಟೆ ಮಂಜುನಾಥ್, ನಿವೃತ್ತ ಶಿಕ್ಷಕ ಹನುಮಂತಪ್ಪ, ರಂಗೈನೂರು ಪ್ರಭಾಕರ್, ಸಣ್ಣಕಿಟ್ಟದಹಳ್ಳಿ ಶ್ರೀನಿವಾಸ್ ಉಪಸ್ಥಿತರಿದ್ದರು.

ದಂಡ ವಸೂಲಿಗೆ ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ತಾಕೀತು

ಕಸ ಎಸೆಯುವ ಜಾಗಗಳಿಗೆ ಸಿಸಿಟಿವಿ

ಚಿತ್ರದುರ್ಗ: ನಗರಸಭೆ ಸೇರಿದಂತೆ ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಿಯಮಾನುಸಾರ ಹಾಗೂ ವೈಜ್ಞಾನಿಕವಾಗಿ ಘನತ್ಯಾಜ್ಯ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು. ಕಸ ಎಸೆಯುವ ಬ್ಲಾಕ್ ಸ್ಪಾಟ್ ಜಾಗಗಳನ್ನು ಗುರುತಿಸಿ, ಅಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ, ನಿಯಮ ಮೀರಿ ಕಸ ಹಾಕುವವರಿಂದ ದಂಡ ವಸೂಲಿ ಮಾಡುವಂತೆ ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ, ಘನತಾಜ್ಯ ವಸ್ತುಗಳ ನಿರ್ವಹಣೆ ನಿಯಮ-2026 ರ ಅನುಷ್ಠಾನ ಸಭೆಯಲ್ಲಿ ಮಾತನಾಡಿ, ತ್ಯಾಜ್ಯ ವಿಲೇವಾರಿ ಪ್ರಕ್ರಿಯೆಯನ್ನು ಆರಂಭಿಕ ಹಂತದಿಂದಲೇ ವ್ಯವಸ್ಥಿತವಾಗಿ ನಿರ್ವಹಿಸಬೇಕು. ಹೆಚ್ಚಿನ ಪ್ರಮಾಣದಲ್ಲಿ ಕಸ ಉತ್ಪತ್ತಿ ಮಾಡುವ ಸಂಸ್ಥೆಗಳು ತಮ್ಮ ಆವರಣದಲ್ಲೇ ಕಸ ವಿಲೇವಾರಿಗೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲು ಸ್ವಲ್ಪ ಕಾಲಾವಕಾಶ ನೀಡಿ. ಸ್ಥಳೀಯ ಸಂಸ್ಥೆಗಳು ಅವರಿಗೆ ಸಹಾಯ ಮಾಡಬೇಕು ಎಂದರು.

ನಿಗದಿತ ಸಮಯದಲ್ಲಿ ಸ್ವಂತ ವ್ಯವಸ್ಥೆ ಮಾಡಿ ಕೊಂಡು ನಿಯಮ ಕಡ್ಡಾಯವಾಗಿ ಪಾಲಿಸ ದಿದ್ದರೆ ದಂಡ ವಿಧಿಸುವುದು ಮಾತ್ರವಲ್ಲದೆ, ಇತರೆ ನಾಗರಿಕ ಸೌಲಭ್ಯಗಳನ್ನು ಕಡಿತಗೊಳಿಸಲು ಕೋರ್ಟ್ ನಿರ್ದೇಶನ ಇರುವ ಬಗ್ಗೆ ಕಸ ಉತ್ಪತ್ತಿ ಮಾಡುವ ಸಂಸ್ಥೆಗಳಿಗೆ ಮನವರಿಕೆ ಮಾಡಿಕೊ ಡಬೇಕು. ಮನೆಗಳು ಹಾಗೂ ವಾಣಿಜ್ಯ ಮಳಿಗೆಗಳಿಂದ ಸಂಗ್ರ ಸುವ ಕಸವನ್ನು ಹಸಿ ಮತ್ತು ಒಣ ಕಸ ಎಂದು ಮೂಲದಲ್ಲೇ ಪ್ರತ್ಯೇಕಿಸಬೇಕು. ಕಸ ಸಂಗ್ರಹಣಾ ವಾಹನಗಳು ಕಡ್ಡಾಯವಾಗಿ ವಿಂಗಡಿಸಿದ ಕಸವನ್ನೇ ಪಡೆಯಬೇಕು ಎಂದರು.

ಆರಂಭದಲ್ಲೇ ವಿಂಗಡಣೆ ಸರಿಯಾಗಿ ನಡೆದರೆ, ಅಂತಿಮ ವಿಲೇವಾರಿ ಸುಲಭವಾಗುತ್ತದೆ. ಪರಿಸರ ಇಂಜಿನಿಯರ್‌ಗಳು ಕೇವಲ ಕಚೇರಿ ಕೆಲಸಗಳಿಗೆ ಸೀಮಿತವಾಗದೆ, ಮೈದಾನಕ್ಕಿಳಿದು ಸಕ್ರಿಯವಾಗಿ ಕೆಲಸ ಮಾಡಬೇಕು. ಘನತ್ಯಾಜ್ಯ ಕಾಯ್ದೆಯ ನಿಯಮಗಳ ಅನುಷ್ಠಾನದಲ್ಲಿ ಕರ್ತವ್ಯ ಲೋಪ ಎಸಗುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.



ಮಾಧ್ಯಮಗಳಲ್ಲಿ ಕಸದ ನಿರ್ವಹಣೆ ಕುರಿತು ದೂರುಗಳು ಬಂದರೆ ಇವುಗಳನ್ನು ನ್ಯಾಯಾಲಯಗಳು ಗಂಭೀರವಾಗಿ ಪರಿಗಣಿಸಲಿವೆ. ಸ್ಥಳೀಯ ಸಂಸ್ಥೆಗಳ ಮೂಲ ಕರ್ತವ್ಯವೇ ಸ್ವಚ್ಛತೆ ಕಾಪಾಡುವುದಾಗಿದೆ. ವಾಹನಗಳು ಅಥವಾ ಸಿಬ್ಬಂದಿ ಕೊರತೆಯಿದ್ದರೆ ಸರ್ಕಾರದ ಅನುದಾನಕ್ಕೆ ಕಾಯದೆ ಸ್ಥಳೀಯ ಸಂಸ್ಥೆಗಳ ಸ್ವಂತ ನಿಧಿ ಅಥವಾ 15ನೇ ಹಣಕಾಸು ಯೋಜನೆಯಡಿ ಅಗತ್ಯ ಸೌಕರ್ಯ ಗಳನ್ನು ಬಲಪಡಿಸಿಕೊಂಡು ನಿಯಮಾನುಸಾರ ತ್ಯಾಜ್ಯ ವಿಲೇವಾರಿ ಮಾಡಬೇಕು ಎಂದರು.

ಜಿಲ್ಲೆಯಲ್ಲಿ ಲಭ್ಯವಿರುವ ಕಸ ಮರುಬಳಕೆ ಮಾಡುವ ಏಜೆನ್ಸಿಗಳ ಪಟ್ಟಿಯನ್ನು ಸಿದ್ಧಪಡಿಸಬೇಕು. ಸ್ಥಳೀಯವಾಗಿ ಏಜೆನ್ಸಿಗಳು ಇಲ್ಲದಿದ್ದರೆ, ನೆರೆ ಜಿಲ್ಲೆಗಳ ಏಜೆನ್ಸಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕು. ಈ ಪ್ರಕ್ರಿಯೆಯಲ್ಲಿ ಸ್ವಯಂಸೇವಾ ಸಂಸ್ಥೆಗಳ ನೆರವು ಪಡೆಯಬೇಕು ಎಂದರು.

ಕಸ ವಿಂಗಡಣೆ ಮತ್ತು ಯಂತ್ರಗಳ ಕಾರ್ಯಾಚರಣೆಗೆ ನುರಿತ ಕಾರ್ಮಿಕರ ಅಗತ್ಯವಿದೆ. ಜೊತೆಗೆ ಯಂತ್ರೋಪಕರಣಗಳ ಅಳವಡಿಕೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಇವುಗಳ ಸಮರ್ಪಕ ನಿರ್ವಹಣೆಗಾಗಿ ಖಾಸಗಿ ಏಜೆನ್ಸಿಯೊಂದನ್ನು ನೇಮಕ ಮಾಡಿಕೊಳ್ಳುಲು ಪ್ರಸ್ತಾವನೆಯನ್ನು ಸಿದ್ಧಪಡಿಸಿ ಕಳುಹಿಸಲು ನಿರ್ದೇಶನ ನೀಡಿದರು.

ಜಿ.ಪಂ.ಯೋಜನಾ ನಿರ್ದೇಶಕಿ ಕೆ.ಜಯಲಕ್ಷ್ಮಿ, ಪರಿಸರ ಅಧಿಕಾರಿ ಪಲ್ಲವಿ ಹೆಚ್.ವಿ., ಚಿತ್ರದುರ್ಗ ನಗರ ಪೌರಯುಕ್ತೆ ಲಕ್ಷ್ಮಿ, ಚಳ್ಳಕೆರೆ ನಗರ ಪೌರಾಯುಕ್ತೆ ಡಾ.ನಾಗವೇಣಿ ಸೇರಿದಂತೆ ವಿವಿಧ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಪರಿಸರ ಇಂಜಿನಿಯರ್‌ಗಳು, ಎನ್.ಜಿ.ಓ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಲೆಗಸಿ ವೇಸ್ಟ್ ವಿಲೇವಾರಿ ಪ್ರಕ್ರಿಯೆಗೆ ಚುರುಕು

ಚಿತ್ರದುರ್ಗ ಸೇರಿದಂತೆ ವಿವಿಧೆಡೆ ಸಂಗ್ರಹವಾಗಿರುವ ಲೆಗಸಿ ವೇಸ್ಟ್ ವಿಲೇವಾರಿ ಪ್ರಕ್ರಿಯೆಗೆ ಏಜೆನ್ಸಿ ಗುತ್ತಿಗೆ ನೀಡಲಾಗಿದೆ. ಆದರೆ ವಿಲೇವಾರಿ ಪ್ರಕ್ರಿಯೆ ಆಮೆಗತಿಯಲ್ಲಿ ಸಾಗುತ್ತಿರುವುದಕ್ಕೆ ಅಪರ ಜಿಲ್ಲಾಧಿಕಾರಿ ಅಸಮಾಧಾನ ವ್ಯಕ್ತಪಡಿಸಿದರು. ಒಂದು ಸಮಯದಲ್ಲಿ ಒಂದು ಸ್ಥಳದಲ್ಲಿ ಲೆಗಸಿ ವೇಸ್ಟ್ ವಿಲೇವಾರಿ ಮಾಡುವ ಬದಲು, ಏಕಕಾಲದಲ್ಲಿ ಎಲ್ಲಾ ಕಡೆ ಅಗತ್ಯವಿರುವ ಸಿಬ್ಬಂದಿ ಮತ್ತು ಯಂತ್ರಗಳನ್ನು ಬಳಸಿ ವಿಲೇವಾರಿ ಪ್ರಕ್ರಿಯೆಗೆ ಚುರುಕು ನೀಡಬೇಕು. ಸರಿಯಾಗಿ ಕಾರ್ಯನಿರ್ವಹಿಸದ ಏಜೆನ್ಸಿಗೆ ತಕ್ಷಣ ನೋಟಿಸ್ ಜಾರಿ ಮಾಡಬೇಕು ಎಂದರು.

ಡಿಸಿಸಿ ಬ್ಯಾಂಕ್ ನೂತನ ಅಧ್ಯಕ್ಷರಾಗಿ ಶಾಸಕ ಟಿ. ರಘುಮೂರ್ತಿ ಅವಿರೋಧ ಆಯ್ಕೆ



ಚಿತ್ರದುರ್ಗ: ಚಿತ್ರದುರ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ (ಡಿಸಿಸಿ) ನೂತನ ಅಧ್ಯಕ್ಷರಾಗಿ ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿದ್ದ ಸಚಿವ ಡಿ.ಸುಧಾಕರ್ ಅವರ ಅಕಾಲಿಕ ನಿಧನದ ಹಿನ್ನಲೆಯಲ್ಲಿ, ಸಹಕಾರ ಸಂಘಗಳ ಕಾಯ್ದೆ ಪ್ರಕಾರ ಶುಕ್ರವಾರ ಅಧ್ಯಕ್ಷರ ಚುನಾವಣೆ ಪ್ರಕ್ರಿಯೆ ನಡೆಸಲಾಯಿತು. ನೂತನ ಅಧ್ಯಕ್ಷರಾಗಿ ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಇಲ್ಯಾಸ್ ಉಲ್ಲಾ ಷರೀಪ್ ಘೋಷಿಸಿದರು.

ಬ್ಯಾಂಕಿನ ಪ್ರಸ್ತುತ ಆಡಳಿತ ಮಂಡಳಿಗೆ ಇನ್ನು 3 ವರ್ಷ 4 ತಿಂಗಳ ಅಧಿಕಾರಾವಧಿ ಬಾಕಿ ಉಳಿದಿದೆ. ಅಂದರೆ, 2029ರ ಸೆಪ್ಟೆಂಬರ್ ತಿಂಗಳವರೆಗೆ ಈ ಬ್ಯಾಂಕ್ ಆಡಳಿತ ಮಂಡಳಿಯ ಅವಧಿ ಇರಲಿದ್ದು, ಅಲ್ಲಿಯವರೆಗೂ ನೂತನ ಅಧ್ಯಕ್ಷರು ಅಧಿಕಾರದಲ್ಲಿ ಮುಂದುವರಿಯಲಿದ್ದಾರೆ ಎಂದು ತಿಳಿಸಿದರು.

ಚಿತ್ರದುರ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ನೂತನ ಅಧ್ಯಕ್ಷರಾಗಿ ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ ಅವರು ಅವಿರೋಧವಾಗಿ ಆಯ್ಕೆಯಾಗಿ ಅಧಿಕಾರ ಸ್ವೀಕರಿಸಿದನಂತರಮಾಧ್ಯಮದವರೊಂದಿಗೆ ಮಾತನಾಡಿ, ಬ್ಯಾಂಕ್‌ನ ಪ್ರಗತಿ ಹಾಗೂ ರೈತರ ಹಿತರಕ್ಷಣೆಗೆ ಬದ್ಧವಾಗಿ ಕೆಲಸ ಮಾಡುವುದಾಗಿ ಭರವಸೆ ನೀಡಿದರು.

ರೈತರ ಆರ್ಥಿಕ ಸಬಲೀಕರಣವೇ ನಮ್ಮ ಬ್ಯಾಂಕ್‌ನ ಮೂಲ ಉದ್ದೇಶವಾಗಿದ್ದು, ಮುಂಬರುವ ದಿನಗಳಲ್ಲಿ ಇನ್ನಷ್ಟು ಜನಪರ ಯೋಜನೆಗಳ ಮೂಲಕ ಚಿತ್ರದುರ್ಗ ಡಿಸಿಸಿ ಬ್ಯಾಂಕ್ ಅನ್ನು ರಾಜ್ಯದಲ್ಲೇ ಮಾದರಿ ಸಹಕಾರಿ ಬ್ಯಾಂಕ್ ಆಗಿ ರೂಪಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಉಪಾಧ್ಯಕ್ಷ ಹೆಚ್ .ಬಿ.ಮಂಜುನಾಥ್, ನಿರ್ದೇಶಕರಾದ ಟಿ.ಮಹಂತೇಶ್, ಎಸ್.ಆರ್.ಗಿರೀಶ್, ನಾಗರೆಡ್ಡಿ, ಪಿ.ರಾಜು, ಎಂ.ನಿಶಾನಿ ಜಯಣ್ಣ, ಡಿ.ಎಸ್.ಶಶಿಧರ, ಪಿ.ವಿನೋದಾ ಸ್ವಾಮಿ, ಕೆ.ಜಗಣ್ಣ, ಹೆಚ್.ಎಂ.ದ್ಯಾಮಣ್ಣ, ಪಿ.ತಿಪ್ಪೇಸ್ವಾಮಿ, ಟಿ.ಮಹಂತೇಶ್, ಡಾ.ಕೆ. ಅನಂತ್, ಓ.ಮಂಜುನಾಥ್, ಸಹಕಾರ ಸಂಘಗಳ ಉಪನಿಬಂಧಕ ದಿಲೀಪ್ ಕುಮಾರ್ ಮತ್ತಿತರರಿದ್ದರು.

ಎಂಎಲ್‌ಸಿ ಡಿ.ಟಿ. ಶ್ರೀನಿವಾಸ್‌ಗೆ ಸಚಿವ ಸ್ಥಾನ ನೀಡಲು ಮನವಿ

ಚಿತ್ರದುರ್ಗ: ವಿಧಾನ ಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಕಾಂಗ್ರೆಸ್ ಪಕ್ಷದ ವರಿಷ್ಠರನ್ನು ಕರ್ನಾಟಕ ರಾಜ್ಯ (ಗೊಲ್ಲ) ಯಾದವ ಸಂಘ ಒತ್ತಾಯಿಸಿದೆ.

ರಾಜ್ಯ ಯಾದವ ಸಂಘದ ಉಪಾಧ್ಯಕ್ಷ ಸಿದ್ದಪ್ಪ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕರ್ನಾಟಕ ರಾಜ್ಯದಲ್ಲಿ ಯಾದವ (ಗೊಲ್ಲ) ಸಮುದಾಯವು ಸುಮಾರು 19 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿದ್ದು, ರಾಜಕೀಯವಾಗಿ ಪ್ರಾತಿನಿಧ್ಯ ಇಲ್ಲದಂತಾಗಿದೆ. ಕರ್ನಾಟಕದ ಯಾದವ ಸಮುದಾಯದ ಧೀಮಂತ ನಾಯಕರಾದ ದಿವಂಗತ ಎ.ಕೃಷ್ಣಪ್ಪನವರ ನಂತರ ಕರ್ನಾಟಕ ರಾಜ್ಯ ಗೊಲ್ಲ (ಯಾದವ) ಸಂಘಕ್ಕೆ ಡಿ.ಟಿ. ಶ್ರೀನಿವಾಸ್ ಅಧ್ಯಕ್ಷರಾಗಿ ಆಯ್ಕೆಯಾಗಿ ಮುನ್ನಡೆಸುತ್ತಿದ್ದಾರೆ. ಡಿ.ಟಿ. ಶ್ರೀನಿವಾಸ್ ಅವರು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಸಮಾವೇಶಗಳನ್ನು ಮಾಡಿ ಸಮಾಜವನ್ನು ಸಂಘಟನೆ ಮಾಡಿದ್ದಾರೆ ಎಂದರು.

2024ರಲ್ಲಿ ನಡೆದ ಕರ್ನಾಟಕ ಶಿಕ್ಷಕರ ಕ್ಷೇತ್ರದ ಎಂಎಲ್‌ಸಿ ಚುನಾವಣೆಯಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ನಮ್ಮ ರಾಜ್ಯದಲ್ಲಿ ಹಿಂದುಳಿದ ಪ್ರವರ್ಗ-1ರ ಜಾತಿಗಳ ಒಕ್ಕೂಟದ ಅಧ್ಯಕ್ಷರಾಗಿ ಸುಮಾರು 95ಕ್ಕೂ ಹೆಚ್ಚು ಅತೀ ಹಿಂದುಳಿದ ಸಮಾಜಗಳನ್ನು ಸಂಘಟಿಸಿ ಅವರನ್ನು ಮುನ್ನೆಲೆಗೆ ತರಲು ಶ್ರಮಿಸುತ್ತಿದ್ದಾರೆ. ಡಿ.ಟಿ. ಶ್ರೀನಿವಾಸ ಅವರನ್ನು ಕರ್ನಾಟಕ ರಾಜ್ಯದಲ್ಲಿ ಮುಂಬರುವ ಸಚಿವ ಸಂಪುಟದಲ್ಲಿ ಹಿಂದುಳಿದ ಸಮಾಜಗಳ ಪ್ರತಿನಿಧಿಯಾಗಿ ಸಚಿವ ಸ್ಥಾನ ನೀಡಬೇಕೆಂದು ಮನವಿ ಮಾಡಿದರು.



ರಮೇಶ್ ಮಾತನಾಡಿ, ರಾಜಕೀಯ ಪಕ್ಷಗಳು ನಮ್ಮನ್ನು ಮತದಾನಕ್ಕೆ ಮಾತ್ರ ಬಳಕೆ ಮಾಡಲಾಗುತ್ತಿದೆ. ಆದರೆ ಸರ್ಕಾರದಲ್ಲಿ ಸ್ಥಾನಗಳನ್ನು ನೀಡುವಲ್ಲಿ ಮಾತ್ರ ಮೀನಾಮೇಷ ಮಾಡುತ್ತಿದೆ. ಕಳೆದ 30 ವರ್ಷದಿಂದ ಚಿತ್ರದುರ್ಗದಲ್ಲಿ ಕಾಂಗ್ರೆಸ್ ಶಿಕ್ಷಕರ ಕ್ಷೇತ್ರವನ್ನು ಗೆದ್ದಿರಲಿಲ್ಲ. ಡಿ.ಟಿ. ಶ್ರೀನಿವಾಸ್ ಅವರು ಈ ಕ್ಷೇತ್ರದಲ್ಲಿ ಗೆಲುವು ಸಾಧಿಸಿ, ಕಾಂಗ್ರೆಸ್ ಪಕ್ಷ ಮತ್ತು ಸಮುದಾಯಕ್ಕೆ ಕೀರ್ತಿ ತಂದಿದ್ದಾರೆ. ಶ್ರೀನಿವಾಸ್ ಅವರು ತಮ್ಮ ಸಮುದಾಯ ಮಾತ್ರವಲ್ಲದೆ ಬೇರೆ ಸಮುದಾಯದವರಿಗೆ ನ್ಯಾಯ ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಹಿರಿಯೂರು ಪುರಸಭೆಯ ಮಾಜಿ ಸದಸ್ಯರಾದ ಬಿ.ಕೆ. ಕರಿಯಪ್ಪ, ಹಿರಿಯೂರು ಗೊಲ್ಲ ಯಾದವ ಸಂಘದ ಅಧ್ಯಕ್ಷ ಆರ್. ರಂಗಸ್ವಾಮಿ, ನಾಗಪ್ಪ ಟಿ. ಮುದ್ದನಕುಂಟೆ, ಜಿಲ್ಲಾ ಗೊಲ್ಲ ಯಾದವ ಸಂಘದ ನಿರ್ದೇಶಕ ಪ್ರಕಾಶ್, ಅಲೆಮಾರಿ ಮತ್ತು ಅರೆ ಅಲೆಮಾರಿ ಒಕ್ಕೂಟದ ಜಿಲ್ಲಾಧ್ಯಕ್ಷ ಎಸ್. ಲಕ್ಷ್ಮಿಕಾಂತ, ನಗರಸಭೆಯ ಮಾಜಿ ಅಧ್ಯಕ್ಷ ಸಿ.ಟಿ. ಕೃಷ್ಣಮೂರ್ತಿ ಮತ್ತಿತರರು ಹಾಜರಿದ್ದರು.

ಶಾಸಕ ಟಿ. ರಘುಮೂರ್ತಿಗೆ ಸಚಿವ ಸ್ಥಾನ ನೀಡಿ: ಶಿವಕುಮಾರ್

ಚಿತ್ರದುರ್ಗ: ಮೂರು ಬಾರಿ ಶಾಸಕರಾಗಿ ಚಳ್ಳಕೆರೆ ಕ್ಷೇತ್ರವನ್ನು ರಾಜ್ಯಕ್ಕೆ ಮಾದರಿಯನ್ನಾಗಿ ಅಭಿವೃದ್ಧಿ ಪಡಿಸಿರುವ ಶಾಸಕ ಟಿ. ರಘುಮೂರ್ತಿಗೆ ಹೊಸ ಸರ್ಕಾರದಲ್ಲಿ ಸಚಿವ ಸ್ಥಾನ ನೀಡುವಂತೆ ಕರುನಾಡ ವಿಜಯಸೇನೆ ಜಿಲ್ಲಾಧ್ಯಕ್ಷ ಕೆ.ಟಿ. ಶಿವಕುಮಾರ್ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಧ್ಯ ಕರ್ನಾಟಕದ ಬಯಲು ಸೀಮೆ ಚಿತ್ರದುರ್ಗ ಜಿಲ್ಲೆ ಹಿಂದುಳಿದ ಪ್ರದೇಶ. ಚಳ್ಳಕೆರೆಗೆ ಮಂಜೂರಾಗಿದ್ದ ಡಿಗ್ರಿ ಕಾಲೇಜು ನಿಪ್ಪಾಣಿಗೆ ವರ್ಗಾವಣೆಗೊಂಡಾಗ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಬೀದಿ ಗಿಳಿದು ಹೋರಾಟ ನಡೆಸಿದ ಟಿ.ರಘುಮೂರ್ತಿ ಚಿತ್ರದುರ್ಗಕ್ಕೆ ಮೆಡಿಕಲ್ ಕಾಲೇಜು ಆಗಬೇಕೆಂದು ಮೊಟ್ಟ ಮೊದಲು ಧ್ವನಿ ಎತ್ತಿದ ಏಕೈಕ ಶಾಸಕ. ಹಾಗಾಗಿ ಅವರನ್ನು ಉಪ ಮುಖ್ಯಮಂತ್ರಿ ಇಲ್ಲವೇ ಸಚಿವರನ್ನಾಗಿ ನೇಮಕ ಮಾಡಬೇಕು ಎಂದರು.



ಚಳ್ಳಕೆರೆಗೆ ಇಂಜಿನಿಯರ್ ಕಾಲೇಜನ್ನು ತಂದಿರುವ ಟಿ. ರಘುಮೂರ್ತಿಯವರ ಜನಪರ ಕಾಳಜಿಯಿಂದ ಹಿರಿಯೂರಿನ ವಾಣಿವಿಲಾಸಸಾಗರದ ನೀರು ಚಳ್ಳಕೆರೆಗೆ ಬರುವಂತಾಯಿತು. ರಸ್ತೆ ಅಗಲೀಕರಣವಾಗಿದೆ. ಕಾಂಗ್ರೆಸ್‌ಗೆ ನಿಷ್ಠರಾಗಿರುವ ಇವರಿಗೆ ಸಚಿವ ಸ್ಥಾನ ನೀಡಲೇಬೇಕೆಂದು ಕೆ.ಟಿ. ಶಿವಕುಮಾರ್ ಆಗ್ರಹಿಸಿದರು.

ಕರುನಾಡ ವಿಜಯಸೇನೆ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ವೀಣಗೌರಣ್ಣ, ನಗರಾಧ್ಯಕ್ಷ ಅವಿನಾಶ್, ಕಾರ್ಯದರ್ಶಿ ಸಿ. ಜಗದೀಶ್, ಉಪಾಧ್ಯಕ್ಷ ಮುಜಾ ಹಿದ್ದೀನ್, ವಿದ್ಯಾರ್ಥಿ ಘಟಕದ ಅಧ್ಯಕ್ಷ ಅಖಿಲೇಶ್, ಚಳ್ಳಕೆರೆ ತಾಲೂಕು ಅಧ್ಯಕ್ಷ ಪಾಂಡು, ಹಿರಿಯೂರು ತಾಲೂಕು ಅಧ್ಯಕ್ಷ ತಿಪ್ಪೇಸ್ವಾಮಿ ಹಾಜರಿದ್ದರು.

ರುದ್ರಪ್ಪ ಮಾನಪ್ಪ ಲಮಾಣಿಗೆ ಸಚಿವ ಸ್ಥಾನ ನೀಡಿ: ಅರುಣ್‌ಕುಮಾರ್

ಚಿತ್ರದುರ್ಗ: ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿ ಅಧ್ಯಕ್ಷರು ಹಾಗೂ ವಿಧಾನಸಭೆ ಉಪ ಸಭಾಪತಿ ರುದ್ರಪ್ಪ ಮಾನಪ್ಪ ಲಮಾಣಿ ಅವರಿಗೆ ಈ ಬಾರಿಯ ಹೊಸ ಸರ್ಕಾರದಲ್ಲಿ ಕ್ಯಾಬಿನೆಟ್ ದರ್ಜೆ ಸಚಿವ ಸ್ಥಾನ ನೀಡುವಂತೆ ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿ ಸಮಿತಿಯ ಪ್ರಧಾನ ಕಾರ್ಯದರ್ಶಿ ನರೇನಹಳ್ಳಿ ಅರುಣ್‌ಕುಮಾರ್ ಕಾಂಗ್ರೆಸ್ ನಾಯಕರುಗಳಲ್ಲಿ ಮನವಿ ಮಾಡಿದರು.

ನಗರದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಲ್ಕು ಬಾರಿ ಶಾಸಕರಾಗಿರುವ ಇವರನ್ನು ಬಂಜಾರ ಸಮಾಜ ನಾಯಕನನ್ನಾಗಿ ಒಪ್ಪಿಕೊಂಡಿದೆ. 2023ರಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಬಂಜಾರ ಸಮಾಜದ ಬಹುಪಾಲು ಕೊಡುಗೆಯಿದೆ ಎಂದರು.

ಸಿದ್ದರಾಮಯ್ಯನವರು ಮುಖ್ಯಮಂತ್ರಿ ಯಾದಾಗಲೆ ರುದ್ರಪ್ಪ ಮಾನಪ್ಪ ಲಮಾಣಿಗೆ ಕ್ಯಾಬಿನೆಟ್ ದರ್ಜೆ ಸಚಿವ ಸ್ಥಾನ ಸಿಗಬೇಕಿತ್ತು. ಈಗ ಸಚಿವ ಸ್ಥಾನ ನೀಡುವ ಮೂಲಕ ಬಂಜಾರ ಸಮಾಜವನ್ನು ಗೌರವಿಸಬೇಕಿದೆ. ರಾಜ್ಯದಲ್ಲಿ 35 ಲಕ್ಷ ಬಂಜಾರ ಜನಾಂಗದವರಿದ್ದಾರೆ. ಮೊದಲಿನಿಂದಲೂ ಕಾಂಗ್ರೆಸ್‌ಗೆ ಮತ ನೀಡುತ್ತ ಬರುತ್ತಿರುವ ಈ ಜನಾಂಗವನ್ನು ಯಾವುದೇ ಕಾರಣಕ್ಕೂ ಕಡೆಗಣಿಸಬಾರದು ಎಂದು ಹೇಳಿದರು.



ಕರ್ನಾಟಕ ಬಂಜಾರ ಜನಜಾಗೃತಿ ಅಭಿಯಾನದ ಪ್ರಧಾನ ಕಾರ್ಯದರ್ಶಿ ಆರ್. ನಿಂಗಾನಾಯ್ಕ ಮಾತನಾಡಿ, ಕಾಂಗ್ರೆಸ್ ಪಕ್ಷ ಮೊದಲಿನಿಂದಲೂ ಬಂಜಾರ ಜನಾಂಗಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಟಿಕೇಟ್ ನೀಡಿ ಚುನಾವಣೆಯಲ್ಲಿ ಗೆಲ್ಲಲು ಅವಕಾಶ ಕೊಡುತ್ತಾ ಬರುತ್ತಿದೆ. ಆದರೆ ಈಗ ಏಕೋ ಮುನಿಸಿಕೊಂಡಂತಿದೆ. ನಮ್ಮ ಏಕೈಕ ನಾಯಕ ರುದ್ರಪ್ಪ ಮಾನಪ್ಪ ಲಮಾಣಿಗೆ ಈ ಬಾರಿ ಸಚಿವ ಸಂಪುಟದಲ್ಲಿ ಕ್ಯಾಬಿನೆಟ್ ದರ್ಜೆ ಸಚಿವ ಸ್ಥಾನ ಕಲ್ಪಿಸಿ ಬಂಜಾರರ ಅಭಿವೃದ್ಧಿಗೆ ಸಹಕರಿಸಬೇಕೆಂದು ಆಗ್ರಹಿಸಿದರು.

ರಾಜ್ಯದ ಮುಖ್ಯಮಂತ್ರಿಯಾಗಲಿರುವ ಡಿ.ಕೆ. ಶಿವಕುಮಾರ್ ಲಂಬಾಣಿ ಜನಾಂಗದವರೊಡನೆ ಒಡನಾಟವಿಟ್ಟುಕೊಂಡಿರುವುದರಿಂದ ರುದ್ರಪ್ಪ ಮಾನಪ್ಪ ಲಮಾಣಿಗೆ ಸಚಿವ ಸ್ಥಾನ ನೀಡುತ್ತಾರೆಂಬ ಭರವಸೆಯಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವೆಂಕಟನಾಯ್ಕ, ರಾಜನಾಯ್ಕ, ಜಿ.ಎಸ್.ಟಿ. ಚಂದ್ರನಾಯ್ಕ, ರಮೇಶ್ ನಾಯ್ಕ, ಶಂಕರ್‌ಸಿಂಗ್‌ನಾಯ್ಕ ಉಪಸ್ಥಿತರಿದ್ದರು.

ಸಿ.ಸಿ.ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ ಶಾಸಕ ಚಂದ್ರಪ್ಪ

ಕೆಲವೇ ದಿನಗಳಲ್ಲಿ 37 ಕೆರೆಗಳಿಗೆ ಭದ್ರಾ ನೀರು

ಚಿತ್ರದುರ್ಗ: ಇನ್ನು ಮೂರ್‍ನಾಲ್ಕು ದಿನದಲ್ಲಿ ಗಂಗಸಮುದ್ರ ಕೆರೆಗೆ ಭದ್ರಾ ಪ್ರಾಜೆಕ್ಟ್‌ನಿಂದ ನೀರು ತುಂಬಿಸಿ ತಾಲೂಕಿನಲ್ಲಿರುವ 37 ಕೆರೆಗಳಿಗೆ ನೀರು ಹರಿಸಲಾಗುವುದೆಂದು ಶಾಸಕ ಡಾ.ಎಂ. ಚಂದ್ರಪ್ಪ ತಿಳಿಸಿದರು.

ಹೊಳಲ್ಕೆರೆ ತಾಲೂಕಿನ ತಾಳಿಕಟ್ಟೆ ಕಾವಲು ಗ್ರಾಮದಲ್ಲಿ ಒಂದು ಕೋಟಿ ರೂ. ವೆಚ್ಚದಲ್ಲಿ ತಾಳಿಕಟ್ಟೆ ಕಾವಲಿನಿಂದ ರಣದಮ್ಮ ದೇವಸ್ಥಾನದವರೆಗೂ ಸಿ.ಸಿ.ರಸ್ತೆ ಕಾಮಗಾರಿಗೆ ಶುಕ್ರವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಮಾನವೀಯತೆ ಎನ್ನುವುದು ನನ್ನ ಜಾಯಮಾನದಲ್ಲಿ ಬಂದಿದೆ. ಯಾರು ಏನೇ ಕೇಳಲಿ, ನನಗೆ ಮತ ಹಾಕಿದವರು, ಹಾಕದವರು ಎನ್ನುವ ತಾರತಮ್ಯ ಮಾಡುವುದಿಲ್ಲ. ಹೃದಯ ಕರಗುತ್ತದೆ. ನೂರು ವರ್ಷ ಹಾಳಾ ಗದಂತೆ ಗಟ್ಟಿಮುಟ್ಟಾಗಿರುವ ರಸ್ತೆ ಮಾಡಿಸುತ್ತಿದ್ದೇನೆ. ನೀವುಗಳು ಉಳುಮೆ ಮಾಡುತ್ತಿರುವ ಭೂಮಿ ನಿಮ್ಮ ನಿಮ್ಮ ಹೆಸರಿಗೆ ಆದಾಗ ಯಾವುದೇ ಸಮಸ್ಯೆಯಾಗುವುದಿಲ್ಲ. ಒಂದಲ್ಲಾ ಒಂದು ದಿನ ತೊಂದರೆಯಾಗುತ್ತದೆ. ಸರ್ಕಾರದಿಂದ ಹಕ್ಕುಪತ್ರಗಳನ್ನು ಪಡೆದುಕೊಳ್ಳುವುದು ನಿಮ್ಮ ಜವಾಬ್ದಾರಿ. ನಾನು ಶಾಸಕನಾಗಿ ಇರುವತನಕ ಯಾರು ನಿಮ್ಮನ್ನು ಮುಟ್ಟುವುದಿಲ್ಲ. ಯಾರಾದರೂ ತಲೆಕೆಟ್ಟ ಎಂಎಲ್‌ಎ ಬಂದರೆ ಏನು ಮಾಡುತ್ತೀರ ಎಂದರು.



ಕೆರೆ ಏರಿ ಅಗಲ ಮಾಡಿಸುತ್ತಿದ್ದೇನೆ. ಕೆಲಸ ಪೂರ್ಣಗೊಂಡ ನಂತರ ಡಾಂಬರ್ ರಸ್ತೆಯಾಗುತ್ತದೆ. ಹನುಮಲಿ ಬಳಿ ಮೂರೂವರೆ ಎಕರೆ ಜಾಗದಲ್ಲಿ 23 ಕೋಟಿ ರೂ. ವೆಚ್ಚದಲ್ಲಿ ವಿದ್ಯುತ್ ಪವರ್ ಸ್ಟೇಷನ್ ನಿರ್ಮಾಣವಾಗುತ್ತಿದೆ. ಕೆಂಚಾಪುರ, ತಾಳ್ಯ, ತೇಕಲವಟ್ಟಿ, ಎನ್.ಜಿ.ಹಳ್ಳಿ ಸೇರಿದಂತೆ ಹದಿನೇಳು ಕಡೆ ವಿದ್ಯುತ್ ಪವರ್ ಸ್ಟೇಷನ್ ಕಟ್ಟಿಸುತ್ತಿದ್ದೇನೆ. ಇಲ್ಲಿಗೆಲ್ಲಾ ಕರೆಂಟ್ ಪೂರೈಕೆಯಾಗಬೇಕಾದರೆ ಚಿಕ್ಕಜಾಜೂರಿನ ಕೋಟೆಹಾಳ್ ಸಮೀಪ 500 ಕೋಟಿ ರೂ. ವೆಚ್ಚದಲ್ಲಿ ದೊಡ್ಡ ವಿದ್ಯುತ್ ಪವರ್ ಸ್ಟೇಷನ್ ನಿರ್ಮಾಣವಾಗುತ್ತಿದೆ. ನೇರವಾಗಿ ಜೋಗ್‌ಫಾಲ್‌ನಿಂದ ಇಲ್ಲಿಗೆ ವಿದ್ಯುತ್ ಪೂರೈಕೆಯಾಗಲಿದೆ. ಇದರಿಂದ ಇನ್ನು ಐವತ್ತು ವರ್ಷಗಳ ಕಾಲ ರೈತರಿಗೆ ವಿದ್ಯುತ್ ಸಮಸ್ಯೆ ಕಾಡುವುದಿಲ್ಲ ಎಂದು ಹೇಳಿದರು.


ಬಿಜೆಪಿ ಮಂಡಲ ಅಧ್ಯಕ್ಷ ಕುಮಾರಣ್ಣ, ಜಿಪಂ ಮಾಜಿ ಸದಸ್ಯರಾದ ಲಕ್ಷ್ಮಣ್, ಬಿ.ಗಂಗಾಧರ್, ತಾಲೂಕು ಕುರುಬ ಸಮಾಜದ ಅಧ್ಯಕ್ಷ ಹಳ್ಳಪ್ಪ, ನುಲೇನೂರು ಶೇಖರಪ್ಪ, ಇನ್ನಿತರರಿದ್ದರು.

ದೊಡ್ಡಚೆಲ್ಲೂರಿನಲ್ಲಿ ಜನಪದ ಉತ್ಸವ, ನಾಟಕೋತ್ಸವ

ಪರಶುರಾಂಪುರ: ಗ್ರಾಮೀಣ ಪ್ರದೇಶಗಳಲ್ಲಿ ಜೀವನೋಪಾಯಕ್ಕಾಗಿ ಜಾನಪದ ಕಲೆಗಳನ್ನೇ ಅವಲಂಬಿಸಿರುವ ಸಮುದಾಯಗಳ ಏಳಿಗೆಗಾಗಿ ಸಂಘ ಸಂಸ್ಥೆಗಳು ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಿದಾಗ ಮಾತ್ರ ನಶಿಸುತ್ತಿರುವ ಜಾನಪದ ಕಲೆಗಳನ್ನು ಸಂರಕ್ಷಿಸಲು ಸಾಧ್ಯ ಎಂದು ಗ್ರಾಪಂ ಮಾಜಿ ಅಧ್ಯಕ್ಷ ರಾಘವೇಂದ್ರ ಪಾಟೀಲ್ ತಿಳಿಸಿದರು.

ಸಮೀಪದ ದೊಡ್ಡಚೆಲ್ಲೂರು ಗ್ರಾಮದಲ್ಲಿ ಶುಕ್ರವಾರ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದೊಡ್ಡಬೀರನಹಳ್ಳಿ ಶ್ರೀವಾಲ್ಮೀಕಿ ರಂಗ ತಂಡ, ದೋಡ್ಡಚೆಲ್ಲೂರು ಗ್ರಾಮದ ಶ್ರೀಚಾಮುಂಡೇಶ್ವರಿ ಕೃಪಾ ಪೋಷಿತ ನಾಟಕ ಮಂಡಳಿ ಸಹಯೋಗದಲ್ಲಿ ಜನಪದ ಉತ್ಸವ ಹಾಗೂ ನಾಟಕೋತ್ಸವ ಕಾರ್ಯಕ್ರಮದ ಮೆರವಣಿಗೆ ಚಾಲನೆ ನೀಡಿ ಮಾತನಾಡಿದರು.

ಪ್ರತಿಯೊಂದು ಜಾನಪದ ಕಲೆಗಳು ಸಮಾಜಕ್ಕೆ ನಮ್ಮ ಸಂಸ್ಕೃತಿಯ ಇತಿಹಾಸದ ಸಂದೇಶವನ್ನು ಕೊಡುತ್ತವೆ. ಆದರೆ ಇಂದು ಸಾಂಸ್ಕೃತಿಕ ಕಲೆಗಳ ಅಧಃಪತನವಾಗುತ್ತಿದೆ. ಮುಂದಿನ ಪೀಳಿಗೆಯನ್ನು ಗಮನದಲ್ಲಿಟ್ಟುಕೊಂಡು ಜಾನಪದ ಕಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಸಾಮುದಾಯಿಕ ಜವಾಬ್ದಾರಿಯನ್ನು ಎಲ್ಲರೂ ತೆಗೆದುಕೊಳ್ಳುವ ಅವಶ್ಯಕತೆ ಇದೆ ಎಂದರು.





ಬೈಲಾಂಜನೇಯ ಸ್ವಾಮಿ ವೀರಗಾಸೆ ಕಲಾ ತಂಡದ ಅಧ್ಯಕ್ಷ ತಿಪ್ಪೇಸ್ವಾಮಿ ಮಾತನಾಡಿ, ನಮ್ಮ ಸಂಸ್ಕೃತಿಯ ಪ್ರತಿಬಿಂಬವಾದ ಜನಪದ ಕಲೆಗಳು ಸಂರಕ್ಷಿಸುವ ನಿಟ್ಟಿನಲ್ಲಿ ಸರ್ಕಾರದ ಇಲಾಖೆಗಳು ಗ್ರಾಮೀಣ ಮಟ್ಟದಲ್ಲಿ ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಾನಾ ಸೌಲಭ್ಯಗಳನ್ನು ಜನಪದ ಕಲಾವಿದರಿಗೆ ತಲುಪಿಸಲು ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ತಿಳಿಸಿದರು.

ಈ ವೇಳೆಯಲ್ಲಿ ಗ್ರಾಮದ ಹಿರಿಯರು ಮುಖಂಡರು, ಸ್ಥಳೀಯ ಗ್ರಾಪಂ ಸದಸ್ಯರು, ಕಲಾವಿದರು ಉಪಸ್ಥಿತರಿದ್ದರು.

ಕಿರುಸುದ್ದಿ

ರಾಜ್ಯಮಟ್ಟದ ತತ್ವಪದ ವಿಮರ್ಶಾ ಲೇಖನ ಸ್ಪರ್ಧೆಗೆ ಅರ್ಜಿ ಆಹ್ವಾನ

ದಾವಣಗೆರೆ: ಬೆಂಗಳೂರಿನ ಸಂತಕವಿ ಕನಕದಾಸ ಮತ್ತು ತತ್ತ್ವಪದಕಾರರ ಅಧ್ಯಯನ ಕೇಂದ್ರವು ರಾಜ್ಯಮಟ್ಟದ ತತ್ವಪದ ವಿಮರ್ಶಾ ಲೇಖನ ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. 18ರಿಂದ 40 ವರ್ಷದೊಳಗಿನವರು ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹರು. ಅಧ್ಯಯನ ಕೇಂದ್ರವು ನೀಡಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಆಯ್ದುಕೊಂಡು ವಿಮರ್ಶಾ ಲೇಖನ ಸಿದ್ಧಪಡಿಸಬೇಕು. ವಿಮರ್ಶಾ ಲೇಖನ ಮತ್ತು ಅರ್ಜಿ ಸಲ್ಲಿಸಲು ಜೂನ್ 5 ಕೊನೆಯ ದಿನವಾಗಿದೆ. ತಮ್ಮ ಅರ್ಜಿ ಮತ್ತು ಲೇಖನವನ್ನು ಅಂಚೆ, ಕೊರಿಯರ್, ಇ-ಮೇಲ್ ಮೂಲಕ ಅಥವಾ ಖುದ್ದಾಗಿ ಸಂತಕವಿ ಕನಕದಾಸ ಮತ್ತು ತತ್ತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು-560056 ವಿಳಾಸಕ್ಕೆ ತಲುಪಿಸಬಹುದು. ಅರ್ಜಿ ನಮೂನೆಯನ್ನು ಇಲಾಖೆಯ ಅಧಿಕೃತ ವೆಬ್ ಸೈಟ್ https://kanakadasare-searchcenter.karnataka.gov.in> ಇಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ದೂ:97435 45865, 080-22113147 ಸಂಪರ್ಕಿಸುವಂತೆ ಅಧ್ಯಯನ ಕೇಂದ್ರದ ಸದಸ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

ಚನ್ನಗಿರಿ ಸರ್ಕಾರಿ ಪಾಲಿಟೆಕ್ನಿಕ್ ನೇರ ಪ್ರವೇಶಕ್ಕೆ ಅವಕಾಶ

ದಾವಣಗೆರೆ: ಜಿಲ್ಲೆಯ ಚನ್ನಗಿರಿ ತಾಲ್ಲೂಕು ದಾಗಿನಕಟ್ಟೆಯ ಕೆಂಗಪ್ಪ ನಾಯಕ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ' ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್, ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಮತ್ತು ಸಿವಿಲ್ ಇಂಜಿನಿಯರಿಂಗ್ ಡಿಪ್ಲೊಮಾ ಕೋರ್ಸ್ ಗಳ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ. ಮೊದಲ ಹಂತದ ಪ್ರವೇಶ ಪ್ರಕ್ರಿಯೆಯ ನಂತರ ನಾನಾ ವಿಭಾಗಗಳಲ್ಲಿ ಕೆಲವು ಸೀಟುಗಳು ಮಾತ್ರ ಖಾಲಿ ಉಳಿದಿದ್ದು, ಅರ್ಹ ಅಭ್ಯರ್ಥಿಗಳಿಗೆ ಆಫ್ ಲೈನ್ ಮುಖಾಂತರ ನೇರ ಪ್ರವೇಶ ಪಡೆಯಲು ಮೇ 26ರಿಂದ ಅವಕಾಶ ಕಲ್ಪಿಸಲಾಗಿದೆ. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಆಸಕ್ತ ವಿದ್ಯಾರ್ಥಿಗಳು ಅಗತ್ಯ ದಾಖಲಾತಿಗಳೊಂದಿಗೆ ನೇರವಾಗಿ ಕಾಲೇಜಿಗೆ ಭೇಟಿ ನೀಡಿ ಪ್ರವೇಶ ಪಡೆದುಕೊಳ್ಳಬಹುದು. ಹೆಚ್ಚಿನ ವಿವರ ಹಾಗೂ ಪ್ರವೇಶಾತಿ ಮಾಹಿತಿಗಾಗಿ ದೂ:08180-200547, 88613 60348, 99648 09796, 98441 97172 ಸಂಪರ್ಕಿಸಲು ಪ್ರಾಂಶುಪಾಲರು ತಿಳಿಸಿದ್ದಾರೆ.

ಮುನಿಯಪ್ಪಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಿ

ಹರಪನಹಳ್ಳಿ: ಕೆ.ಹೆಚ್. ಮುನಿಯಪ್ಪ ಅವರನ್ನು ಉಪ ಮುಖ್ಯಮಂತ್ರಿಯನ್ನಾಗಿ ನೇಮಕ ಮಾಡಬೇಕೆಂದು ಹರಪನಹಳ್ಳಿ ತಾಲ್ಲೂಕು ಮಾದಿಗ ಸಮಾಜದ ಮುಖಂಡರು ಒತ್ತಾಯಿಸಿದ್ದಾರೆ. ಮುನಿಯಪ್ಪ ಅವರು ಕೋಲಾರ ಲೋಕಸಭಾ ಕ್ಷೇತ್ರದಿಂದ ಸತತ 7 ಬಾರಿ ಸಂಸದರಾಗಿ ಆಯ್ಕೆಯಾಗಿದ್ದಾರೆ. ಕೇಂದ್ರ ಸಚಿವರಾಗಿ ಹಾಗೂ ಪ್ರಸ್ತುತ ರಾಜ್ಯ ಸಚಿವರಾಗಿ ದೀರ್ಘಕಾಲದ ಆಡಳಿತ ಅನುಭವ ಹೊಂದಿರುವ ಅವರು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಹಾಗೂ ಜನಪರ ನಾಯಕರಾಗಿದ್ದಾರೆ. ಸುಮಾರು ಐದು ದಶಕಗಳಿಂದ ಪಕ್ಷ ಸಂಘಟನೆ, ದಲಿತ ಸಮುದಾಯದ ಹಕ್ಕುಗಳ ರಕ್ಷಣೆ ಹಾಗೂ ಸಾಮಾಜಿಕ ನ್ಯಾಯದ ಪರ ಹೋರಾಟ ನಡೆಸಿರುವ ಮುನಿಯಪ್ಪ ಅವರ ಅನುಭವವನ್ನು ಬಳಸಿಕೊಳ್ಳಬೇಕು. ಮಾದಿಗ ಸಮುದಾಯಕ್ಕೆ ಇದುವರೆಗೆ ಮುಖ್ಯಮಂತ್ರಿ ಅಥವಾ ಉಪ ಮುಖ್ಯಮಂತ್ರಿ ಸ್ಥಾನ ದೊರಕಿಲ್ಲ. ಸರ್ವರಿಗೂ ಅವಕಾಶ ಕಲ್ಪಿಸುವ ಮೂಲಕ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯಲು ಮುನಿಯಪ್ಪ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದು ಹುಲಿಕಟ್ಟಿ ಚಂದ್ರಪ್ಪ, ಮೈದೂರು ಓ.ರಾಮಪ್ಪ, ಯರಬಾಳು ಹನುಮಂತಪ್ಪ, ಮತ್ತಿಹಳ್ಳಿ ಪಿ.ರಾಮಪ್ಪ, ಓ.ಮಹಾಂತೇಶ ಆಗ್ರಹಿಸಿದ್ದಾರೆ.

ಊರಮ್ಮದೇವಿಗೆ ದುರ್ಗಾ ಹೋಮ, ಉಡಿ ತುಂಬಿಸುವ ವಿಶೇಷ ಪೂಜೆಕಾರ್ಯ

ಹರಿಹರ: ಕಸಬಾ ಗ್ರಾಮ ದೇವತೆ ದೇವಸ್ಥಾನದಲ್ಲಿ ಮೇ 31ರಂದು ಭಾನುವಾರ ಬೆಳಗ್ಗೆ 9 ಗಂಟೆಗೆ ಊರಮ್ಮದೇವಿಗೆ, ದುರ್ಗಾ ಹೋಮ ಉಡಿ ತುಂಬಿಸುವುದು, ಸತ್ಯನಾರಾಯಣ ಸ್ವಾಮಿಯ ವಿಶೇಷ ಅಲಂಕಾರ ಪೂಜೆಗೆ ಸಕಲ ಸಿದ್ಧತೆಗಳನ್ನು ಮಾಡಲಾಗಿದೆ. ಹುಣ್ಣಿಮೆಯ ಪ್ರಯುಕ್ತ ಮೇ 31ರಂದು ಭಾನುವಾರ ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ, ವಿಶೇಷ ಅಲಂಕಾರದೊಂದಿಗೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಕಾರ್ಯಕ್ರಮ ಏರ್ಪಡಿಸಲಾಗಿದೆ. ಹುಣ್ಣಿಮೆಯ ದಿವಸ ನಡೆಯಲಿರುವ ದುರ್ಗಾ ಹೋಮ, ಸತ್ಯನಾರಾಯಣ ಪೂಜೆ ಉಡಿ ತುಂಬಿಸುವ ಧಾರ್ಮಿಕ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಸರ್ವ ಭಕ್ತ ವೃಂದದವರಿಗೆ ಅವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ: 9844578192, 9986195808 ಸಂಪರ್ಕಿಸಬಹುದು.

ರವಿಚಂದ್ರನ್ ಜನ್ಮದಿನದ ಪ್ರಯುಕ್ತ ಅನ್ನಸಂತರ್ಪಣೆ

ದಾವಣಗೆರೆ: ನಗರದ ಹೊರವಲಯದ ಬಾಡಾ ಕ್ರಾಸ್ ನಲ್ಲಿರುವ ವೀರೇಶ್ವರ ಪುಣ್ಯಾಶ್ರಮದಲ್ಲಿನ ಮಕ್ಕಳಿಗೆ ಶುಕ್ರವಾರ ಜಿಲ್ಲಾ ರವಿಚಂದ್ರನ್ ಅಭಿಮಾನಿಗಳ ಸಂಘ, ಕರ್ನಾಟಕ ಫೋಟೋಗ್ರಾಫರ್ ಮತ್ತು ವೀಡಿಯೋಗ್ರಾಫರ್ ಅಸೋಸಿಯೇಷನ್, ಮನು ಫೋಟೋಗ್ರಫಿ ಅಂಡ್ ಇವೆಂಟ್ಸ್ ವತಿಯಿಂದ ಕ್ರೇಜಿಸ್ಟಾರ್ ವಿ.ರವಿಚಂದ್ರನ್ 65ನೇ ವರ್ಷದ ಜನ್ಮದಿನದ ಅಂಗವಾಗಿ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಮಾತನಾಡಿ, ರವಿಚಂದ್ರನ್ ಚಿತ್ರರಂಗದಲ್ಲಿ ಹಣ ಗಳಿಸದಿದ್ದರೂ, ಕೋಟ್ಯಂತರ ಅಭಿಮಾನಿಗಳನ್ನು ಗಳಿಸಿದ್ದಾರೆ. ಡಾ.ರಾಜಕುಮಾರ್, ವಿಷ್ಣುವರ್ಧನ್, ಅಂಬರೀಶ್ ಜೊತೆಯಲ್ಲಿ ಸಿನಿಮಾ ಪಯಣ ಮಾಡಿದ ಸಮಕಾಲಿನ ಹಿರಿಯರಾಗಿದ್ದಾರೆ ಎಂದರು.

ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು. ಮಹಾನಗರ ಪಾಲಿಕೆ ಮಾಜಿ ಮಹಾಪೌರ ಬಿ.ಜೆ.ಅಜಯ್ ಕುಮಾರ್, ಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ವೇದಿಕೆ ಅಧ್ಯಕ್ಷ ಮಾಲತೇಶ್ ಅರಸ್, ಜಿಲ್ಲಾ ವರದಿಗಾರರ



ಕೂಟದ ಅಧ್ಯಕ್ಷ ನಾಗರಾಜ್ ಬಡದಾಳ್, ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷ ಮನು ಎಂ.ದೇವನಗರಿ, ಹೆಚ್.ವೈ.ಹನುಮಂತ, ಎಂ.ಎನ್.ಕಾಂತರಾಜ್, ಬಿ.ಈ.ದಯಾನಂದ, ಜೆ.ಎಸ್.ಶಂಭು, ಸಿದ್ದೇಶ್ ಕೋಟೆಹಾಳ್, ಡಿ.ರಮೇಶ್, ಕೆ.ದೇವೇಂದ್ರಪ್ಪ, ಡಿ.ರಂಗನಾಥ್, ದಿಗ್ವಿಜಯ್, ಬಿ.ಆರ್.ಮಂಜುನಾಥ್, ಚಂದ್ರಮೌಳಿ, ಮಾಲಾ, ಸುಕನ್ಯಾ, ಮುರುಗೇಶ್, ಗಣೇಶ್ ಇತರರು ಕಾರ್ಯಕ್ರಮದಲ್ಲಿದ್ದರು.



ದಾವಣಗೆರೆ ನಗರದ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿಗೆ 75 ವರ್ಷ ತುಂಬಿದ ಹಿನ್ನೆಲೆಯಲ್ಲಿ ಶುಕ್ರವಾರ ಕಾಲೇಜಿನ ಆವರಣದಲ್ಲಿ ನಡೆದ ಅಮೃತ ಮಹೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಗಣ್ಯರು, ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

ಮುಂಗಾರು ಸಮೀಪಿಸುತ್ತಿರುವುದರಿಂದ ಮುಂಜಾಗ್ರತಾ ಕ್ರಮಕ್ಕೆ ರೈತರ ಆಗ್ರಹ

ಬೀಜ, ಗೊಬ್ಬರ ಪೂರೈಸಿ

ದಾವಣಗೆರೆ: ಮುಂಗಾರು ಹಂಗಾಮು ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ರೈತರಿಗೆ ಸಮರ್ಪಕವಾಗಿ ಬಿತ್ತನೆ ಬೀಜ, ರಸಗೊಬ್ಬರ ಪೂರೈಸುವಂತೆ ಒತ್ತಾಯಿಸಿ ರಾಷ್ಟ್ರೀಯ ಕಿಸಾನ್ ಸಂಘದ ರಾಜ್ಯ ಸಮಿತಿಯಿಂದ ಜಿಲ್ಲಾಡಳಿತಕ್ಕೆ ಮನವಿಪತ್ರ ಸಲ್ಲಿಸಲಾಯಿತು.

ಇಲ್ಲಿನ ಜಿಲ್ಲಾಡಳಿತ ಭವನದಲ್ಲಿ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೊಂಚೆ ಶಿವರುದ್ರಪ್ಪ ನೇತೃತ್ವದಲ್ಲಿ ರೈತ ಮುಖಂಡರು, ರೈತರು ಮುಂಗಾರು ಆರಂಭಕ್ಕೆ ಮುನ್ನವೇ ರೈತರ ಸಭೆ ಕರೆದು, ಬಿತ್ತನೆ ಬೀಜ, ಗೊಬ್ಬರ ವಿತರಣೆಯ ದಿನಾಂಕವನ್ನು ನಿಗದಿಪಡಿಸುವಂತೆ ಆಗ್ರಹಿಸಿ ಮನವಿಪತ್ರ ಸಲ್ಲಿಸಿದರು.

ಮುಂಗಾರು ಹಂಗಾಮು ಆರಂಭದ ಹಿನ್ನೆಲೆಯಲ್ಲಿ ರೈತರು ಎದುರಿಸುತ್ತಿರುವ ಜ್ವಲಂತ ಸಮಸ್ಯೆ ಬಗೆಹರಿಸಲು ಮತ್ತು ಕೃಷಿ ಚಟುವಟಿಕೆಗಳಿಗೆ ಪೂರಕ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು. ಪ್ರತಿ ಮುಂಗಾರು ಪ್ರಾರಂಭವಾಗುವ ಮುನ್ನ ಕಡ್ಡಾಯವಾಗಿ ರೈತರ ಸಭೆ ನಡೆಸಿ, ಕೃಷಿ ಯೋಜನೆಯನ್ನು ಸೂಕ್ತವಾಗಿ ಚರ್ಚಿಸಬೇಕು. ರೈತರಿಗೆ ಕಾಲಮಿತಿಯೊಳಗೆ ಸೌಲಭ್ಯ ವಿತರಿಸಬೇಕು. ರೈತರಿಗೆ ಅತ್ಯಾವಶ್ಯಕವಾದ ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳನ್ನು ವಿತರಿಸುವ ದಿನಾಂಕಗಳನ್ನು ಮುಂಚೆಯೇ ಘೋಷಿಸಬೇಕು ಎಂದು ಸಂಘಟನೆ ಮುಖಂಡರು ಒತ್ತಾಯಿಸಿದರು.

ಜಿಲ್ಲಾಧಿಕಾರಿ, ಜಂಟಿ ಕೃಷಿ ನಿರ್ದೇಶಕರು ಹಾಗೂ ತೋಟಗಾರಿಕೆ ನಿರ್ದೇಶಕರು ರೈತ ಮುಖಂಡರೊಂದಿಗೆ ಸಭೆ ನಡೆಸಿ ಚರ್ಚಿಸಬೇಕು. ಸ್ಥಳೀಯವಾಗಿರುವ ಎಲ್ಲಾ ಜಿಲ್ಲಾ ಬೇಡಿಕೆ ಸ್ವೀಕರಿಸಿ, ತಕ್ಷಣವೇ ಅವುಗಳನ್ನು ಈಡೇರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಮುಖ್ಯಮಂತ್ರಿಗೆ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸುವಂತೆ



ವಿನಂತಿಸಲಾಗಿದೆ. ರೈತರ ಆತ್ಮಹತ್ಯೆಗಳು ವೈಯಕ್ತಿಕ ಸಮಸ್ಯೆ ಅಥವಾ ಕೃಷಿ ಕ್ಷೇತ್ರದ ಬಿಕ್ಕಟ್ಟುಗಳಷ್ಟೇ ಅಲ್ಲವೆಂಬುದನ್ನು ಸರ್ಕಾರ ಅರಿಯಬೇಕು ಎಂದು ಅವರು ಆಗ್ರಹಿಸಿದರು.

ರೈತರ ಆತ್ಮಹತ್ಯೆ ಅಂಕಿಅಂಶಕ್ಕೆ ಸಂಬಂಧಿಸಿದ ರಾಷ್ಟ್ರೀಯ ಅಪರಾಧಗಳ ದಾಖಲೆಗಳ ಬ್ಯೂರೊದ 2024ರ ವರದಿ ಆತಂಕ ಹುಟ್ಟಿಸುವಂತಿದೆ. ಕಳೆದ 3 ವರ್ಷಗಳಿಗೆ ಹೋಲಿಸಿದರೆ 2024ರಲ್ಲಿ ರೈತರ ಆತ್ಮಹತ್ಯೆ ಪ್ರಕರಣ ದೇಶದಲ್ಲಿ ಶೇ.2.22ರಷ್ಟು ಕಡಿಮೆಯಾಗಿದ್ದರೂ, ಕರ್ನಾಟಕ ರಾಜ್ಯದಲ್ಲಿ ರೈತರ ಆತ್ಮಹತ್ಯೆ ಪ್ರಮಾಣ ಏರಿಕೆಯಾಗಿದೆ. ರಾಜ್ಯದಲ್ಲಿ 2023, 2024ರಲ್ಲಿ ಕ್ರಮವಾಗಿ 2,423 ಹಾಗೂ 2971 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಇದರಿಂದಶೇ.22.61ರಷ್ಟು ಹೆಚ್ಚಳವಾದಂತಾಗಿದೆ. ಕೃಷಿ ಚಟುವಟಿಕೆಯಿಂದ, ಅದರಲ್ಲೂ, ಒಣ ಬೇಸಾಯವನ್ನೇ ಆಶ್ರಯಿಸಿದವರಿಗೆ ಸಾಕಷ್ಟು ಆದಾಯ ದೊರೆಯುತ್ತಿಲ್ಲ. ಕಳಪೆ ಬೀಜಗಳ ಬಳಕೆ, ಅಧಿಕ ಬೆಲೆಗೆ ಖರೀದಿಸಿದ ರಸಗೊಬ್ಬರ, ಸಕಾಲಕ್ಕೆ ಆಗದ ಮಳೆ, ಕ್ರಿಮಿ-ಕೀಟಗಳಿಂದ ಫಸಲಿಗೆ ಹಾನಿ ಸೇರಿದಂತೆ ರೈತರ ಆತ್ಮಹತ್ಯೆಗೆ ಅನೇಕ ಕಾರಣಗಳಿವೆ ಎಂದು ಅವರು ಹೇಳಿದರು.

ಬೆಳೆಯನ್ನು ಹೊಲದಿಂದಲೇ ನೇರವಾಗಿ ಮಾರುಕಟ್ಟೆಗೆ ಸಾಗಿಸುವ ಅನಿವಾರ್ಯತೆ ರೈತರದ್ದಾಗಿದೆ. ಗಗನಕ್ಕೇರಿದ್ದ ಉತ್ಪನ್ನಗಳ ಬೆಲೆ ರೈತನ ಕೈಗೆ ಬೆಳೆ ಬರುವ

> ಕೃಷಿ, ತೋಟಗಾರಿಕೆ ಅಭಿವೃದ್ಧಿಯ ವೈಫಲ್ಯವು ಸರ್ಕಾರದ ವ್ಯವಸ್ಥೆಯ ವೈಫಲ್ಯವಾಗಿದೆ. ರೈತರ ನೆರವಿಗೆ ಶಾಶ್ವತ ಯೋಜನೆ ಜಾರಿಗೊಳಿಸುವ ಮೂಲಕ ರೈತರ ಆತ್ಮಹತ್ಯೆ ತಡೆಗೆ ಸರ್ಕಾರಗಳು ಮುಂದಾಗಬೇಕು.
>
> ■ ಕೊಂಚೆ ಶಿವರುದ್ರಪ್ಪ, ರೈತ ಮುಖಂಡ

ವೇಳೆಗೆ ಪಾತಾಳಕ್ಕಿಳಿದಿರುತ್ತದೆ. ಕೃಷಿ ಉತ್ಪನ್ನಗಳನ್ನು ರೈತರಿಂದಲೇ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವ ವ್ಯವಸ್ಥೆ ನಮ್ಮಲ್ಲಿಲ್ಲ. ರೈತರು ಮತ್ತು ಗ್ರಾಹಕರ ನಡುವೆ ಮಧ್ಯವರ್ತಿಗಳಿದ್ದು, ಕಡಿಮೆ ಬೆಲೆಗೆ ರೈತರಿಂದ ಕೃಷಿ ಉತ್ಪನ್ನ ಖರೀದಿಸುವ ಮಧ್ಯವರ್ತಿಗಳು ನಂತರ ಅಧಿಕ ಬೆಲೆಗೆ ಮಾರಾಟ ಮಾಡಿ ಲಾಭ ಗಳಿಸುತ್ತಾರೆ ಎಂದು ಅವರು ದೂರಿದರು.

ಸಂಘಟನೆ ರಾಜ್ಯ ಕಾರ್ಯಾಧ್ಯಕ್ಷ ಡಾ.ಮಲ್ಲಿಕಾರ್ಜುನ, ಜಿಲ್ಲಾಧ್ಯಕ್ಷ ಜಿ.ಎಸ್.ತಿಪ್ಪೇಸ್ವಾಮಿ, ಮುಖಂಡರಾದ ಬಿ.ಎನ್.ವಿಜಯಕುಮಾರ, ಜಿ.ಹೆಚ್.ವಿಜಯಪ್ರಕಾಶ, ಕೆ.ಎಸ್.ಶಿವಕುಮಾರ, ಎಸ್.ಆರ್.ಬಸವರಾಜಪ್ಪ, ಬಿ.ಕೆ.ಪರಮೇಶ, ಎಂ.ಎಸ್.ರಮೇಶ, ಬಿ.ಎಸ್.ಶಿವಶಂಕರಮೂರ್ತಿ, ರುದ್ರೇಶ ಹಾಜರಿದ್ದರು.

ಉನ್ನತ ಶಿಕ್ಷಣ ಸಚಿವ ಸುಧಾಕರ್ ಬಣ್ಣನೆ

ಪ್ರಬುದ್ಧತೆ ಮೆರೆದ ಸಿದ್ದರಾಮಯ್ಯ

ದಾವಣಗೆರೆ: ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡಿ ಪ್ರಬುದ್ಧತೆ ಮೆರೆದಿದ್ದು, ಇದು ರಾಜಕಾರಣದಲ್ಲಿ ಮೇಲ್ಪಂಕ್ತಿ ಹಾಕಿಕೊಟ್ಟ ಕ್ಷಣವಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಬಣ್ಣಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಓರ್ವ ಪ್ರಬುದ್ಧ ರಾಜಕಾರಣಿ ವ್ಯಕ್ತಿತ್ವ ಹೇಗಿರುತ್ತದೆ ಎಂಬುದನ್ನು ತಿಳಿಸಿಕೊಟ್ಟಿದ್ದು ಸಿದ್ದರಾಮಯ್ಯನವರು. ಇದರಿಂದ ಕಾಂಗ್ರೆಸ್ ಹಾಗೂ ಪಕ್ಷದ ಹೈಕಮಾಂಡ್ ವರ್ಚಸ್ಸು ಸಹ ಸಾಕಷ್ಟು ವೃದ್ಧಿಯಾಗಿದೆ. ಅಧಿಕಾರ ಯಾರಿಗೂ ಶಾಶ್ವತವಲ್ಲ ಎಂಬುದನ್ನು ಸಿದ್ದರಾಮಯ್ಯನವರ ಸುದೀರ್ಘ ರಾಜಕಾರಣದ ಅನುಭವ ಪಾಠ ಹೇಳಿದೆ. ನಾಯಕತ್ವ ಬದಲಾವಣೆ ವಿಚಾರದಲ್ಲಿ ಯಾವುದೇ ಗೊಂದಲ ಇಲ್ಲ, ಶಾಸಕಾಂಗ ಸಭೆಯಾಗಲಿದ್ದು, ಅಧಿಕೃತವಾಗಿ ಡಿ.ಕೆ.ಶಿವಕುಮಾರ ಮುಖ್ಯಮಂತ್ರಿಯಾಗಿ ಘೋಷಣೆಯಾಗುತ್ತಾರೆ. ಈ ಬಗ್ಗೆ ಯಾವುದೇ ಅಡ್ಡಿ, ಆತಂಕವೂ ಇಲ್ಲ ಎಂದು ಸ್ಪಷ್ಟಪಡಿಸಿದರು.

ಶಾಸಕಾಂಗ ಸಭೆ ಶನಿವಾರ ಆಗಲಿದ್ದು, ಸಮಯ, ಸ್ಥಳ ಇನ್ನೂ ನಿಗಧಿಯಾಗಿಲ್ಲ. ಪಕ್ಷಕ್ಕಾಗಿ ಡಿ.ಕೆ.ಶಿವಕುಮಾರ ಸಾಕಷ್ಟು ದುಡಿದಿದ್ದಾರೆ. ಹಾಗಾಗಿ ಹೈಕಮಾಂಡ್ ಈ ಸಲ ಡಿ.ಕೆ.ಶಿವಕುಮಾರರಿಗೆ ಮುಖ್ಯಮಂತ್ರಿಯಾಗಲು ಅವಕಾಶ ನೀಡಿದೆ. ಮುಂದೆ ಎಲ್ಲರಿಗೂ ಅವಕಾಶ ಸಿಗುತ್ತದೆ. ಡಿಕೆಶಿ ಮುಖ್ಯಮಂತ್ರಿಯಾಗಲು ಯಾರ ವಿರೋಧವೂ ಇಲ್ಲ. ಸ್ವತಃ ಸಿದ್ದರಾಮಯ್ಯನವರೇ ಡಿಕೆಶಿಯವರಿಗೆ ಬೆಂಬಲ ಸೂಚಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಇಡೀ ಸಚಿವ ಸಂಪುಟ ಅಸ್ತಿತ್ವ ಕಳೆದುಕೊಂಡಿದೆ. ಸಧ್ಯ ನಾವೆಲ್ಲರೂ ಮಾಜಿ ಸಚಿವರು. ಮುಂದೆ ಯಾರು ಸಚಿವರಾಗುತ್ತಾರೆ ಎಂಬುದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

2028ರ ವಿಧಾನಸಭಾ ಚುನಾವಣೆಯಲ್ಲಿ ನಾವೆಲ್ಲರೂ ಒಟ್ಟಾಗಿ ಕಾಂಗ್ರೆಸ್ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುತ್ತೇವೆಂದು ಸ್ವತಃ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ ಘೋಷಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷರಾಗಲು ಸತೀಶ ಜಾರಕಿಹೊಳಿಗೆ ಸಾಮರ್ಥ್ಯವಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಭಾವುಕಾರದ ಸುಧಾಕರ್: ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದನ್ನು ನೆನೆದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಭಾವುಕರಾದರು. ಶುಕ್ರವಾರ ಸುದ್ದಿಗಾರರೊಂದಿಗೆ ಮತನಾಡುತ್ತಿದ್ದ ವೇಳೆ ಸಿದ್ದರಾಮಯ್ಯ ರಾಜೀನಾಮೆಯ ಕ್ಷಣಗಳನ್ನು ನೆನೆದು ಭಾವುಕರಾದ ಸಚಿವ ಸುಧಾಕರ್ ಕಣ್ಣಂಚಿನಲ್ಲಿ ನೀರಿಳಿದವು. ಎಲ್ಲಾ ವರ್ಗಗಳನ್ನು ಸಮಾನವಾಗಿ ತೆಗೆದುಕೊಂಡು ಹೋದ ನಾಯಕ ಸಿದ್ದರಾಮಯ್ಯನವರು. ಒಂದು ಜಾತಿ, ವರ್ಗಕ್ಕೆ ಸೀಮಿತರಾಗದೆ, ಎಲ್ಲಾ ಸಮುದಾಯಕ್ಕೂ ಸಮಾನತೆ ನೀಡಿದ ವ್ಯಕ್ತಿ ಸಿದ್ದರಾಮಯ್ಯ. ಅಂತಹ ವ್ಯಕ್ತಿಯನ್ನು ಕಳೆದ 2-3 ದಿನಗಳಿಂದ ನೋಡಲಾಗುತ್ತಿಲ್ಲ ಎಂದು ದುಃಖಿಸಿದರು.

ನಾಳೆ ದೈವಜ್ಞ ವಿದ್ಯಾಸಿರಿ ಜಿಲ್ಲಾ ಪ್ರಶಸ್ತಿ ಪ್ರದಾನ

ದಾವಣಗೆರೆ: ದೈವಜ್ಞ ರೇವಣಕರ್ ಪರಿವಾರದಿಂದ ದೈವಜ್ಞ ವಿದ್ಯಾಸಿರಿ ಜಿಲ್ಲಾ ಪ್ರಶಸ್ತಿ ಪ್ರದಾನ ಹಾಗೂ ದೈವಜ್ಞ ಸಮಾಜದ ಅಂಗವಿಕಲರಿಗೆ ಸಹಾಯಹಸ್ತ ಕಾರ್ಯಕ್ರಮವನ್ನು ಮೇ 31ರಂದು ಬೆಳಿಗ್ಗೆ 10 ಗಂಟೆಗೆ ನಗರದ ದೈವಜ್ಞ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಪರಿವಾರದ ಸಲಹಾ ಸಮಿತಿ ಅಧ್ಯಕ್ಷ ನಲ್ಲೂರು ಎಸ್.ರಾಘವೇಂದ್ರ, ಮಾತನಾಡಿ, ಕಾರ್ಯಕ್ರಮದಲ್ಲಿ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳಿಗೆ ದೈವಜ್ಞ ವಿದ್ಯಾಸಿರಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಸಮಾರಂಭದ ಅಧ್ಯಕ್ಷತೆಯನ್ನು ಪರಿವಾರದ ನೂತನ ಅಧ್ಯಕ್ಷ ಮಂಜುನಾಥ್ ಎನ್.ರೇವಣಕರ್ ವಹಿಸಲಿದ್ದಾರೆ. ದಾವಣಗೆರೆ ದಕ್ಷಿಣ ಶಾಸಕ ಸಮರ್ಥ್ ಶಾಮನೂರು ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಗೋವಾ ರೇವಣ ಶ್ರೀ ವಿಮಲೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷರಾದ ರಾಮನಾಥ್ ಪ್ರಭು ದೇಸಾಯಿ, ಪರಿವಾರದ ಗೌರವಾಧ್ಯಕ್ಷ ಡಾ.ನಲ್ಲೂರು ಅರುಣಾಚಲ ಎನ್. ರೇವಣಕರ್, ದೈವಜ್ಞ ಬ್ರಾಹ್ಮಣ ಸಮಾಜದ ಅಧ್ಯಕ್ಷ ಪ್ರಶಾಂತ ವಿ.ವರ್ಣೇಕರ್, ಮೈಸೂರಿನ ಸಮಾಜ ಸೇವಕಿ ಮೀರಾ ನಾಗೇಶ್ ರೇವಣಕರ್ ಪಾಲ್ಗೊಳ್ಳಲಿದ್ದಾರೆ ಎಂದರು. ಪರಿವಾರದ ಮಂಜುನಾಥ ರೇವಣಕರ್, ಸಂಜಯ್ ರತ್ನಾಕರ್, ಮದನ್, ರಾಜೇಶ, ಅರುಣ್, ರಘು, ಗೌರವ ಸಲಹೆಗಾರ ಸಾಲಿಗ್ರಾಮ ಗಣೇಶ್ ಶೆಣೈ ಸುದ್ದಿಗೋಷ್ಠಿಯಲ್ಲಿದ್ದರು.

ಹರಿಹರದಲ್ಲಿ ರೈಲ್ವೇ ಸೇತುವೆಯ ಕೆಳರಸ್ತೆ ಕಾಮಗಾರಿ

ಹರಿಹರ: ಹರಪನಹಳ್ಳಿ ಹೆದ್ದಾರಿಯ ರೈಲ್ವೆ ಕೆಳ ಸೇತುವೆ ದುರಸ್ತಿ ಕಾರ್ಯ ಆರಂಭಿಸಲಾಗಿದೆ.

ಮಳೆನೀರು ನಿಂತು ಡಾಂಬರು ಕಿತ್ತುಹೋಗಿ ವಾಹನಸವಾರರು ಹಲವು ವರ್ಷಗಳಿಂದ ಎದ್ದು, ಬಿದ್ದು ಸಂಚರಿಸುತ್ತಿದ್ದರು ಹಾಗೂ ಹೆಚ್ಚಿನ ಮಳೆಯಾದಾಗ ವಾಹನಸಂಚಾರ ಗಂಟೆಗಳ ಕಾಲ ಸ್ಥಗಿತವಾಗುತ್ತಿತ್ತು. ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ವಿವಿಧ ಸಂಘ, ಸಂಸ್ಥೆಗಳ ಪದಾಧಿಕಾರಿಗಳು ಮೇ 18 ರಂದು ಸೇತುವೆ ಕೆಳಗೆ ರಸ್ತೆತಡೆ ಮಾಡಿ ಪ್ರತಿಭಟನೆ ನಡೆಸಿದ್ದರು. ಆಗ ಅಧಿಕಾರಿಗಳು ಸೇತುವೆ ಮಧ್ಯಭಾಗದಲ್ಲಿ ಡಾಂಬರು ತೆರವುಗೊಳಿ ಸಿಸಿ ರಸ್ತೆ ಮಾಡಬೇಕು, ಸಮಯಾವಕಾಶ ಬೇಕೆಂದಿದ್ದರು. ಕೊನೆಗೂ ಗುರುವಾರ ರಾತ್ರಿ 2 ಗಂಟೆ ವರೆಗೂ ರಸ್ತೆಯ ಒಂದು ಬದಿ ಡಾಂಬರು ತೆರವುಗೊಳಿಸಿ ಸಿಸಿ ರಸ್ತೆ ನಿರ್ಮಿಸಿದ್ದಾರೆ. ಕ್ಯೂರಿಂಗ್ ಆದನಂತರ ಇನ್ನೊಂದು ಬದಿಯ ಸಿಸಿ ರಸ್ತೆ ಕಾಮಗಾರಿ ನಡೆಸಲಿದ್ದಾರೆ.





ಮಲೆಬೆನ್ನೂರಿನಲ್ಲಿ ಗುರುವಾರ ಬಕ್ರೀದ್ ಹಬ್ಬದ ಪ್ರಯುಕ್ತ ಮುಸಲ್ಮಾನ ಸಮುದಾಯದವರು ಸಾಮೂಹಿಕ ಪ್ರಾರ್ಥನೆ ಮಾಡಿದರು.

ಫೂಟ್‌ಪಲ್ಸ್ ಥೆರಪಿ ಶಿಬಿರದಲ್ಲಿ ಆರೋಗ್ಯ ಮಾಹಿತಿ

ತಾವರೆಕೆರೆ: ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಆಯೋಜಿಸಿದ್ದ 13 ದಿನಗಳ ಉಚಿತ ಫೂಟ್‌ಪಲ್ಸ್ ಥೆರಪಿ ಶಿಬಿರದಲ್ಲಿ ಆರೋಗ್ಯ ಮಾಹಿತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಸಂಘದ ಅಧ್ಯಕ್ಷ ಸಾಗರ್ ಮಾತನಾಡಿ, ಸಹಕಾರ ಸಂಘ ಸಂಸ್ಥೆಗಳು ಕೇವಲ ಆರ್ಥಿಕ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗದೆ, ಗ್ರಾಮೀಣ ಭಾಗದ ರೈತರ ಆರೋಗ್ಯ, ಶಿಕ್ಷಣ ಹಾಗೂ ಸಾಮಾಜಿಕ ಅಭಿವೃದ್ಧಿಗೂ ಹೆಚ್ಚಿನ ಆದ್ಯತೆ ನೀಡುತ್ತಿವೆ ಎಂದು ತಿಳಿಸಿದರು.

ಗ್ರಾಮೀಣ ಭಾಗದ ರೈತರು ಹಾಗೂ ಸಾರ್ವಜನಿಕರು ಆರೋಗ್ಯದ ಕಡೆ ಹೆಚ್ಚಿನ ಗಮನ ಹರಿಸಬೇಕಾದ ಅಗತ್ಯವಿದೆ. ಇತ್ತೀಚಿನ ದಿನಗಳಲ್ಲಿ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿರುವ



ಹಿನ್ನೆಲೆಯಲ್ಲಿ ರೈತರಿಗೆ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ವಿಶೇಷ ಶಿಬಿರ ಆಯೋಜಿಸಲಾಗಿದೆ ಎಂದು ಹೇಳಿದರು.

ಮೇ 21ರಿಂದ ಜೂನ್ 2ರವರೆಗೆ ನಡೆಯುತ್ತಿರುವ ಈ ಶಿಬಿರದಲ್ಲಿ ಪ್ರತಿದಿನ ನೂರಾರು ಜನರು ಭಾಗವಹಿಸಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದು, ಸುಮಾರು 200ರಿಂದ 300ಕ್ಕೂ ಹೆಚ್ಚು ಜನರು ಈಗಾಗಲೇ ಶಿಬಿರದ ಪ್ರಯೋಜನ ಪಡೆದುಕೊಂಡಿದ್ದಾರೆ. ಯಾವುದೇ ಕಾರ್ಯಕ್ರಮ ಜನರಿಗೆ ನೇರ ಉಪಯೋಗವಾದಾಗ ಮಾತ್ರ ಅದರ ಸಾರ್ಥಕತೆ ಸಾಬೀತಾಗುತ್ತದೆ. ಈ ಶಿಬಿರಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆತಿರುವುದು ಸಂತಸದ ವಿಷಯವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾವರೆಕೆರೆ ಕೃಷಿ ಪತ್ತಿನ ಸಹಕಾರಿ ಸಂಘದ ನಿರ್ದೇಶಕರಾದ ಉಮೇಶ್ ಎಂ.ಜಿ., ಗಿರೀಶ, ಓಂಕಾರಪ್ಪ, ರುದ್ರೇಶ, ಸುನೀತಾ, ಮಹೇಶ್ ಬಾಬು, ಕಂಪಾನಿಯೋ ಸಂಸ್ಥೆಯ ಸಿಬ್ಬಂದಿಗಳಾದ ನಾಗರಾಜ್, ಅಶೋಕ, ಮನೋಜ್ ಸೇರಿದಂತೆ ಶಿಬಿರಾರ್ಥಿಗಳು, ಗ್ರಾಮಸ್ಥರು, ರೈತರು ಹಾಗೂ ತಾಯಂದಿರು ಭಾಗವಹಿಸಿದ್ದರು.

13 ದಿನಗಳ ಅಂತರದಲ್ಲಿ 4 ಅಪಘಾತ | ವಾಹನ ಸವಾರರ ನಿರ್ಲಕ್ಷ್ಯ ಹಾಗೂ ಅತಿವೇಗದ ಚಾಲನೆ | ಸೂಚನಾ ಫಲಕಗಳು ಇಲ್ಲ

ಬಸವಾಪಟ್ಟಣ ವ್ಯಾಪ್ತಿಯಲ್ಲಿ ಮೇಲಿಂದ ಮೇಲೆ ಅಪಘಾತ

ಬಸವಾಪಟ್ಟಣ: ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳೆದ ಹದಿಮೂರು ದಿನಗಳ ಅವಧಿಯಲ್ಲಿ ಒಂದರ ಹಿಂದೆ ಒಂದರಂತೆ ಸಂಭವಿಸಿರುವ 4 ಅಪಘಾತ ಪ್ರಕರಣಗಳು ಸಾರ್ವಜನಿಕರಲ್ಲಿ ಆತಂಕ ಮೂಡಿಸಿವೆ. ರಸ್ತೆ ಅಪಘಾತ, ನೀರಿನಲ್ಲಿ ಮುಳುಗಡೆಯ ದುರ್ಘಟನೆ, ಬಸ್ ಅವಘಡ ಸೇರಿದಂತೆ ವಿವಿಧ ರೀತಿಯ ಪ್ರಕರಣಗಳು ಠಾಣೆ ಮೆಟ್ಟಿಲೇರಿದ್ದು, ಗ್ರಾಮೀಣ ಭಾಗದಲ್ಲಿ ಸುರಕ್ಷತೆ ಹಾಗೂ ಜಾಗೃತಿ ಕುರಿತು ಗಂಭೀರ ಚರ್ಚೆಗೆ ಕಾರಣವಾಗಿವೆ.

ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ವಾಹನ ಸಂಚಾರ, ಅತಿವೇಗ, ನಿರ್ಲಕ್ಷ್ಯ ಚಾಲನೆ, ಸಂಚಾರ ನಿಯಮಗಳ ಉಲ್ಲಂಘನೆ ಮತ್ತು ಎಚ್ಚರಿಕೆಯ ಕೊರತೆಯಿಂದ ಅಪಘಾತಗಳ ಸಂಖ್ಯೆ ಏರಿಕೆಯಾಗುತ್ತಿರುವುದು ಕಂಡುಬರುತ್ತಿದೆ. ವಿಶೇಷವಾಗಿ ಗ್ರಾಮೀಣ ರಸ್ತೆಗಳಲ್ಲಿಯೇ ಹೆಚ್ಚಿನ ದುರ್ಘಟನೆಗಳು ಸಂಭವಿಸುತ್ತಿರುವುದು ಸ್ಥಳೀಯರ ಕಳವಳಕ್ಕೆ ಕಾರಣವಾಗಿದೆ.

ಬೈಕ್ ಸವಾರರು ಹೆಲ್ಮೆಟ್ ಧರಿಸದೆ ಸಂಚರಿಸುವುದು, ಯುವಕರು ಅತಿವೇಗದಲ್ಲಿ ವಾಹನ ಚಲಾಯಿಸುವುದು, ಟ್ರ್ಯಾಕ್ಟರ್ ಹಾಗೂ ಸರಕು ವಾಹನಗಳಲ್ಲಿ ಜನರನ್ನು ಅಪಾಯಕಾರಿಯಾಗಿ ಕೂರಿಸಿಕೊಂಡು ಸಾಗಿಸುವುದು, ರಾತ್ರಿ ಸಮಯದಲ್ಲಿ ಬೆಳಕಿನ ವ್ಯವಸ್ಥೆ ಇಲ್ಲದೆ ವಾಹನ ಓಡಿಸುವುದು ಅಪಘಾತಗಳಿಗೆ ಪ್ರಮುಖ ಕಾರಣಗಳಾಗಿವೆ ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

ಬಸವಾಪಟ್ಟಣ ಸುತ್ತಮುತ್ತಲಿನ ಹಲವು ಗ್ರಾಮಗಳ ರಸ್ತೆಗಳು ಇಕ್ಕಟ್ಟಾಗಿರುವುದು, ರಸ್ತೆ ಬದಿಗಳಲ್ಲಿ ಗುಂಡಿಗಳು ನಿರ್ಮಾಣವಾಗಿರುವುದು ಹಾಗೂ ಸೂಚನಾ ಫಲಕಗಳ ಕೊರತೆ ಅಪಘಾತಗಳಿಗೆ ಕಾರಣವಾಗುತ್ತಿದೆ ಎಂದು ವಾಹನ ಸವಾರರು ದೂರಿದ್ದಾರೆ.

ರಾತ್ರಿ ವೇಳೆ ಭಾರಿ ವಾಹನಗಳ ಅತಿವೇಗ ಸಂಚಾರದಿಂದ ಗ್ರಾಮಸ್ಥರು ಭಯಭೀತರಾಗಿದ್ದಾರೆ. ಶಾಲಾ ಮಕ್ಕಳು ಹಾಗೂ ವೃದ್ಧರು ರಸ್ತೆ ದಾಟುವ ಸಂದರ್ಭಗಳಲ್ಲಿ ಜೀವ ಕೈಯಲ್ಲಿ ಹಿಡಿದು ಸಾಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಜಾಗೃತಿ ಕಾರ್ಯಕ್ರಮಗಳ ಅಗತ್ಯ: ಅಪಘಾತಗಳನ್ನು ನಿಯಂತ್ರಿಸಲು ಕೇವಲ ದಂಡ ವಿಧಿಸುವ ಕ್ರಮ ಸಾಕಾಗುವುದಿಲ್ಲ. ಸಾರ್ವಜನಿಕರಲ್ಲಿ ನಿರಂತರ ಜಾಗೃತಿ ಮೂಡಿಸುವ ಕಾರ್ಯ ನಡೆಯಬೇಕಿದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಶಾಲಾ ಕಾಲೇಜುಗಳಲ್ಲಿ ರಸ್ತೆ ಸುರಕ್ಷತಾ ಅರಿವು ಕಾರ್ಯಕ್ರಮ, ಗ್ರಾಮ ಮಟ್ಟದಲ್ಲಿ ಜನಜಾಗೃತಿ ಸಭೆ, ಅಪಾಯಕಾರಿ ಪ್ರದೇಶಗಳ ಗುರುತು ಹಾಗೂ ಮುನ್ನೆಚ್ಚರಿಕಾ ಫಲಕ ಅಳವಡಿಕೆ ಕಾರ್ಯ ತುರ್ತಾಗಿ ಕೈಗೊಳ್ಳಬೇಕಿದೆ. ಗ್ರಾಮ ಪಂಚಾಯಿತಿ, ಪೊಲೀಸ್ ಇಲಾಖೆ, ಸಾರಿಗೆ ಇಲಾಖೆ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿದರೆ ಅಪಘಾತಗಳ ಪ್ರಮಾಣವನ್ನು ಕಡಿಮೆ ಮಾಡಬಹುದು ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ.

ಪೊಲೀಸ್ ಇಲಾಖೆಯ ಜವಾಬ್ದಾರಿ: ಸಂಚಾರ ನಿಯಮ ಉಲ್ಲಂಘನೆ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದರ ಜೊತೆಗೆ ಅಪಘಾತ ಸಂಭವಿಸುವ ಪ್ರದೇಶಗಳನ್ನು ಗುರುತಿಸಿ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವುದು ಪೊಲೀಸ್ ಇಲಾಖೆಯ ಪ್ರಮುಖ ಜವಾಬ್ದಾರಿಯಾಗಿದೆ. ನಿಯಮಿತ ವಾಹನ ತಪಾಸಣೆ, ಮದ್ಯಪಾನ ಮಾಡಿ ವಾಹನ ಚಲಾಯಿಸುವವರ ವಿರುದ್ಧ ಕ್ರಮ, ಅಪ್ರಾಪ್ತರಿಂದ ವಾಹನ ಚಾಲನೆ ತಡೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷ ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳುವ ಅಗತ್ಯವಿದೆ.



> ಕಳೆದ ಕೆಲ ದಿನಗಳಿಂದ ವಿವಿಧ ರೀತಿಯ ಅಪಘಾತ ಪ್ರಕರಣಗಳು ದಾಖಲಾಗುತ್ತಿವೆ. ಸಾರ್ವಜನಿಕರು ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಪೋಷಕರು ಮಕ್ಕಳ ಮೇಲೆ ಹೆಚ್ಚಿನ ಗಮನ ಹರಿಸಬೇಕು. ಅಪಘಾತ ತಡೆಗಟ್ಟಲು ಪೊಲೀಸ್ ಇಲಾಖೆ ವತಿಯಿಂದ ಜಾಗೃತಿ ಕಾರ್ಯಕ್ರಮಗಳು ಹಾಗೂ ವಾಹನ ತಪಾಸಣೆ ಕಾರ್ಯ ಮುಂದುವರಿಯಲಿದೆ.
>
> ■ ಇಮ್ತಿಯಾಜ್, ಬಸವಾಪಟ್ಟಣ ಎಸ್ಐ



> ಗ್ರಾಮೀಣ ಭಾಗಗಳಲ್ಲಿ ರಸ್ತೆ ಸುರಕ್ಷತೆ ಕುರಿತು ಜನರಿಗೆ ಇನ್ನಷ್ಟು ಅರಿವು ಮೂಡಿಸಬೇಕಾಗಿದೆ. ಅಪಾಯಕಾರಿ ಸ್ಥಳಗಳಲ್ಲಿ ಎಚ್ಚರಿಕೆ ಫಲಕ ಅಳವಡಿಕೆ, ವೇಗ ನಿಯಂತ್ರಣ ಕ್ರಮ ಹಾಗೂ ಶಾಲಾ ಮಟ್ಟದಿಂದಲೇ ಸಂಚಾರ ನಿಯಮಗಳ ಅರಿವು ಮೂಡಿಸಿದರೆ ಅಮೂಲ್ಯ ಜೀವಗಳನ್ನು ಉಳಿಸಬಹುದು.
>
> ■ ಜಿ. ಎಸ್.ಮಂಜುನಾಥ, ಗ್ರಾಪಂ ಮಾಜಿ ಅಧ್ಯಕ್ಷ, ಚಿರಡೋಣಿ

ಶಕ್ತಿ ಸಮಾವೇಶ

ಜಗಳೂರು: ಪಟ್ಟಣದ ಬಯಲು ರಂಗಮಂದಿರದಲ್ಲಿ ಮೇ 30, 31 ರಂದು ಕರ್ನಾಟಕ ರಾಜ್ಯ ಕಲಾವಿದರ ಬೃಹತ್ ಸಾಂಸ್ಕೃತಿಕ ಶಕ್ತಿ ಸಮಾವೇಶ ಹಮ್ಮಿಕೊಳ್ಳಲಾಗಿದ್ದು ಅಧಿಕ ಸಂಖ್ಯೆಯಲ್ಲಿ ಕಲಾವಿದರು ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಕಲಾವಿದರ ಒಕ್ಕೂಟದ ರಾಜ್ಯಾಧ್ಯಕ್ಷ ವೀರೇಶ್ ಪ್ರಸಾದ ಅವರು ಕರೆನೀಡಿದರು. ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಕಾರ್ಯಕ್ರಮದ ಅಂಗವಾಗಿ ಮೇ.30 ರಂದು ಬೆಳಿಗ್ಗೆ 10 ಗಂಟೆಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಿವಿಧ ಕಲಾ ತಂಡಗಳೊಂದಿಗೆ ವೇದಿಕೆವರೆಗೆ ಮೆರವಣಿಗೆ ನಡೆಸಲಾಗುವುದು. ಕಾರ್ಯಕ್ರಮದಲ್ಲಿ ಸುಮಾರು 15000 ಸಾವಿರ ಕಲಾವಿದರು ಭಾಗವಹಿಸಲಿದ್ದಾರೆ. ವೇದಿಕೆಯಲ್ಲಿ ರಾಜ್ಯದ ವಿವಿಧ ಭಾಗಗಳ 21 ಹಿರಿಯ ಕಲಾವಿದರಿಗೆ ಕರ್ನಾಟಕ ರಂಗ ಪ್ರಶಸ್ತಿ, ಕರ್ನಾಟಕ ಜನಪದ ಪದ್ಮಶ್ರೀ ಪ್ರಶಸ್ತಿ ಹಾಗೂ ಕರ್ನಾಟಕ ಪದ್ಮಶ್ರೀ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು. ಸಂಘಟನೆಯ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಡಿ.ಸುಮ, ರಾಜ್ಯ ಸಂಘಟನಾ ಕಾರ್ಯದರ್ಶಿ ವೃಷಬೇಂದ್ರ, ಜಿಲ್ಲಾ ಕಾರ್ಯದರ್ಶಿ ಬಸವರಾಜು, ಜಿಲ್ಲಾ ಕಾರ್ಯದರ್ಶಿ ಭಾರತಿ, ಯುವಘಟಕದ ಜಿಲ್ಲಾಧ್ಯಕ್ಷ ಸಂದೀಪ, ಬೊಮ್ಮನಗೌಡ ಇತರರು ಇದ್ದರು.

ಅಡಿಕೆ ಧಾರಣೆ

ಶಿವಮೊಗ್ಗ	ಸಾಗರ
ಸರಕು-64,199-96,439	ರಾಶಿ-35,599-61,570
ರಾಶಿ-44,069-53,511	ಚಾಲಿ-31,129-35,671
ಬೆಟ್ಟೆ-54,299-63,199	ಕೆಂಪುಗೋಟು-32,999-39,199
ಗೊರಬಲು-19,010-40,659	ಬಿಳಿಗೋಟು-10,129-35,671
	ಸಿಪ್ಪೆಗೋಟು-7,299-21,717

ಕಿರುಸುದ್ದಿ

ಇಂದು ಶಿಕಾರಿಪುರದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಶಿಕಾರಿಪುರ: ತಾಲೂಕಿನ ಹೊಸೂರು 110/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿಯಿಂದಾಗಿ ಮೇ 30ರ ಶನಿವಾರ ಬೆಳಗ್ಗೆ 10ರಿಂದ ರಾತ್ರಿ 8 ರವರೆಗೆ ವ್ಯಾಪ್ತಿಯ ನಳ್ಳಿನಕೊಪ್ಪ, ಹೊಸೂರು, ಹುಲಗಿನಕಟ್ಟೆ, ಬಾಳೆಕೊಪ್ಪ, ಮುದ್ದನಹಳ್ಳಿ, ಕೆಂಗಟ್ಟೆ, ಇಟ್ಟಿಗೆಹಳ್ಳಿ ಹಾಗೂ ತಾಂಡಾ, ಬಳೂರು, ಅರಳೇಹಳ್ಳಿ, ಕಾಗಿನಲ್ಲಿ, ಜಿಗ್ರಿಕಲ್ಲು, ಚೌಡನಾಯಕನಕೊಪ್ಪ, ಮಾರವಳ್ಳಿ ಹಾಗೂ ತಾಂಡಾ, ಗೊಗ್ಗ, ವಿಠಲನಗರ, ಕೆಂಚಿಗೊಂಡನಕೊಪ್ಪ ಹಾಗೂ ಹೊಸೂರು, ಗೊಗ್ಗ, ನಳ್ಳಿನಕೊಪ್ಪ, ಸಿದ್ದನಪುರ, ಅರಳೇಹಳ್ಳಿ, ಕಾಗಿನಲ್ಲಿ ಐಪಿ ಲಿಮಿಟ್ ಮತ್ತು ಸುತ್ತಮುತ್ತ ಪ್ರದೇಶಗಳ ವ್ಯಾಪ್ತಿಯಲ್ಲಿ ವಿದ್ಯುತ್ ಸ್ಥಗಿತಗೊಳ್ಳಲಿದೆ. ಗ್ರಾಹಕರು ಮೆಸ್ಕಾಂ ಜತೆ ಸಹಕರಿಸುವಂತೆ ಮೆಸ್ಕಾಂ ಎಇಇ ತಿಳಿಸಿದ್ದಾರೆ.

ತುಮರಿಯಲ್ಲಿಂದು ಪ್ರತಿಬಿಂಬ ಕಾರ್ಯಕ್ರಮ

ಸಾಗರ: ಅಖಿಲ ಹವ್ಯಕ ಮಹಾಸಭಾ ವತಿಯಿಂದ ಮೇ 30ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ತುಮರಿಯ ಹುಲ್ಕೋಡು ಭಾರತಿ ವಿದ್ಯಾನಿಕೇತನ ಶಾಲಾವರಣದಲ್ಲಿ ಹೊಸನಗರ ಪ್ರಾಂತ್ಯ ವ್ಯಾಪ್ತಿಯ ಪ್ರತಿಬಿಂಬ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪ್ರತಿಬಿಂಬ ಅಂಗವಾಗಿ ಸ್ಪರ್ಧಾ ಸೌರಭ, ಪಾಕೋತ್ಸವ, ಸಾಧಕರಿಗೆ ಸನ್ಮಾನ ಹಾಗೂ ಸಾಂಸ್ಕೃತಿಕ ಸೌರಭ ಇರುತ್ತದೆ. ಬೆಳಗ್ಗೆ 10.30ಕ್ಕೆ ಹಟ್ಟಿ ಅಂಗಡಿ ದೇವಸ್ಥಾನದ ಪ್ರಧಾನ ಅರ್ಚಕ ಬಾಲಚಂದ್ರ ಭಟ್ ಕಾರ್ಯಕ್ರಮ ಉದ್ಘಾಟಿಸುವರು. ಮಹಾಸಭಾ ಅಧ್ಯಕ್ಷ ಡಾ. ಗಿರಿಧರ ಕಜೆ ಅಧ್ಯಕ್ಷತೆ ವಹಿಸಲಿದ್ದಾರೆ. ಸುಚೇತನ ಶಾಸ್ತ್ರಿ, ಕೆ.ಆರ್.ಪ್ರಸನ್ನ ಕೆರೆಕೈ, ಜಿ.ವಿ.ಗಣಪತಿ ಜಟ್ಟಿಮನೆ ಇನ್ನಿತರರು ಉಪಸ್ಥಿತರಿರುವರು. ಮಧ್ಯಾಹ್ನ 3.30ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಪತ್ರಕರ್ತ ಹರಿಪ್ರಕಾಶ್ ಕೋಣೆಮನೆ, ಪಿ.ಟಿ. ಸುಬ್ರಾವ್ ಉಪಸ್ಥಿತರಿರುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂದು ತರಬೇತಿ ಕಾರ್ಯಾಗಾರ

ಶಿವಮೊಗ್ಗ: ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ ಹಾಗೂ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ ಇವರ ಸಂಯುಕ್ತಾಶ್ರಯದಲ್ಲಿ ಮೇ 30ರ ಬೆಳಗ್ಗೆ 9.30ಕ್ಕೆ ನಗರದ ಬಂಜಾರ ಕನ್ವೆನ್ಷನ್ ಹಾಲ್‌ನಲ್ಲಿ ಬಂಜಾರ ಸಮುದಾಯದವರಿಗೆ ಕಾನೂನು ಅರಿವು ಹಾಗೂ ಆರೋಗ್ಯ ತಪಾಸಣಾ ಶಿಬಿರ ಮತ್ತು ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದ ಗ್ರಂಥಪಾಲಕರುಗಳಿಗೆ ಒಂದು ದಿನದ ರಾಜ್ಯ ಮಟ್ಟದ ತರಬೇತಿ ಕಾರ್ಯಾಗಾರ ಏರ್ಪಡಿಸಲಾಗಿದೆ. ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷ ಅನು ಸಿವರಾಮನ್ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸುವರು. ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಹಾಗೂ ಜಿಲ್ಲೆಯ ಆಡಳಿತಾತ್ಮಕ ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಉಚ್ಚ ನ್ಯಾಯಾಲಯ ನ್ಯಾಯಮೂರ್ತಿಗಳಾದ ವೆಂಕಟೇಶ್ ನಾಯ್ಕ್ ಟಿ. ಉಪಸ್ಥಿತಿ ವಹಿಸುವರು. ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹೆಚ್. ಶಶಿಧರ ಶೆಟ್ಟಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಜಿ.ಎ. ಮಂಜುನಾಥ, ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ ಅಧ್ಯಕ್ಷ ಎನ್. ಜಯದೇವ ನಾಯ್ಕ, ಜಿಪಂ ಸಿಇಓ ಹೇಮಂತ್ ಎನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ ಪಾಲ್ಗೊಳ್ಳುವರು.

ವೀರೇಶ್ವರಯ್ಯ ನಿಧನ

ಶಿಕಾರಿಪುರ: ಅಡಿಕೆ ವ್ಯಾಪಾರಿ ಪಟ್ಟಣದ ರಥಬೀದಿ ಸಮೀಪದ ಹಳೇ ಆಸ್ಪತ್ರೆ ರಸ್ತೆ ನಿವಾಸಿ ಎ.ವಿ. ವೀರೇಶ್ವರಯ್ಯ (74) ಶುಕ್ರವಾರ ಬೆಳಗ್ಗೆ ತೀವ್ರ ಹೃದಯಾಘಾತದಿಂದ ಶಿವಮೊಗ್ಗದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಮೂರು ಪುತ್ರರು ಸಹಿತ ಬಂಧು ಬಳಗವನ್ನು ಅಗಲಿದ್ದಾರೆ.



ಮೃತರ ಅಂತ್ಯಸಂಸ್ಕಾರ ಸಂಜೆ ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ವಿಐಎಸ್‌ಎಲ್‌ಗೆ ಉಕ್ಕು ಪ್ರಾಧಿಕಾರದ ಸಿಎಂಡಿ ಭೇಟಿ



ಭದ್ರಾವತಿ: ಕೇಂದ್ರ ಉಕ್ಕು ಪ್ರಾಧಿಕಾರದ ನಗರದ ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಗುರುವಾರ ಸಂಜೆ ಪ್ರಾಧಿಕಾರದ ಮುಖ್ಯ ವ್ಯವಸ್ಥಾಪಕ ನಿರ್ದೇಶಕ(ಸಿಎಂಡಿ) ಡಾ. ಅಶೋಕ್ ಕುಮಾರ್ ಪಾಂಡ ಭೇಟಿ ನೀಡಿ ಕಾರ್ಖಾನೆ ಆಡಳಿತ ಮಂಡಳಿ ಮತ್ತು ಅಧಿಕಾರಿಗಳು ಹಾಗು ಕಾರ್ಮಿಕ ಸಂಘಟನೆಗಳೊಂದಿಗೆ ಸಭೆ ನಡೆಸಿದ್ದಾರೆ.

ಮಾಜಿ ಮುಖ್ಯಮಂತ್ರಿ, ಕೇಂದ್ರ ಬೃಹತ್ ಕೈಗಾರಿಕೆ ಹಾಗು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕಳೆದ 2 ವರ್ಷಗಳಿಂದ ಕಾರ್ಖಾನೆ ಪುನಶ್ಚೇತನಕ್ಕೆ ನಿರಂತರವಾಗಿ ಪ್ರಯತ್ನಿಸುತ್ತಿರುವ ನಡುವೆ ಕಾರ್ಖಾನೆಗೆ 2-3 ಬಾರಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಇದರ ಭಾಗವಾಗಿ ಉಕ್ಕು ಪ್ರಾಧಿಕಾರದ ಮುಖ್ಯ ವ್ಯವಸ್ಥಾಪಕ ನಿರ್ದೇಶಕರು ಖುದ್ದಾಗಿ ಕಾರ್ಖಾನೆಗೆ ಭೇಟಿ ನೀಡಿ ಅಧಿಕಾರಿಗಳು ಹಾಗು ಕಾರ್ಮಿಕ ಸಂಘಟನೆಗಳ ಜೊತೆ ಸಭೆ ನಡೆಸಿ ಮಾಹಿತಿ ಪಡೆದಿದ್ದಾರೆ ಎನ್ನಲಾಗಿದೆ.

ಡಾ. ಅಶೋಕ್ ಕುಮಾರ್ ಪಾಂಡರವರ ಈ ಭೇಟಿ ಕಾರ್ಮಿಕ ವಲಯದಲ್ಲಿ ಸಂತಸ ಮೂಡಿಸಿದ್ದು, ಕಾರ್ಖಾನೆ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಮಹತ್ವ ಪಡೆದುಕೊಂಡಿದೆ.



ಸಾಗರ ಇಲ್ಲಿನ ಐದನೇ ವಾರ್ಡ್ ನಿಕಟಪೂರ್ವ ನಗರಸಭೆ ಸದಸ್ಯ ಆರ್.ಶ್ರೀನಿವಾಸ್ ಅವರನ್ನು ಶುಕ್ರವಾರ ವಾರ್ಡ್ ನಾಗರೀಕರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಅಶ್ವತ್ಥಕುಮಾರ್, ಬಸವಣ್ಣ ಗೌಡ, ಯೋಹನ್, ಸತೀಶ್ ಕಿಣಿ, ದಿನೇಶ್, ಮಹೇಶ್ ಗೌಡ, ಅನಿಲಕುಮಾರ್, ರತ್ನಕುಮಾರ್, ಗವಿಯಪ್ಪ, ಜಿತೇಂದ್ರ ಇನ್ನಿತರರಿದ್ದರು.

ಶಿವಮೊಗ್ಗದ ಎಂಟು ರೋಟರಿ ಕ್ಲಬ್‌ಗಳು ಒತ್ತಾಯ | 13ನೇ ದಿನದ ಪ್ರತಿಭಟನೆಯಲ್ಲಿ ಭಾಗಿಯಾಗಿ ಬೆಂಬಲ

ಶಿವಮೊಗ್ಗದಲ್ಲಿಯೇ ಹೈಕೋರ್ಟ್ ಸಂಚಾರ ಪೀಠ ಸ್ಥಾಪಿಸಿ

ಶಿವಮೊಗ್ಗ: ಮಧ್ಯ ಕರ್ನಾಟಕ ಪ್ರದೇಶದೊಳಗೆ ಕೇಂದ್ರ ಸ್ಥಾನದಲ್ಲಿ ರುವುದರಿಂದ ಶಿವಮೊಗ್ಗ ದಲ್ಲಿಯೇ ಸರ್ಕ್ಯೂಟ್ ಬೆಂಚ್ ಮತ್ತು ತರುವಾಯ ಕರ್ನಾಟಕ ಹೈಕೋರ್ಟ್ ಶಾಶ್ವತ ಪೀಠವನ್ನು ಸ್ಥಾಪಿಸಬೇಕು ಎಂದು ರೋಟರಿ ಶಿವಮೊಗ್ಗ ಪೂರ್ವದ ಮಾಜಿ ಸಹಾಯಕ ಗೌರ್ನರ್.ಜಿ. ವಿಜಯ್ ಕುಮಾರ್ ಆಗ್ರಹಿಸಿದರು.

ಶಿವಮೊಗ್ಗದ ವಕೀಲರು ಕಳೆದ ಹದಿಮೂರು ದಿನಗಳಿಂದ ಜಿಲ್ಲಾ ನ್ಯಾಯಾಲಯದ ಆವರ ಣದಲ್ಲಿ ಹೈಕೋರ್ಟ್ ಪೀಠಕ್ಕೆ ಒತ್ತಾಯಿಸಿ ನಡೆಸುತ್ತಿರುವ ಪ್ರತಿಭಟನೆಯಲ್ಲಿ ಶಿವಮೊಗ್ಗದ ಎಲ್ಲಾ ಎಂಟು ರೋಟರಿ ಕ್ಲಬ್ ಅಧ್ಯಕ್ಷರು -ಪದಾಧಿಕಾರಿಗಳು ಮಾತನಾಡಿದರು.

ನ್ಯಾಯಮೂರ್ತಿ ಜಸ್ವಂತ್ ಸಿಂಗ್ ಸಮಿತಿಯು ನಿಗದಿಪಡಿಸಿದ ಮಾರ್ಗ ಸೂಚಿಗಳ ಅಡಿಯಲ್ಲಿ ಸರ್ಕ್ಯೂಟ್ ಪೀಠ ಸ್ಥಾಪನೆಗೆ ಅಗತ್ಯವಿರುವ ಎಲ್ಲಾ ಅರ್ಹತಾ ಮಾನದಂಡಗಳನ್ನು ಮಧ್ಯ ಕರ್ನಾಟಕ ಪ್ರದೇಶ ಪೂರೈಸುತ್ತದೆ. ಮಧ್ಯ ಕರ್ನಾಟಕ ಜಿಲ್ಲೆ ಮಂಗಳೂರಿನ ಕರಾವಳಿ ಪೀಠದ ಭಾಗವಾಗಲು ಸಾಧ್ಯವಿಲ್ಲ.



ಹಾಗಾಗಿ ಶಿವಮೊಗ್ಗದಲ್ಲಿಯೇ ಸರ್ಕ್ಯೂಟ್ ಬೆಂಚ್ ಮತ್ತು ತರುವಾಯ ಕರ್ನಾಟಕ ಹೈಕೋರ್ಟ್ ಶಾಶ್ವತ ಪೀಠ ಸ್ಥಾಪಿಸುವ ಬೇಡಿಕೆಯನ್ನು ಪರಿಗಣಿಸಬೇಕು ಎಂದು ಮನವಿ ಮಾಡಿದರು.

ಶಿವಮೊಗ್ಗದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆಗೆ ಬೇಡಿಕೆ ಹೆಚ್ಚುತ್ತಿದ್ದು, ಬೇಡಿಕೆ ಬಹಳ ಹಿಂದಿನಿಂದಲೂ ಇದೆ. ಸಮಾಜದ ವಿವಿಧ ವರ್ಗಗಳಿಂದ ಬೆಂಬಲ ವ್ಯಕ್ತವಾಗುತ್ತಿದೆ. ವಕೀಲರು, ನಾಗರಿಕ ಸಮಾಜ ಮತ್ತು ಸಾರ್ವಜನಿಕರಿಂದ ವ್ಯಾಪಕವಾಗಿ ಬೆಂಬಲಿತವಾಗಿದೆ. ಈ ದೀರ್ಘಕಾಲದ ಮತ್ತು ಸಮರ್ಥನೀಯ ಬೇಡಿಕೆಯನ್ನು ಪರಿಗಣಿಸಲು ಕರ್ನಾಟಕ ಸರ್ಕಾರವು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಾಧೀಶರ ಜೊತೆ ಸಮಾಲೋಚಿಸಿ ಅಗತ್ಯ ಆಡಳಿತಾತ್ಮಕ ಕ್ರಮಗಳನ್ನು ತೆಗೆದುಕೊ ಳ್ಳುವಂತೆ ಒತ್ತಾಯಿಸಿದರು.

ಶಿವಮೊಗ್ಗಬಾರ್ ಅಸೋಸಿಯೇಷನ್ ಅಧ್ಯಕ್ಷ ಜಿ.ಆರ್. ರಾಘ ವೇಂದ್ರ ಮಾತನಾಡಿ, ಸರ್ಕ್ಯೂಟ್ ಪೀಠದ ಸ್ಥಾಪನೆಯು ಈ ಪ್ರದೇಶದಲ್ಲಿ ನ್ಯಾಯ ಪಡೆಯುವಲ್ಲಿ ದೀರ್ಘಕಾಲದ ಬೇಡಿಕೆಯನ್ನು ಪರಿಹರಿಸುವಲ್ಲಿ ಮಹತ್ವದ ಹೆಜ್ಜೆಯಾಗಿದೆ ಎಂದರು.

ರೋಟರಿ ಶಿವಮೊಗ್ಗ ಪೂರ್ವ ಅಧ್ಯಕ್ಷ ಕಿಶೋರ್‌ಕುಮಾರ್ ಮಾತನಾಡಿ, ಹೈದರಾಬಾದ್ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಪ್ರದೇಶಗಳ ಜನರಿಗೆ ಸೇವೆ ಸಲ್ಲಿಸಲು ಕಲಬುರಗಿ ಮತ್ತು ಧಾರವಾಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕ್ಯೂಟ್ ಪೀಠಗಳ ಮಾದರಿಯಲ್ಲಿ ಶಿವಮೊಗ್ಗದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠವನ್ನು ಸ್ಥಾಪಿಸುವ ಬಗ್ಗೆ ಪರಿಗಣಿಸಬೇಕೆಂದು ಒತ್ತಾಯಿಸಿದರು.

ರೋಟರಿ ರಿವರ್ಸ್‌ಸೈಡ್ ಅಧ್ಯಕ್ಷ ವಿಶ್ವನಾಥ್ ನಾಯಕ್ ಮಾತನಾಡಿ, ಶಿವಮೊಗ್ಗ ಜಿಲ್ಲೆಯಲ್ಲಿ ಹಿರಿಯ ವಕೀಲರು ಸೇರಿದಂತೆ ಸಮರ್ಥ ಕಾನೂನು ತಂಡವಿದೆ ಎಂದರು.

ಫ್ರೆಂಡ್ಸ್ ಸೆಂಟರ್ ಶಿವಮೊಗ್ಗ ಅಧ್ಯಕ್ಷ ಧನರಾಜ್ ಮಾತನಾಡಿ, ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ವಾಸಿಸುವ ಲಕ್ಷಾಂತರ ಜನರಿಗೆ ನ್ಯಾಯವನ್ನು ಸುಲಭವಾಗಿ, ವೇಗವಾಗಿ ಮತ್ತು ಹೆಚ್ಚು ಕೈಗೆಟುಕುವಂತೆ ಖಚಿತಪಡಿಸಿಕೊಳ್ಳಲು ಶಿವಮೊಗ್ಗದಲ್ಲಿ ಸರ್ಕ್ಯೂಟ್ ಪೀಠವನ್ನು ಸ್ಥಾಪಿಸುವುದು ಅಗತ್ಯ ಎಂದರು.

ರೋಟರಿ ಉತ್ತರ ಅಧ್ಯಕ್ಷ ಬಸವರಾಜಪ್ಪ, ರೋಟರಿ ಮಲ್ನಾಡ್ ಅಧ್ಯಕ್ಷ ಪ್ರಕಾಶ್ ಮೂರ್ತಿ, ಕಾರ್ಯ ದರ್ಶಿ ರಶ್ಮಿ ಮಧ್ಯ ಕರ್ನಾಟಕ ಪ್ರದೇಶದ ಜನರ ಬಹುಕಾಲದ ಬೇಡಿಕೆ ಯನ್ನು ಉಲ್ಲೇಖಿಸಿ, ಶಿವಮೊಗ್ಗದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠವನ್ನು ಸ್ಥಾಪಿಸಲು ಕೋರಲಾಗಿದೆ ಎಂದರು.

ರೋಟರಿ ಸೆಂಟ್ರಲ್ ಕಾರ್ಯ ದರ್ಶಿಯಾದ ಜಯಶೀಲಶೆಟ್ಟಿ ಹಾಗೂ ದೀಪಾ ಶೆಟ್ಟಿ, ರೋಟರಿ ಜುಬಿಲಿ ಅಧ್ಯಕ್ಷ ಅಶ್ವಥ್, ಮಾಜಿ ಅಧ್ಯಕ್ಷ ವಾಗಿಶ್, ರೋಟರಿ ಶಿವಮೊಗ್ಗ ಪೂರ್ವ ರೋಟೇರಿಯನ್ ಆರ್.ಮನೋಹರ್, ರೋಟರಿ ಕ್ಲಬ್ ಶಿವಮೊಗ್ಗದ ವಕೀಲ ಶಶಿಧರ್ ಉಪಸ್ಥಿತರಿದ್ದರು.

> **ಮಂಗಳೂರಿನಲ್ಲಿ ಪ್ರಸ್ತಾವಿತ ಸರ್ಕ್ಯೂಟ್ ಪೀಠ ಮಧ್ಯ ಕರ್ನಾಟಕದ ಜನರಿಗೆ ಯಾವ ರೀತಿಯಲ್ಲಿ ಪ್ರಯೋಜನವನ್ನು ನೀಡುತ್ತದೆ?. ಕರಾವಳಿ ಜಿಲ್ಲೆಯನ್ನು ಇಲ್ಲಿಂದ ಸುಲಭವಾಗಿ ಪ್ರವೇಶಿಸಲಾಗುವುದಿಲ್ಲ, ಮಳೆಗಾಲದಲ್ಲಿ ಆಗುಂಬೆ ಅಥವಾ ಹುಲಿಕಲ್ ಘಾಟ್‌ಗಳಲ್ಲಿ ಸಂಚರಿಸುವುದು ಒಂದು ಅಗ್ನಿಪರೀಕ್ಷೆ. ಮಂಗಳೂರು ಮಧ್ಯ ಕರ್ನಾಟಕ ಪ್ರದೇಶಕ್ಕೆ ಸೇವೆ ಸಲ್ಲಿಸುವ ನ್ಯಾಯಾಂಗ ಕೇಂದ್ರಕ್ಕೆ ಸೂಕ್ತವಾದ ಸ್ಥಳವಲ್ಲ.**
> ■ ಜಿ.ಆರ್. ರಾಘವೇಂದ್ರ, ಅಧ್ಯಕ್ಷ ಶಿವಮೊಗ್ಗ ಬಾರ್ ಅಸೋಸಿಯೇಷನ್

ಫ್ರೆಂಡ್ಸ್‌ಸೆಂಟರ್ ಅಧ್ಯಕ್ಷ ಬಿ.ಜಿ. ಧನರಾಜ್ ಅಭಿಪ್ರಾಯ

ಪಾರಂಪರಿಕ ಸ್ಥಳ ಭೇಟಿಯಿಂದ ಜ್ಞಾನ ವೃದ್ಧಿ

ಶಿವಮೊಗ್ಗ: ಐತಿಹಾಸಿಕ ಹಿನ್ನೆಲೆ ಹೊಂದಿರುವ ಪಾರಂಪರಿಕ ಸ್ಥಳಗಳಿಗೆ ಭೇಟಿ ನೀಡುವುದರಿಂದ ಅಲ್ಲಿನ ಅನೇಕ ವಿಷಯಗಳ ಪರಿಚಯವಾಗಿ ಜ್ಞಾನ ವೃದ್ಧಿಗೆ ಸಹಕಾರಿ ಆಗುತ್ತದೆ ಎಂದು ಫ್ರೆಂಡ್ಸ್ ಸೆಂಟರ್ ಅಧ್ಯಕ್ಷ ಬಿ.ಜಿ. ಧನರಾಜ್ ಅಭಿಪ್ರಾಯ ವ್ಯಕ್ತಪಡಿಸಿದರು.

ಫ್ರೆಂಡ್ಸ್ ಸೆಂಟರ್ ವತಿಯಿಂದ ಮಂಗಳವಾರ ಪ್ರವಾಸ ಆಯೋಜಿಸಲಾಗಿತ್ತು. ಆನಂದಪುರ ಸಮೀಪವಿರುವ ಮಲಂದುರು ಎಂಬಲ್ಲಿ 435 ವರ್ಷ ಇತಿಹಾಸವುಳ್ಳ ಅತೀ ಸುಂದರ ಪುಷ್ಕರಣಿ ಇರುವ ಚಂಪಕ ಸರಸು ಎಂಬ ಸ್ಥಳ ವೀಕ್ಷಿಸಿ ನಂತರ ಸಾಗರ ಮಾರ್ಗದ ಎಡಭಾಗದಲ್ಲಿರುವ ಸುಮಾರು 800 ವರ್ಷಗಳ ಹಿಂದಿನ ಕಲ್ಲಿನ ವಾಸ್ತುಶಿಲ್ಪದ ಉಮಾಶಂಕರ ದೇವರ ದರ್ಶನ ಪಡೆದು, ಅಲ್ಲಿಂದ ಅರ್ಧ ಕಿ.ಮೀಟರ್ ದೂರದ ಕಾಡಿನ ನಡುವೆ ಇರುವ 1300 ವರ್ಷದ ಹಿಂದೆ ನಿರ್ಮಾಣಗೊಂಡ ಕೇರಳ ಶೈಲಿಯ ದೇಗುಲದಲ್ಲಿ ಕುಳಿತಿರುವ ಕಂಚಿ ಕಾಳಮ್ಮ ದೇವಿಯ ದರ್ಶನ ಪಡೆಯಲಾಯಿತು.

ಮಾರ್ಗ ಮಧ್ಯದಲ್ಲಿ ಐದು ಜನ ಸೇರಿ ಬಾಚಿ ತಬ್ಬಿಕೊಂಡರೂ ಸಿಗದಂತ 800 ವರ್ಷದ ಹಳೆಯ ವೃಕ್ಷ ವೀಕ್ಷಿಸಿ, ಇಕ್ಕೇರಿಯ ಪುರಾತನ ಕಾಲದ ಸುಪ್ರಸಿದ್ದ ವಾಸ್ತುಶಿಲ್ಪದ ಶಿಲಾಮಂದಿರವಾದ ಅಘೋರೇಶ್ವರ ಹಾಗೂ ಅಖಿಲಾಂಡೇಶ್ವರಿ ದೇವಿಯ ದರ್ಶನ ಪಡೆದು ಅಲ್ಲಿಂದ ಸಿಗಂದೂರಿಗೆ ತೆರಳಿದೆವು ಎಂದು ತಿಳಿಸಿದರು.



> **ಫ್ರೆಂಡ್ಸ್ ಸೆಂಟರ್ ವತಿಯಿಂದ ಆಯೋಜಿಸಿದ್ದ ಪಾರಂಪರಿಕ ಹಾಗೂ ಐತಿಹಾಸಿಕ ಸ್ಥಳಗಳ ಪ್ರವಾಸದಲ್ಲಿ ಅನೇಕ ವಿಷಯಗಳ ಬಗ್ಗೆ ತಿಳಿದುಕೊಳ್ಳಲಾಯಿತು. ಪ್ರತಿನಿತ್ಯದ ಕೆಲಸದ ಒತ್ತಡದಲ್ಲಿ ಒಂದು ದಿನದ ಪ್ರವಾಸ ನಮಗೆ ಆರಾಮದಾಯಕ ಮತ್ತು ಸಂತೋಷದ ಭಾವವನ್ನು ಉಂಟು ಮಾಡುತ್ತದೆ. ಇಂತಹ ಐತಿಹಾಸಿಕ ಸ್ಥಳಗಳಿಗೆ ಪ್ರವಾಸ ಹೋಗುವುದರಿಂದ ಜ್ಞಾನ ವೃದ್ಧಿಯಾಗುತ್ತದೆ.**
> ■ ಬಿ.ಜಿ.ಧನರಾಜ್



ನಿವೃತ್ತಿ ಹಿನ್ನಲೆ ನ್ಯಾಯಾಧೀಶೆ ಇಂದಿರಾ ಮೈಲಾಸ್ವಾಮಿ ಚಟ್ಟಿಯಾರ್‌ಗೆ ಸನ್ಮಾನ

ಭದ್ರಾವತಿ: ಹಿರಿಯ ನ್ಯಾಯಾಧೀಶೆ ಇಂದಿರಾ ಮೈಲಾಸ್ವಾಮಿ ಚಟ್ಟಿಯಾರ್ ಅವರು ಮೇ 31ರಂದು ನಿವೃತ್ತಿ ಹೊಂದುವ ಹಿನ್ನಲೆಯಲ್ಲಿ ಶುಕ್ರವಾರ ಅವರನ್ನು ನಗರದ ವಕೀಲರು ಸನ್ಮಾನಿಸಿ ಗೌರವಿಸಿದರು.

ನ್ಯಾಯಾಧೀಶೆ ಇಂದಿರಾ ಮೈಲಾಸ್ವಾಮಿ ಚಟ್ಟಿಯಾರ್ ಅವರು ಇಲ್ಲಿನ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾಗಿ ಕರ್ತವ್ಯ ಆರಂಭಿಸಿದಾಗಿನಿಂದ ಹಲವು ಪ್ರಮುಖ ಪ್ರಕರಣಗಳ ವಿಚಾರಣೆ ನಡೆಸಿ ತೀರ್ಪು ನೀಡಿದ್ದಾರೆ. ಕೆಲವು ಪ್ರಕರಣಗಳಲ್ಲಿ ಮರಣ ದಂಡನೆ ಶಿಕ್ಷೆ ಸಹ ವಿಧಿಸಿದ್ದು, ಈ ಮೂಲಕ ಗಮನ ಸೆಳೆದಿದ್ದರು. ತಾಲೂಕು ವಕೀಲರ ಸಂಘದ ನೇತೃತ್ವದಲ್ಲಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ನ್ಯಾಯಾಧೀಶೆ ಇಂದಿರಾ ಮೈಲಾಸ್ವಾಮಿ ಚಟ್ಟಿಯಾರ್‌ರವರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ತಾಲೂಕು ವಕೀಲರ ಸಂಘದ ಹಾಲಿ ಹಾಗು ಮಾಜಿ ಅಧ್ಯಕ್ಷರು, ಪದಾಧಿಕಾರಿಗಳು, ಹಿರಿಯ ಹಾಗು ಕಿರಿಯ ವಕೀಲರು ಉಪಸ್ಥಿತರಿದ್ದರು.

ಪಬ್ಲಿಕ್ ಶಾಲೆಗಳ ಶಂಕುಸ್ಥಾಪನೆ ಕಾರ್ಯಕ್ರಮ ಬಹುತೇಕ ರದ್ದು !

ಶಿವಮೊಗ್ಗ: ನಗರದ ಫ್ರೀಡಂ ಪಾರ್ಕ್ ನಲ್ಲಿ ಜೂನ್ 1ರಂದು ನಿಗದಿಯಾಗಿದ್ದ ಪಬ್ಲಿಕ್ ಶಾಲೆಗಳ ಶಂಕುಸ್ಥಾಪನಾ ಸಮಾರಂಭ ಬಹು ತೇಕ ರದ್ದಾದಂತಾಗಿದೆ. ಈ ಹಿನ್ನೆಲೆಯಲ್ಲಿ ಅಳವಡಿ ಸಲಾಗುತ್ತಿದ್ದ ಪೆಂಡಾಲ್‌ನ್ನು ಗುತ್ತಿಗೆದಾರ ತೆರವುಗೊಳಿಸಲು ಆರಂಭಿಸಿದ್ದಾರೆ.

ಜೂನ್ 1ರಂದು ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರಿಂದಮಧುಬಂಗಾರಪ್ಪನವರ ಕನಸಿನ ಕರ್ನಾಟಕ ಪಬ್ಲಿಕ್ ಸ್ಕೂಲ್ ಉದ್ಘಾಟನಾ ಸಮಾರಂಭ ನಡೆಯಬೇಕಿತ್ತು. ಇದಕ್ಕಾಗಿ ನಗರದ ಅಲ್ಲಮಪ್ರಭು ಮೈದಾನದಲ್ಲಿ ಕಳೆದ ಪಂದು ವಾರದಿಂದ ದೊಡ್ಡಮಟ್ಟದಲ್ಲಿ ಬೃಹತ್ ಪೆಂಡಾಲ್ ನಿರ್ಮಿಸಿ, ಲಕ್ಷಾಂತರ ರೂ. ವೆಚ್ಚ ಮಾಡಲಾಗಿತ್ತು. ಆದರೆ ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಿದ್ದರಿಂದ ಈಗ ಈ ಉದ್ಘಾಟನಾ ಸಮಾರಂಭ ನಡೆಯುವುದು ಬಹುತೇಕ ರದ್ದಾಗಿದೆ.

ಈ ಹಿನ್ನೆಲೆಯಲ್ಲಿ ಗುತ್ತಿಗೆದಾರ ಪೆಂಡಾಲ್ ಕಳಚುತ್ತಿದ್ದಾರೆ.

ನೂತನ ಮುಖ್ಯಮಂತ್ರಿ ಆಯ್ಕೆ ನಡೆದು ಪ್ರಮಾಣವಚನ ಸಮಾರಂಭ ನಡೆಯಬೇಕಿದೆ. ನಂತರ ಸಂಪುಟ ವಿಸ್ತರಣೆ ಆಗಬೇಕಿದೆ. ಇದೆಲ್ಲಾ ಯಾವಾಗ ನಡೆಯಲಿದೆ ಎಂಬ ಬಗ್ಗೆ ಸದ್ಯ ಅನಿಶ್ಚಿತತೆ ಇದೆ.

ಅಲ್ಲದೇ ಸಂಪುಟ ವಿಸ್ತರಣೆಯಾಗಿ ಖಾತೆ ಹಂಚಿಕೆ ನಡೆಯಬೇಕಿದೆ. ಜಿಲ್ಲೆಯಿಂದ ಸಚಿವರಾಗಿ ಯಾರು ಪ್ರಮಾಣ ವಚನ ಸ್ವೀಕರಿಸುತ್ತಾರೆ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಮಧು ಬಂಗಾರಪ್ಪ ಅವರೇ ಸಚಿವರಾಗಿ ಆಯ್ಕೆಯಾಗಿ, ಪುನಃ ಶಿಕ್ಷಣ ಖಾತೆಯಲ್ಲಿಯೇ ಮುಂದುವರೆದಲ್ಲಿ ಮಾತ್ರ ಕಾರ್ಯಕ್ರಮ ಪುನಃ ನಿಗದಿ ಆಗುವ ಸಾಧ್ಯತೆಗಳಿವೆ. ಅಂತಹ ಸಾಧ್ಯತೆಗಳ ಬಗ್ಗೆ ಪ್ರಶ್ನಾರ್ಥಕ ಚಿಹ್ನೆ ಮೂಡಿದೆ.

> **ಆಕಾಂಕ್ಷೆ ಹೊಂದಿದ್ದ ಮಧು**
> **ರಾಜ್ಯದಲ್ಲಿ ಒಂದು ಸಾವಿರ ಕರ್ನಾಟಕ ಪಬ್ಲಿಕ್ ಶಾಲೆ ಆರಂಭವಾಗಲಿದ್ದು, ತವರು ಶಿವಮೊಗ್ಗ ಜಿಲ್ಲೆಯಿಂದಲೇ ಅದ್ದೂರಿಯಾಗಿ ಉದ್ಘಾಟನೆ ಮಾಡಲು ಸಚಿವ ಮಧು ಬಂಗಾರಪ್ಪ ಆಕಾಂಕ್ಷೆ ಹೊಂದಿದ್ದರು. ಇಡೀ ಸಚಿವ ಸಂಪುಟವೇ ಭಾಗಿಯಾಗುವ ನಿರೀಕ್ಷೆಯಿತ್ತು. ಈ ಸಮಾರಂಭ ಬಹುತೇಕ ಮುಂದೂಡುವುದು ಖಚಿತ ಎಂದು ಹೇಳಲಾಗುತ್ತಿದೆ.**

ನಾಳೆ ಶಿವಮೊಗ್ಗ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಶಿವಮೊಗ್ಗ: ಆಲ್ಕೊಳ ವಿದ್ಯುತ್ ವಿತರಣಾ ಕೇಂದ್ರದಿಂದ ಸರಬರಾಜಾಗುವ ಫೀಡರ್ ಎ.ಎಫ್ -12, 13ರ ವ್ಯಾಪ್ತಿಯಲ್ಲಿ ಮೇ 31 ರಂದು ಬೆಳಗ್ಗೆ 09 ರಿಂದ ಮಧ್ಯಾಹ್ನ 1ರವರೆಗೆ ತುರ್ತು ಕಾಮಗಾರಿ ಹಮ್ಮಿಕೊಂಡಿದೆ.

ಈ ಮಾರ್ಗದ ಆಲ್ಕೋಳ, ಎಸ್.ಎಲ್.ವಿ. ಬಡಾವಣೆ, ಗಜಾನನ ಲೇಔಟ್, ಐಶ್ವರ್ಯ ಬಡಾವಣೆ, ಜೆ.ಹೆಚ್. ಪಟೇಲ್ ಬಡಾವಣೆ ಎ ರಿಂದ ಎಫ್ ಬ್ಲಾಕ್, ಮುನಿಯಪ್ಪ ಲೇಔಟ್, ಸಂಗೊಳ್ಳಿ ರಾಯಣ್ಣ ಬಡಾವಣೆ, ಆದರ್ಶ ನಗರ, ಸಹ್ಯಾದ್ರಿನಗರ, ಸೋಮಿನಕೊಪ್ಪ, ವಿಜಯಲಕ್ಷ್ಮೀ ಲೇಔಟ್, ಸೋಮನಾಥ ಬಡಾವಣೆ, ನಿಸರ್ಗ ಲೇಔಟ್, ಹೊಂಗಿರಣ ಬಡಾವಣೆ, ಸೋಮಿನಕೊಪ್ಪ ಗೆಜ್ಜೆನಹಳ್ಳಿ, ಅಂಬೇಡ್ಕರ್ ಕಾಲೋನಿ, ಹನುಮಂತನಗರ, ಜಕಾತಿಕೊಪ್ಪ, ಭೈರವಕೊಪ್ಪ, ದೇವಕಾತಿಕೊಪ್ಪ ಹಾಗೂ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ದುರ್ಗಿಗುಡಿಯಲ್ಲೂ ವಿದ್ಯುತ್ ವ್ಯತ್ಯಯ

ಶಿವಮೊಗ್ಗ ನಗರ ಉಪವಿಭಾಗ-1, ಘಟಕ -2ರ ವ್ಯಾಪ್ತಿಯಲ್ಲಿ ಮೇ 31ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2ರವರೆಗೆ ವಿದ್ಯುತ್ ಕಂಬ ತೆರವು ಕಾಮಗಾರಿ ಹಮ್ಮಿಕೊಂಡಿದೆ.

ದುರ್ಗಿಗುಡಿ ರಸ್ತೆ, ಪಾರ್ಕ್ ಬಡಾವಣೆ, ಸೀತಾರಾಮ ಕಲ್ಯಾಣ ಮಂದಿರ ಅಡ್ಡರಸ್ತೆ, ರಾಘವೇಂದ್ರ ಸ್ವಾಮಿ ಮಠ ರಸ್ತೆ, ಸರ್ಜಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಶನಿ ಮಹಾತ್ಮ ದೇವಸ್ಥಾನ ರಸ್ತೆ, ವಿದ್ಯುತ್ ಪರಿವೀಕ್ಷಕರ ಕಚೇರಿ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಏಕಾಏಕಿ ಮನೆ ತೆರವೆಂದು ಆರೋಪಿಸಿ ಧರಣೆ



ಹೊಸನಗರ: ತಾಲೂಕು ಕಸಬಾ ಹೋಬಳಿ ಮಾರುತಿಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅರಗೋಡಿ ಗ್ರಾಮದ ಸರ್ವೆ ನಂಬರ್ 7ರಲ್ಲಿ ನಾಗರಾಜ ಎಂಬುವವರು ವಾಸವಿದ್ದ ಮನೆಯನ್ನು ಯಾರು ಇಲ್ಲದ ಸಮಯದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಯಾವುದೇ ನೋಟೀಸು ನೀಡದೇ ತೆರವುಗೊಳಿಸಿದ್ದಾರೆ ಎಂದು ಆರೋಪಿಸಿ ಮನೆಯ ಮಾಲೀಕ ನಾಗರಾಜ್ ಹಾಗೂ ಗ್ರಾಮಸ್ಥರು ಅರಣ್ಯ ಇಲಾಖೆಯ ಮುಂಭಾಗ ಧರಣಿ ನಡೆಸಿದರು.

ನಾವು ಸುಮಾರು 40 ವರ್ಷಗಳಿಂದ ಈ ಜಾಗದಲ್ಲಿ ವಾಸವಿದ್ದೇವೆ ನಮಗೆ ಕಂದಾಯ ಡಿಮ್ಯಾಂಡ್ ಹಾಗೂ ಇಲ್ಲಿ ವಾಸವಗಿರುವುದಕ್ಕೆ ಎಲ್ಲ ದಾಖಲೆಗಳು ನಮ್ಮ ಬಳಿ ಇದ್ದು ಅರಣ್ಯ ಇಲಾಖೆಯ ಅಧಿಕಾರಿಗಳು ನಮ್ಮ ಮನೆಯ ಮೇಲೆ ದಾಳಿ ಮಾಡಿ ಮನೆಯನ್ನು ಧ್ವಂಸ ಮಾಡಿ ಕಿತ್ತು ಹಾಕಿದ್ದಾರೆ ಎಂದು ತಿಳಿಸಿದರು.

ಕೂಲಿ ಮಾಡಿ ಜೀವನ ಸಾಗಿಸುವ ಬಡ ಕುಟುಂಬಕ್ಕೆ ವಾಸಿಸಲು ಮನೆಯೇ ಇಲ್ಲದಂತಾಗಿದೆ. ಮುಂದೆ ಬರುವುದು ಮಳೆಗಾಲ ನಮಗೆ ವಾಸಿಸಲು ಯಾವುದೇ ಮನೆಯಿಲ್ಲ, ಬಡ ಕುಟುಂಬಕ್ಕೆ ನ್ಯಾಯ ಕೊಡಬೇಕೆಂದು ಹೇಳಿದರು.

ಯಕ್ಷಗಾನ ಕಲಾವಿದ ಗುಡ್ಡೆಹಿತ್ಲು ಸುಬ್ರಹ್ಮಣ್ಯ ಭಟ್

ಮಳಲಿ ಶೀನಯ್ಯ ಕೊಡುಗೆ ಅವಿಸ್ಮರಣೀಯ

ಶಿವಮೊಗ್ಗ: ಇತ್ತೀಚಿಗೆ ಅಗಲಿದ ಮಳಲಿ ಶೀನಯ್ಯ ಯಕ್ಷಗಾನ, ತಾಳೆ ಮದ್ದಳೆ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡಿದ್ದಾರೆ. ಅವರ ಕಲಾ ಸೇವೆ ಅವಿಸ್ಮರಣೀಯ ಎಂದು ಯಕ್ಷಗಾನ ಕಲಾವಿದ ಗುಡ್ಡೆಹಿತ್ಲು ಸುಬ್ರಹ್ಮಣ್ಯ ಭಟ್ ಹೇಳಿದರು.

ಸಮೀಪದ ಕಾರಣಗಿರಿ ಸಿದ್ಧಿವಿನಾಯಕ ಸಭಾಭವನದಲ್ಲಿಸಿದ್ಧಿವಿನಾಯಕ ಯಕ್ಷಕಲಾ ಬಳಗ, ಗ್ರಾಮಭಾರತಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಡೆದ ಮಳಲಿ ಶೀನಯ್ಯ ನುಡಿನಮನ ಮತ್ತು ತಾಳಮದ್ದಳೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗ್ರಾಮಭಾರತಿ ಟ್ರಸ್ಟ್ ಅಧ್ಯಕ್ಷ ಹನಿಯ ರವಿ ಮಾತನಾಡಿ ಶೀನಯ್ಯನವರು ಇತ್ತೀಚಿನ ತನಕ ಅನೇಕ ಮೇಳಗಳಲ್ಲಿ ಬಣ್ಣ ಹಚ್ಚಿದ್ದು ಮಲೆನಾಡಿನ ಅದ್ಭುತ ಕಲಾವಿದರಲ್ಲಿ ಒಬ್ಬರಾ ದ್ದರು ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಸಿದ್ಧಿವಿನಾಯಕ ದೇವಸ್ಥಾನ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಪ್ರಭಾಕರ ರಾವ್, ಹಿರಿಯರಾದ ನಿಟ್ಟೂರು ಅನಂತ್ ಭಟ್, ರಾಷ್ಟ್ರೋತ್ಥಾನ ಬಳಗದ ಅಧ್ಯಕ್ಷ ನಳಿನಚಂದ್ರ, ಹನಿಯ ಗುರು ಮೂರ್ತಿ, ಓ. ಕೆ. ರಮಾನಂದ ಮತ್ತಿತರರಿದ್ದರು.

ಇದೆ ಸಂದರ್ಭದಲ್ಲಿ ಸುಧನ್ವ ಮೋಕ್ಷ ಎಂಬ ಪ್ರಸಂಗದ ತಾಳಮದ್ದಳೆ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಭಾಗ ವತರಾಗಿ ಗೋಪಾಲ ಕೃಷ್ಣ ಭಟ್ ಜೋಗಿಮನೆ, ಮೃದಂಗದಲ್ಲಿ ನರಸಿಂಹ ಹೆಗಡೆ ಮೂರೂರು ಅರ್ಥದಾರಿಗಳಾಗಿ ಡಾ. ಜಿ. ಕೆ ಹೆಗಡೆ, ರವಿ ಮಾಡೋಡಿ ಮತ್ತು ಅನಂತಭಟ್ ನಿಟ್ಟೂರು, ಉಪಸ್ಥಿತರಿದ್ದರು. ರಮೇಶ್ ಸ್ವಾಗತಿಸಿ, ವಿನಾಯಕ ಪ್ರಭು ನಿರೂಪಿಸಿದರು.

ಕೊಟ್ಟ ಮಾತಿನಂತೆ ನಡೆದುಕೊಂಡ ಸಿದ್ದರಾಮಯ್ಯ: ಚಂದ್ರಮೌಳಿ ಗೌಡ



ಹೊಸನಗರ: ಕರ್ನಾಟಕದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ನಡೆದುಕೊಂಡಿದ್ದಾರೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಮೌಳಿ ಗೌಡ ಹೇಳಿದರು.

ಪಟ್ಟಣದ ಕಾಂಗ್ರೆಸ್ ಕಚೇರಿ ಗಾಂಧಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಸಿದ್ದರಾಮಯ್ಯ ಅವರು ದೇಶಕಂಡ ಅಪ್ರತಿಮ ನಾಯಕ. 17 ಬಾರಿ ಬಜೆಟ್ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಚುನಾವಣೆ ಸಂದರ್ಭದಲ್ಲಿ ಜಾರಿಗೆ ತಂದಿರುವ ಐದು ಗ್ಯಾರಂಟಿಯನ್ನು ಯಶಸ್ವಿಯಾಗಿ ಮೂರು ವರ್ಷ ಪೂರೈಸಿದ ಕೀರ್ತಿ ಅವರದ್ದು ಎಂದರು.

ಭ್ರಷ್ಟಾಚಾರರಹಿತ ಆಡಳಿತ ನಡೆಸಿ ಪಕ್ಷದ ಹೈಕಮಾಂಡ್ ಹೇಳಿದ ತಕ್ಷಣ ಹಿಂದು ಮುಂದು ನೋಡದೆ ರಾಜೀನಾಮೆ ಕೊಟ್ಟಿದ್ದಾರೆ. ಅಭಿಮಾನಿಗಳು ಮುಖಂಡರು ಯಾವುದೇ ಕಾರಣಕ್ಕೂ ರಾಜೀನಾಮೆ ಕೊಡಬೇಡಿ ಎಂದರೂ ಯಾರ ಮಾತಿಗೂ ಮನ್ನಣೆ ನೀಡದೆ ಕೊಟ್ಟ ಮಾತಿಗೆ ಬದ್ಧರಾಗಿ ರಾಜೀನಾಮೆ ನೀಡಿ ಮಾತಿಗೆ ತಪ್ಪದವರು ಎನಿಸಿಕೊಂಡಿದ್ದಾರೆ. ರಾಹುಲ್ ಗಾಂಧಿ ಮಲ್ಲಿಕಾರ್ಜುನ ಖರ್ಗೆ ಅವರ ಮಾತು ಹೈಕಮಾಂಡ್ ಗಟ್ಟಿಯಾಗಿದೆ ಎಂಬುದು ಸೂಚಿಸುತ್ತದೆ. ಸಿದ್ದರಾಮಯ್ಯನವರು ಮುಂದಿನ ಯುವ ನಾಯಕರಿಗಳಿಗೆ ದಾರಿದೀಪವಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸದಾಶಿವ ಶ್ರೇಷ್ಠಿ, ಎಂ.ಪಿ. ಸುರೇಶ್, ಪ್ರಭಾಕರ ರಾವ್, ಇಕ್ಬಾಲ್, ಜಯನಗರ ಗುರು, ಗಣೇಶ್ ಬಾಳೆಕೊಪ್ಪ ಇನ್ನಿತರರಿದ್ದರು.

ಕಿರುಸುದ್ದಿ

ಜೂನ್ 1ರಂದು ರಕ್ತದಾನ ಶಿಬಿರ

• **ಜಗಳೂರು:** ಜೂನ್ 1 ರಂದು ಪಟ್ಟಣದ ಗುರುಭವನದಲ್ಲಿ ಕೆಪಿಪಿ ಅಭಿಮಾನಿ ಬಳಗದಿಂದ ಕೆಪಿಸಿಸಿ ಎಸ್ ಟಿ ಘಟಕದ ಮಾಜಿ ರಾಜ್ಯಾಧ್ಯಕ್ಷ ಹಾಗೂ ಜಿ.ಪಂ ಮಾಜಿ ಸದಸ್ಯ ಕೆ.ಪಿ.ಪಾಲಯ್ಯ ಅವರ 55 ನೇ ಹುಟ್ಟುಹಬ್ಬ ಆಚರಣೆ ಹಾಗೂ ರಕ್ತದಾನ ಶಿಬಿರ, ಬ್ರೆಡ್ ಹಣ್ಣುಹಂಪಲು ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ಗಡಿಮಾಕುಂಟೆ ಶಿವಕುಮಾರ ತಿಳಿಸಿದರು.ಶುಕ್ರವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿ, ಕಾರ್ಯಕ್ರಮದಲ್ಲಿ ಶಾಸಕ ಬಿ.ದೇವೇಂದ್ರಪ್ಪ, ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಅಸಗೋಡು ಜಯಸಿಂಹ, ಶಾಸಕ ಸಮರ್ಥ್ ಶಾಮನೂರು ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ. ಈ ಹುಟ್ಟುಹಬ್ಬ ಆಚರಣೆ ಸಂದರ್ಭಕ್ಕೂ ರಾಜ್ಯ ರಾಜಕಾರಣದ ಬದಲಾವಣೆ ವಿದ್ಯಮಾನಗಳು ಕಾಕತಾಳೀಯವಾಗಿ ಮುಂದಿನ ರಾಜಕೀಯ ನಿಲುವು ನಿರ್ಧರಿತವಾಗಲಿವೆ. ಕಾಂಗ್ರೆಸ್ ಪಕ್ಷಕ್ಕೆ ಶ್ರಮಿಸಿದ ಪಾಲಯ್ಯ ಅವರ ರಾಜಕೀಯ ಸ್ಥಾನಮಾನ ವಿಸ್ತರಣೆಗೊಳ್ಳಲಿವೆ ಎಂದು ವಿಶ್ವಾಸವ್ಯಕ್ತಪಡಿಸಿದರು.ಗ್ರಾ.ಪಂ ಮಾಜಿ ಸದಸ್ಯ ಮರೇನಹಳ್ಳಿ ನಾಗರಾಜ್ ಮಾತನಾಡಿ, ಕೆಪಿಪಿ ಅಭಿಮಾನಿ ಬಳಗದಿಂದ ಗುರುಭವನದಲ್ಲಿ ಒಂದು ಕಡೆ ರಕ್ತದಾನ ಶಿಬಿರ ಮತ್ತೊಂದೆಡೆ ವೇದಿಕೆ ಕಾರ್ಯಕ್ರಮದಲ್ಲಿ ಕೇಕ್ ಕತ್ತರಿಸಿ ಶುಭಕೋರಲಾಗುವುದು. ಆಗಮಿಸಿದ ಪ್ರತಿಯೊಬ್ಬರಿಗೂ ಉಪಾಹಾರದ ವ್ಯವಸ್ಥೆಯಿದೆ. ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣುಹಂಪಲ ೨ವಿತರಣೆಮಾಡಲಾಗುವುದು ಎಂದರು. ಗ್ರಾಪಂ ಮಾಜಿ ಅಧ್ಯಕ್ಷರಾದ ಚಿಕ್ಕಅರಕೆರೆ ಬಸವನಗೌಡ, ತಿಪ್ಪೇಸ್ವಾಮಿ, ಮುಖಂಡರಾದ ಕಲ್ಲದೇವರಪುರ ಮಹೇಶ,ವಿಜಯ್ ಕೆಂಚೋಳ, ರಮೇಶ್, ಅಕ್ಷಯ ಕುಮಾರ, ವಕೀಲ ತಿಪ್ಪೇಸ್ವಾಮಿ, ನರೇನಹಳ್ಳಿ ಕುಮಾರನಾಯ್ಕ, ಬಂಗಾರಕ್ಕನಗುಡ್ಡದ ಮಲ್ಲಿಕಾರ್ಜುನ, ಪ್ರವೀಣ ಇತರರು ಇದ್ದರು.

ಇಂದು ಅಧಿಕ ಮಾಸ ಮಹತ್ವ ಆಚರಣೆ ವಿಶೇಷ ಉಪನ್ಯಾಸ

• **ದಾವಣಗೆರೆ:** ನಗರದ ಆದರ್ಶ ಯೋಗ ಪ್ರತಿಷ್ಠಾನದಲ್ಲಿ ಮೇ 30ರಂದು ಸಂಜೆ 6.30ರಿಂದ ಅಧಿಕ ಮಾಸದ ಮಹತ್ವ ಮತ್ತು ಆಚರಣೆ ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ನಾಡಿನ ಹಿರಿಯ ಪ್ರವಚನಕಾರ ಶ್ರೀ ಗೋಪಾಲಾಚಾರ್ ಮಣ್ಣೂರ್ ಉಪನ್ಯಾಸ ಕಾರ್ಯಕ್ರಮವನ್ನು ನಡೆಸಿಕೊಡುವರು. ಆಸಕ್ತರಿಗೆ ಮುಕ್ತ ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ ಮೊ:94484 22829 ಸಂಪರ್ಕಿಸುವಂತೆ ಪ್ರತಿಷ್ಠಾನದ ಡಾ.ರಾಘವೇಂದ್ರ ಗುರೂಜಿ ತಿಳಿಸಿದ್ದಾರೆ.

ನಾಳೆ ಸಾಮೂಹಿಕ ಗಾಯತ್ರಿ ಉಪಾಸನೆ ಕಾರ್ಯಕ್ರಮ

• **ದಾವಣಗೆರೆ:** ಗಾಯತ್ರಿ ಪರಿವಾರದಿಂದ ಅಧಿಕ ಕಾರ ಹುಣ್ಣಿಮೆ ಅಂಗವಾಗಿ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆಯನ್ನು ಮೇ 31ರಂದು ಬೆಳಿಗ್ಗೆ 7 ಗಂಟೆಗೆ ನಗರದ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರಮಠದಲ್ಲಿ ಏರ್ಪಡಿಸಲಾಗಿದೆ. ಆಧ್ಯಾತ್ಮ ಸಮಾರಂಭದ ಈ ಬಾರಿಯ ಪೂಜಾ ಸೇವಾಕರ್ತರು ಬಿ.ಸತ್ಯನಾರಾಯಣ ಮೂರ್ತಿ ಮತ್ತು ಕುಟುಂಬದವರು. ಪ್ರತೀ ಪೂರ್ಣಿಮೆಯಂದು ನಡೆಯುವ ಈ ಧಾರ್ಮಿಕ ಪ್ರಕ್ರಿಯೆಯಲ್ಲಿ ಆಸಕ್ತ ಸಾರ್ವಜನಿಕರು ಯಾವುದೇ ಜಾತಿ, ಮತ, ವರ್ಣ, ಲಿಂಗ ಭೇದವಿಲ್ಲದೇ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಪರಿವಾರದ ಅಧ್ಯಕ್ಷ ವಾಸುದೇವ ರಾಯ್ಕರ್ ತಿಳಿಸಿದ್ದಾರೆ.

ದಾವಣಗೆರೆ ಯುಬಿಡಿಟಿ ಕಾಲೇಜು ಅಮೃತ ಮಹೋತ್ಸವ ಸಮಾರಂಭ | ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅಭಿಮತ

ಮನುಷ್ಯನ ಪ್ರಜ್ಞೆಯ ಮಟ್ಟ ಹೆಚ್ಚಾಗಬೇಕು



• **ದಾವಣಗೆರೆ:** ಆಧುನಿಕ ಯುಗದಲ್ಲಿ ದೈನಂದಿನ ಕೆಲಸಗಳನ್ನು ರೋಬೋಟ್ ಗಳೇ ಮಾಡುತ್ತಿದ್ದು, ತಂತ್ರಜ್ಞಾನ ಬೆಳೆದಂತೆಲ್ಲಾ ಮನುಷ್ಯ ತನ್ನ ಪ್ರಜ್ಞೆಯ ಮಟ್ಟ ಹೆಚ್ಚಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಹೀಗಾಗಿ ವಿಶ್ವವಿದ್ಯಾಲಯಗಳು ಕೇವಲ ಭೌತಿಕ ವಿಜ್ಞಾನಕ್ಕೆ ಸೀಮಿತವಾಗದೆ, ಪಠ್ಯಕ್ರಮದಲ್ಲಿ ಆಧ್ಯಾತ್ಮಿಕ ವಿಜ್ಞಾನವನ್ನು ಅಳವಡಿಸಿಕೊಳ್ಳಬೇಕು ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ ಕರೆ ನೀಡಿದರು.

ನಗರದ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾಲೇಜಿನ 75 ವರ್ಷಗಳ ಅಮೃತ ಮಹೋತ್ಸವ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಜ್ಞಾನ, ವಿಜ್ಞಾನ ಹಾಗೂ ಆಧ್ಯಾತ್ಮದ ಸಮ್ಮಿಲನದಿಂದ ಮಾತ್ರ ಪ್ರಸ್ತುತ ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಸಮಗ್ರ ಮಾನವ ವ್ಯಕ್ತಿತ್ವವನ್ನು ರೂಪಿಸಲು ಸಾಧ್ಯ. ಪಠ್ಯಕ್ರಮದಲ್ಲಿ ಆಧ್ಯಾತ್ಮಿಕತೆಯ ಅಂಶಗಳನ್ನು ತರುವುದರಿಂದ ಯುವ ಪೀಳಿಗೆಯಲ್ಲಿ ನೈತಿಕತೆ ಹಾಗೂ ಸಚ್ಚಾರಿತ್ರ್ಯ ಬೆಳೆಸಲು ಸಾಧ್ಯ ಎಂದರು.

ಸ್ವಾಮಿ ವಿವೇಕಾನಂದರು 1892-1893ರ ಅವಧಿಯಲ್ಲಿ ಅಮೆರಿಕಕ್ಕೆ ಪ್ರಯಾಣ ಬೆಳೆಸುತ್ತಿದ್ದಾಗ ಉದ್ಯಮಿ ಜಮಶೆಡಜೀ ಟಾಟಾರನ್ನು ಭೇಟಿಯಾಗಿದ್ದರು. ಭಾರತದಲ್ಲಿ ಉನ್ನತ ಸಂಶೋಧನೆ ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆ ಸ್ಥಾಪಿಸುವಂತೆ ವಿವೇಕಾನಂದರು ನೀಡಿದ ದೂರದೃಷ್ಟಿಯ ಸಲಹೆಯು ದೇಶದ ಶೈಕ್ಷಣಿಕ ಇತಿಹಾಸದಲ್ಲಿ ಹೊಸ ಮೈಲಿಗಲ್ಲಿಗೆ ಕಾರಣವಾಯಿತು. ತದನಂತರ ಮೈಸೂರು ಮಹಾರಾಜರ ಮುತ್ಸದ್ದಿತನ ಹಾಗೂ ಬೆಂಬಲದೊಂದಿಗೆ ಬೆಂಗಳೂರಿನಲ್ಲಿ ಇಂಡಿಯನ್ ಇನ್ಸಟಿಟ್ಯೂಟ್ ಆಫ್ ಸೈನ್ಸ್(ಐಐಎಸ್ಸಿ) ಸ್ಥಾಪನೆಯಾಯಿತು. ಈ ಭದ್ರ ಬುನಾದಿಯೇ ಮುಂದೆ ವಿಟಿಯು, ಮೈಸೂರಿನ ಎನ್.ಐ.ಇ ಮತ್ತು 1951ರಲ್ಲಿ ಯುಬಿಡಿಟಿ ಸಂಸ್ಥೆಯ ಉಗಮಕ್ಕೆ ದಾರಿಯಾಯಿತು ಎಂದು ಶ್ರೀಗಳು ಸ್ಮರಿಸಿದರು.

ಪ್ರಸ್ತುತ ದೇಶದ ಸರಾಸರಿ ತಲಾದಾಯ 2.5 ಲಕ್ಷವಿದ್ದರೆ, ಕರ್ನಾಟಕದ ತಲಾದಾಯ 4.3 ಲಕ್ಷ ದಾಟುವ ಮೂಲಕ ರಾಜ್ಯವು ಆರ್ಥಿಕವಾಗಿ ಸದೃಢವಾಗಿದೆ. ಮಾಹಿತಿ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ಏರೋಸ್ಪೇಸ್ ಮತ್ತು ಬಯೋಟೆಕ್ನಾಲಜಿ ಕ್ಷೇತ್ರಗಳಲ್ಲಿ ಕರ್ನಾಟಕವು ದೇಶದಲ್ಲೇ ಅಗ್ರಸ್ಥಾನ ಕಾಯ್ದುಕೊಂಡಿದೆ. ದೇಶದ 2 ಲಕ್ಷಕ್ಕೂ ಹೆಚ್ಚು ಸ್ಟಾರ್ಟ್ ಅಪ್ ಗಳ ಪೈಕಿ ಕರ್ನಾಟಕವೊಂದರಲ್ಲೇ 20,000ಕ್ಕೂ ಹೆಚ್ಚು ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಮೂಲಕ ರಾಷ್ಟ್ರದ ಒಟ್ಟು ಪಾಲಿನ ಶೇ.18ರಿಂದ 20ರಷ್ಟನ್ನು ರಾಜ್ಯವೇ ಹೊಂದಿದೆ. ದೇಶದಲ್ಲಿರುವ 125 ಯೂನಿಕಾರ್ನ್ ಗಳ ಪೈಕಿ 45ಕ್ಕೂ ಹೆಚ್ಚು ಸಂಸ್ಥೆಗಳು ಕರ್ನಾಟಕದಲ್ಲೇ ನೆಲೆಗೊಂಡಿರುವುದು ಹೆಮ್ಮೆಯ ಸಂಗತಿ ಎಂದು ಅವರು ಶ್ಲಾಘಿಸಿದರು.

ಮಾಜಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಮಾತನಾಡಿ, ಎರಡನೇ ಮಹಾಯುದ್ಧದ ಭೀಕರತೆಯ ನಂತರ ಜನರ ಹಸಿವು ನೀಗಿಸಲು ಮತ್ತು ಉದ್ಯೋಗಾವಕಾಶ ಕಲ್ಪಿಸಲು ಸರ್ ಎಂ.ವಿಶ್ವೇಶ್ವರಯ್ಯನವರು ವಿವಿಧ ಸಂಸ್ಥೆಗಳನ್ನು ಪ್ರಾರಂಭಿಸುವ ಮೂಲಕ ಆಹಾರ ಭದ್ರತೆ, ಸ್ವಾವಲಂಬಿ ಬದುಕಿಗೆ ನಾಂದಿ ಹಾಡಿದರು. ದೂರದೃಷ್ಟಿಯುಳ್ಳ ವೈಜ್ಞಾನಿಕ ಮನಸ್ಸಿನ ಸರ್ ಎಂ.ವಿಶ್ವೇಶ್ವರಯ್ಯನವರ ಚಿಂತನೆಗಳಿಂದ ಪ್ರೇರಿತರಾಗಿ ಯುವಪೀಳಿಗೆ ಉದ್ಯೋಗಾವಕಾಶ ಸೃಷ್ಟಿಸುವ ಜೊತೆಗೆ ನಾಡಿನ ಅಭಿವೃದ್ಧಿಗೆ ಪೂರಕವಾಗಿ ನಿಲ್ಲಬೇಕು ಎಂದು ಸಲಹೆ ನೀಡಿದರು.

1951ರಲ್ಲಿ ಸ್ಥಾಪನೆಯಾದ ಯುಬಿಡಿಟಿ ಕಾಲೇಜು ಕರ್ನಾಟಕದ ಅತ್ಯಂತ ಪ್ರತಿಷ್ಠಿತ ಮತ್ತು ಮೊಟ್ಟಮೊದಲ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮೈಸೂರು ಮಹಾರಾಜರ ಹಣಕಾಸಿನ ನೆರವು ಹಾಗೂ ದಾವಣಗೆರೆಯ ಬಿ.ಟಿ. ಕುಟುಂಬದ ಬ್ರಹ್ಮಪ್ಪ ದೇವೇಂದ್ರಪ್ಪ ತವನಪ್ಪನವರ ಪರಿಶ್ರಮ ಮತ್ತು ದಾನಿಗಳ ಸಹಕಾರದಿಂದ ಈ ಸಂಸ್ಥೆ ತಲೆ ಎತ್ತಿ, ಮಧ್ಯ ಕರ್ನಾಟಕದ ತಾಂತ್ರಿಕ ಶಿಕ್ಷಣದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಅಮೃತ ಮಹೋತ್ಸವ ಭವನವು ಕಾಲೇಜಿನ ಮೂಲ ಸೌಕರ್ಯಗಳನ್ನು ಗಣನೀಯವಾಗಿ ಬದಲಿಸಲಿದೆ. ಈ ಭವನದಲ್ಲಿ 48 ಆಧುನಿಕ ತರಗತಿ ಕೊಠಡಿ, 20 ಸುಧಾರಿತ ಪ್ರಯೋಗಾಲಯ, ಎರಡು ಸೆಮಿನಾರ್ ಹಾಲ್ ಸೇರಿದಂತೆ ಅತ್ಯಾಧುನಿಕ ಸೌಲಭ್ಯ ಕಲ್ಪಿಸುವ ಮೂಲಕ ಮುಂದಿನ ಪೀಳಿಗೆಗೆ ಉತ್ತಮ ಶೈಕ್ಷಣಿಕ ವಾತಾವರಣ ಸೃಷ್ಟಿಸಲಾಗಿದೆ ಎಂದು ಅವರು ವಿವರಿಸಿದರು.

ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮಾಜಿ ಸಚಿವ ಡಾ.ಎಂ.ಸಿ.ಸುಧಾಕರ್, ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಹಳೆಯ ವಿದ್ಯಾರ್ಥಿ ಹಾಗೂ ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ (ಎಐಸಿಟಿಇ) ಮಾಜಿ ಅಧ್ಯಕ್ಷ ಪ್ರೊ. ಟಿ.ಜಿ. ಸೀತಾರಾಮ್, ಕಾಲೇಜಿನ ಪ್ರಾಂಶುಪಾಲ ಡಾ.ಡಿ.ಪಿ.ನಾಗರಾಜಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನಾನು ದಾವಣಗೆರೆಯಲ್ಲಿ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಈ ಕಾಲೇಜಿನ ಆಟದ ಮೈದಾನದಲ್ಲಿ ಕ್ರಿಕೆಟ್ ಆಡುತ್ತಿದ್ದೆ. ಅಂದಿನಿಂದ ಈ ಕಾಲೇಜಿನ ಬೆಳವಣಿಗೆಯನ್ನು ಕಂಡಿದ್ದೇನೆ. ಹಳೇ ವಿದ್ಯಾರ್ಥಿಗಳು ಕಾಲೇಜಿನ ಅಭಿವೃದ್ಧಿಗೆ ಉತ್ತಮ ಕೊಡುಗೆಯನ್ನು ನೀಡಿದ್ದಾರೆ. ಇದು ಖಾಸಗಿ ಕಾಲೇಜುಗಳಿಗೆ ಕಡಿಮೆ ಇಲ್ಲದಂತೆ ಪ್ರಗತಿ ಸಾಧಿಸುತ್ತಿದೆ. ಇಂಜಿನಿಯರಿಂಗ್ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಕೌಶಲ್ಯ ಗಳಿಸಬೇಕು.

■ **ಡಾ.ಎಂ.ಸಿ.ಸುಧಾಕರ್**, ಸಚಿವ

ದಾವಣಗೆರೆಯಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು 75ನೇ ವರ್ಷ ಆಚರಿಸಿಕೊಳ್ಳುತ್ತಿರುವುದು ನಮ್ಮ ಜಿಲ್ಲೆಗೆ ಹೆಮ್ಮೆಯ ವಿಚಾರ. ಇಲ್ಲಿ ವ್ಯಾಸಂಗ ಮಾಡಿದವರು ಪ್ರಸ್ತುತ ಉನ್ನತ ಸ್ಥಾನ ಅಲಂಕರಿಸಿರುವುದು ಖುಷಿಯ ಸಂಗತಿ. ಹಳೇ ವಿದ್ಯಾರ್ಥಿಗಳ ಮಾಗದರ್ಶನದಲ್ಲಿ ಹೊಸ ವಿದ್ಯಾರ್ಥಿಗಳು ನಡೆಯಬೇಕು. ನೂತನ ತಂತ್ರಜ್ಞಾನ ಅಳವಡಿಸಿಕೊಂಡು ದೇಶವನ್ನು ಮುನ್ನಡೆಸಬೇಕು.

■ **ಎಸ್.ಎಸ್.ಮಲ್ಲಿಕಾರ್ಜುನ್**, ಸಚಿವ

ಭಾರತವು ವಿಶ್ವಗುರು ಆಗುವುದನ್ನು ತಪ್ಪಿಸಲು ಯಾರಿಂದಲೂ ಆಗದು

• **ದಾವಣಗೆರೆ:** ವಿದ್ಯಾರ್ಥಿ-ಯುವಜನರು ದೊಡ್ಡ ಕನಸುಗಳನ್ನು ಕಾಣುತ್ತಾ, ನಿರಂತರ ಕಲಿಕೆಯಲ್ಲಿ ತೊಡಗಿಸಿಕೊಂಡು, ತಮ್ಮ ಜ್ಞಾನವನ್ನು ಸಮಾಜದ ಹಿತಕ್ಕೆ ವಿನಿಯೋಗಿಸಿದಲ್ಲಿ ಭಾರತವು ವಿಶ್ವಗುರುವಾಗುವುದನ್ನು ಯಾರೂ ತಪ್ಪಿಸಲಾಗದು ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ನಗರದ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿಗೆ 75 ವರ್ಷ ತುಂಬಿದ ಹಿನ್ನೆಲೆಯಲ್ಲಿ ಶುಕ್ರವಾರ ಕಾಲೇಜಿನ ಆವರಣದಲ್ಲಿ ನಡೆದ ಅಮೃತ ಮಹೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ನಾವಿಂದು 2047ರ ವೇಳೆಗೆ ವಿಕಸಿತ ಭಾರತದ ಸಂಕಲ್ಪದೊಂದಿಗೆ ಮುನ್ನಡೆಯುತ್ತಿರುವ ಸಂದರ್ಭದಲ್ಲಿ ತಾಂತ್ರಿಕ ಶಿಕ್ಷಣದ ಪಾತ್ರವು ಮತ್ತಷ್ಟು ಮಹತ್ವ ಪಡೆದುಕೊಂಡಿದೆ. ಕೃತಕ ಬುದ್ಧಿಮತ್ತೆ, ಮಷಿನ್ ಲರ್ನಿಂಗ್, ಹಸಿರು ತಂತ್ರಜ್ಞಾನ, ಸೈಬರ್ ಸುರಕ್ಷೆ, ಸೆಮಿಕಂಡಕ್ಟರ್, ಡಿಜಿಟಲ್ ಇನ್ನೋವೇಷನ್ ನಂತಹ ಕ್ಷೇತ್ರಗಳಲ್ಲಿ ಭಾರತವು ವಿಶ್ವದ ನೇತೃತ್ವ ವಹಿಸಲು ಸಶಕ್ತವಾಗಿದೆ. ಇದಕ್ಕಾಗಿ ಯುವಜನರು ಹೊಸ ಚಿಂತನೆಗಳೊಂದಿಗೆ ಉದ್ಯಮಿಗಳಾಗುವ ಅವಶ್ಯಕತೆ ಇದೆ. ಪ್ರಧಾನಿ ನರೇಂದ್ರ ಮೋದಿಯವರು ಡಿಜಿಟಲ್ ಇಂಡಿಯಾ, ಮೇಕ್ ಇನ್ ಇಂಡಿಯಾ, ಸ್ಟಾರ್ಟಪ್ ಇಂಡಿಯಾ, ಆತ್ಮನಿರ್ಭರ ಭಾರತದಂತಹ ಅಭಿಯಾನಗಳ ಮೂಲಕ ಯುವಜನರಿಗೆ ಅಸಂಖ್ಯ ಅವಕಾಶಗಳನ್ನು ಕಲ್ಪಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಇಂಜಿನಿಯರಿಂಗ್ ಕಾಲೇಜುಗಳ ಪಾತ್ರ ಗಣನೀಯವಾಗಿದೆ ಎಂದರು.



ಯುವಜನರು ದೇಶದ ಅತಿದೊಡ್ಡ ಶಕ್ತಿ. ನಾವಿಂದು ಕೃತಕ ಬುದ್ಧಿಮತ್ತೆ, ಹಸಿರು ಶಕ್ತಿ, ಸೈಬರ್ ಸುರಕ್ಷಾ, ರೋಬೋಟಿಕ್ ಹಾಗೂ ನವಾಚಾರದ ಯುಗದಲ್ಲಿದ್ದೇವೆ. ಹೀಗಾಗಿ ವಿದ್ಯಾರ್ಥಿಗಳಲ್ಲಿ ನಾಯಕತ್ವ, ನೈತಿಕತೆ, ಸಾಮಾಜಿಕ ಬದ್ಧತೆಯ ಗುಣಗಳನ್ನು ಜಾಗೃತಗೊಳಿಸುವ ಶಿಕ್ಷಣ ವ್ಯವಸ್ಥೆ ರೂಪಿಸುವ ಅವಶ್ಯಕತೆ ಇದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಅಧಿಕ ವ್ಯಾವಹಾರಿಕ, ಬಹು ಆಯಾಮಗಳ, ಅನುಸಂಧಾನ ಆಧಾರಿತ ಶಿಕ್ಷಣ ವ್ಯವಸ್ಥೆ ರೂಪಿಸಲು ಪೂರಕವಾಗಿದೆ. ಯಾವುದೇ ದೇಶದ ಪ್ರಗತಿಯು ಅಲ್ಲಿನ ಶಿಕ್ಷಣ ಸಂಸ್ಥೆಗಳ ಗುಣಮಟ್ಟವನ್ನು ಅವಲಂಬಿಸಿರುತ್ತದೆ. ಇಂಜಿನಿಯರಿಂಗ್ ಕಾಲೇಜುಗಳು ತಾಂತ್ರಿಕ ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯ, ಸದಾಚಾರ, ಸಾಮಾಜಿಕ ಕಳಕಳಿ, ನಾಯಕತ್ವ ಗುಣಗಳನ್ನು ಕೂಡ ಬೆಳೆಸಬೇಕು ಎಂದು ಅವರು ಆಶಿಸಿದರು.

ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆಯಾಗಿ 75ನೇ ವರ್ಷ ಪೂರೈಸಿರುವುದು ರಾಷ್ಟ್ರ ನಿರ್ಮಾಣ, ತಾಂತ್ರಿಕ ಪ್ರಗತಿ, ಯುವಪ್ರತಿಭೆಯ ಸಬಲೀಕರಣದ ಅಮೃತ ಮಹೋತ್ಸವವಾಗಿದೆ. ಕರ್ನಾಟಕವು ಶಿಕ್ಷಣ ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿ ದೇಶದ ಅಗ್ರಗಣ್ಯ ರಾಜ್ಯವಾಗಿದೆ. ಬೆಂಗಳೂರು ಮಹಾನಗರವನ್ನು ದೇಶದ ಸಿಲಿಕಾನ್ ವ್ಯಾಲಿ ಎನ್ನಲಾಗುತ್ತದೆ. ಇಲ್ಲಿನ ಶ್ರೇಷ್ಠ ಮಟ್ಟದ ಶಿಕ್ಷಣ ಸಂಸ್ಥೆಗಳು ಹಾಗೂ ಪ್ರತಿಭಾವಂತ ಯುವಕರಿಗೆ ಇದರ ಶ್ರೇಯಸ್ಸು ಸಲ್ಲುತ್ತದೆ. ಯುಬಿಡಿಟಿ ಕಾಲೇಜು ಕಳೆದ 75 ವರ್ಷಗಳಿಂದ ಗೌರವಶಾಲಿ ಪರಂಪರೆಯನ್ನು ಮುನ್ನಡೆಸುತ್ತಿರುವುದು ಸಂತಸದ ಸಂಗತಿ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಯುಬಿಡಿಟಿ ಕಾಲೇಜು 7 ದಶಕಗಳ ಸುದೀರ್ಘ ಅವಧಿಯಲ್ಲಿ ದೇಶ, ಜಗತ್ತಿಗೆ ತಮ್ಮ ಪ್ರತಿಭೆಯನ್ನು ಧಾರೆ ಎರೆದಿರುವ ಸಾವಿರಾರು ತಂತ್ರಜ್ಞರನ್ನು ಕೊಡುಗೆಯಾಗಿ ನೀಡಿದೆ. ಮುಂದೆಯೂ ಕೂಡ ಈ ಕಾಲೇಜು ಉದ್ಯೋಗ ಮತ್ತು ಶಿಕ್ಷಣದ ನಡುವೆ ಉತ್ತಮ ಸಮನ್ವಯ ಸಾಧಿಸುವ ಮೂಲಕ ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಜಗತ್ತಿಗೆ ಸಜ್ಜುಗೊಳಿಸುತ್ತದೆ. ಜ್ಞಾನ, ಅನುಸಂಧಾನ ಹಾಗೂ ನವಾಚಾರ ಕ್ಷೇತ್ರದಲ್ಲಿ ಹೊಸ ಔನತ್ಯಕ್ಕೆ ತಲುಪುತ್ತದೆ, ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತನ್ನ ಮಹತ್ವಪೂರ್ಣ ಕೊಡುಗೆ ನೀಡುತ್ತದೆ ಎಂಬ ವಿಶ್ವಾಸವಿದೆ ಎಂದರು.

ಯುಬಿಡಿಟಿ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಬೆಳವಣಿಗೆಗೆ ಹಳೇ ವಿದ್ಯಾರ್ಥಿಗಳ ಕೊಡುಗೆ ಸಾಕಷ್ಟಿದೆ. ಈ ಕಾಲೇಜು ನಮ್ಮ ವ್ಯಾಪ್ತಿಗೆ ಬಂದ ಮೇಲೆ ಮತ್ತಷ್ಟು ಸೌಕರ್ಯ ಕಲ್ಪಿಸಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸೌಲಭ್ಯ ಕಲ್ಪಿಸಿಕೊಡಲಾಗುವುದು.

■ **ಪ್ರೊ.ಎಸ್.ವಿದ್ಯಾಶಂಕರ್**, ವಿಟಿಯು ಕುಲಪತಿ



ದಾವಣಗೆರೆ ಯುಬಿಡಿಟಿ ಕಾಲೇಜಿನ 75ನೇ ವರ್ಷದ ಸಂಭ್ರಮಾಚರಣೆ ಅಂಗವಾಗಿ ಅಮೃತ ಮಹೋತ್ಸವದ ಸ್ಮರಣ ಸಂಚಿಕೆ ಬಿಡುಗಡೆ ಗೊಳಿಸಲಾಯಿತು.

ರಂಗದಂಗಳದಲ್ಲಿ ತಿಂಗಳ ಪ್ರತಿಭೆ ಕಾರ್ಯಕ್ರಮ

• **ದಾವಣಗೆರೆ:** ರಾಜ್ಯ ವೃತ್ತಿ ರಂಗಭೂಮಿ ಕಲಾವಿದರ ಸಂಘದಿಂದ ರಂಗದಂಗಳದಲ್ಲಿ ತಿಂಗಳ ಪ್ರತಿಭೆ ಎಂಬ ವಿನೂತನ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ಮೇ 31ರಂದು ಸಂಜೆ 5 ಗಂಟೆಗೆ ನಗರದ ರೋಟರಿ ಬಾಲಭವನದಲ್ಲಿ ನಡೆಯಲಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಸಂಘದ ಮಾಜಿ ಅಧ್ಯಕ್ಷ ಎ.ಭದ್ರಪ್ಪ ಮಾತನಾಡಿ, ಸಮಾರಂಭದ ಉದ್ಘಾಟನೆಯನ್ನು ರಂಗಕರ್ಮಿ ಚಿಂದೋಡಿ ಚಂದ್ರಧರ ನೆರವೇರಿಸುವರು. ಸಂಘದ ಅಧ್ಯಕ್ಷ ಮಹೇಶ್ವರಪ್ಪ ದೊಡ್ಡಮನಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ, ನಿವೃತ್ತ ಬ್ಯಾಂಕ್ ನೌಕರ ಎ.ಕೊಟ್ರಪ್ಪ ಕಿತ್ತೂರು, ರಾಣೇಬೆನ್ನೂರಿನ ಹಿರಿಯ ವಕೀಲ ನಾಗರಾಜ್ ಕುಡುಪಲಿ, ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ಅಧ್ಯಕ್ಷ ಎನ್.ಎಸ್.ರಾಜು, ಹಿರಿಯ ಕಲಾವಿದ ಬಸವರಾಜ ಐರಣಿ ಪಾಲ್ಗೊಳ್ಳಲಿದ್ದಾರೆ ಎಂದರು.



ವೃತ್ತಿ ರಂಗಭೂಮಿ ಕಲಾವಿದರ ಸಂಘವು ಈಗಾಗಲೇ 25ನೇ ವರ್ಷದ ರಜತ ಮಹೋತ್ಸವವನ್ನು ಆಚರಿಸಿಕೊಂಡು, 30ನೇ ವರ್ಷದತ್ತ ಹೆಜ್ಜೆ ಹಾಕುತ್ತಿದೆ. ಈ ಸಂದರ್ಭದಲ್ಲಿ ಪ್ರತಿ ತಿಂಗಳು ರಂಗ ಚಟುವಟಿಕೆಗಳನ್ನು ನಡೆಸುವ ಉದ್ದೇಶದೊಂದಿಗೆ ರಂಗದಂಗಳದಲ್ಲಿ ತಿಂಗಳ ಪ್ರತಿಭೆ ಎಂಬ ವಿನೂತನ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಈ ತಿಂಗಳ ಪ್ರಥಮ ಪ್ರತಿಭೆಯಾಗಿ ವೃತ್ತಿ ರಂಗಭೂಮಿಯ ನಟ, ನಿರ್ದೇಶಕ, ರಂಗ ಸಂಘಟಕ, ನಾಟಕ ಕಂಪನಿ ಮಾಲೀಕ ರಾಜಣ್ಣ ಜೇವರ್ಗಿ ಅವರೊಂದಿಗೆ ಸಂದರ್ಶನ, ಸಂವಾದ, ಸನ್ಮಾನ ಆಯೋಜಿಸಲಾಗಿದೆ. ಇದರ ಜೊತೆಗೆ ಕಲಾವಿದರಿಂದ ರಂಗಗೀತೆ, ಜನಪದ ಗೀತೆ, ಭಾವಗೀತೆ ಹಾಗೂ ಹಳೆಯ ಚಿತ್ರಗೀತೆಗಳ ಭಾವ ಸಂಗಮ ಕಾರ್ಯಕ್ರಮ ಇರುತ್ತದೆ ಎಂದು ಅವರು ತಿಳಿಸಿದರು.

ಸಂಘದ ಮಹೇಶ್ವರಪ್ಪ ದೊಡ್ಡಮನಿ, ಕೆ.ಎಸ್.ಕೊಟ್ರೇಶ, ಜಿ.ನಾಗವೇಣಿ, ಭವಾನಿ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಜೂನ್ 28ರಂದು ಹೊನ್ನಾಳಿಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ

• **ಹೊನ್ನಾಳಿ:** ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುವ ದೃಷ್ಟಿಯಿಂದ ಎಸ್ಎಸ್ಎಲ್ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿವರ್ಷ ಪ್ರೇರಣದಾಯಕ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಂಡು ಬಂದಿದ್ದೇವೆ. ಈ ವರ್ಷವೂ ಶೇ 85 ಕ್ಕೂ ಹೆಚ್ಚು ಅಂಕ ಪಡೆದಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಜೂನ್ 28 ರಂದು ಹೊನ್ನಾಳಿ ಪಟ್ಟಣದ ಹಿರೇಕಲ್ಮಠ ಸಮುದಾಯ ಭವನದಲ್ಲಿ ಪ್ರತಿಭಾ ಪುರಸ್ಕಾರ ಹಮ್ಮಿಕೊಂಡಿದ್ದೇವೆ ಎಂದು ಸ್ವಾಭಿಮಾನಿ ಬಳಗ ಹಾಗೂ ಇನಸೈಟ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ಜಿ.ಬಿ.ವಿನಯಕುಮಾರ್ ತಿಳಿಸಿದರು.

ಶುಕ್ರವಾರ ಪ್ರತಿಭಾ ಪುರಸ್ಕಾರದ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಕಳೆದ ವರ್ಷ ಸುಮಾರು 400 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಿದ್ದೆವು. ಈ ಬಾರಿ ಹೊನ್ನಾಳಿ ಹಾಗೂ ನ್ಯಾಮತಿ ತಾಲೂಕಿನಿಂದ 600 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಆಗಮಿಸುವ ನಿರೀಕ್ಷೆ ಇದೆ. ಪ್ರತಿಯೊಬ್ಬ ವಿದ್ಯಾರ್ಥಿಗೂ 1000 ನಗದು ಬಹುಮಾನ, ಸ್ಮರಣಿಕೆ ನೀಡಿ ಸನ್ಮಾನ ಮಾಡಲಾಗುವುದು ಎಂದರು.

ಗ್ರಾಮೀಣ ಭಾಗದ ಮಕ್ಕಳಿಗೆ ಎಲ್ಲೂ ಸಿಗದ ಮಾಹಿತಿ ಹಾಗೂ ಮಾರ್ಗದರ್ಶನವನ್ನು ನಾವು ಕೊಡುತ್ತ ಬಂದಿದ್ದೇವೆ. ಎಸ್ಎಸ್ಎಲ್ಸಿ ಹಾಗೂ ಪಿಯುಸಿ ನಂತರ ಬಹುತೇಕ ವಿದ್ಯಾರ್ಥಿಗಳು ಸಿಇಟಿ ಹಾಗೂ ನೀಟ್ ಬರೆಯುತ್ತಾರೆ, ಆದರೆ



ಇಂಡಿಯನ್ ಇನ್ಸ್ಟ್ಯುಟ್ ಆಫ್ ಸೈನ್ಸ್, ಇಸ್ರೋ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸ್ಪೇಸ್ ಟೆಕ್ನಾಲಜಿ ಇಲ್ಲಿ ಗಗನಯಾನಿ ಅಥವಾ ಸ್ಪೇಸ್ ವಿಜ್ಞಾನಿಯಾಗಬೇಕು ಎಂದು ಆಸೆ ಹೊತ್ತಿರುವ ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾಹಿತಿ ಕೊರತೆ ಇರುತ್ತದೆ. ಅಂತಹ ವಿದ್ಯಾರ್ಥಿಗಳು ಅಲ್ಲಿ ದಾಖಲಾತಿ ಪಡೆಯಲು ಪ್ರವೇಶ ಪರೀಕ್ಷೆಯನ್ನು ಹೇಗೆ ಎದುರಿಸಬೇಕು ಎಂಬುದನ್ನು ನಾವು ತಿಳಿಸಿಕೊಡಲಿದ್ದೇವೆ ಎಂದು ಅವರು ವಿವರಿಸಿದರು.

ಫ್ಯಾಷನ್ ಟೆಕ್ನಾಲಜಿ ಎಂಬುದು ಬಹಳ ಬೇಡಿಕೆಯ ಕ್ಷೇತ್ರ. ಇಲ್ಲಿ ಕೋರ್ಸ್ ಮಾಡಿದರೆ ಜಾಬ್ ಗ್ಯಾರಂಟಿ, ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಅಂಡ್ ರಿಸರ್ಚ್ ಇಂತಹ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಬೇಕಾಗುವಂತ ಮಾಹಿತಿಯನ್ನು ನಾವು ಕೊಡುತ್ತಿದ್ದೇವೆ. ಹೀಗೆ ನಾವು ಪ್ರತಿ ವಿದ್ಯಾರ್ಥಿಗಳಿಗೆ ಉಚಿತ ಮಾಹಿತಿ ಕೊಡುತ್ತಿದ್ದೇವೆ. ಅಲ್ಲದೆ ಕೆಲ ಮಕ್ಕಳಿಗೂ ನಮ್ಮ ಸಂಸ್ಥೆಯಲ್ಲಿ ಅವಕಾಶವನ್ನೂ ನೀಡಿದ್ದೇವೆ ಎಂದು ತಿಳಿಸಿದರು.

ನಮ್ಮ ಉದ್ದೇಶ ಒಂದೆ, ಗ್ರಾಮೀಣ ಭಾಗದಲ್ಲಿ ಎಷ್ಟೋ ವಿದ್ಯಾರ್ಥಿಗಳು ಅತಿ ಹೆಚ್ಚು ಅಂಕ ಪಡೆದು ಯಾವ ಕಾಲೇಜಿಗೆ ಯಾವ ಕೋರ್ಸ್ ತೆಗೆದುಕೊಳ್ಳಬೇಕು ಎಂದು ಮಾಹಿತಿಯ ಕೊರತೆಯಿಂದ ಇದ್ದಾರೆ. ಅಂತಹ ಎಲ್ಲಾ ವಿದ್ಯಾರ್ಥಿಗಳಿಗೂ ನಾವು ಮಾಹಿತಿಯನ್ನು ನೀಡಿ, ಪ್ರವೇಶ ಪಡೆಯಲು ಬೇಕಾದ ಎಲ್ಲಾ ಸಲಹೆ ಹಾಗೂ ಮಾರ್ಗದರ್ಶನ ನೀಡುತ್ತೇವೆ ಎಂದರು.

ಇಂತಹ ದೊಡ್ಡ ಕೋರ್ಸ್‌ಗಳಿಗೆ ಹೋಗಬೇಕಾದರೆ ಹಣದ ಸಮಸ್ಯೆ ಉಂಟಾಗಬಹುದು ಎಂದು ಪೋಷಕರು ಭಾವಿಸಿ ಯಾವುದೋ ಒಂದು ಕೋರ್ಸಿಗೆ ಕಳುಹಿಸುತ್ತಾರೆ. ಆದರೆ ಸರ್ಕಾರ ದೊಡ್ಡ ದೊಡ್ಡ ಕೋರ್ಸಿನ ತರಬೇತಿ ಪಡೆಯಲು ಸ್ಕಾಲರ್ ಶಿಪ್ ನೀಡುತ್ತದೆ ಅದರ ಮಾಹಿತಿಯನ್ನು ಸಂಪೂರ್ಣವಾಗಿ ಪಡೆಯಬೇಕು ಎಂದರು.

ಶೇ 85 ಕ್ಕೂ ಹೆಚ್ಚು ಅಂಕ ಪಡೆದ ಅವಳಿ ತಾಲೂಕಿನ ಎಸ್ ಎಸ್ಎಲ್ಸಿ ಹಾಗೂ ಪಿಯುಸಿಯ ವಿದ್ಯಾರ್ಥಿಗಳು ಹಾಗೂ ಪಾಲಕರು ಸ್ವಾಭಿಮಾನಿ ಬಳಗದ ತಾಲೂಕು ಸಂಚಾಲಕ ರಾಜುಕಣಗಣಾರ್ 8073362266, ಪಂಕಜ ಅರುಣಕುಮಾರ್ 9886628687,ಮಂಜು 9902369894, ಹರೀಶ್ ನ್ಯಾಮತಿ 7353348080,ಶರತ್ 9110860350, ವಸಂತಕುಮಾರ್ 9071995637 ಈ ನಂಬರುಗಳಿಗೆ ಸಂಪರ್ಕ ಮಾಡಿ ಅಂಕಪಟ್ಟಿಯೊಂದಿಗೆ ವಿವರಗಳನ್ನು ಕಳುಹಿಸಬೇಕೆಂದು ಮನವಿ ಮಾಡಿದರು.

ಸಂತೋಷ್ ಲಾಡ್ ಫೌಂಡೇಶನ್-ಧಾರವಾಡ ವತಿಯಿಂದ ಆಯೋಜನೆ | ಕವಿತಾ ರೆಡ್ಡಿ ಮಾಹಿತಿ

ನಾಳೆ ಬುದ್ಧ, ಬಸವ ಮತ್ತು ಅಂಬೇಡ್ಕರ್ ಕುರಿತು ವಿಚಾರ ಸಂಕಿರಣ

• **ಚಿತ್ರದುರ್ಗ:** ಸಂತೋಷ್ ಲಾಡ್ ಫೌಂಡೇಶನ್-ಧಾರವಾಡ ವತಿಯಿಂದ ಮೇ 31ರ ಭಾನುವಾರ ಬೆಳಗ್ಗೆ 8.30 ಗಂಟೆಯಿಂದ ಸಂಜೆ 5.30 ವರೆಗೆ ಚಳ್ಳಕೆರೆ ರಸ್ತೆಯ ಎಸ್ .ಜೆ. ಕಲ್ಯಾಣ ಮಂಟಪದಲ್ಲಿ ಬುದ್ಧ, ಬಸವ ಮತ್ತು ಅಂಬೇಡ್ಕರ್ ಕುರಿತು ಒಂದು ದಿನದ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ ಎಂದು ಸಂತೋಷ್ ಲಾಡ್ ಫೌಂಡೇಶನ್‌ನ ಸಂಚಾಲಕಿ ಕವಿತಾ ರೆಡ್ಡಿ ತಿಳಿಸಿದ್ದಾರೆ.

ಚಿತ್ರದುರ್ಗ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುದೀರ್ಘವಾದ ಮಾನವ ಜನಾಂಗ ಮತ್ತು ಅದರ ಅಭಿವೃದ್ಧಿಯ ಇತಿಹಾಸದಲ್ಲಿ ಅನೇಕ ಸಮಾಜಗಳು ಮತ್ತು ಉಪ ಸಮಾಜಗಳು ಅನೇಕ ತರಹದ ತಾರತಮ್ಯಗಳಿಗೆ ಮತ್ತು ದಬ್ಬಾಳಿಕೆಗೆ ಒಳಗಾಗಿದ್ದು ಇತಿಹಾಸ ಹೇಳುತ್ತದೆ. ಅನೇಕ ಮಹಾಪುರುಷರು ಮತ್ತು ಮಹಾಮಹಿಳೆಯರು ಅಸಮಾನತೆಯ ವಿರುದ್ಧ ಸಿಡಿದೆದ್ದು ಜಾತಿ, ಮತ,



ಅಂತಸ್ತು, ಲಿಂಗ ಮತ್ತು ಇತರ ತಾರತಮ್ಯಗಳ ವಿರುದ್ಧ ಹೋರಾಡಿ ಹೊಸ ಸಮಾಜ ನಿರ್ಮಿಸಿ ಯಶಸ್ವಿಯಾಗಿ ಮುನ್ನಡಿಸಿ ಇತಿಹಾಸ ಕಂಡಿದೆ ಎಂದರು.

ಭಾರತದಲ್ಲಿ ಅಸಮಾನತೆ ಮತ್ತು ತಾರತಮ್ಯಗಳ ವಿರುದ್ಧ ಹೋರಾಡಿದ ಮಹಾ ನಾಯಕರಲ್ಲಿ ಮೂವರು ಪ್ರಮುಖವಾಗಿ ನಿಂತವರು ಭಗವಾನ್ ಬುದ್ಧ, ಬಸವೇಶ್ವರರು ಮತ್ತು ಬಿ.ಆರ್. ಅಂಬೇಡ್ಕರ್. ಅವರು ಬೇರೆ ಬೇರೆ ಕಾಲಘಟ್ಟದಲ್ಲಿ ಬೇರೆ ಬೇರೆ ಸಮಾಜ ಗಳಲ್ಲಿ ಹೋರಾಡಿದವರು. ಇಂದು ಭಾರತದಲ್ಲಿ ಮಾತ್ರವಲ್ಲ, ಜಗತ್ತಿನ ಇತರ ಭಾಗಗಳಲ್ಲಿ ಕೂಡ ಜಾತೀಯತೆ, ವರ್ಣಭೇದ, ಧಾರ್ಮಿಕ ಮೂಲಭೂತವಾದ, ಉಗ್ರವಾದ ಮತ್ತು ಎತ್ತು ಅತಿ ಹಿಂಸಾತ್ಮಕತೆಯು ಸಮಾಜದ ಸಾಮಾಜಿಕ ರಚನೆಯನ್ನು ಅಭದ್ರಗೊಳಿಸುತ್ತಿವೆ ಎಂದು ದೂರಿದರು.

ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ್ ಮಾತನಾಡಿ, ಇಂದಿನ ಯುವ ಪೀಳಿಗೆಗೆ ಬುದ್ಧ, ಬಸವ ಮತ್ತು ಅಂಬೇಡ್ಕರ್ ರವರ ಬಗ್ಗೆ ತಿಳಿಸುವುದರ ಅಗತ್ಯವಾಗಿದೆ, ಈಗಾಗಲೇ ಈ ರೀತಿಯಾದ ಮೂರು ಕಾರ್ಯಕ್ರಮಗಳನ್ನು ಮಾಡಲಾಗಿದೆ. ಇದು ನಾಲ್ಕನೇ ಕಾರ್ಯಕ್ರಮ. ಈ ಮೂರು ಜನ ಉತ್ತಮ ಸಂದೇಶಗಳನ್ನು ನಮಗೆ ನೀಡಿದ್ದಾರೆ. ಇವರು ಕೇವಲ ತಮ್ಮ ಸಮುದಾಯಕ್ಕೆ ಮಾತ್ರವಲ್ಲದೇ ಎಲ್ಲ ಸಮುದಾಯಗಳಿಗೂ ಉತ್ತಮ ಸಂದೇಶ ನೀಡಿದ್ದಾರೆ. ಇದನ್ನು ಎಲ್ಲರೂ ಸಹಾ ಬಳಕೆ ಮಾಡಬೇಕಿದೆ. ಬೇರೆ ಸಮುದಾಯದವರಿಗೂ ಸಹಾ ಇದರ ಬಗ್ಗೆ ಮನವರಿಕೆ ಮಾಡಿಕೊಡಬೇಕಿದೆ ಎಂದರು.

ಸಂತೋಷ್ ಲಾಡ್ ಫೌಂಡೇಶನ್‌ನ ಸ್ವಯಂಸೇವಕ ಡಾ. ಸಂದೀಪ್ ಮಾತನಾಡಿ, ಮೇ 31ರಂದು ನಡೆಯಲಿರುವ ವಿಚಾರ ಸಂಕಿರಣದಲ್ಲಿ ನಾಡಿನ ವಿವಿಧ ವಿದ್ವಾಂಸರು, ಸಾಹಿತಿಗಳು ಚಿಂತಕರು ಉಪನ್ಯಾಸ ನೀಡಲಿದ್ದಾರೆ. ಇದಲ್ಲದೇ ನಾಡಿನ ವಿವಿಧ ಮಠಾಧೀಶರು ಸಾನಿಧ್ಯ ವಹಿಸುವರು ಎಂದು ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಶಿವಾನಂದ ಶ್ರೀಗಳು, ಬಸವಮಹಾಂತ ಶ್ರೀಗಳು ಹಾಗೂ ಶಾಂತವೀರ ಶ್ರೀಗಳು ಭಾಗವಹಿಸಿದ್ದರು.

ಮುನಿಯಪ್ಪಗೆ ಡಿಸಿಎಂ ಸ್ಥಾನ ನೀಡಿ

• **ಶಿವಮೊಗ್ಗ:** ಅಪಾರ ರಾಜಕೀಯ ಅನುಭವ, ಆಡಳಿತ ಸಾಮರ್ಥ್ಯವುಳ್ಳ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವ ಕೆ.ಹೆಚ್. ಮುನಿಯಪ್ಪ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಹಾಗೂ ಕರ್ನಾಟಕ ಮಾದರ ಮಹಾಸಭಾ ಒತ್ತಾಯಿಸಿವೆ.

ಡಿಎಸ್ಎಸ್ ರಾಜ್ಯ ಸಂಚಾಲಕ ಎಂ. ಗುರುಮೂರ್ತಿ ಶುಕ್ರವಾರ ನಗರದಲ್ಲಿ ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಮಾದಿಗ ಸಮುದಾಯ ಕರ್ನಾಟಕದ ಅತೀ ದೊಡ್ಡ ಪರಿಶಿಷ್ಟ ಸಮುದಾಯಗಳಲ್ಲಿ ಒಂದಾಗಿದೆ. ಸುಮಾರು 50 ಲಕ್ಷ ಜನಸಂಖ್ಯೆ ಹೊಂದಿದೆ. ಈ ಸಮುದಾಯವು ಪರಿಶಿಷ್ಟ ಜಾತಿಗಳಲ್ಲಿಯೇ ಅತ್ಯಂತ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ಸಮುದಾಯವಾಗಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಮಾದಿಗ ಸಮುದಾಯವು ಕಾಂಗ್ರೆಸ್ ಪಕ್ಷವನ್ನು ಬಲವಾಗಿ ಬೆಂಬಲಿಸಿತ್ತು. ನಮ್ಮ ಸಮುದಾಯದ ಹಿರಿಯ ನಾಯಕ ಕೆ.ಹೆಚ್. ಮುನಿಯಪ್ಪ ರಾಜ್ಯ ರಾಜಕೀಯಕ್ಕೆ ಬಂದಿದ್ದರಿಂದ ಸಮುದಾಯದಲ್ಲಿ ಹೊಸ ವಿಶ್ವಾಸ ಮತ್ತು ಉತ್ಸಾಹ ಮೂಡಿತು. ಇದರಿಂದ ಲಕ್ಷಾಂತರ ಮಾದಿಗ ಮತ್ತು ಹಿಂದುಳಿದ ವರ್ಗದ ಮತದಾರರು ಕಾಂಗ್ರೆಸ್ ಪಕ್ಷ ಪರ ನಿಂತರು ಎಂದು ತಿಳಿಸಿದರು.

ಕೆ.ಹೆಚ್. ಮುನಿಯಪ್ಪ ಸುಮಾರು 5 ದಶಕಗಳಿಂದ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠೆ, ಶಿಸ್ತು ಹಾಗೂ ಬದ್ಧತೆಯಿಂದ ಸೇವೆ ಸಲ್ಲಿಸಿದ್ದಾರೆ. ಏಳು ಬಾರಿ ಲೋಕಸಭಾ ಸದಸ್ಯರಾಗಿ ಸುಮಾರು 3 ದಶಕಗಳ ಕಾಲ ಸಂಸತ್ತಿನಲ್ಲಿ ಸೇವೆ ಸಲ್ಲಿಸಿದ್ದಾರೆ. 10 ವರ್ಷಗಳ ಕಾಲ ಕೇಂದ್ರ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ರಾಜ್ಯದ ಅತ್ಯಂತ ಹಿರಿಯ ಮತ್ತು ಅರ್ಹ ನಾಯಕರಲ್ಲಿ ಒಬ್ಬರಾಗಿದ್ದಾರೆ ಎಂದರು.

ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ಉಪಮುಖ್ಯಮಂತ್ರಿ ಹುದ್ದೆಯನ್ನು ಬಲಗೈ ಸಮುದಾಯದ ನಾಯಕ ಡಾ.ಜಿ. ಪರಮೇಶ್ವರ್ ಅವರಿಗೆ ನೀಡಲಾಗಿತ್ತು. ಆದ್ದರಿಂದ ಎಡಗೈ ಮಾದಿಗ ಸಮುದಾಯಕ್ಕೂ ನ್ಯಾಯಯುತ ಪ್ರಾತಿನಿಧ್ಯ ನೀಡಬೇಕೆಂದು ಆಗ್ರಹಿಸಿದರು.

ಕೆ.ಹೆಚ್. ಮುನಿಯಪ್ಪ ಅವರಿಗೆ ಉಪಮುಖ್ಯಮಂತ್ರಿ ಹುದ್ದೆಯೊಂದಿಗೆ ಪ್ರಬಲ ಖಾತೆ ನೀಡಬೇಕು. ಮಾದಿಗ ಸಮುದಾಯದ ಇನ್ನೂ ಮೂರು ಶಾಸಕರಿಗೆ ಸಚಿವ ಸ್ಥಾನ ನೀಡುವ ಮೂಲಕ ಸಮುದಾಯಕ್ಕೆ ನ್ಯಾಯಸಮ್ಮತ ರಾಜಕೀಯ ಪ್ರಾತಿನಿಧ್ಯ ನೀಡಬೇಕೆಂದು ಒತ್ತಾಯಿಸಿದರು. ಜಗದೀಶ್ ಪುರಲೆ, ಶಿವಲಿಂಗಪ್ಪ, ಅಣ್ಣಪ್ಪ, ಶಿವಾಜಿ, ತೇಜ್‌ಕುಮಾರ್, ನೀಲಪ್ಪ ರಾಮನಗರ, ಬೊಮ್ಮನಕಟ್ಟೆ ಕೃಷ್ಣ, ಅತ್ತಿಗುಂದ ಕರಿಯಪ್ಪ, ಬಸವರಾಜ ಮಾರಳ್ಳಿ, ಅಣ್ಣಪ್ಪ ಇನ್ನಿತರರಿದ್ದರು.

ಕಿರುಸುದ್ದಿ

ಶ್ರೀಗಂಧ ಮರಗಳ ರಕ್ಷಣೆಗಾಗಿ ಪ್ರತಿಭಟನೆ

ಚಿಕ್ಕಮಗಳೂರು: ನಾಡಿನಲ್ಲಿ ಶ್ರೀಗಂಧ ಮರಗಳ ರಕ್ಷಣೆ ಮತ್ತು ನಗರವನ್ನು ಪ್ಲಾಸ್ಟಿಕ್ ಮುಕ್ತಗೊಳಿಸಬೇಕು ಎಂದು ಆಗ್ರಹಿಸಿ ಶುಕ್ರವಾರ ಜಿಲ್ಲಾ ಶ್ರೀ ಗಂಧ ಮತ್ತು ವನಕೃಷಿ ಬೆಳೆಗಾರರ ಸಂಘ ಮತ್ತು ವಿವಿಧ ಕನ್ನಡಪರ ಸಂಘಟನೆಗಳ ನೇತೃತ್ವದಲ್ಲಿ ನಗರದ ಬೇಲೂರು ರಸ್ತೆ ಸಮೀಪ ಮುಖಂಡರುಗಳು ಮೌನ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ವನಕೃಷಿ ಬೆಳೆಗಾರರ ಸಂಘದ ಅಧ್ಯಕ್ಷ ಡಾ. ಕೆ.ಸುಂದರಗೌಡ ಕರ್ನಾಟಕ ರಾಜ್ಯ ಶ್ರೀಗಂಧದ ಬೀಡಾಗಿತ್ತು. ಯಥೇಚ್ಛವಾಗಿ ಬೆಳೆಯುತ್ತಿದ್ದ ಶ್ರೀಗಂಧವು ಇಂದು ಮರವಿಲ್ಲದೇ ಬರಡು ಭೂಮಿಯಾಗುತ್ತಿದೆ. ರೈತರು ಜೀವನಕ್ಕೆ ಆಸರೆಯಾಗಿ ಬೆಳೆದಿರುವ ಶ್ರೀಗಂಧ ಮರವನ್ನು ಕಳ್ಳರು ಕದ್ದೊಯ್ಯುತ್ತಿದ್ದಾರೆ ಎಂದು ದೂರಿದರು.

ಕೃಷಿ ಚಟುವಟಿಕೆ ಜೊತೆಗೆ ರೈತರು ಉಪ ಬೆಳೆಯಾಗಿ ಶ್ರೀಗಂಧ ಬೆಳೆಯುತ್ತಿದ್ದರು. ಅನೇಕ ವರ್ಷಗಳಿಂದ ಪೋಷಿಸಿದ ಮರವನ್ನು ರಾತ್ರೋರಾತ್ರಿ ಕಡಿದು ಸಾಗಿಸಲಾಗುತ್ತಿದೆ. ಈ ಬಗ್ಗೆ ಜಿಲ್ಲಾಡಳಿತ ಮತ್ತು ಅರಣ್ಯ ಇಲಾಖೆ ರೈತರ ಬೆಳೆದಿರುವ ಬೆಳೆಗೆ ರಕ್ಷಣೆ ಒದಗಿಸದಿದ್ದಲ್ಲಿ ಮುಂದೆ ಶ್ರೀಗಂಧ ಮರವು ನಶಿಸುವ ಕಾಲ ಸನ್ನಿಹಿತವಾಗಲಿದೆ ಎಂದು ತಿಳಿಸಿದರು.

ವನಕೃಷಿ ಬೆಳೆಗಾರರ ಸಂಘದ ಗೌರವಾಧ್ಯಕ್ಷ ಶ್ರೀ ಗಂಧದ ಕೃಷ್ಣೇಗೌಡ ಮಾತನಾಡಿ ರೈತರು ಮತ್ತು ಬೆಳೆಗಾರರಿಗೆ ಬದುಕಿಗೆ ಆಸರೆಯಾದ ಶ್ರೀ ಗಂಧ ಬೆಳೆ ರಕ್ಷಣೆಗೆ ಅನೇಕ ವರ್ಷಗಳಿಂದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ವಹಿಸುತ್ತಿಲ್ಲ. ಪೂರ್ವಿಕರು ಬಳುವಳಿಯಾಗಿ ಉಳಿಸಿಕೊಟ್ಟ ಶ್ರೀ ಗಂಧ ಬೆಳೆ ಇಂದು ಖದೀಮರ ಪಾಲಾಗುತ್ತಿದೆ ಎಂದು ಹೇಳಿದರು.

ಕಾಡಿನ ವನ್ಯಮೃಗಗಳು ನಾಡಿನತ್ತ ಧಾವಿಸಲು ಅರಣ್ಯದಲ್ಲಿ ಆಹಾರದ ಕೊರತೆ ಹಾಗೂ ಕಾಡುಪ್ರಾಣಿಗಳ ಹತ್ಯೆಯೇ ನೇರ ಕಾರಣವಾಗಿದೆ. ಮಾನವ ದುರಾಸೆಗೆ ಪಕೃತಿಯನ್ನು ಹಾಳು ಮಾಡುವುದು ಸರಿಯಲ್ಲ. ಇತ್ತೀಚೆಗೆ ಕಾಡಾನೆಗಳ ಹಿಂಡು ನಗರ ಸಮೀಪದಲ್ಲೇ ಸಂಚರಿಸಿ ಜನಸಾಮಾನ್ಯರಲ್ಲಿ ಆತಂಕ ಮೂಡಿಸಿದ್ದು ಈ ಬಗ್ಗೆ ಅರಣ್ಯ ಇಲಾಖೆ ಎಚ್ಚರಿಕೆ ವಹಿಸಬೇಕು ಎಂದರು.

ಶ್ರೀಗಂಧ ಬೆಳೆಗಾರ ವಿಶುಕುಮಾರ್ ಮಾತನಾಡಿ ರೈತರು ಶ್ರೀ ಗಂಧ ಮರಗಳ ಮಾರಾಟದಿಂದ ಸರ್ಕಾರಕ್ಕೆ ಶೇ.55 ರಷ್ಟು ತೆರಿಗೆ ರೂಪದಲ್ಲಿ ನೀಡಲಾಗುವುದು. ಹೀಗಾಗಿ ಸರ್ಕಾರವು ಶ್ರೀಗಂಧ ಬೆಳೆಗೆ ಪ್ರೋತ್ಸಾಹ ನೀಡಬೇಕು. ಅಲ್ಲದೇ ಬೆಳೆಗಾರರಿಗೆ ಉಚಿತ ಗನ್ ತರಬೇತಿ, ತೋಟಗಳಿಗೆ ಸಿಸಿಟಿವಿ ಸೌಲಭ್ಯ ಕಲ್ಪಿಸಿಕೊಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕನ್ನಡಸೇನೆ ಆಟೋ ಘಟಕದ ಅಧ್ಯಕ್ಷ ಜಯಪ್ರಕಾಶ್, ವಕ್ತಾರ ಹುಣಸೇಮಕ್ಕಿ ಲಕ್ಷ್ಮಣ್, ಮುಖಂಡರಾದ ತರೀಕೆರೆ ಲಿಂಗರಾಜ್, ಮರಬೈಲು ಜಗದೀಶ್ ಉಪಸ್ಥಿತರಿದ್ದರು.



ಜು.11: ಕೃಷಿಕ ಸಮಾಜದ ಕಾರ್ಯಕಾರಿ ಚುನಾವಣೆ

ಚಿಕ್ಕಮಗಳೂರು: ಕಳಸ ತಾಲೂಕು ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ರಚಿಸಲು ಚುನಾವಣೆ ತಾಲೂಕು ಕೃಷಿಕ ಸಮಾಜಕ್ಕೆ 5 ವರ್ಷಗಳ ಅವಧಿಗೆ ತಾಲೂಕು ಕೃಷಿಕ ಸಮಾಜದ ಕಾರ್ಯಕಾರಿ ಚುನಾವಣೆ ಜುಲೈ 11 ರಂದು ಬೆಳಗ್ಗೆ 8ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಕಳಸದ ರೈತ ಸಂಪರ್ಕ ಕೇಂದ್ರದ ಕಚೇರಿಯಲ್ಲಿ ನಡೆಯಲಿದೆ.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಈಗಾಗಲೇ 110 ರೂ.ಗಳನ್ನು ಪಾವತಿಸಿ ಸದಸ್ಯರು ಹಾಗೂ ಪರಿಷ್ಕರಿಸಿದ ಹಣ 555 ರೂ.ಗಳನ್ನು ಪಾವತಿಸಿ ಸದಸ್ಯತ್ವ ಪಡೆದಿರುವವರು ಸದಸ್ಯರು ಮತ ಚಲಾಯಿಸಲು ಮತ್ತು ಚುನಾವಣೆಯಲ್ಲಿ ಭಾಗವಹಿಸಲು ಅರ್ಹರಾಗಿದ್ದಾರೆ. ಕೃಷಿಕ ಸಮಾಜಕ್ಕೆ ಯಾವುದೇ ಹಣಕಾಸಿನ ಅಥವಾ ವಸ್ತುಗಳ ಬಾಕಿ ಇಲ್ಲದವರಾಗಿರಬೇಕು. ಚುನಾವಣೆ ದಿನಾಂಕಕ್ಕೆ 25 ದಿನಗಳ ಮುಂಚಿತವಾಗಿ ಅರ್ಹ ಮತದಾರರ ಪಟ್ಟಿಯನ್ನು ಮೂಡಿಗೆರೆಯ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಕಳಸದ ರೈತ ಸಂಪರ್ಕ ಕೇಂದ್ರದ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ತಿದ್ದುಪಡಿಗಳು ಇದ್ದಲ್ಲಿ ಜೂನ್ 11ರ ಒಳಗೆ ತಲುಪುವಂತೆ ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಕೃಷಿ ಭವನ, 3ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು-560001 ಇಲ್ಲಿಗೆ ಕಳುಹಿಸುವುದು.

ಚುನಾವಣೆಯಲ್ಲಿ ಭಾಗವಹಿಸುವವರು ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ವಿತರಿಸಿದ ಯಾವುದಾದರೂ ಒಂದು ಗುರುತಿನ ಚೀಟಿ ಅಥವಾ ಕೃಷಿಕ ಸಮಾಜದ ಸದಸ್ಯತ್ವದ ಗುರುತಿನ ಚೀಟಿಯನ್ನು ಹೊಂದಿರಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೇ 31ರಂದು ಅಜ್ಜಂಪುರಕ್ಕೆ ಕೇಂದ್ರ ರೈಲ್ವೆ ಸಚಿವರು

ಚಿಕ್ಕಮಗಳೂರು: ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ಖಾತೆ ಸಚಿವ ವಿ.ಸೋಮಣ್ಣ ಅವರು ಮೇ 31ರಂದು ಬೆಳಗ್ಗೆ 11.30ಕ್ಕೆ ಅಜ್ಜಂಪುರಕ್ಕೆ ಆಗಮಿಸಲಿದ್ದು, ಅಜ್ಜಂಪುರದ ಲೆವೆಲ್ ಕ್ರಾಸಿಂಗ್ ಸಂಖ್ಯೆ 138ಕ್ಕೆ ಬದಲಾಗಿ ನಿರ್ಮಿಸಲಾಗುವ ರಸ್ತೆ ಮೇಲ್ಸೇತುವೆಗೆ ಶಿಲಾನ್ಯಾಸ ನೆರವೇರಿಸುವರು. ಅನಂತರ ಮಧ್ಯಾಹ್ನ 12.30ಕ್ಕೆ ಬೀರೂರಿನಲ್ಲಿ ಲೆವೆಲ್ ಕ್ರಾಸಿಂಗ್‌ಗೆ ಬದಲಾಗಿ ನಿರ್ಮಿಸಲಾಗುವ ಪಾದಚಾರಿ ಸುರಂಗಮಾರ್ಗ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸುವರು. ಈ ಅಭಿವೃದ್ಧಿ ಕಾಮಗಾರಿಗಳು ಸಾರ್ವಜನಿಕರ ಸುರಕ್ಷಿತ ಮತ್ತು ಸುಗಮ ಸಂಚಾರಕ್ಕೆ ಮಹತ್ವದ ಕೊಡುಗೆ ನೀಡಲಿವೆ.

ಮಧ್ಯಾಹ್ನ 1 ಗಂಟೆಗೆ ಬೀರೂರಿನಲ್ಲಿ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಚಿವರು, ಮಧ್ಯಾಹ್ನ 3 ಗಂಟೆಗೆ ಬೀರೂರಿನಿಂದ ಹೊರಟು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ರೈಲು ನಿಲ್ದಾಣಕ್ಕೆ ತೆರಳುವರು ಎಂದು ಮೈಸೂರು ರೈಲ್ವೆ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳು ತಿಳಿಸಿದ್ದಾರೆ.

ಚಿಕ್ಕಮಗಳೂರು:ವಿದ್ಯುತ್ ವ್ಯತ್ಯಯ

ಚಿಕ್ಕಮಗಳೂರು: ಮೆಸ್ಕಾಂ ಚಿಕ್ಕಮಗಳೂರು ನೋಡಲ್ ಕೇಂದ್ರ ವ್ಯಾಪ್ತಿಯ ಮಲ್ಲೇನಹಳ್ಳಿ(ದೇವಿಪುರ) ವಿ.ವಿ. ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣೆಯನ್ನು ಮೇ 30ರಂದು ಹಮ್ಮಿಕೊಂಡಿದ್ದು, ಹುಡ್ಕೋ, ಲಕ್ಯಾ, ಮಾರ್ಕೇಟ್ ರಸ್ತೆ, ಕೆಂಗೇನಹಳ್ಳಿ, ಉದ್ದೇಬೋರನಹಳ್ಳಿ, ಪೀಠ, ಮೂಗ್ತಿಹಳ್ಳಿ, ಜೋಳದಾಳು, ಜೈಲ್ ರಸ್ತೆ, ವಿಜಯಪುರ, ಆಜಾದ್ ಪಾರ್ಕ್, ತ್ರಿವಿಕ್ ಎಕ್ಸ್‌ಪ್ರೆಸ್, ಲಕ್ಷ್ಮೀಪುರ ಇಂಡಸ್ಟ್ರಿಯಲ್, ಕೆಂಪನಹಳ್ಳಿ ಟೌನ್, ಶಿರವಾಸೆ, ಹಿರೇಕೊಳಲೆ, ಮಲ್ಲೇನಹಳ್ಳಿ, ಹೊಸಪೇಟೆ, ಕಾಮೇನಹಳ್ಳಿ, ಬಿಂಡಿಗ, ದಾಸರಹಳ್ಳಿ ಮಾರ್ಗಗಳಿಗೆ ಅಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಮೇಲೆ ತಿಳಿಸಿದ ಪ್ರದೇಶ ಹಾಗೂ ಸುತ್ತಮುತ್ತಲಿನ ಭಾಗಗಳಿಗೆ ವಿದ್ಯುತ್ ಸರಬರಾಜು ನಿಲುಗಡೆಗೊಳಿಸಲಾಗುತ್ತದೆ. ಗ್ರಾಹಕರು, ಸಾರ್ವಜನಿಕರು ಸಹಕರಿಸುವಂತೆ ಮೆಸ್ಕಾಂ ನಗರ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಕೋರಿದ್ದಾರೆ.

ಮಂಥನ ಕಾರ್ಯಕ್ರಮ

ಚಿಕ್ಕಮಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ನಗರದ ಡಿ.ಎ.ಸಿ.ಜಿ. ಸರ್ಕಾರಿ ಪಾಲಿಟೆಕ್ನಿಕ್ ಸಹಯೋಗದಲ್ಲಿ ಯುಜಿಸಿಇಟಿ-2026 ಸೀಟು ಹಂಚಿಕೆ ಮಂಥನ ಕಾರ್ಯಕ್ರಮವನ್ನು ಮೇ 25 ರಿಂದ ಹಮ್ಮಿಕೊಂಡಿದ್ದು ಈ ಕಾರ್ಯಕ್ರಮವು ಮೇ 30ರವರೆಗೆ ನಡೆಯಲಿದೆ.

ಡಿ.ಎ.ಸಿ.ಜಿ. ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ನಡೆದ ಈ ಕಾರ್ಯಕ್ರಮವನ್ನು ಪಾಲಿಟೆಕ್ನಿಕ್‌ನ ಪ್ರಾಚಾರ್ಯ ಟಿ.ಆರ್.ಶ್ರೀಧರಮೂರ್ತಿ ಉದ್ಘಾಟಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಡಿ.ಎ.ಸಿ.ಜಿ. ಸರ್ಕಾರಿ ಪಾಲಿಟೆಕ್ನಿಕ್‌ನ ಆ.ಶ್ರೇ. ಉಪನ್ಯಾಸಕರಾದ ಅಶ್ವಿನಿ ಬಿ.ಎನ್., ವಿಜಯಪ್ರಕಾಶ್ ಆರ್.ಎಂ. ಹಾಗೂ ಶರ್ವಂತಿ ಎಸ್. ಇವರು ಕಾರ್ಯಕ್ರಮದಲ್ಲಿದ್ದರು. ಇವರು ವಿದ್ಯಾರ್ಥಿಗಳಿಗೆ ಕಾಲೇಜು ಆಯ್ಕೆ, ಸೀಟ್ ಮ್ಯಾಟ್ರಿಕ್ಸ್, ಪ್ರವೇಶ ಶುಲ್ಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಪ್ರವೇಶ ಪ್ರಕ್ರಿಯೆಗೆ ಇರುವ ಮಾನದಂಡಗಳ ಬಗ್ಗೆ ಸಂಪೂರ್ಣ ಉಪನ್ಯಾಸ ನೀಡುವರು.

ಸುತ್ತ, ಬೆಕ್ಕೋಡಿ ಸೇತುವೆ ಕಾಮಗಾರಿ ಸಂಸದರ ಪರಿಶೀಲನೆ

ಸುಸ್ಥಿರ ಸೇತುವೆಗೆ ಸೂಚನೆ

ಶಿವಮೊಗ್ಗ: ಸಾಗರ ತಾಲೂಕಿನ ಶರಾವತಿ ಹಿನ್ನೀರಿನ ಪ್ರದೇಶದಲ್ಲಿ ನಿರ್ಮಾಣ ಹಂತದಲ್ಲಿರುವ ಸುತ್ತ ಸೇತುವೆ ಮತ್ತು ಬೆಕ್ಕೋಡಿ ಸೇತುವೆ ಕಾಮಗಾರಿಯನ್ನು ಸಂಸದ ಬಿ.ವೈ. ರಾಘವೇಂದ್ರ ಅಧಿಕಾರಿಗಳ ಜೊತೆ ಶುಕ್ರವಾರ ಪರಿಶೀಲನೆ ನಡೆಸಿದರು.

ಸಂಪರ್ಕ ಕ್ರಾಂತಿಗೆ ಅತ್ಯಂತ ನಿರ್ಣಾಯಕವಾಗಿರುವ ರಾಷ್ಟ್ರೀಯ ಹೆದ್ದಾರಿ-766ಇ (ಫೆಎ766ಇ) ರಸ್ತೆ ಅಭಿವೃದ್ಧಿ ಯೋಜನೆಯಡಿ, ಶರಾವತಿ ಹಿನ್ನೀರಿನ ಪ್ರದೇಶದಲ್ಲಿ ತಲೆ ಎತ್ತಲಿರುವ ಎರಡು ಪ್ರಮುಖ ಬೃಹತ್ ಸೇತುವೆಗಳ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ (MoRTH) ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಒಟ್ಟು 13.832 ಕಿ.ಮೀ ಉದ್ದದ ಸಂಪೂರ್ಣ ಮರು-ಜೋಡಣೆ ಒಳಗೊಂಡಿರುವ ಕಾಮಗಾರಿ ಇದಾಗಿದೆ. ಈ ಬೃಹತ್ ಯೋಜನೆಯ ಒಟ್ಟು ಮಂಜೂರಾದ ವೆಚ್ಚ 313.56 ಕೋಟಿ ರೂ.ಗಳಾಗಿದೆ. ಮಲೆನಾಡಿನ ಸಾರಿಗೆ ವ್ಯವಸ್ಥೆಯನ್ನೇ ಬದಲಾಯಿಸಲಿರುವ ಈ ಯೋಜನೆಯ ಪ್ರಗತಿಯನ್ನು ವೇಗಗೊಳಿಸಲು ಇಲಾಖೆಯ ಮುಖ್ಯ ಇಂಜಿನಿಯರ್‌ಗಳು ಮತ್ತು ಗುತ್ತಿಗೆದಾರರಿಗೆ ಸಂಸದ ರಾಘವೇಂದ್ರ ಸೂಚಿಸಿದರು.

ಸೇತುವೆಗಳ ತಾಂತ್ರಿಕ ವಿವರ: ಸೇತುವೆ 1 (ಚೈನೇಜ್ 2+010 ಕಿ.ಮೀ.ನಿಂದ 3+550 ಕಿ.ಮೀ.): ಕಾಮಗಾರಿ ಸ್ಥಳ ವೀಕ್ಷಿಸಿ ಗುಣಮಟ್ಟ ಪರಿಶೀಲಿಸಲಾಯಿತು. ಈ ಸೇತುವೆಯು ಸಾರ್ವಜನಿಕರ ಅನುಕೂಲಕ್ಕಾಗಿ ಫುಟ್‌ಪಾತ್ ವ್ಯವಸ್ಥೆಯೊಂದಿಗೆ ಒಟ್ಟು 16.00 ಮೀಟರ್ ಅಗಲವನ್ನು (11.00 ಮೀಟರ್ ಕ್ಯಾರೇಜ್ ವೇ) ಹೊಂದಿರಲಿದೆ. ಸೇತುವೆ 2 (ಚೈನೇಜ್ 6+730 ಕಿ.ಮೀ.ನಿಂದ 7+430 ಕಿ.ಮೀ) : ಹಿನ್ನೀರಿನ ಮತ್ತೊಂದು ಪ್ರಮುಖ ಕೊಂಡಿಯಾಗಿರುವ ಈ ಭಾಗದ ಕಾಮಗಾರಿಯ ತಾಂತ್ರಿಕ ಸ್ಥಿತಿಗತಿಯನ್ನು ಪರಿಶೀಲಿಸಲಾಯಿತು. ಇದು ಸಹ ಫುಟ್‌ಪಾತ್ ಸೇರಿದಂತೆ ಒಟ್ಟು 16 ಮೀಟರ್ ಅಗಲದೊಂದಿಗೆ ನಿರ್ಮಾಣವಾಗುತ್ತಿದೆ ಎಂದು ತಿಳಿಸಿದರು.

ನಿಗದಿಪಡಿಸಲಾದ ಅವಧಿಯೊಳಗೆ ಸೇತುವೆ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕ ಸಂಚಾರಕ್ಕೆ ಮುಕ್ತಗೊಳಿಸಲು ವೇಗವನ್ನು ಹೆಚ್ಚಿಸುವುದು. ಹಿನ್ನೀರು ಪ್ರದೇಶವಾಗಿರುವುದರಿಂದ ಪರಿಸರ ಸಮತೋಲನ ಕಾಯ್ದುಕೊಂಡು, ಅತ್ಯುನ್ನತ ಗುಣಮಟ್ಟದ ಇಂಜಿನಿಯರಿಂಗ್ ಮಾನದಂಡಗಳೊಂದಿಗೆ ಸುಸ್ಥಿರ ಸೇತುವೆಗಳನ್ನು ನಿರ್ಮಿಸಬೇಕು ಎಂದು ಅಧಿಕಾರಿಗಳಿಗೆ ರಾಘವೇಂದ್ರ ಸೂಚಿಸಿದರು.



ಶಿವಮೊಗ್ಗ- ಶೃಂಗೇರಿ- ಮಂಗಳೂರು ರೈಲ್ವೆ ಮಾರ್ಗ ಶೀಘ್ರ ಟೆಂಡರ್: ಬಿವೈಆರ್

ಶಿವಮೊಗ್ಗ: ಕ್ಷೇತ್ರದ ದಶಕಗಳ ಕನಸಾಗಿದ್ದ ಶಿವಮೊಗ್ಗ - ಶೃಂಗೇರಿ - ಮಂಗಳೂರು ನೂತನ ರೈಲು ಮಾರ್ಗ ನಿರ್ಮಾಣದ ಮಹತ್ವಾಕಾಂಕ್ಷಿ ಯೋಜನೆಗೆ ಈಗ ಮತ್ತಷ್ಟು ವೇಗ ಸಿಕ್ಕಿದೆ. ಯೋಜನೆಗೆ ಸಂಬಂಧಿಸಿ ಅಂತಿಮ ಸ್ಥಳ ಸಮೀಕ್ಷೆ ಮತ್ತು ವಿಸ್ತೃತ ಯೋಜನಾ ವರದಿ ತಯಾರಿಕೆಗೆ ಅಧಿಕೃತ ಅನುಮೋದನೆ ದೊರೆತಿದ್ದು, ಶೀಘ್ರದಲ್ಲಿಯೇ ಟೆಂಡರ್ ಕರೆಯಲು ಇಲಾಖೆಯು ಸಂಪೂರ್ಣ ಸಿದ್ಧತೆ ನಡೆಸಿದೆ ಎಂದು ಸಂಸದ ಬಿ.ವೈ.ರಾಘವೇಂದ್ರ ತಿಳಿಸಿದ್ದಾರೆ.

ಈ ರೈಲ್ವೆ ಮಾರ್ಗವು ಮಲೆನಾಡು ಮತ್ತು ಕರಾವಳಿ ನಡುವೆ ವಾಣಿಜ್ಯ ವ್ಯವಹಾರ, ಕೃಷಿ ಉತ್ಪನ್ನಗಳ ಸುಲಭ ಸಾಗಣೆ ಹಾಗೂ ಪ್ರವಾಸೋದ್ಯಮದ ಅಭಿವೃದ್ಧಿಗೆ ಹೊಸ ಕ್ರಾಂತಿಯನ್ನೇ ಸೃಷ್ಟಿಸಲಿದೆ. ಮಲೆನಾಡಿನ ಭಾಗದ ಜನರ ದೀರ್ಘಕಾಲದ ಬೇಡಿಕೆಯನ್ನು ಈಡೇರಿಸಲು ಮತ್ತು ಈ ಬೃಹತ್ ಯೋಜನೆಗೆ ಅನುಮೋದನೆ ನೀಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ, ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಕ್ಷೇತ್ರದ ಸಮಸ್ತ ಜನತೆಯ ಪರವಾಗಿ ಹೃತ್ಪೂರ್ವಕ ಧನ್ಯವಾದ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಯೋಜನೆಯ ಮುಖ್ಯಾಂಶ

- **ಒಟ್ಟು ಉದ್ದ:** 332 ಕಿ.ಮೀ.
- **ಅಂದಾಜು ವೆಚ್ಚ:** 3,300 ಕೋಟಿ
- **ನೇರ ಲಾಭ ಪಡೆಯುವ ಜಿಲ್ಲೆಗಳು:** ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ದಾವಣಗೆರೆ, ಹಾವೇರಿ ಮತ್ತು ಚಿತ್ರದುರ್ಗ.
- **ಪ್ರಮುಖ ಸಂಪರ್ಕ ತಾಲೂಕುಗಳು:** ಹೊಸನಗರ, ತೀರ್ಥಹಳ್ಳಿ, ಶೃಂಗೇರಿ ಹಾಗೂ ಕಾರ್ಕಳ.

ಕಾರ್ಯನಿರತ ಪತ್ರಕರ್ತರ ಸಂಘ ಮನವಿ

ಸಂಚಾರಿ ಪೀಠ ಸ್ಥಾಪಿಸಲು ಸಾಗರ ಪತ್ರಕರ್ತರ ಒತ್ತಾಯ

ಸಾಗರ: ಶಿವಮೊಗ್ಗದಲ್ಲಿ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪಿಸುವಂತೆ ಶುಕ್ರವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಾಗರ ಶಾಖೆ ವತಿಯಿಂದ ಉಪವಿಭಾಗಾಧಿಕಾರಿಗಳ ಕಚೇರಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಶಿವಮೊಗ್ಗ ಜಿಲ್ಲೆ ಮಲೆನಾಡಿನ ಹೆಬ್ಬಾಗಿಲಾಗಿದ್ದು ಅತಿದೊಡ್ಡ ವಾಣಿಜ್ಯ ಕೇಂದ್ರವಾಗಿದೆ. ರಾಜ್ಯಕ್ಕೆ ಇಬ್ಬರು ಮುಖ್ಯಮಂತ್ರಿಗಳನ್ನು ಕೊಟ್ಟಿರುವ, ರಾಷ್ಟ್ರಕವಿ ಕುವೆಂಪು, ಜಿ.ಎಸ್. ಶಿವರುದ್ರಪ್ಪ ಸೇರಿ ಅನೇಕ ಖ್ಯಾತನಾಮ ಸಾಹಿತಿಗಳನ್ನು ರಂಗಭೂಮಿ ಕಲಾವಿದರನ್ನು ನಾಡಿಗೆ ನೀಡಿದ ಹೆಗ್ಗಳಿಕೆ ಶಿವಮೊಗ್ಗ ಜಿಲ್ಲೆಯದ್ದಾಗಿದೆ. ಇದರ ಜೊತೆಗೆ ದಲಿತ ಹೋರಾಟ, ಉಳುವವನೆ ಹೊಲದೊಡೆಯ ಭೂಹಕ್ಕಿನ ಹೋರಾಟಕ್ಕೆ ಕೇಂದ್ರಬಿಂದು ಶಿವಮೊಗ್ಗ ಜಿಲ್ಲೆ ಎನ್ನುವುದು ಹೆಮ್ಮೆಯ ಸಂಗತಿ ಎಂದು ಮನವಿಯಲ್ಲಿ ಹೇಳಲಾಗಿದೆ.

ಶಿವಮೊಗ್ಗ ಜಿಲ್ಲೆ ಎಲ್ಲಾ ಹಂತದಲ್ಲೂ ರಾಜ್ಯದಲ್ಲಿ ಮುಂಚೂಣಿ ಕಾಯ್ದುಕೊಂಡಿದ್ದು ಇದೀಗ ಹೈಕೋರ್ಟ್ ಸಂಚಾರಿ ಪೀಠಕ್ಕೂ ಅರ್ಹವಾದ ಭೌಗೋಳಿಕ ಪ್ರದೇಶವಾಗಿದೆ. ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ ಸೇರಿ ಐದು ಜಿಲ್ಲೆಗಳ ಜನರು ಶಿವಮೊಗ್ಗ ಮೂಲಕವೇ ರಾಜಧಾನಿಗೆ ತೆರಳುವ ಮಾರ್ಗ ಇದಾಗಿದೆ. ಇದರ ಜೊತೆಗೆ ರಾಷ್ಟ್ರೀಯ ಹೆದ್ದಾರಿ, ರೈಲ್ವೆ, ವಿಮಾನಯಾನ ಸೌಲಭ್ಯವೂ ಹೊಂದಿದೆ ಎಂದು ಮನವಿಯಲ್ಲಿ ತಿಳಿಸಿದೆ.

ಜಿಲ್ಲೆಯಲ್ಲಿ ಅತಿಹೆಚ್ಚು ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳಿದ್ದು ಹೆಸರಾಂತ ನ್ಯಾಯವಾದಿಗಳು ಶಿವಮೊಗ್ಗದಲ್ಲಿದ್ದಾರೆ. ಕಕ್ಷಿದಾರರ ಸಂಖ್ಯೆ ಸಹ ಶಿವಮೊಗ್ಗದಲ್ಲಿ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಐದು ಜಿಲ್ಲಾ ವ್ಯಾಪ್ತಿ ಒಳಗೊಂಡು ಶಿವಮೊಗ್ಗಕ್ಕೆ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪಿಸುವುದರಿಂದ ಕಕ್ಷಿದಾರರಿಗೆ ಆರ್ಥಿಕ ಹೊರೆ ಕಡಿಮೆ ಆಗುತ್ತದೆ. ನ್ಯಾಯವಾದಿಗಳು ಪ್ರಕರಣದ ವಾದ ಮಂಡಿಸಲು ಬೆಂಗಳೂರಿನಂತಹ ನಗರಗಳಿಗೆ ಹೋಗುವುದು ತಪ್ಪುತ್ತದೆ ಎಂದು ಮನವಿಯಲ್ಲಿ ಹೇಳಿದೆ.

ಈಗಾಗಲೇ ಶಿವಮೊಗ್ಗದಲ್ಲಿ ಹೈಕೋರ್ಟ್ ಸಂಚಾರಿ ಪೀಠ ಪ್ರಾರಂಭಿಸಬೇಕು ಎಂದು ಅನಿರ್ದಿಷ್ಟಾವಧಿ ಹೋರಾಟ ನಡೆಯುತ್ತಿದೆ. ಇದಕ್ಕೆ ಪಕ್ಷಾತೀತ ಬೆಂಬಲ ಸಹ ವ್ಯಕ್ತವಾಗಿದೆ. ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆ ಮಾಡಲು ಶಿವಮೊಗ್ಗ ಪ್ರಸಕ್ತ ಸ್ಥಳವಾಗಿದ್ದು, ರಾಜ್ಯ ಸರ್ಕಾರ ಇದಕ್ಕೆ ಪೂರಕವಾಗಿ ಅಗತ್ಯಕ್ರಮ ಕೈಗೊಳ್ಳಬೇಕು. ಹೈಕೋರ್ಟ್ ಸಂಚಾರಿ ಪೀಠ ಶಿವಮೊಗ್ಗದಲ್ಲಿಯೆ ಪ್ರಾರಂಭಿಸಬೇಕು ಎಂದು ನಮ್ಮ ಸಂಘವು ಮನವಿ ಮಾಡುತ್ತದೆ ಎಂದು ಮನವಿ ಮೂಲಕ ಒತ್ತಾಯಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಮಹೇಶ್ ಹೆಗಡೆ, ಪ್ರಧಾನ ಕಾರ್ಯದರ್ಶಿ ಎಂ.ಜಿ.ರಾಘವನ್, ಸಹಕಾರ್ಯದರ್ಶಿ ಲೋಕೇಶ ಕುಮಾರ್, ಖಜಾಂಚಿ ಗಿರೀಶ್ ರಾಯ್ಕರ್, ಜಿಲ್ಲಾ ಕಾರ್ಯದರ್ಶಿ ದೀಪಕ್ ಸಾಗರ್, ಜಿಲ್ಲಾ ವಿಶೇಷ ಆಹ್ವಾನಿತ ಜಿ.ನಾಗೇಶ್, ಪ್ರಮುಖರಾದ ಮಾ.ಸ.ನಂಜುಂಡಸ್ವಾಮಿ, ಶಿವಕುಮಾರ ಗೌಡ, ಇಮ್ರಾನ್ ಸಾಗರ್, ಜಮೀಲ್ ಸಾಗರ್, ನಾಗರಾಜ್, ಸತ್ಯನಾರಾಯಣ ಕೆ.ಬಿ., ನಾಗರಾಜ ಲಾಳಂಕೆ ವಸಂತ ಇನ್ನಿತರರು ಹಾಜರಿದ್ದರು.



ಆರ್‌ಎಸ್‌ಎಸ್ ದಕ್ಷಿಣ ಪ್ರಾಂತ ಸಹಕಾರ್ಯವಾಹ ಪಟ್ಟಾಭಿರಾಮ್

ಸುಬ್ಬಯ್ಯ ಸಂಸ್ಥೆಯಿಂದ ಜನಸೇವೆಯ ಕೆಲಸ

ರಿಪ್ಪನ್‌ಪೇಟೆ: ಯಾವುದೇ ಸರ್ಕಾರಗಳೂ ಮಾಡದ ಜನಸೇವೆಯ ಕೆಲಸವನ್ನು ಸುಬ್ಬಯ್ಯ ಸಮೂಹ ಸಂಸ್ಥೆಯವರು ಮಾಡುತ್ತಿದ್ದಾರೆ ಎಂದು ಆರ್ ಎಸ್‌ಎಸ್ ದಕ್ಷಿಣ ಪ್ರಾಂತ ಸಹಕಾರ್ಯವಾಹ ಪಟ್ಟಾಭಿರಾಮ್ ಮೆಚ್ಚುಗೆ ವ್ಯಕ್ತಪಡಿಸಿದರು.

ಇಲ್ಲಿಗೆ ಸಮೀಪದ ಹುಂಚದ ಬಿಲ್ಲೇಶ್ವರ ಗ್ರಾಮದಲ್ಲಿ ಸುಬ್ಬಯ್ಯ ಸಮೂಹ ಸಂಸ್ಥೆಗಳು ಹಾಗೂ ಸುಬ್ಬಯ್ಯ ಮೆಡಿಕಲ್ ಕಾಲೇಜ್ ಸಂಸ್ಥಾಪಕ ದಿವಂಗತ ಟಿ. ಸುಬ್ಬರಾಮಯ್ಯ ಅವರ ಸ್ಮರಣಾರ್ಥವಾಗಿ ಸಾರ್ವಜನಿಕರಿಗಾಗಿ ನಿರ್ಮಿಸಲಾದ ಉಚಿತ ಸುಸಜ್ಜಿತ ಆಸ್ಪತ್ರೆಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಸುಬ್ಬಯ್ಯ ಆಸ್ಪತ್ರೆ, ಮೆಡಿಕಲ್ ಕಾಲೇಜ್ ಹಾಗೂ ಮ್ಯಾಕ್ಸ್ ಆಸ್ಪತ್ರೆಗಳ ಮೂಲಕ ಗ್ರಾಮೀಣ ಭಾಗದ ಜನರಿಗೆ ಉತ್ತಮ ಆರೋಗ್ಯ ಸೇವೆ ದೊರೆಯುತ್ತಿದೆ. ಇಂತಹ ಸೇವಾ ಕಾರ್ಯಗಳು ಸಮಾಜಕ್ಕೆ ಮಾದರಿಯಾಗಿವೆ ಎಂದು ಹೇಳಿದರು.

ಹುಂಚದ ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿ ಶ್ರೀ ಡಾ. ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ವರ್ಯರು ಆಸ್ಪತ್ರೆಯನ್ನು ಲೋಕಾರ್ಪಣೆಗೊಳಿಸಿ ಆಶೀರ್ವಚನ ನೀಡಿದರು. ಮಠದಲ್ಲಿರುವ ಆಂಬುಲೆನ್ಸ್ ಸೇವೆಯನ್ನು ಆಸ್ಪತ್ರೆಗೆ ಉಚಿತವಾಗಿ ಬಳಸಿಕೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ತೀರ್ಥಹಳ್ಳಿ ಶಾಸಕ ಆರಗ ಜ್ಞಾನೇಂದ್ರ, ಮಾಜಿ ಶಾಸಕ ಕಿಮ್ಮನೆ ರತ್ನಾಕರ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಕಲಗೋಡು ರತ್ನಾಕರ್, ಮಹಾನಗರ ಪಾಲಿಕೆ ಮಾಜಿ ಸದಸ್ಯ ಐಡಿಯಲ್ ಗೋಪಿ ಹಾಗೂ ಸುಬ್ಬಯ್ಯ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ. ನಾಗೇಂದ್ರ ಇನ್ನು ಅನೇಕರು ಉಪಸ್ಥಿತರಿದ್ದರು.



ಹಾಸನ ವಿವಿ ಕುಲಸಚಿವರಾಗಿ ಕಡೂರಿನ ನಾಗರಾಜ್ ನೇಮಕ

ಕಡೂರು: ಶಿವಮೊಗ್ಗ ಸಹ್ಯಾದ್ರಿ ಕಾಲೇಜಿನಲ್ಲಿ ಫಿಸಿಕ್ಸ್ ವಿಷಯದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಕಡೂರು ತಾಲೂಕಿನ ನಾಗಗೊಂಡನಹಳ್ಳಿ ಗ್ರಾಮದ ಪ್ರೊಫೆಸರ್ ಎನ್.ನಾಗರಾಜ್ ಅವರನ್ನು ಹಾಸನ ವಿಶ್ವ ವಿದ್ಯಾಲಯದ ಕುಲಸಚಿವರನ್ನಾಗಿ ಸರ್ಕಾರ ನೇಮಕ ಮಾಡಿದೆ. ಇವರ ನೇಮಕಕ್ಕೆ ಕಡೂರು ತಾಲೂಕಿನ ಹಿಂದುಳಿದ ವರ್ಗಗಳೆಲ್ಲೊಂದಾದ ಉಪ್ಪಾರ ಸಮುದಾಯ ಹರ್ಷ ವ್ಯಕ್ತಪಡಿಸಿದೆ.

ಕಡೂರು ತಾಲೂಕಿನ ಉಪ್ಪಾರ ಸಮುದಾಯದವರೇ ಹೆಚ್ಚಾಗಿ ವಾಸ ಮಾಡುತ್ತಿರುವ ನಾಗಗೊಂಡನಹಳ್ಳಿ ಕುಗ್ರಾಮದಲ್ಲಿ ನೀಲಪ್ಪ ಗೌರಮ್ಮ ದಂಪತಿಗಳ ಮೊದಲನೇ ಪುತ್ರರಾಗಿ ಜನಿಸಿ ಪ್ರಾಥಮಿಕ ಶಿಕ್ಷಣವನ್ನು ತಾಲೂಕಿನ ಕಾನಗೊಂಡನಹಳ್ಳಿಯಲ್ಲಿ ವ್ಯಾಸಂಗವನ್ನು ಮುಗಿಸಿ ಪ್ರೌಢ ಶಿಕ್ಷಣವನ್ನು ಕಡೂರು ಪಟ್ಟಣದಲ್ಲಿ ಮಾಡಿ ಪಿಯು ಶಿಕ್ಷಣಕ್ಕೆ ಮಲ್ಲಾಡಿ ಹಳ್ಳಿಯಲ್ಲಿ ಸೇರಿದರು. ಪ್ರಥಮ ದರ್ಜೆ ಶಿಕ್ಷಣವನ್ನು ಮೈಸೂರಿನ ಯುವರಾಜ ಕಾಲೇಜಿನಲ್ಲಿ ಮುಗಿಸಿ ಎಂ ಎಸ್ ಸಿ ಸ್ನಾತಕೋತ್ತರ ಪದವಿಯನ್ನು ಮಾನಸಗಂಗೋತ್ರಿ ಮೈಸೂರಿನಲ್ಲಿ ವ್ಯಾಸಂಗ ಮಾಡಿ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರೇಟ್ ಪದವಿ ಪಡೆದಿರುತ್ತಾರೆ.

ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿ ಈಗ ಹಾಸನ ವಿಶ್ವವಿದ್ಯಾನಿಲಯದ ಕುಲ ಸಚಿವರನ್ನಾಗಿ ಉನ್ನತ ಶಿಕ್ಷಣ ಸಚಿವರು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನೇಮಕ ಮಾಡಿರುತ್ತಾರೆ. ಕಡೂರು ಶಾಸಕ ಕೆ. ಎಸ್. ಆನಂದ್‌ರವರ ಪ್ರಯತ್ನದ ಫಲವಾಗಿ ನಾಗರಾಜ್ ಅವರ ನೇಮಕವಾಗಿದೆ. ಇವರ ನೇಮಕಕ್ಕೆ ಚಿಕ್ಕಮಂಗಳೂರು ಜಿಲ್ಲಾ ಮತ್ತು ಕಡೂರು ತಾಲೂಕು ಉಪ್ಪಾರ ಸಮಾಜ ಅಭಿನಂದಿಸಿದೆ.

ಕುಲಸಚಿವರಾದ ನಾಗರಾಜ್ ಅವರಿಗೆ ಕಡೂರು ಶಾಸಕ ಕೆ.ಎಸ್. ಆನಂದ್ ಅವರು ಅಭಿನಂದಿಸಿ ಮಾತನಾಡಿ, ನಾಗರಾಜ್ ಅವರ ಕಠಿಣ ಪರಿಶ್ರಮದಿಂದಾಗಿ ಹಾಸನ ಕುಲ ಸಚಿವರಾಗಿ ನೇಮಕಗೊಂಡಿರುತ್ತಾರೆ. ಇವರು ಫಿಸಿಕ್ಸ್ ವಿಷಯದಲ್ಲಿ ನುರಿತ ಪ್ರಾಧ್ಯಾಪಕರಾಗಿ ಪಾಠ ಮಾಡುತ್ತಿದ್ದರು, ನಾನು ಸಹ ನಾಗರಾಜ್ ಅವರ ಶಿಷ್ಯ ಆಗಿದ್ದೆ ಎಂದರು.

ಅಭಿನಂದನೆಯನ್ನು ಸ್ವೀಕರಿಸಿದ ಹಾಸನ ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ನೇಮಕಗೊಂಡಿರುವ ನಾಗರಾಜ್ ಮಾತನಾಡಿದರು. ಚಿಕ್ಕಮಗಳೂರು ಜಿಲ್ಲಾ ಉಪ್ಪಾರ ಸಂಘದ ಜಿಲ್ಲಾಧ್ಯಕ್ಷರಾದ ಮಲ್ನಾಡ್ ನಾಗರಾಜ್, ಕಡೂರು ತಾಲೂಕು ಅಧ್ಯಕ್ಷ ಲೋಕೇಶ್ ಬಾಬು, ಮುಖಂಡರಾದ ಪಾತೇನಹಳ್ಳಿ ಚೌಡಪ್ಪ, ಗುಜ್ಜನಹಳ್ಳಿ ತಿಪ್ಪೇಶ್, ವೈ. ಎಂ. ತಿಪ್ಪೇಶ್, ಅನಂತ್, ಚಂದ್ರಶೇಖರ್, ಟಿ.ಆರ್. ಲಕ್ಕಪ್ಪ, ಪುರಸಭಾ ಮಾಜಿ ಸದಸ್ಯ ಮೋಹನ್ ಕುಮಾರ್, ಕೃಷಿಕ ಸಮಾಜದ ತಾಲೂಕ ಅಧ್ಯಕ್ಷ ರುದ್ರೇಗೌಡ, ಬೆಂಕಿ ಶೇಖರಪ್ಪ,ಕಡೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಆಸಂದಿ ಕಲ್ಲೇಶ್ ಹಾಗೂ ಅಕ್ಷರ ದಾಸೋಹ ಅಧಿಕಾರಿಗಳಾದ ದೇವರಾಜ್ ಮತ್ತಿತರ ಇದ್ದರು.



ಬಿಜೆಪಿಯ ಪ್ರಶಿಕ್ಷಣ ಶಿಬಿರದ ಮಹಾಭಿಯಾನದಲ್ಲಿ ಸಂಸದ ಬಿ.ವೈ. ರಾಘವೇಂದ್ರ ಅಭಿಪ್ರಾಯ

ಮಹನೀಯರ ತಪಸ್ಸಿನ ಫಲವಾಗಿ ಬಿಜೆಪಿ ಹೆಮ್ಮರವಾಗಿದೆ

ಸೊರಬ: ದೇಶದ ಏಕತೆಗಾಗಿ 1951ರಲ್ಲಿ ಜನಸಂಘ ಸ್ಥಾಪನೆಯಾದರೆ, 1980ರಲ್ಲಿ ಬಿಜೆಪಿ ಒಂದು ರಾಜಕೀಯ ಪಕ್ಷವಾಗಿ ಅಸ್ತಿತ್ವಕ್ಕೆ ಬಂದಿದೆ. ಅಂದಿನಿಂದ ಇಂದಿನವರೆಗೂ ಹಲವು ಮಹನೀಯರ ತಪಸ್ಸಿನ ಫಲವಾಗಿ ಬಿಜೆಪಿ ಹೆಮ್ಮರವಾಗಿ ಬೆಳೆದು ದೇಶಸೇವೆ ಮಾಡುತ್ತಿದೆ ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

ಗುರುವಾರ ಪಟ್ಟಣದ ಗಿರಿಜಾಶಂಕರ ಭವನದಲ್ಲಿ ಹಮ್ಮಿಕೊಂಡಿದ್ದ ಪ್ರಶಿಕ್ಷಣ ಶಿಬಿರದ ಮಹಾಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರಿಗೆ ರಾಜಕೀಯ ಮೀಸಲಾತಿ ಕಲ್ಪಿಸಲು ಬಿಜೆಪಿ ಸರ್ಕಾರ ಮಸೂದೆ ಮಂಡಿಸಲು ಮುಂದಾದರೆ ಕಾಂಗ್ರೆಸ್ ಮಿತ್ರಪಕ್ಷ ವಿರೋಧ ವ್ಯಕ್ತಪಡಿಸುತ್ತಿದೆ. ಪ್ರಧಾನ ನರೇಂದ್ರ ಮೋದಿ ಅವರು ಮಹಿಳೆಯರಿಗೆ ಶೇ.33ರಷ್ಟು ರಾಜಕೀಯ ಮೀಸಲಾತಿ ಕಲ್ಪಿಸಲು ಮರು ಹೋರಾಟ ಮುಂದುವರೆಸಿದ್ದಾರೆ ಎಂದರು.

ರಾಜಕೀಯ ಪಕ್ಷಕ್ಕೆ ಗೊತ್ತು.ಗುರಿ ಜೊತೆಗೆ ಇತಿಹಾಸದ ಪ್ರಜ್ಞೆ ಮುಖ್ಯ. ಈ ನಿಟ್ಟಿನಲ್ಲಿ ಪ್ರಶಿಕ್ಷಣವನ್ನು ಆಯೋಜಿಸಿದೆ. ದೇಶ ಮೊದಲು ನಂತರ ನಾವು ಎನ್ನುವ ಸಾಮಾಜಿಕ ಚಿಂತನೆ ಅವಶ್ಯಕ. ಇಂತಹ ಅವಶ್ಯಕ ಮಾಹಿತಿಗಳ ಬಗ್ಗೆ ಪ್ರಶಿಕ್ಷಣದಲ್ಲಿ ಕಾರ್ಯಕರ್ತರಿಗೆ ತಿಳಿಸಿಕೊಡಲಾಗುವುದು ಎಂದು ತಿಳಿಸಿದರು.

ಸೊರಬ ಕ್ಷೇತ್ರವು ಸಮಾಜವಾದಿ ನೆಲೆ. ಬಿಜೆಪಿ ಅಭ್ಯರ್ಥಿಗಳನ್ನು ಎರಡು ಬಾರಿ ಗೆಲ್ಲಿಸಿರುವುದು ಸಂತೋಷ. ತಾಲೂಕು ನಂಜುಂಡಪ್ಪ ವರದಿಯಲ್ಲಿ ಅತ್ಯಂತ ಹಿಂದುಳಿದ ಕ್ಷೇತ್ರವಾಗಿದೆ. ಇಂದು ಜವಾಬ್ದಾರಿ ಸ್ಥಾನದಲ್ಲಿರುವವರು ಅಭಿವೃದ್ಧಿ ಮರೆತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರ ಕಾರ್ಯಚಟುವಟಿಕೆ ಬಗ್ಗೆ ಟೀಕಿಸಿದರು.

ಬಿಜೆಪಿಯಲ್ಲಿ ಸಾಮಾನ್ಯ ಕಾರ್ಯಕರ್ತ ಆನ್‌ಲೈನ್‌ನಲ್ಲಿ 100 ಪ್ರವೇಶ ಶುಲ್ಕ ಪಾವತಿಸಿ ಪ್ರಶಿಕ್ಷಣದಲ್ಲಿ ಭಾಗವಹಿಸಿದ್ದೀರಿ. ಇಂತಹ ವಿಭಿನ್ನ ಸಂಘಟನೆ ಬಿಜೆಪಿ ಮಾತ್ರ ಹೊಂದಿದೆ. ಭಾರತದ ಅಖಂಡತೆಯನ್ನು ಮರುಸ್ಥಾಪನೆ ಮಾಡುವಂತಹ ಮಹತ್ವದ ಜವಾಬ್ದಾರಿಯನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಾಡುತ್ತಿದ್ದಾರೆ ಎಂದರು.

ದೇಶದ ಕಟ್ಟಕಡೆಯ ವ್ಯಕ್ತಿಗೂ ಸೂರು ಕಲ್ಪಿಸುವ ಜೊತೆಗೆ ತಳ ಸಮುದಾಯದ ಸಮಗ್ರ ಅಭಿವೃದ್ಧಿ ಕನಸು ಕಂಡು ಬಿಜೆಪಿ ಕೆಲಸ ಮಾಡುತ್ತಿದೆ. ಕಾರ್ಯಕರ್ತರು ಕೂಡ ತಮ್ಮ ವ್ಯಾಪ್ತಿಯಲ್ಲಿನ ಸಮಸ್ಯೆಗಳ ಬಗ್ಗೆ ಸ್ಪಂದಿಸಿ ಪರಿಹಾರ ಒದಗಿಸುವ ಜವಾಬ್ದಾರಿ ಹೊತ್ತು ನಿರಂತರ ಕೆಲಸ ಮಾಡುತ್ತಿರುವುದು ವಿಶೇಷ. ಈ ಚಿಂತನೆ ಬೇರೆ ಯಾವ ರಾಜಕೀಯ ಪಕ್ಷಕ್ಕೂ ಇಲ್ಲ ಎಂದು ಹೇಳಿದರು.

ಈಸಂದರ್ಭದಲ್ಲಿಬಿಜೆಪಿತಾಲ್ಲೂಕುಘಟಕದಅಧ್ಯಕ್ಷಪ್ರಕಾಶ್ ಅಗಸನಹಳ್ಳಿ , ತಾಲ್ಲೂಕು ಬಿಜೆಪಿ ಉಪಾಧ್ಯಕ್ಷ ಡಾ.ಜ್ಞಾನೇಶ್, ಮಡಿವಾಳ ಮಾಚಿದೇವ ನಿಗಮದ ಮಾಜಿ ರಾಜ್ಯಾಧ್ಯಕ್ಷ ರಾಜು ತಲ್ಲೂರು, ಮಹಿಳಾ ಘಟಕದ ಅಧ್ಯಕ್ಷೆ ಹೊಳಿಯಮ್ಮ, ಯುವ ಮೋರ್ಚಾ ಅಧ್ಯಕ್ಷ ರಾಜು ಮಾವಿನಬಳ್ಳಿಕೊಪ್ಪ, ತಾಲೂಕು ಉಪಾಧ್ಯಕ್ಷ ಬಸವನಗೌಡ ಮಲ್ಲಾಪುರ, ಮುಖಂಡರಾದ ಎ.ಎಲ್.ಅರವಿಂದ್, ಮಲ್ಲಿಕಾರ್ಜುನ ದ್ವಾರಳ್ಳಿ, ಗೀತಾ ಮಲ್ಲಿಕಾರ್ಜುನ, ಗುರುಪ್ರಸನ್ನಗೌಡ, ವಿಜಯೇಂದ್ರ ತಲಗಡ್ಡೆ, ಪ್ರಕಾಶ್ ತಲಕಾಲಕೊಪ್ಪ, ಶಿವಕುಮಾರ್ ಕಡಸೂರು, ಈಶ್ವರ ಚನ್ನಪಟ್ಟಣ, ದೇವೇಂದ್ರಪ್ಪ ಚನ್ನಾಪುರ, ಮಧುರಾಯ್ ಶೇಟ್, ಮಮತಾ ಅರವಿಂದ್, ಸುಧಾ, ಸುಧಾ ಶಿವಪ್ರಕಾಶ್ ,ಕಾರ್ಯದರ್ಶಿಗಳಾದ ಜಾನಕಪ್ಪ ಮತ್ತು ಸುರೇಶ್ ಉದ್ರಿ, ಆಶಾ ರಂಗನಾಥ, ಆನಂದ ಜನ್ನೆಹಕ್ಲು, ಅರುಣ್ ಕುಗ್ವೆ, ಆಶಿಕ್, ಮಂಜಪ್ಪ ಲಕ್ಕವಳ್ಳಿ, ಕೇಶವ ಪೇಟ್ಕರ್, ಸಂದೀಪ್ ಮಳಲಗದ್ದೆ, ಪರಶುರಾಮ ಹಾಲಗಳಲೆ, ಸುರೇಶ್ ಉದ್ರಿ ಇದ್ದರು.



> ಬಗರ್‌ಹುಕುಂ ಸಾಗುವಳಿದಾರ ರೈತರಿಗೂ ಕೂಡ ರಸಾಯನಿಕ ಗೊಬ್ಬರ ಸರಬುರಾಜು ಮಾಡುವ ಜೊತೆಗೆ ರೈತರಿಗೆ ನ್ಯಾಯಯುತವಾಗಿ ಬೆಳೆವಿಮೆ ಪರಿಹಾರ ಕೊಡಲು ರಾಜ್ಯ ಸರ್ಕಾರ ಗಮನ ಹರಿಸಬೇಕು.
>
> ■ ಬಿ.ವೈ. ರಾಘವೇಂದ್ರ, ಸಂಸದ

ಸಂಪಾದಕೀಯ

ಎಸ್‌ಐಆರ್: ವಿಪಕ್ಷ ಯತ್ನಕ್ಕೆ ಸೋಲು

ಚುನಾವಣಾ ಆಯೋಗವು ಕೈಗೊಂಡಿರುವ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಅಡ್ಡಗಾಲು ಹಾಕುವ ವಿರೋಧ ಪಕ್ಷಗಳ ಮತ್ತು ಕೆಲವು ಸ್ಥಾಪಿತ ಹಿತಾಸಕ್ತಿಗಳ ಪ್ರಯತ್ನಕ್ಕೆ ಸೋಲಾಗಿದೆ. ಎಸ್‌ಐಆರ್ ಸಿಂಧುತ್ವವನ್ನು ಎತ್ತಿಹಿಡಿದಿರುವ ಸರ್ವೋಚ್ಚ ನ್ಯಾಯಾಲಯವು ಇದು ಮುಕ್ತ ಮತ್ತು ನ್ಯಾಯೋಚಿತ ರೀತಿಯಲ್ಲಿ ಚುನಾವಣೆ ನಡೆಸಲು ನೆರವೀಯುತ್ತದೆ ಎಂದು ಅಭಿಪ್ರಾಯಪಟ್ಟಿದೆ. ಸಂವಿಧಾನದ 324ನೇ ವಿಧಿಯನ್ವಯ ಮತದಾರ ಪಟ್ಟಿಯನ್ನು ಪರಿಷ್ಕರಿಸುವ ಅಧಿಕಾರ ಚುನಾವಣಾ ಆಯೋಗಕ್ಕಿದೆ ಎಂಬುದನ್ನು ನ್ಯಾಯಾಲಯವು ಒಪ್ಪಿಕೊಂಡಿದೆ. ಮತದಾರ ಪಟ್ಟಿ ಪರಿಷ್ಕರಣೆಯ ಪ್ರಕ್ರಿಯೆ ನ್ಯಾಯೋಚಿತವಾಗಿದ್ದು, ಪ್ರತಿಯೊಬ್ಬ ಮತದಾರನಿಗೂ ತನ್ನ ಹೆಸರನ್ನು ಉಳಿಸಿಕೊಳ್ಳಲು ಸಾಕಷ್ಟು ಅವಕಾಶಗಳನ್ನು ಒದಗಿಸಲಾಗುತ್ತಿದೆ ಎಂದು ನ್ಯಾಯಾಲಯವು ಅಭಿಪ್ರಾಯಿಸಿದೆ. ಇದರಿಂದಾಗಿ ಬಿಹಾರ ಮತ್ತು ಪಶ್ಚಿಮ ಬಂಗಾಳಗಳಲ್ಲಿ ತಮ್ಮ ಸೋಲಿನ ನೆಪವನ್ನು ಎಸ್‌ಐಆರ್ ಮೇಲೆ ಜಾರಿಸಲು ಯತ್ನಿಸಿದ ಹಾಗೂ ದೇಶಾದ್ಯಂತ ಎಸ್‌ಐಆರ್ ಪ್ರಕ್ರಿಯೆಗೆ ತಡೆಯೊಡ್ಡುವ ವಿರೋಧ ಪಕ್ಷಗಳ ಪ್ರಯತ್ನಕ್ಕೆ ಹಿನ್ನಡೆಯಾಗಿದೆ. ಇನ್ನೀಗ ದೇಶಾದ್ಯಂತ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸಲು ಚುನಾವಣಾ ಆಯೋಗಕ್ಕೆ ಮುಕ್ತ ಹಸ್ತ ದೊರಕಿದಂತಾಗಿದೆ.



ಸರ್ವೋಚ್ಚ ನ್ಯಾಯಾಲಯವು ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ ಸಂಬಂಧಿಸಿದ ಹಲವಾರು ಅನುಮಾನಗಳನ್ನು ನಿವಾರಿಸುವ ಪ್ರಯತ್ನವನ್ನೂ ನಡೆಸಿದ್ದು, ಮತದಾರ ಪಟ್ಟಿಯಿಂದ ಹೆಸರು ತೆಗೆದು ಹಾಕಿದಾಕ್ಷಣ ದೇಶದ ಪೌರತ್ವ ರದ್ದಾಗುವುದಿಲ್ಲ. ಪೌರತ್ವ ರದ್ದುಪಡಿಸುವ ಪ್ರಕ್ರಿಯೆಗೂ ಇದಕ್ಕೂ ಸಂಬಂಧವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. ಕೆಲವು ಪಕ್ಷಗಳು ಮತದಾರ ಪಟ್ಟಿಯಿಂದ ಹೆಸರು ತೆಗೆಯುವ ಮೂಲಕ ಕೆಲವರಿಗೆ ಪೌರತ್ವವನ್ನೆ ನಿರಾಕರಿಸಲಾಗುತ್ತಿದೆ ಎಂಬುದಾಗಿ ಹುಯಿಲೆಬ್ಬಿಸಿದ್ದವು. ಅವರ ಈ ಹುಯಿಲಿನ ಹಿಂದೆ ಅಕ್ರಮ ಬಾಂಗ್ಲಾ ದೇಶಿಗಳನ್ನು ಉಳಿಸಿಕೊಳ್ಳುವ ಹುನ್ನಾರ ಅಡಗಿದೆ ಎಂಬುದು ರಹಸ್ಯವೇನಲ್ಲ.

ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನ ನಂತರವಾದರೂ ವಿರೋಧ ಪಕ್ಷಗಳು ಹಾಗೂ ಕೆಲವು ಸ್ಥಾಪಿತ ಹಿತಾಸಕ್ತಿಯ ವ್ಯಕ್ತಿಗಳು ಮತ್ತು ಸಂಘಸಂಸ್ಥೆಗಳು ಎಸ್‌ಐಆರ್‌ಗೆ ವಿರೋಧ ಸೂಚಿಸುವುದನ್ನು ನಿಲ್ಲಿಸಬೇಕು. ಮತದಾರ ಪಟ್ಟಿಯ ಶುದ್ಧೀಕರಣವೇ ಚುನಾವಣಾ ಆಯೋಗದ ಪ್ರಧಾನ ಉದ್ದೇಶ ಎಂಬುದನ್ನು ಅರಿಯಬೇಕು. ಮತದಾರ ಪಟ್ಟಿಯಿಂದ ನಕಲಿ ಹೆಸರುಗಳನ್ನು ಮತ್ತು ಮೃತಪಟ್ಟವರ ಹೆಸರುಗಳನ್ನು ತೆಗೆಯುವುದು, ಅಕ್ರಮವಾಗಿ ದೇಶದಲ್ಲಿರುವ ವಿದೇಶಿಯರ ಹೆಸರುಗಳನ್ನು ಕಿತ್ತುಹಾಕುವುದು, ಒಬ್ಬನೇ ವ್ಯಕ್ತಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಹೆಸರು ಹೊಂದಿರುವುದನ್ನು ಪರಿಶೀಲಿಸುವುದು ಮುಂತಾದ ಸದುದ್ದೇಶ ಎಸ್‌ಐಆರ್ ಹಿಂದಿದೆ ಎಂಬುದನ್ನು ಎಲ್ಲರೂ ಮನಗಾಣಬೇಕು.

ಅಂಗೈ ಬಣ್ಣ ಯಾವುದು?

ರೇಖೆಗಳು ಬದಲಾಗುತ್ತಿರುತ್ತವೆ! ನೇರವಾಗುವುದು, ದಪ್ಪವಾಗುವುದು, ತೆಳುವಾಗುವುದು, ಆಳವಾಗುವುದು ಇವೆಲ್ಲಾ ನಿಮ್ಮ ಜೊತೆಗೆ ಬದಲಾಗುವ ಕ್ರಿಯೆಗಳು.

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ನಿಮ್ಮ ಅಂಗೈನ ಬಣ್ಣ ಯಾವುದು ಎನ್ನುವುದರ ಮೇಲೆ ನಿಮ್ಮ ಕೀರ್ತಿ ಆರೋಗ್ಯ, ಆರ್ಥಿಕ ಸ್ಥಿತಿ, ವ್ಯಕ್ತಿತ್ವ ಎಲ್ಲಾ ನಿರ್ಧಾರವಾಗುತ್ತದೆ. ಗುಲಾಬಿ, ಕಪ್ಪು, ಬಿಳಿ, ನೀಲಿ, ಕೆಂಪು, ಹಸಿರು ಹೀಗೆ ನಿಮ್ಮ ಅಂಗೈ ಆಗಾಗ ಬಣ್ಣ ಬದಲಿಸುತ್ತಾ ಇರುತ್ತದೆ. ಡಾಕ್ಟರ್‌ಗಳು ಹಿಂದೆ ನಿಮ್ಮ ಕಣ್ಣಿನ ಒಳಭಾಗ, ನಾಲಿಗೆ, ನಾಡಿಗಳನ್ನು ಹಿಡಿದು ನೋಡಿ ರೋಗ ನಿರ್ಧಾರ ಮಾಡುತ್ತಿದ್ದರು. ಅದೇ ರೀತಿ ಹಸ್ತ ಸಾಮುದ್ರಿಕದಲ್ಲೂ ಸಹಾ ಅಂಗೈನ ಬಣ್ಣವನ್ನು ನೋಡಲಾಗುತ್ತದೆ. ಕೆಲವೊಮ್ಮೆ ಇಡೀ ಅಂಗೈ ಬೇರೆ ಬೇರೆ ಬಣ್ಣವಾಗಿರುವುದು ಸಹಾ ಉಂಟು. ಆಗ ಯಾವ ಭಾಗ ಯಾವ ಬಣ್ಣದಲ್ಲಿ ಇದೆ ಎನ್ನುವುದರ ಆಧಾರದ ಮೇಲೆ ಅವರ ಜೀವನದ ಆಗುಹೋಗುಗಳನ್ನು ತೀರ್ಮಾನಿಸಲಾಗುತ್ತದೆ. ಇಲ್ಲಿ ಮುಖ್ಯವಾಗಿ ಸೂರ್ಯ ಪರ್ವತದ ಬಣ್ಣವನ್ನು ಪರಿಗಣಿಸಿ ಸಂಗತಿಗಳನ್ನು ಚರ್ಚಿಸಲಾಗಿದೆ.

ಗುಲಾಬಿ ಬಣ್ಣ: ಸ್ವಾಭಾವಿಕವಾಗಿ ಆರೋಗ್ಯ ಚೆನ್ನಾಗಿದ್ದು, ರಕ್ತ ಸಂಚಾರ ಸರಿಯಾಗಿ ಇರುವವರಲ್ಲಿ ಅಂಗೈ ಬಣ್ಣ ಗುಲಾಬಿಯಾಗಿಯೇ ಇರುತ್ತದೆ. ವ್ಯಕ್ತಿಯ ಬಣ್ಣ ಕಪ್ಪಗೆ ಇದ್ದರೂ ಸಹಾ ಅಂಗೈ ಬಣ್ಣ ಗುಲಾಬಿ ಇರುವುದನ್ನು ನೀವು ನೋಡಬಹುದು. ಇವರು ಸಹಜವಾಗಿ ಎಲ್ಲರನ್ನೂ ಆಕರ್ಷಿಸುತ್ತಿರುತ್ತಾರೆ. ಕಲೆ ಮತ್ತು ಸಾಹಿತ್ಯದಲ್ಲಿ ಹೆಸರು ಮಾಡುತ್ತಾರೆ. ಹಣ ಇವರನ್ನು ಹುಡುಕಿಕೊಂಡು ಬರುತ್ತದೆ. ಸಮಾಜದಲ್ಲಿ ಗೌರವಕ್ಕೆ ಪಾತ್ರರಾಗುತ್ತಾರೆ. ಇದರ ಮೇಲೆ ಯಾವುದೇ ಸಕಾರಾತ್ಮಕ ಚಿಹ್ನೆಗಳು ಇಲ್ಲದಿದ್ದರೂ ಸಹಾ ಗುಲಾಬಿ ಬಣ್ಣವೇ ಇವರ ಭವಿಷ್ಯವನ್ನು ಉನ್ನತಗೊಳಿಸುತ್ತದೆ. ರಾಜಯೋಗ ಪ್ರಾಪ್ತಿ. ಸೂರ್ಯ ಪರ್ವತವು ಗುಲಾಬಿ ಇದ್ದರೆ ಸಾಕು, ಸೂರ್ಯ ರೇಖೆ ಇಲ್ಲದಿದ್ದರೂ ಸಮಾನವಾದ ಫಲಗಳು ಲಭ್ಯವಾಗುತ್ತದೆ.

ಅತಿಯಾದ ಕೆಂಪು ಬಣ್ಣ: ಇಂತಹವರಿಗೆ ರಕ್ತದೊತ್ತಡ ಜಾಸ್ತಿ. ಕೋಪ ಮೂಗಿನ ತುದಿಯಲ್ಲೇ ಇರುತ್ತದೆ. ಆತುರದಿಂದ ಅನಾಹುತಗಳನ್ನು ಆಗಾಗ ಮಾಡುತ್ತಿರುತ್ತಾರೆ. ಆದರೂ ಇವರಿಗೂ ಹೆಸರು ಮತ್ತು ಗೌರವ ಸಿಗುತ್ತದೆ. ಆದರೆ ಇವರ ಮಾತು ಎಲ್ಲವನ್ನೂ ಹಾಳು ಮಾಡುತ್ತದೆ. ಇವರು ಸುಳ್ಳನ್ನು ಸತ್ಯದ ತಲೆಯ ಮೇಲೆ ಹೊಡೆದಂತೆ ಹೇಳುತ್ತಾರೆ. ಕೊನೆಗೆ ಸಿಕ್ಕಿ ಬಿದ್ದಾಗಲೂ ಸಹಾ ಏನೂ ಆಗಿಯೇ ಇಲ್ಲ, ನಾನು ಹೇಳಿದ್ದು ಈಗಲೂ ಸತ್ಯ, ನೀವು ತಪ್ಪು ತಿಳಿದುಕೊಂಡಿರಿ ಎಂದು ವಾದಿಸುತ್ತಾರೆ. ಮತ್ತು ತಮ್ಮ ಸುಳ್ಳು ಹೇಳುವ ಗುಣವನ್ನು ಮುಂದುವರೆಸುತ್ತಾರೆ. ಸರ್ಕಾರಿ ಕೆಲಸಗಳಲ್ಲಿ ಇವರು ತೊಡಗಿಸಿಕೊಳ್ಳುತ್ತಾರೆ. ಯಶಸ್ಸು ಬರುತ್ತಿರುತ್ತದೆ ಮತ್ತು ಹಾಗೆಯೇ ಹೋಗುತ್ತಿರುತ್ತದೆ. ಹೃದಯ ಸಂಬಂಧಿ ಸಮಸ್ಯೆ ಇವರನ್ನು ಕಾಡುತ್ತದೆ.

ಹಳದಿ ಬಣ್ಣ: ಲಿವರ್ ಸಮಸ್ಯೆ ಇದ್ದಾಗ ನಿಮ್ಮ ಅಂಗೈ ಅಥವಾ ಸೂರ್ಯ ಪರ್ವತ ಹಳದಿ ಬಣ್ಣವಾಗುತ್ತದೆ. ಅಂದರೆ ಪಿತ್ತ ಜನಕಾಂಗದ ಸಮಸ್ಯೆ ಇದೆ ಎಂದರ್ಥ. ಅಥವಾ ನೀವು ಅತಿಯಾಗಿ ನಿದ್ದೆಗೆಟ್ಟಿದ್ದೀರಿ, ಸೊಂಟದ ನೋವು ತುಂಬಾ ಇದೆ ಎಂದೂ ಆಗಬಹುದು.

ನಿಮ್ಮ ಮೇಲೆ ಅಪವಾದ ಬೇಗ ಬರುತ್ತದೆ. ಕೀರ್ತಿ ನಿಮ್ಮ ಕನಸು ಮಾತ್ರ. ಸದಾ ಕಾಲ ನಿಮ್ಮನ್ನು ನಿರಾಸೆ ಕಾಡುತ್ತಿರುತ್ತದೆ. ಆತ್ಮ ವಿಶ್ವಾಸ ಕಡಿಮೆ. ಹಣವಂತೂ ಯಾವಾಗಲೂ ಇರುವುದೇ ಇಲ್ಲ. ನೀವು ನಿಮ್ಮ ಯಕೃತ್‌ನ್ನು ಸರಿಪಡಿಸಿಕೊಂಡರೆ ಎಲ್ಲವೂ ಸರಿಹೋಗುತ್ತದೆ.

ನೀಲಿ ಅಥವಾ ನೇರಳೆ ಬಣ್ಣ: ನಿಮ್ಮಲ್ಲಿ ರಕ್ತ ಸಂಚಾರ ಸರಿಯಾಗಿ ಆಗುತ್ತಿಲ್ಲ, ಹೃದಯದಲ್ಲಿ ಸಮಸ್ಯೆ ಇದೆ ಎಂದು ಅರ್ಥ. ಅಥವಾ ನೀವು ಶೀತ ಪ್ರವೃತ್ತಿಯವರು ಇರಬಹುದು. ಚಳಿ ಮತ್ತು ಮಳೆಗಾಲದಲ್ಲಿ ನಿಮ್ಮ ಅಂಗೈ ನೀಲಿಯಾಗಿ ಇರುತ್ತದೆ ಎಂದಾದರೆ ಹೃದಯದ ಸಮಸ್ಯೆ ಇರಬೇಕೆಂದಿಲ್ಲ.

ಸೂರ್ಯ ಪರ್ವತ ನೀಲಿಯಾಗಿದ್ದರಂತೂ ನಿಮ್ಮ ಅವಕಾಶಗಳೆಲ್ಲಾ ತಪ್ಪಿಯೇ ಹೋಗುತ್ತದೆ. ನಿಮ್ಮ ಶ್ರಮವನ್ನು ಯಾರೂ ಲೆಕ್ಕಿಸುವುದೇ ಇಲ್ಲ. ನೀವೂ ಸಹಾ ಯಾವುದೇ ಕೆಲಸಕ್ಕೂ ಕೈ ಹಾಕದೇ ಹಾಗೇ ಉಳಿಯುತ್ತೀರಿ. ಕೀರ್ತಿ ಬಂದರೂ ಅದು ನಿಮಗೆ ತೃಪ್ತಿಯನ್ನು ನೀಡುವುದಿಲ್ಲ.

ಕಪ್ಪು ಬಣ್ಣ/ ಕಪ್ಪು ಕಲೆಗಳು: ಅಂಗೈ ಕಪ್ಪಾಗಿದ್ದರೆ ನಿಮ್ಮ ಭವಿಷ್ಯ ಸಹಾ ಕತ್ತಲಲ್ಲೇ ಇರುತ್ತದೆ. ನೀವು ಅಪರಾಧಿಗಳು. ಒಂದೊಮ್ಮೆ ಅಪರಾಧಿಗಳು ಅಲ್ಲದಿದ್ದರೂ ನಿಮ್ಮ ಮಾನಹಾನಿ ನಿರಂತರವಾಗಿ ನಡೆಯುತ್ತಿರುತ್ತದೆ. ಸೂರ್ಯ ರೇಖೆ ಕಪ್ಪಾಗಿದ್ದರಂತೂ ವೃತ್ತಿಯಲ್ಲಿ ಸದಾ ಸಂಕಟ.

ಬಿಳಿ / ಬೂದು ಬಣ್ಣ: ನಿಮಗೆ ರಕ್ತ ಹೀನತೆಯಾಗಿದೆ, ಬೇಗ ಸರಿಪಡಿಸಿಕೊಳ್ಳಿ ಎಂದು ಅಂಗೈ ಹೇಳುತ್ತಿದೆ. ನಿಮ್ಮಲ್ಲಿ ಉತ್ಸಾಹದ ಹೀನತೆಯೂ ಆಗಿರುತ್ತದೆ. ನಿಮ್ಮಲ್ಲಿ ಪ್ರತಿಭೆ ಇದ್ದರೂ ನಿಮಗೆ ಯಾವುದೇ ಅವಕಾಶಗಳು ಸಿಗದೇ ಎಲೆ ಮರೆಯ ಕಾಯಂತೆ ಇರುತ್ತೀರಿ. ಒಂದೊಮ್ಮೆ ವೇದಿಕೆ ಸಿಗುತ್ತದೆ ಎಂದಾದಾಗ ಯಾರಾದರೂ ಅದನ್ನು ತಪ್ಪಿಸುತ್ತಾರೆ. ಆರೋಗ್ಯ ಆಗಾಗ ಬಿಗಡಾಯಿಸುವ ಕಾರಣ ಯಾವ ಕೆಲಸವೂ ಬೇಗನೆ ಆಗುವುದಿಲ್ಲ. ಯಶಸ್ಸಂತೂ ಸದಾ ಕೈ ತಪ್ಪಿ ಹೋಗುತ್ತಿರುತ್ತದೆ. ನೀವು ದೇವರಲ್ಲಿ ಬೇಡುವುದು ಒಂದೇ 'ಧೈರ್ಯ ಕೊಡು ದೇವರೇ' ಎಂದು ಮಾತ್ರ.

ನರಗಳು ನೇರಳೆ ಬಣ್ಣ: ಅತಿಯಾದ ಒತ್ತಡ, ನಿದ್ರಾ ಹೀನತೆ, ಯಾವಾಗ ಹೆಸರು ಗಳಿಸುತ್ತೇನೋ, ಯಾವಾಗ ಹಣ ಬರುತ್ತದೋ, ಬಂದಿದ್ದು ನಿಲ್ಲುತ್ತದೋ, ಇಲ್ಲವೋ ಎನ್ನುವ ಚಿಂತೆಯಿಂದಾಗಿ ನಿಮ್ಮ ಅಂಗೈಯಲ್ಲಿ ನರಗಳು ನೇರಳೆಯಾಗಿ ಕಾಣುತ್ತಿರುತ್ತವೆ.

ನಿಮ್ಮ ಆರೋಗ್ಯ ಸರಿಪಡಿಸಿಕೊಂಡರೆ ಬಣ್ಣದ ದೋಷಗಳ ನಿವಾರಣೆಯಾಗುತ್ತದೆ. ಸೂರ್ಯನಿಗೆ ಅರ್ಘ್ಯ ನೀಡುವುದು, ಸೂರ್ಯ ನಮಸ್ಕಾರ ಮಾಡುವುದು, ಬೆಳಗಿನ ಝಾವವೇ ಎದ್ದು ಸ್ನಾನ ಮಾಡಿ ಪೂಜೆ ಮಾಡುವುದು, ಬೆಳಗಿನ ವಾಕಿಂಗ್, ಮುಂಜಾನೆ ದಿನಾಲೂ ಹೂವುಗಳನ್ನು ಕೊಯ್ದು ಮಾಲೆ ಮಾಡುವುದು. ಹೀಗೆ ಸೂರ್ಯನನ್ನು ಸೇವಿಸುವ ಕೆಲಸಗಳನ್ನು ಮಾಡಬೇಕು.

ಅಲೆಯ ರೇಖೆ: ಸೂರ್ಯ ರೇಖೆಯು ಅಡ್ಡಾದಿಡ್ಡಿಯಾಗಿ ಹಾವು ಹರಿದಂತೆ ಓರೆಕೋರೆಯಾಗಿ ಇದ್ದರೆ, ಅದೆಂದೂ ಶುಭ ಲಕ್ಷಣವಲ್ಲ. ಏರಿಳಿತ ಸಾಮಾನ್ಯ, ಹಣ ಕೈಗೆ ಬರುತ್ತಿದ್ದಂತೆ ಹೋಗುತ್ತದೆ. ಇಂದು ಅರಸ ನಾಳೆ ಆಳು ಎನ್ನುವ ಅನಿಶ್ಚಿತತೆ ಕಾಡುತ್ತದೆ. ಸ್ಥಿರತೆಯಂತೂ ದೂರದ ಮಾತು

ನಿಮ್ಮ ಮನಸ್ಸು ಯಾವಾಗಲು ಚಂಚಲವಾಗಿಯೇ ಇರುತ್ತದೆ. ಒಮ್ಮೆ ಕಲೆ, ಇನ್ನೊಮ್ಮೆ ವ್ಯಾಪಾರ ಮಾಡುತ್ತೇನೆ ಎನ್ನುವುದು, ಮತ್ತೊಮ್ಮೆ ಸರ್ಕಾರಿ ಕೆಲಸಕ್ಕೆ ಟ್ರೈ ಮಾಡುತ್ತೇನೆ ಎನ್ನುವುದು. ಯಾವುದೇ ಕ್ಷೇತ್ರದಲ್ಲಿ ಇಂತಹವರು ಹೆಚ್ಚು ಕಾಲ ಇರುವುದಿಲ್ಲ. ಅಲ್ಲಲ್ಲಿ ಅಂಕುಡೊಂಕಾಗಿದ್ದರೆ, ಗುರಿ ಮುಟ್ಟುತ್ತೀರಿ. ಆದರೆ ಅಡ್ಡಿ ತಪ್ಪದು. ಅದೇ ತುಂಬಾ ಅಡ್ಡಡ್ಡ ಸರಪಳಿಯಂತೆ ಇದ್ದರೆ, ಜೀವನಪೂರ್ತಿ ಒಂದಲ್ಲಾ ಒಂದು ಹೋರಾಟ ನಿಶ್ಚಿತ. ಒಂದು ಸಮಸ್ಯೆ ಮುಗಿಯಿತೋ ಇನ್ನೊಂದು ಬರಲು ಸಿದ್ಧವಾಗಿರುತ್ತದೆ.

ರೇಖೆಗಳು ಬದಲಾಗುತ್ತಿರುತ್ತವೆ! ನೇರವಾಗುವುದು, ದಪ್ಪವಾಗುವುದು, ತೆಳುವಾಗುವುದು, ಆಳವಾಗುವುದು ಇವೆಲ್ಲಾ ನಿಮ್ಮ ಜೊತೆಗೆ ಬದಲಾಗುವ ಕ್ರಿಯೆಗಳು. ಸ್ವಂತ ಅನುಭವಗಳು ನಿಮ್ಮನ್ನು ಮಾಗುವಂತೆ ಮಾಡುತ್ತದೆ. ಅದೇ ಅಲೆಯ ರೇಖೆಯ ಅಕ್ಕಪಕ್ಕದಲ್ಲಿ ಸಮಾನಾಂತರ ರೇಖೆಗಳು ಇದ್ದರೆ, ನಿಮಗೆ ಗುರುಗಳ ಅಥವಾ ಗುರುಗಳಂತ ಸ್ನೇಹಿತರ ಸಹಾಯ ಸಿಗುತ್ತದೆ. ಚೌಕವು ಅಲೆಗಳ ನಡುವೆ ಇದ್ದರೆ, ದೊಡ್ಡ ನಷ್ಟದಿಂದ ಪಾರಾದ ಹಾಗೇ.

ನೀವು ಯಾವುದೇ ಕೆಲಸ ಮಾಡುವಾಗ ಮೊದಲೇ ಸಂಕಲ್ಪ ಮಾಡಬೇಕು. ನಿಮ್ಮ ಇಚ್ಛೆ ಯಾವುದು ಎನ್ನುವುದು ತಿಳಿಸುವುದು ಸೂಕ್ತ. ಉಪ್ಪು ಖಾರಗಳನ್ನು ವಾರದಲ್ಲಿ ಯಾವುದಾದರೂ ಒಂದು ದಿನ ಮಾತ್ರ ಸೇರಿಸಬೇಕು. ಸೂರ್ಯ ನಮಸ್ಕಾರ ಮತ್ತು ಪ್ರಾಣಾಯಾಮ ಮಾಡಲೇಬೇಕು. ಮಾಣಿಕ್ಯವನ್ನು ಧರಿಸಲೇ ಬೇಡಿ. ಜಾತಕ ಮತ್ತು ಬಲ ಅಂಗೈಯನ್ನು ನೋಡಿರಿ. ನೆನಪಿಡಿ, ಯಾವಾಗಲೂ ರೇಖೆಗಳು ಬದಲಾಗುತ್ತಿರುತ್ತವೆ. ಹೃದಯ ರೇಖೆ ಮತ್ತು ಶಿರೋ ರೇಖೆಗಳು ಬಲವಾಗಿದ್ದರೆ, ಬುದ್ಧಿಯಿಂದ ಅಸ್ಥಿರತೆಯನ್ನು ತಡೆಯಬಹುದು.

ಸೂರ್ಯ ರೇಖೆಯ ಮೇಲೆ ಗುಣಿಸು ಗುರುತು: ಇದು ಅಶುಭ ಸಂಕೇತ, ಸೂರ್ಯ ರೇಖೆಯ ಮೇಲೆ ಅಡ್ಡ ಗುರುತು ಅಥವಾ ಗುಣಿಸುವ ಚಿಹ್ನೆಯು ನಿಮ್ಮ ಯಶಸ್ಸು ಯಾವಾಗ ಡಮಾರ್ ಎಂದು ಬೀಳುವುದನ್ನು ತೋರಿಸುತ್ತದೆ. ಕೆಲಸ ಅರ್ಧಕ್ಕೆ ನಿಂತು ಹೋಗುವುದು, ಪ್ರಾಜೆಕ್ಟ್ ಕ್ಯಾನ್ಸಲ್ ಆಗುವುದು, ಉದ್ಯೋಗದಿಂದ ಹೊರಬರಬಹುದು. ಹಠಾತ್ ತಡೆ, ಕೋರ್ಟ್ ಕಚೇರಿ ಅಲೆದಾಟ. ಪೊಲೀಸ್ ಕೇಸ್, ಅಪವಾದ, ಮೀಡಿಯಾದಲ್ಲಿ ಕೆಟ್ಟ ಸುದ್ದಿ. ಜೀವನ ಪೂರ್ತಿ ಕೊರಗು ನಿಮ್ಮದು. ಅಂದರೆ ನೀವು ಯಾವುದಾದರೂ ಅನಾರೋಗ್ಯಕ್ಕೆ ತುತ್ತಾಗಿ ಹಾಸಿಗೆಯ ಮೇಲೆ ಬಹುಕಾಲ ಇರುವಂತಾಗುವುದು. ದೈಹಿಕವಾದ ಅಪಾಯಗಳು, ವೃತ್ತಿಗೆ ಸಮಸ್ಯೆ ಹೀಗೆ ಇವೆ. ಪರಿಹಾರ ಎಂದರೆ, ಪಾಲುದಾರಿಕೆ ಮಾಡಿಕೊಳ್ಳುವಾಗ ಎಚ್ಚರದಿಂದ ಇರಿ. ಗುಟ್ಟಾಗಿ ಪೋಲೀಸ್ ಕೇಸ್ ಆಗಬಹುದು. ಯಾವಾಗಲೂ ಸಾಮಾನ್ಯವಾದದ್ದು ನಿಮಗೆ ಮಾತ್ರ ಕಷ್ಟಕರ ಎನ್ನುತ್ತದೆ. ಒಟ್ಟಾರೆ ನೀವು ಸದಾ ಅಲೆಯುತ್ತಾ ಇರುತ್ತೀರಿ. ◈

ಮಜ್ಜಿಗೆಯಿಂದ ಹಾಲು ರೂಪಾಂತರ

ಅಣುರಪ್ಯಸತಾಂ ಸಂಗಃ ಸದ್ಗುಣಂ ಹಂತಿ ವಿಸ್ತೃತಮ್ ।
ಗುಣರೂಪಾಂತರಂ ಯಾನಿ ತಕ್ರಯೋಗಾದ್ ಯಥಾ ಪಯಃ ॥

-ಸುಭಾಷಿತ ರತ್ನಭಾಂಡಾಗಾರ

ಮಜ್ಜಿಗೆಯ ಸಹಯೋಗದಿಂದ ಹಾಲು ರೂಪಾಂತರ ಹೊಂದುವಂತೆ ಅಸತ್ಪುರುಷರ ಸಂಗವು ಅಣುವಿನಷ್ಟಾದರೂ ಸಾಕು, ಅಪಾರವಾದ ಸದ್ಗುಣಗಳನ್ನು ನಾಶಪಡಿಸುತ್ತದೆ – ಎಂಬುದು ಶ್ಲೋಕಾರ್ಥ.

ನಮ್ಮಲ್ಲಿ 'ಸಹವಾಸ ದೋಷ' ಎಂಬ ನುಡಿಗಟ್ಟಿದೆ. ಇದರ ಅರ್ಥ ಕೆಟ್ಟವರ ಸಹವಾಸ, ಗೆಳೆತನ ಮಾಡಿದರೆ, ಸಂಬಂಧ ಬೆಳೆಸಿದರೆ ಕೆಟ್ಟವನಾಗುತ್ತಾನೆ ಎಂಬುದು. ಹೆಚ್ಚಿನವರು ಹಾಳಾಗುವುದು ಈ ಸಹವಾಸದಿಂದ. ಕೆಟ್ಟವರ ಒಡನಾಟವಾದರೆ ಬಹು ಬೇಗನೆ ಕೆಟ್ಟ ಚಟಗಳನ್ನು ಕಲಿತು ಕೊಳ್ಳುತ್ತಾರೆ. ಹಾಗಾಗಿ ಹಿರಿಯರು 'ಗುಣ ನೋಡಿ ಗೆಳೆತನ ಮಾಡು' ಎನ್ನುತ್ತಾರೆ, ಎಚ್ಚರಿಸುತ್ತಾರೆ. ಕೆಟ್ಟವರ ಸಹವಾಸ ಮಾಡಿ ಕೆಡುವವರೇ ಜಾಸ್ತಿ. ಒಳ್ಳೆಯವರ ಒಡನಾಟ ಮಾಡಿ ಒಳ್ಳೆಯರಾಗುವವರ ಸಂಖ್ಯೆ ತೀರಾ ಕಡಿಮೆ. ಕೆಟ್ಟದ್ದರಲ್ಲಿರುವ ಆಕರ್ಷಣೆ. ಕೆಟ್ಟದ್ದನ್ನು ಮಾಡುವಾಗ ಸಿಗುವ ಮಜಾ ಒಳ್ಳೆಯದರಲ್ಲಿ ಸಿಗುವುದಿಲ್ಲ. ಸಿಗಬೇಕಾದರೂ ಅಂತಹ ಸಂಸ್ಕಾರ ಪಡೆದಿರಬೇಕು.

ಕೆಟ್ಟ ಹಣ್ಣಿನ ಜೊತೆಗೆ ಒಳ್ಳೆಯ ಹಣ್ಣನ್ನಿಟ್ಟರೆ ಅದೆಂದೂ ಒಳ್ಳೆಯದಾಗುವುದಿಲ್ಲ. ಅದೇ ಕೆಟ್ಟು ಹೋಗುತ್ತದೆ. ಸುವಾಸನೆಯ ಹೂವನ್ನು ಅಲ್ಪವೇ ದುರ್ವಾಸನೆ ಬರುವ ವಸ್ತುವಿನ ಜೊತೆಗಿರಿಸಿದರೆ ಸುಹಾಸನೆಯನ್ನೇ ಕೆಡಿಸುತ್ತದೆ.



ಕೆಡುವುದಕ್ಕೆ ಹೆಚ್ಚು ಬೇಕಾಗಿಲ್ಲ. ಒಳ್ಳೆಯ ಹಾಲಿಗೆ ಒಂದೆರಡು ಹುಳಿಯ ಹುಂಡು ಬಿದ್ದರೆ ಸಾಕು ಕೆಟ್ಟು ಹೋಗುತ್ತದೆ. ಒಳ್ಳೆಯ ಶುಭ್ರವಾದ ಬಟ್ಟೆಯ ಮೇಲೆ ಒಂದೆರಡು ಕಲೆ ಬಿದ್ದರೆ ಸಾಕು ಬಟ್ಟೆ ಅಂದವೇ ಮಾಯವಾಗಿ ಬಿಡುತ್ತದೆ. ಆದ್ದರಿಂದ ವ್ಯವಹರಿಸುವಾಗ ಎಚ್ಚರವಹಿಸಿದಷ್ಟು ಒಳ್ಳೆಯದು. ಅದರಲ್ಲಿಯೂ ದುಷ್ಟರ ಸಹವಾಸ ಮಾಡುವಾಗ, ಅವರೊಂದಿಗೆ ವ್ಯವಹಾರ ಮಾಡುವಾಗ ಜಾಗ್ರತೆ ವಹಿಸಿದಷ್ಟೂ ಕಡಿಮೆ.

ಅಸತ್ಪುರುಷರ, ಅವಿವೇಕಿಗಳ ಸಹವಾಸ ಅಣುವಿನಷ್ಟಾದರೂ ಮಹತ್ತಾದ ನಷ್ಟವನ್ನೇ ಉಂಟುಮಾಡುತ್ತದೆ. ಅಪಾರವಾದ ಸದ್ಗುಣವನ್ನು ನಾಶಪಡಿಸುತ್ತದೆ. ಒಮ್ಮೆ ನಾಶವಾದರೆ ಪುನಃ ತುಂಬಿಕೊಳ್ಳುವುದು ಕಷ್ಟಸಾಧ್ಯ.

ಹಾಲು ಅಮೃತಕ್ಕೆ ಸಮಾನ. ಮಗುವಿನ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಈ ಪಾತ್ರೆ ತುಂಬಾ ಹಾಲಿದ್ದರೂ ಅದಕ್ಕೆ ಒಂದಿಷ್ಟು ಮೊಸರು ಬಿದ್ದರೆ ಪಾತ್ರೆಯಲ್ಲಿರುವ ಹಾಲು ಹಾಲಾಗಿ ಉಳಿಯದೆ ಮೊಸರಾಗಿ ಪರಿವರ್ತನೆ ಹೊಂದುತ್ತದೆ. ಹಾಲು ಮೊಸರಾಗಲು ಹೆಚ್ಚೇನು ಮೊಸರು ಬೇಕಿಲ್ಲ, ಸ್ವಲ್ಪವೇ ಸಾಕು. ಹಾಲಿನ ಪಾತ್ರೆಯನ್ನು ಮೊಸರಿನ ಪಾತ್ರೆಯನ್ನಾಗಿಸುತ್ತದೆ. ಹಾಲು ಮೊಸರಾಗುವುದನ್ನು ತಡೆಯಲೂ ಸಾಧ್ಯವಿಲ್ಲ. ಅದನ್ನು ಹಾಲಾಗಿ ಪರಿವರ್ತಿಸಲೂ ಸಾಧ್ಯವಿಲ್ಲ.

ಅಸತ್ಪುರುಷರ ಸಹವಾಸವು ಇದೇ ಪರಿಣಾಮವನ್ನು ಬೀರಬಲ್ಲದು. ಅವರ ಸಹವಾಸಕ್ಕೆ ಸಿಕ್ಕಿಕೊಂಡರೆ ಕಬ್ಬಿನ ಗಾಣಕ್ಕೆ ಕೈ ಕೊಟ್ಟಂತೆ. ಹಿಂದಿರುಗುವುದು ಕಷ್ಟಸಾಧ್ಯ. ಆದ್ದರಿಂದ ಎಚ್ಚರವಹಿಸಿ ಗೆಳೆತನಕ್ಕೆ, ಒಡನಾಟಕ್ಕೆ ಮುಂದಾಗಬೇಕು. ಬದುಕನ್ನು ಮೇಲೆತ್ತುವುದಕ್ಕೂ ಸಹವಾಸವೇ ಕಾರಣ. ಕೆಳಕ್ಕೆ ತಳ್ಳುವುದಕ್ಕೂ ಸಹವಾಸವೇ ಕಾರಣ. ತತ್ಪುರುಷರ ಸಂಗ ಮಾಡಿ ಸಜ್ಜನರಾಗೋಣ. ಅಸತ್ಪುರುಷರ ಸಹವಾಸ ಮಾಡಿ ಅವಿವೇಕಿಗಳಾಗದೆ ಇರೋಣ.

ರಾಬರ್ಟ್ ಕಾಲ್ಡ್‌ವೆಲ್‌ನಿಂದ ಜೋಸೆಫ್ ವಿಜಯ್‌ವರೆಗೆ

ಹಿಂದುಗಳನ್ನು ವಿಭಜಿಸುವ ತಂತ್ರಗಳು ತಮಿಳ್ನಾಡಿನಲ್ಲಿ ಆಳವಾಗಿ ಬೇರೂರಿವೆ. ಅದು ಬದಲಾವಣೆಯಾಗದೆ ಹಿಂದು ಏಕತೆ ಅಸಾಧ್ಯ.

ಒಳನೋಟ

• ಹೆ.ಬಾ. ಮಲ್ಯ



ಇತ್ತೀಚೆಗೆ ನಡೆದ 5 ವಿಧಾನಸಭೆಗಳ ಚುನಾವಣೆಯ ಫಲಿತಾಂಶ ಭಾರತೀಯ ರಾಜಕೀಯ ಕ್ಷೇತ್ರದಲ್ಲಿ ಒಂದು ಹೊಸ ಯುಗವನ್ನೇ ಪ್ರಾರಂಭಿಸಿದೆ. ಮುಖ್ಯವಾಗಿ ಪಶ್ಚಿಮ ಬಂಗಾಳದಲ್ಲಿ ಆಗಿರುವ ಅಗಾಧ ಬದಲಾವಣೆ. ಒಂದೇ ತಿಂಗಳಲ್ಲಿ ದಿಗ್ಗಜರು, ಅಜೇಯರು ಎನಿಸಿಕೊಂಡಿದ್ದ ಮೂವರು ಮುಖ್ಯಮಂತ್ರಿಗಳು – ಕೇರಳದ ಪಿಣರಾಯಿ ವಿಜಯನ್, ತಮಿಳ್ನಾಡಿನ ಎಂ.ಕೆ. ಸ್ಟಾಲಿನ್, ಪ.ಬಂಗಾಳದ ಮಮತಾ – ಇವರ ಮಹಾಪತನದ ಜೊತೆಗೆ ಅವರ ಪಕ್ಷಗಳ ಹೀನಾಯ ಸೋಲು. ಆದರೆ ಹಿಂದುಗಳ ಮಟ್ಟಿಗೆ ದೊಡ್ಡ ಗೆಲುವು ಎಂದರೆ ಪಶ್ಚಿಮ ಬಂಗಾಳದಲ್ಲಿ ಮಮತಾ ಹಾಗೂ ಟಿ.ಎಂ.ಸಿ.ಯ ಹೀನಾಯ ಸೋಲು ಹಾಗೂ ಸುವೇಂದು ಅಧಿಕಾರಿಯವಂಥ ಮುಖ್ಯಮಂತ್ರಿ ಅಧಿಕಾರಕ್ಕೇರಿದ್ದು. ಇನ್ನು ಪಿಣರಾಯಿ ವಿಜಯನ್ ಹಾಗೂ ಅವರ ಮಾರ್ಕ್ಸಿಸ್ಟ್ ಪಕ್ಷದ ಸೋಲು, ಕಮ್ಯೂನಿಸ್ಟ್ – ನಕ್ಸಲ್‌ಮುಕ್ತ ಭಾರತದ ಘೋಷಣೆಯನ್ನು ನಿಜಮಾಡಿ ತೋರಿಸಿದೆ. ಅಲ್ಲಿ ಭಾಜಪ ಭದ್ರವಾದ ನೆಲೆ ಕಂಡುಕೊಳ್ಳುವಲ್ಲಿ ಯಶಸ್ಸು ಕಂಡಿದೆ. ಈಗ ಕರ್ನಾಟಕದಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಟ್ಟ ಮೇಲೆ, ಕಾಂಗ್ರೆಸ್ ಅಸ್ಥಿರತೆಯತ್ತ ಸಾಗುತ್ತಿರುವುದು ನಿಶ್ಚಿತ. ಇಂಡಿ ಕೂಟ ಛಿದ್ರವಾಗಿದೆ.

ತಮಿಳ್ನಾಡಿನ ಫಲಿತಾಂಶದ ಕುರಿತಂತೆ ಹಿಂದು ಸಮಾಜ ಆಳವಾಗಿ ಚಿಂತಿಸಬೇಕಾದ ಅವಶ್ಯಕತೆಯಿದೆ. ಸನಾತನ ಧರ್ಮ ನಾಶ ಮಾಡಲು ಹೊರಟ ಸ್ಟಾಲಿನ್, ಉದಯನಿಧಿಯ ಡಿ.ಎಂ.ಕೆ. ಪಕ್ಷವೇ ನಾಶದ ಅಂಚಿನಲ್ಲಿದೆ. ಅದು ಸಮಾಧಾನ ತಂದಿದೆ. ಆದರೆ ಜೋಸೆಫ್ ವಿಜಯ್ ಹಾಗೂ ಅವರ ಟಿ.ವಿ.ಕೆ. ಪಕ್ಷ ಅಪಾರ ಯಶಸ್ಸು ಸಾಧಿಸಿದ್ದರಿಂದ ಹಿಂದುಗಳು ಸಂತಸಪಡುವ ಅಗತ್ಯವಿಲ್ಲ. ಹಳೆಯ ಪಾಸ್ಟರ್ (ಕ್ರೈಸ್ತ ಪುರೋಹಿತ) ಹೋಗಿ ಹೊಸ ಪಾಸ್ಟರ್ ಬಂದಷ್ಟೇ ಬದಲಾವಣೆ ತಮಿಳ್ನಾಡಿನದು. ತಮಿಳ್ನಾಡಿನ ಹಿಂದುಗಳ ಸ್ವಭಾವ ವಿಚಿತ್ರವಾದದ್ದು. ಅಲ್ಲಿ ಹಿಂದುಗಳು 86%ರಷ್ಟಿದ್ದಾರೆ. ಕ್ರೈಸ್ತರು 7% ಹಾಗೂ ಮುಸಲ್ಮಾನರು 7%. ವಿಚಿತ್ರವೆಂದರೆ ಅಲ್ಲಿ ಸತತವಾಗಿ ಕ್ರೈಸ್ತ ಮುಖ್ಯಮಂತ್ರಿಗಳೇ ಅಧಿಕಾರದಲ್ಲಿದ್ದಾರೆ. ವಾಸ್ತವದಲ್ಲಿ ಅಲ್ಲಿ ನಡೆಯುತ್ತಿರುವುದು ಚರ್ಚ್ ಆಡಳಿತ. ಇದಕ್ಕೆ 200 ವರ್ಷಗಳ ಸುದೀರ್ಘ ಇತಿಹಾಸವಿದೆ.

ತಮಿಳ್ನಾಡಿನ ಪರಿಸ್ಥಿತಿ ಪ. ಬಂಗಾಳದ ಪರಿಸ್ಥಿತಿಗಿಂತ ಭಿನ್ನವಾಗಿದೆ. ಮುಸ್ಲಿಮರಲ್ಲಿನ ಕೆಲವು ಜಿಹಾದಿಗಳು ಯಾವ ಮುಲಾಜಿಲ್ಲದೆ ಹಿಂದುಗಳ ಮೇಲೆ ನೇರವಾಗಿ ದೌರ್ಜನ್ಯ ಎಸಗುವ ಸ್ವಭಾವದವರು. ಹಿಂದುಗಳು ದೌರ್ಜನ್ಯ ಅತೀವವಾದಾಗ ಒಮ್ಮೆಲೇ ಎದ್ದು ಘರ್ಜಿಸಿ ಇದಿರಾಳಿಯನ್ನು ನಾಶ ಮಾಡುತ್ತಾರೆ. ಪ. ಬಂಗಾಳದಲ್ಲಾದುದು ಇದೇ. ಆದರೆ ಕ್ರೈಸ್ತ ಮಿಷನರಿಗಳು ಬಹಳ ಹಿಂದೆಯೇ ಕ್ರುಸೇಡ್ ಮಾನಸಿಕತೆಯನ್ನು ಬಿಟ್ಟುಕೊಟ್ಟು, ಆಮಿಷ, ಸೇವೆಯ ಸೋಗಿನಲ್ಲಿ ಮೌನವಾಗಿ ಹಿಂದುಗಳ ಮಾನಸಿಕತೆಯನ್ನೇ ಬದಲಾಯಿಸುತ್ತಾರೆ. ಕಳೆದ 200 ವರ್ಷಗಳಿಂದ ಬ್ರಿಟಿಷರು, ಮಿಷನರಿಗಳು ಈ ತಂತ್ರವನ್ನು ಬಳಸಿ ಹಿಂದುಗಳನ್ನು ಮನೋದಾಸ್ಯದಲ್ಲಿ ಇಡುವಲ್ಲಿ ಯಶಸ್ವಿಯಾಗಿದ್ದಾರೆ. ಹಿಂದು ಸಮಾಜದೊಳಗೆ, ಜಾತಿ–ಜಾತಿಗಳೊಳಗೆ ಒಡಕು ಸೃಷ್ಟಿಸುವುದು, ಅದಕ್ಕೆ ಪೂರಕವಾದ ಭ್ರಮಾತ್ಮಕ ನರೇಟಿವ್‌ಗಳನ್ನು ಸೃಷ್ಟಿಸಿ ಹಿಟ್ಲರ್ ಅನುಯಾಯಿ ಗೊಬೆಲ್ಸ್‌ನಂತೆ ನಿರಂತರವಾಗಿ ಪ್ರಚಾರ ಮಾಡುತ್ತಲೇ ಇರುವುದು ಅವರ ತಂತ್ರ. ತಮಿಳ್ನಾಡಿನಲ್ಲಾದುದು ಇದೇ. ನೇರ ಶಾರೀರಿಕ ಆಕ್ರಮಣವನ್ನು ಎದುರಿಸುವುದು ಹಿಂದುಗಳಿಗೆ ಕಷ್ಟವೇನೂ ಅಲ್ಲ. ಆದರೆ ಪರೋಕ್ಷವಾದ, ಮನಸ್ಸಿನ ಮೇಲಿನ ಆಕ್ರಮಣ ಎದುರಿಸುವುದು ಅಷ್ಟು ಸುಲಭವಲ್ಲ. ಪ. ಬಂಗಾಳ ಮತ್ತು ತಮಿಳ್ನಾಡಿನ ಪರಿಸ್ಥಿತಿಗಳಲ್ಲಿ ಇಂಥ ಭಿನ್ನತೆ ಇರುವುದರಿಂದಲೇ ಅಲ್ಲಿನ ಫಲಿತಾಂಶಗಳಲ್ಲೂ ಭಿನ್ನತೆ ಸಹಜ.

ಇಷ್ಟು ವಿಶಾಲ ದೇಶವನ್ನು ಹಾಗೂ ಇಲ್ಲಿನ ಅಪಾರ ಸಂಖ್ಯೆಯ ಹಿಂದುಗಳನ್ನು ದೀರ್ಘಕಾಲ ದಾಸ್ಯದಲ್ಲಿ ಇಡಲು ಸಾಧ್ಯವಿಲ್ಲವೆಂದರಿತ ಬ್ರಿಟಿಷರು ಕ್ರೈಸ್ತ ಮಿಷನರಿಗಳ ಸಹಾಯ ಪಡೆದರು. ಇಲ್ಲಿ ಹಿಂದು ಸಂಸ್ಕೃತಿ –ಸಂಪ್ರದಾಯ, ಭಕ್ತಿ, ಭಜನೆ, ದೇವರು, ವೇದ–ಪುರಾಣ ಇತ್ಯಾದಿಗಳು ಹಿಂದುಗಳ ಮನಸ್ಸಿನ ಮೇಲೆ ಆಳವಾದ ಪ್ರಭಾವ ಬೀರಿರುವುದರಿಂದ ಅವುಗಳನ್ನು ಕುಟಿಲೋಪಾಯದಿಂದಲೇ ನಾಶ ಮಾಡಲು ಯೋಜನೆ ರೂಪಿಸಿದರು. ಸುಮಾರು 120 ವರ್ಷಗಳ ಹಿಂದೆ ಫ್ರಾನ್ಸಿಸ್ ವೈಟ್ ಎಲ್ಲಿಸ್ ಎಂಬಾತ ಒಂದು ಪುಸ್ತಕ ಬರೆದು, ತಮಿಳು ಸಂಸ್ಕೃತಿಗೂ ಹಿಂದು ಸಂಸ್ಕೃತಿಗೂ ಸಂಬಂಧವಿಲ್ಲವೆಂಬ ನರೇಟಿವ್ ರೂಪಿಸಿದ. ಹಿಂದುಗಳು ಬ್ರಾಹ್ಮಣರು, ಆರ್ಯರು, ಉತ್ತರ ಭಾರತದವರು, ತಮಿಳರು ಸಂಪೂರ್ಣ ಭಿನ್ನವಾದ ದ್ರಾವಿಡ ಸಂಸ್ಕೃತಿಗೆ ಸೇರಿದವರು ಎಂಬ ವಾದ ಮಂಡಿಸಿದ. ತಮಿಳು ಭಾಷೆಗೂ ಸಂಸ್ಕೃತಕ್ಕೂ ಸಂಬಂಧವಿಲ್ಲವೆಂದು ವಾದಿಸಿದ. ಅಂದಿನ ಮದ್ರಾಸ್ ಪ್ರೆಸಿಡೆನ್ಸಿ ಆಡಳಿತವು ಸಿವಿಲ್ ಸರ್ವಿಸ್‌ನಲ್ಲಿ ಇಂಗ್ಲಿಷಿನ ಜೊತೆ ತಮಿಳನ್ನು ಸೇರಿಸಿತು. ನಂತರ ಬಂದವನೇ ರಾಬರ್ಟ್ ಕಾಲ್ಡ್‌ವೆಲ್. ಈತ ತಿರುನಲ್ವೇಲಿಗೆ ಆ್ಯಂಗ್ಲಿಕನ್ ಬಿಷಪ್ ಆಗಿ ಬಂದ. ಜಾತೀಯ, ಸಾಂಸ್ಕೃತಿಕ ಭಿನ್ನತೆ ಸೃಷ್ಟಿಸಿದ. ನಂತರ ಒಂದು ರಾಜಕೀಯ ವೇದಿಕೆಯನ್ನು ಸೃಷ್ಟಿಸುವ ಯೋಜನೆ ನಡೆಯಿತು. ಈ ಕಾಲ್ಡ್‌ವೆಲ್ 'ಕಂಪೇರಿಟೀವ್ ಗ್ರಾಮರ್ ಆಫ್ ದ ದ್ರಾವಿಡಿಯನ್ ಲ್ಯಾಂಗ್ವೇಜಸ್' ಎಂಬ ಗ್ರಂಥ ರಚಿಸಿ ತಮಿಳು ಹಾಗೂ ದಕ್ಷಿಣದ ದ್ರಾವಿಡಿಯನ್ ಭಾಷೆಗಳಿಗೂ ಉತ್ತರ ಭಾರತದ ಭಾಷೆ, ಸಂಸ್ಕೃತಿಗಳಿಗೂ ಸಂಬಂಧವಿಲ್ಲ ಹಾಗೂ ದ್ರಾವಿಡ ಭಾಷೆಗಳು ಸ್ವತಂತ್ರ ಭಾಷೆಗಳು ಎಂಬ ನರೇಟಿವ್ ಸೃಷ್ಟಿಸಿದ. ಬ್ರಿಟಿಷ್ ಸರಕಾರದ ಸಹಾಯವಿದ್ದುದರಿಂದ ಆಂಗ್ಲ ಶಾಲೆಗಳನ್ನು ತೆರೆದು ಇಂಗ್ಲಿಷ್ –ತಮಿಳಿಗೆ ಪ್ರಾಧಾನ್ಯತೆ ನೀಡಲು ಸುಲಭವಾಯಿತು. ಅವರಿಗೆ ತಮ್ಮ ದ್ರಾವಿಡ ಸಿದ್ಧಾಂತ, ಆರ್ಯ ಆಕ್ರಮಣ ಹಾಗೂ ಉತ್ತರ ದಕ್ಷಿಣ ಭೇದಗಳನ್ನು ಮಕ್ಕಳಲ್ಲಿ ತುಂಬುವ ಕಾರ್ಯ ಪ್ರಾರಂಭವಾಯಿತು. ಹಿಂದುಗಳೆಂದರೆ ಬ್ರಾಹ್ಮಣರು, ಉತ್ತರ ಭಾರತದವರು, ಆರ್ಯರು. ದನಗಾಹಿಗಳಾದ ಅವರು ಹೊರಗಿನಿಂದ ಅಂದರೆ ಮಧ್ಯ ಏಷ್ಯಾದಿಂದ ಭಾರತಕ್ಕೆ ಬಂದು ಇಲ್ಲಿನ ಮೂಲ ನಿವಾಸಿಗಳಾಗಿದ್ದ ದ್ರಾವಿಡರನ್ನು ಸೋಲಿಸಿ ದಕ್ಷಿಣಕ್ಕೆ ಓಡಿಸಿದರು. ಈ ಬ್ರಾಹ್ಮಣರು ನಿರಂತರವಾಗಿ ದ್ರಾವಿಡರನ್ನು ಶೋಷಣೆ ಮಾಡಿದರು ಎಂಬಿತ್ಯಾದಿ ಕಾಗಕ್ಕ–ಗೂಬಕ್ಕ ಕತೆಗಳನ್ನು ಕಟ್ಟಿ ಮಕ್ಕಳ ಮನಸ್ಸಿನಲ್ಲಿ ಬಿತ್ತಿದರು. ಇದು ಕ್ರಮೇಣ ಹಿಂದು ತಮಿಳು ಜನಾಂಗದ ಮೆದುಳಿನಲ್ಲಿ ಇಳಿದು ಭದ್ರವಾಗತೊಡಗಿತು. ಇಂದಿನ 'ದಲಿತ' ಎಂಬ ಹೊಸ ಪದ ಈ ದ್ರಾವಿಡ ಮೂಲದ್ದೆ ಆಗಿದೆ. ಇದರಿಂದಾಗಿ ಅಲ್ಲಿ ಬಹುಸಂಖ್ಯೆಯಲ್ಲಿರುವ ಹಿಂದುಳಿದವರು 'ದಲಿತ' ಎಂಬ ಹೆಸರಿನಲ್ಲಿ ತಮಗೆ ಪ್ರತ್ಯೇಕ ದ್ರಾವಿಡ ಸ್ಥಾನ ಬೇಕು ಎಂಬ ಬೇಡಿಕೆ ಇಡಲಾರಂಭಿಸಿದರು. ಇದಕ್ಕೊಂದು ರಾಜಕೀಯ ವೇದಿಕೆ ಬೇಕಾಗಿತ್ತು. 1916ರಲ್ಲಿ ಸಿ. ನಟೇಶ್ ಮೊದಲಿಯಾರ್, ಪಿ.ಎಂ. ನಾಯರ್, ತ್ಯಾಗರಾಜ ಶೆಟ್ಟಿ ಮುಂತಾದ ಬ್ರಿಟಿಷ್ ಪರ ವ್ಯಕ್ತಿಗಳು ಸೇರಿ ಜಸ್ಟೀಸ್ ಪಾರ್ಟಿ ಸ್ಥಾಪಿಸಿದರು. ಇದು ಬ್ರಿಟಿಷರ ಪರವಾಗಿತ್ತು. ಸರಕಾರದ ಸಹಾಯದಿಂದ ಶಾಲೆಗಳನ್ನು ಪ್ರಾರಂಭಿಸಿದರು. ಗುರುಕುಲಗಳು, ಸಂಸ್ಕೃತ ಹಾಗೂ ವೇದಾಧ್ಯಯನ ಮೂಲೆಗುಂಪಾದವು. ಬ್ರಾಹ್ಮಣೇತರರಿಗೆ ಮೀಸಲಾತಿ ಬೇಕೆಂಬ ನಿರ್ಣಯ ಮಂಡಿಸಿದರು. ಹೀಗೆ ಹಿಂದು ಸಮಾಜದಲ್ಲಿ ಒಡಕು ಮೂಡಿಸುವಲ್ಲಿ ಬ್ರಿಟಿಷರು– ಮಿಷನರಿಗಳು ಯಶಸ್ವಿಯಾದರು.

ನಂತರ ಬಂದವರು ಪೆರಿಯಾರ್ ಇ. ವಿ.ರಾಮಸ್ವಾಮಿ ನಾಯ್ಕರ್. ಇವರು ಪಕ್ಕಾ ನಾಸ್ತಿಕರು. ಹಿಂದು ವಿರೋಧಿ, ಬ್ರಾಹ್ಮಣ ವಿರೋಧಿ. ನಾಟಕ, ಭಾಷಣಗಳ ಮೂಲಕ ದ್ರಾವಿಡ– ದಲಿತವಾದವನ್ನು ಗಟ್ಟಿಗೊಳಿಸಿದರು. ಇವರ ಶಿಷ್ಯ ಅಣ್ಣಾದೊರೈ ಹಾಗೂ ಕರುಣಾನಿಧಿ. ಇವರು ನಾಟಕ, ಸಿನಿಮಾ, ಭಾಷಣಗಳ ಮೂಲಕ ಹಿಂದು ವಿರೋಧ ಮುಂದುವರಿಸಿದರು. ಅದಕ್ಕಾಗಿ 1949ರಲ್ಲಿ ಡಿ.ಎಂ.ಕೆ (ದ್ರಾವಿಡ ಮುನ್ನೇತ್ರ ಕಳಗಂ) ಪಕ್ಷವನ್ನು ಸ್ಥಾಪಿಸಿದರು. 1967ರಲ್ಲಿ ಮೊದಲ ದ್ರಾವಿಡ ಸರಕಾರ ಅಧಿಕಾರಕ್ಕೆ ಬಂತು. 1968ರಲ್ಲಿ ಚೆನ್ನೈನ ಮರಿನಾ ಬೀಚಿನಲ್ಲಿ ರಾಬರ್ಟ್ ಕಾಲ್ಡ್‌ವೆಲ್ ಮೂರ್ತಿ ಸ್ಥಾಪಿಸಲಾಯಿತು. 2010ರಲ್ಲಿ ಆತನ ಚಿತ್ರವಿರುವ ಅಂಚೆ ಚೀಟಿ ಬಿಡುಗಡೆ ಮಾಡಲಾಯಿತು.

1996ರ ಲೋಕಸಭಾ ಚುನಾವಣೆಯಲ್ಲಿ ವಾಜಪೇಯಿ ನೇತೃತ್ವದಲ್ಲಿ ಬಿಜೆಪಿ ಅತಿ ದೊಡ್ಡ ಬಹುಮತದ ಪಕ್ಷವಾದರೂ ಸಂಖ್ಯಾ ಬಲವಿಲ್ಲದೆ 13 ದಿನದೊಳಗೆ ಪತನವಾಯಿತು. ನಂತರ ಜಯಲಲಿತಾ ತಮಿಳ್ನಾಡಿನ ಎಐಡಿಎಂಕೆ ಮುಖ್ಯಮಂತ್ರಿಯಾಗಿದ್ದಾಗ ಅವರ ಪಕ್ಷದ 27 ಸಂಸತ್ ಸದಸ್ಯರ ಬೆಂಬಲ ವಾಜಪೇಯಿಗೆ ಲಭಿಸಿ ಅವರು ಮತ್ತೆ ಪ್ರಧಾನಿಯಾದರು. ಆದರೆ ಜಯಲಲಿತಾ ತನ್ನ ಬೆಂಬಲ ಹಿಂತೆಗೆದುಕೊಂಡುದುದರಿಂದ ಒಂದೇ ಒಂದು ಓಟಿನ ಕೊರತೆಯಿಂದ ವಾಜಪೇಯಿ ಸರಕಾರ ಬಿದ್ದು ಹೋಯಿತು. ಆಗ ಕರುಣಾನಿಧಿ ಹಾಗೂ ಅವರ ಡಿಎಂಕೆ ಪಕ್ಷ ವಾಜಪೇಯಿಗೆ ಬೆಂಬಲ ನೀಡಿದ್ದರಿಂದ ವಾಜಪೇಯಿ ಮತ್ತೆ ಪ್ರಧಾನಿಯಾದರು.

ಇತ್ತೀಚೆಗೆ ಜೋಸೆಫ್ ವಿಜಯ್ ಪ್ರಧಾನಿ ಮೋದಿಯವರ ಭೇಟಿ ಮಾಡಿ ಇಂಡಿಕೂಟದಿಂದ ಹೊರಬಂದು ಲೋಕಸಭೆಯಲ್ಲಿ ಪ್ರತ್ಯೇಕ ಆಸನ ನೀಡಬೇಕೆಂಬ ಬೇಡಿಕೆ ಇಟ್ಟಿದ್ದಾರೆ. ಈಗ ತಮಿಳ್ನಾಡಿನಲ್ಲಿ ಬಿಜೆಪಿ ನೆಲೆ ಕಂಡುಕೊಳ್ಳಲು ಸಾಧ್ಯವಿಲ್ಲದ ಪರಿಸ್ಥಿತಿ ಇದೆ. ಹಿಂದುಗಳಲ್ಲಿ ವಿಶೇಷವಾಗಿ ಅಲ್ಲಿನ ದಲಿತ ಎಂದು ಕರೆಸಿಕೊಳ್ಳುವ ಹಿಂದುಳಿದವರ ಜೊತೆ ಪ್ರೀತಿಯಿಂದ ವ್ಯವಹರಿಸಿ ಅವರ ಮನೆಗೆದ್ದು ಅವರ ಮಾನಸಿಕತೆಯಲ್ಲಿ ಬದಲಾವಣೆ ತರುವ ಅಗತ್ಯವಿದೆ. ಅದು ತಕ್ಷಣವೇ ಆಗುತ್ತದೆ ಎಂದು ಹೇಳಲಾಗುವುದಿಲ್ಲ.

ಡಿಎಂಕೆಯವರು ರಚಿಸಿದ ಸಿನಿಮಾಗಳು, ನಾಟಕಗಳು ಅವರ ಮನಸ್ಸಿನಲ್ಲಿ ಆಳವಾಗಿ ಬೇರೂರಿವೆ. ಜಯಲಲಿತಾ, ಎಂ.ಜಿ. ರಾಮಚಂದ್ರನ್, ಈಗ ಜೋಸೆಫ್ ವಿಜಯ್ ಎಲ್ಲರೂ ಸಿನಿಮಾ ನಟರೇ. ತಮಿಳ್ನಾಡಿನ ಜನರು ಸಿನಿಮಾ ನಟರ ಮಾತಿಗೆ ಹುಚ್ಚರಾಗಿ ಬೆಂಬಲಿಸುತ್ತಾರೆ. ಜೋಸೆಫ್ ವಿಜಯರ ಭಾರೀ ಗೆಲುವಿಗೆ ತಮಿಳರ ಈ ಮನಸ್ಥಿತಿಯೂ ಕಾರಣ. ಹಾಗಾಗಿ ಇಲ್ಲಿ ಬದಲಾವಣೆ ತರಬೇಕಾದರೆ ಬಿಜೆಪಿ ಹಾಗೂ ಹಿಂದುಗಳು ಬಹಳ ಹೋಂವರ್ಕ್ ಮಾಡಿ ಎಚ್ಚರಿಕೆಯಿಂದ ಹೆಜ್ಜೆ ಇರುವ ಅಗತ್ಯವಿದೆ. ಹಾಗೆಂದು ನಿರಾಶೆಗೆ ಅವಕಾಶವಿಲ್ಲ. ಮುಂದೊಂದು ದಿನ ಗೆಲುವು ನಿಶ್ಚಿತ. ◈

ಪತ್ರ ಮಿತ್ರ

ಹಿಂದುಗಳ ಕಡೆಗಣನೆ ಏಕೆ?

ಭಟ್ಕಳ ತಾಲೂಕಿನ ವೆಂಕಟಾಪುರ ಪ್ರದೇಶದಲ್ಲಿ ಹಿಂದುಗಳ ಧಾರ್ಮಿಕ ನಂಬಿಕೆಗೆ ಸಂಬಂಧ ಪಟ್ಟ 'ಮುರಿಕಟ್ಟೆ'ಯನ್ನು ರಸ್ತೆ ಅಗಲೀಕರಣ ಸಂದರ್ಭ ತೆರವುಗೊಳಿಸಲಾಗಿತ್ತು. ಈಗ ರಸ್ತೆಗೆ ಬಾಧಕವಾಗದ ರೀತಿಯಲ್ಲಿ ಇನ್ನೊಂದು ಸ್ಥಳದಲ್ಲಿ ಕಟ್ಟೆಯನ್ನು ಪುನರ್ ನಿರ್ಮಾಣ ಮಾಡಲು ಹೋದ ಹಿಂದೂ ಪ್ರಮುಖರನ್ನು ಪೊಲೀಸರು ವಶಕ್ಕೆ ಪಡೆದು ಅವರ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಇದು ಏನನ್ನು ಸೂಚಿಸುತ್ತದೆ. ನಮ್ಮ ದೇಶದಲ್ಲೇ ನಮಗೆ ನಮ್ಮ ಧರ್ಮಾನುಸಾರ ನಡೆಯುವ ಅವಕಾಶವಿಲ್ಲವೆಂದೆ? ಪೊಲೀಸರೇನು ಅವರಷ್ಟಕ್ಕೇ ಈ ನಿರ್ಧಾರ ತೆಗೆದುಕೊಂಡಿರಲಾರರು. ಸರಕಾರದ ಕಡೆಯಿಂದ ಅದಕ್ಕೆ ಸೂಕ್ತ ಆದೇಶ ಬಂದಿರಲೇ ಬೇಕಲ್ಲವೆ? ಹಾಗಿದ್ದರೆ, ಸರಕಾರವು ಎಲ್ಲರನ್ನು ಸಮಾನವಾಗಿ ನೋಡುವುದನ್ನು ಬಿಟ್ಟು ಕೆಲವರ ಹಿತಾಸಕ್ತಿಯನ್ನಷ್ಟೇ ಕಾಯುತ್ತಿದೆ ಎಂದರ್ಥವೆ? ಧಾರ್ಮಿಕ ಸ್ವಾತಂತ್ರ್ಯ ಹಿಂದುಗಳಿಗೂ ಇಲ್ಲವೆ? ಅಭಿವೃದ್ಧಿ ದೃಷ್ಟಿಯಿಂದ ಈ ಹಿಂದೆ ಇದ್ದ ಸ್ಥಳವನ್ನು ಬಿಟ್ಟುಕೊಟ್ಟಿದ್ದೇ ದಡ್ಡತನವಾಯಿತೆ ? ಹಿಂದುಗಳೆಂದೂ ಸಂಕುಚಿತ ಭಾವದಿಂದ ಯೋಚಿಸುವುದಿಲ್ಲ. ದೇಶದ ಅಭಿವೃದ್ಧಿಯ ವಿಷಯದಲ್ಲಿ ಸಹಕಾರ ನೀಡುತ್ತಾರೆ.

ಇಂದು, ಭಟ್ಕಳ ಅಂದಕೂಡಲೇ ಅದು ಮುಸ್ಲಿಮರದ್ದು ಅಂದುಕೊಂಡವರೂ ಇದ್ದಾರೆ. ಆದರೆ ಅಲ್ಲಿ ಹಿಂದುಗಳೂ ಸಾಕಷ್ಟು ಪ್ರಮಾಣದಲ್ಲಿದ್ದಾರೆ ಎಂಬುದನ್ನು ಮರೆಯಲಾಗದು ಮತ್ತು ಮರೆಯಬಾರದು. ಈ ಹಿಂದೆಯೂ, ಭಟ್ಕಳದಲ್ಲಿ ಹಿಂದುಗಳ ಮೇಲೆ ಮಾರಣಾಂತಿಕ ಹಲ್ಲೆಗಳೂ ನಡೆದಿವೆ. ಇದಕ್ಕೆಲ್ಲ ಕಾರಣ ಅವರಿಗೆ ಸರಕಾರದಿಂದ ಸಿಗುತ್ತಿರುವ ಬೆಂಬಲ. ಈಗಷ್ಟೇ ರಾಜ್ಯ ಸರಕಾರ ಮುಸ್ಲಿಮರ ಮೇಲಿನ ಹಲವಾರು ಕ್ರಿಮಿನಲ್ ಪ್ರಕರಣಗಳನ್ನು ವಾಪಸ್ ಪಡೆದ ಬೆಳವಣಿಗೆಯೂ ನಡೆದಿದೆ. ಕಾಂಗ್ರೆಸ್ ಆಳ್ವಿಕೆಯಿರುವಲ್ಲೆಲ್ಲ ಈ ರೀತಿ ಅಲ್ಪಸಂಖ್ಯಾತ ಓಲೈಕೆ ನಡೆಯುತ್ತಿರುವುದೇಕೆ? ಹಿಂದುಗಳನ್ನೇಕೆ ಕಡೆಗಣಿಸಲಾಗುತ್ತಿದೆ?

-ಶಂಕರನಾರಾಯಣ ಭಟ್, ಮಾಡಗೇರಿ

ಮಾವು ಆಮದಿಗೆ ನಿಷೇಧ

ಜಪಾನ್ ಭಾರತದಿಂದ ಮಾವುಗಳ ಆಮದಿಗೆ ನಿಷೇಧ ಹೇರಿರುವ ಬಗ್ಗೆ ವರದಿಯಾಗಿದೆ. ಅದಕ್ಕೆ ಕಾರಣ ಭಾರತದಲ್ಲಿ ಮಾವುಗಳ ಶೇಖರಣೆಯಲ್ಲಿ ಮತ್ತು ಮಾವುಗಳು ಹಣ್ಣಾಗುವಂತೆ ಮಾಡುವಲ್ಲಿ ಸರಿಯಾದ ನಿಯಮ ಪಾಲಿಸದಿರುವುದು. ಆಮದಿಗೆ ತಯಾರಾದ ಮಾವುಗಳನ್ನು ದಾಸ್ತಾನು ಮಾಡುವಲ್ಲಿ ದೊಡ್ಡ ಪ್ರಮಾಣದಲ್ಲಿ ನೊಣ ಹಾಗೂ ಕೀಟಗಳ ಹಾವಳಿಯಿರುವುದು ಕೂಡಾ ಜಪಾನೀಯರ ಅಸಮಾಧಾನಕ್ಕೆ ಕಾರಣವಾಗಿದೆಯಂತೆ. ಜಪಾನಿನ ತಪಾಸಕರು ಭಾರತದಲ್ಲಿ ಇಂತಹ ಗೋದಾಮುಗಳಿಗೆ ಭೇಟಿ ನೀಡಿ ಮಾವಿನ ಹಣ್ಣಿನ ಸಂಸ್ಕರಣೆಯಲ್ಲಿ ನಿಯಮ ಪಾಲಿಸದಿರುವುದು, ಅತಿಯಾದ ಪ್ರಮಾಣದಲ್ಲಿ ಕೀಟ ನಾಶಕ ಬಳಸುತ್ತಿರುವುದನ್ನು ಕಂಡುಕೊಂಡ ಬಳಿಕ ಈ ವರ್ಷ ಮಾವು ಆಮದು ಮಾಡದಿರಲು ನಿರ್ಧರಿಸಿದ್ದಾರೆ. ಅತ್ತ ಅಮೆರಿಕದಲ್ಲಿ ಕೂಡಾ ಭಾರತದಿಂದ ಬರುವ ಮಾವಿನ ಹಣ್ಣುಗಳನ್ನು ಖರೀದಿಸಲು ಕೆಲವರು ಹಿಂದೇಟು ಹಾಕುವ ಪ್ರಸಂಗಗಳು ವರದಿಯಾಗುತ್ತಿವೆ.

ಈಗಾಗಲೆ ಭಾರತದಲ್ಲಿ ಹಣ್ಣುಗಳು ಬೇಗ ಕಳಿಯುವಂತೆ ಮಾಡಲು ರಾಸಾಯನಿಕಗಳನ್ನು ಬಳಸುವ ಕುರಿತಂತೆ, ದೊಡ್ಡ ಪ್ರಮಾಣದಲ್ಲಿ ಕೀಟನಾಶಕಗಳನ್ನು ಬಳಸುವ ಕುರಿತಂತೆ ಆರೋಪಗಳಿವೆ. ನಮಗೆ ನೈಸರ್ಗಿಕವಾಗಿ ಮಾಗಿದ ಹಣ್ಣುಗಳು ಸಿಗುವುದೇ ಅಪರೂಪ ಎಂಬಂತಾಗಿದೆ. ನಮ್ಮ ಸರಕಾರಗಳು ಕೂಡಾ ಹಣ್ಣುಗಳನ್ನು ಕೃತಕವಾಗಿ ಮಾಗಿಸುವುದರ ವಿರುದ್ಧ, ರಾಸಾಯನಿಕ ಬಳಸುವುದರ ವಿರುದ್ಧ ಕ್ರಮ ಕೈಗೊಳ್ಳಬೇಕು.

-ಚಿದಂಬರ ರಾವ್, ಕುಂದಾಪುರ

ರೈತರಿಗೆ ಅನ್ಯಾಯ

ಬೆಂಗಳೂರಿನ ಸುತ್ತಮುತ್ತಲಿನ ಹಸಿರು ವಲಯವನ್ನು ನುಂಗಿ ಹಾಕಲು ಹೊರಟಿರುವ ಬೃಹತ್ ಉಪನಗರ ಯೋಜನೆಗಳು ಕೇವಲ ಅಧಿಕೃತ ರಿಯಲ್ ಎಸ್ಟೇಟ್ ದಂಧೆಯಾಗಿ ಮಾರ್ಪಟ್ಟಿದೆ ಎಂಬುದು ಜನಜನಿತ. ಕೃಷಿ ಪ್ರಧಾನ ವಲಯವಾಗಿರುವ ಬಿಡದಿಯ ತೆಂಗು, ಹಿಪ್ಪನೇರಳೆ ಬೆಳೆಯುವ ಫಲವತ್ತಾದ 8000 ಕ್ಕೂ ಹೆಚ್ಚು ಎಕರೆ ನೀರಾವರಿ ಭೂಮಿಯನ್ನು ಬಲವಂತವಾಗಿ ಕಸಿದುಕೊಳ್ಳುತ್ತಿರುವುದು ಅತ್ಯಂತ ಕ್ರೂರ ಹಾಗೂ ಅಮಾನವೀಯ ಕ್ರಮ. ರೈತರ ಜಮೀನಿಗೆ ಕೇವಲ ತಲಾ 2 ಕೋಟಿ ರೂಪಾಯಿ ನಿಗದಿಪಡಿಸಿ, ಖಾಸಗಿ ಹಿತಾಸಕ್ತಿಗಳ ಜಾಗಕ್ಕೆ ಬರೋಬ್ಬರಿ 14 ಕೋಟಿ ರೂಪಾಯಿ ಬೆಲೆ ಕಟ್ಟುವುದು ಸರ್ಕಾರದ ಪರಮ ವಂಚನೆ ಮತ್ತು ಹಗಲು ದರೋಡೆ. ಶೇಕಡಾ 80ರಷ್ಟು ರೈತರು ಸಮ್ಮತಿಸಿದ್ದಾರೆ ಎಂದು ಆಡಳಿತಶಾಹಿ ಸುಳ್ಳು ಹೇಳುತ್ತಿದೆ. ಸೈಟುಗಳ ಮಾರಾಟ ಮತ್ತು ತೆರಿಗೆಯ ಮೂಲಕ ಬಡ ಅನ್ನದಾತರನ್ನು ಬೀದಿಗೆ ತಳ್ಳಿ 40,000 ಕೋಟಿ ರೂಪಾಯಿಗೂ ಅಧಿಕ ಹಣ ಲೂಟಿ ಮಾಡಲು ಹೊರಟಿರುವ ಈ ಜನವಿರೋಧಿ ಯೋಜನೆ ತಕ್ಷಣ ನಿಲ್ಲಿಸಬೇಕಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಈ ದಲ್ಲಾಳಿ ಆಡಳಿತ ಖಂಡನೀಯ.

-ಡಾ. ವಿಜಯಕುಮಾರ್, ರಾಯಚೂರು

ಹಳಿಯೇರಬಹುದೆ ?

ಮಲೆನಾಡು–ಕರಾವಳಿಯನ್ನು ಬೆಸೆಯುವ ಹಾಗೂ ಪಶ್ಚಿಮಘಟ್ಟವನ್ನು ಸೀಳಿ ಹಾದುಹೋಗುವ ಶಿವಮೊಗ್ಗಾ– ಶೃಂಗೇರಿ– ಮಂಗಳೂರು ರೈಲುಮಾರ್ಗ ನಿರ್ಮಿಸುವ ಬೃಹತ್ ಯೋಜನೆ ಡಿಪಿಆರ್ ಸಲ್ಲಿಸುವ ಹಂತದಲ್ಲಿದ್ದು, ಈ ಭಾಗದ ಜನರ ದಶಕಗಳ ಕನಸು ನನಸಾಗುವ ಸಾಧ್ಯತೆ ಕಾಣುತ್ತಿದೆ. ಆದರೆ, ಕರಾವಳಿಯನ್ನು ಕರ್ನಾಟಕದ ಉತ್ತರ ಹಿನ್ನಾಡಿಗೆ ಸೇರಿಸುವ, ಪಶ್ಚಿಮಘಟ್ಟದಲ್ಲಿ ಹಾದುಹೋಗುವ 162 ಕಿಮೀ ಉದ್ದದ ಹುಬ್ಬಳ್ಳಿ–ಅಂಕೋಲಾ ರೈಲು ಯೋಜನೆಗೆ 1998ರಲ್ಲಿ ಅಂದಿನ ಪ್ರಧಾನಿ ವಾಜಪೇಯಿಯವರು ಅಡಿಗಲ್ಲು ಹಾಕಿದ್ದರು. ಅದಕ್ಕೆ ಈಗಾಗಲೇ ಸುಮಾರು 400 ಕೋಟಿ ವ್ಯಯವಾಗಿದ್ದರೂ ಪರಿಸರ ಸಂಬಂಧಿ ವಿರೋಧದಿಂದ ಹಳಿತಪ್ಪಿ ಆಡಳಿತಾತ್ಮಕ ಅನುಮತಿ ಮತ್ತು ಅನುದಾನಕ್ಕೆ ಕಾಯುತ್ತಿದೆ. ಹಾಗಿರುವಾಗ ಪ್ರಸ್ತಾವಿತ ಶಿವಮೊಗ್ಗಾ–ಮಂಗಳೂರು ಯೋಜನೆಯೂ ಅದೇ ಹಾದಿಯನ್ನು ಹಿಡಿಯುವ ಸಾಧ್ಯತೆ ಇದೆ. ಪರಿಸರವಾದಿಗಳು ಇಲ್ಲೂ ರೆಡ್ ಸಿಗ್ನಲ್ ತೋರಿಸುವುದನ್ನು ಅಲ್ಲಗಳೆಯಲಾಗದು.

ಮಲೆನಾಡನ್ನು ಕರಾವಳಿಗೆ ಸೇರಿಸುವ ಇನ್ನೊಂದು ರೈಲು ಯೋಜನೆ ತಾಳಗುಪ್ಪ –ಹೊನ್ನಾವರ ಮಾರ್ಗ ಕೂಡಾ ಪರಿಸರ ಸಂಬಂಧಿ ಕಾರಣದಿಂದ ದಶಕಗಳಿಂದ ಹಳಿ ಏರಲು ಕಾಯುತ್ತಿದೆ. ಹಾಗಾಗಿ ಶಿವಮೊಗ್ಗಾ– ಮಂಗಳೂರು ರೈಲು ಯೋಜನೆ ಶ್ಲಾಘನೀಯವಾದರೂ ಅದು ಅನುಷ್ಠಾನಗೊಳ್ಳುವುದು ಸಂದೇಹ ಅನಿಸುತ್ತದೆ.

-ರಮಾನಂದ ಎಸ್, ಬೆಂಗಳೂರು

ಯುವಜನರ ಆತಂಕಗಳ ಬಗ್ಗೆ ಕೇಂದ್ರ ಕಾಳಜಿ

ನೀಟ್ ಪರೀಕ್ಷೆ: ಮೋದಿ ಖುದ್ದು ಮೇಲ್ವಿಚಾರಣೆ

ಹೊಸದಿಲ್ಲಿ: ಕೇಂದ್ರ ಸರ್ಕಾರ ಯುವಜನರ ಆತಂಕಗಳ ಬಗ್ಗೆ ಗಂಭೀರವಾಗಿ ಕಾಳಜಿ ವಹಿಸುತ್ತಿದೆ. ಯಾವುದೇ ಲೋಪವಾಗದಂತೆ ನೋಡಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ವೈಯಕ್ತಿಕವಾಗಿ ಪರಿಸ್ಥಿತಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ ಎಂದು ಕೇಂದ್ರ ಪರವಾಗಿ ಹಾಜರಾದ ಸಾಲಿಸಿಟರಿ ಜನರಲ್ ತುಷಾರ್ ಮೆಹ್ತಾ ಸುಪ್ರೀಂ ಕೋರ್ಟ್ ಪೀಠಕ್ಕೆ ತಿಳಿಸಿದ್ದಾರೆ.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಕುರಿತು ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅಲೋಕ್ ಅರಾಧೆ ಅವರನ್ನೊಳಗೊಂಡ ಪೀಠ, ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯನ್ನು ತರಾಟೆಗೆ ತೆಗೆದುಕೊಂಡಿದೆ. ಇದೇವೇಳೆ ನಾವು ನಮ್ಮ ಯುವಕರನ್ನು ನಿರಾಶೆಗೊಳಿಸಬಾರದು. ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲ ಅವರ ಕುಟುಂಬಗಳ ಮೇಲೂ ಇದು ನಕರಾತ್ಮಕವಾಗಿ ಪರಿಣಮಿಸುತ್ತದೆ ಎಂದು ಪೀಠ ಕಳವಳ ವ್ಯಕ್ತಪಡಿಸಿದೆ. ಇದಕ್ಕೆ ಕೇಂದ್ರದ ಪರವಾಗಿ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಯುವಜನರ ಕಾಳಜಿಯ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ವೈಯಕ್ತಿಕವಾಗಿ ಪರಿಸ್ಥಿತಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಅಂತೆಯೇ ಜೂ.21ಕ್ಕೆ ನಿಗದಿಪಡಿಸಲಾದ ನೀಟ್-ಯುಜಿ ಮರು ಪರೀಕ್ಷೆಗೆ ಕೆಲವು ಹೊಸ ಕಾರ್ಯವಿಧಾನಗಳನ್ನು ಜಾರಿಗೆ ತರಲಾಗಿದೆ ಎಂದು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಟ್ಟರು.


ಪುನರಾವರ್ತಿತ ಲೋಪ ಸಲ್ಲ: ವಿಚಾರಣೆ ವೇಳೆ ಪೀಠವು ಪ್ರಶ್ನೆಪತ್ರಿಕೆ ಸೋರಿಕೆಗೆ ಕಾರಣವಾದ ಲೋಪಗಳ ಹೊಣೆಗಾರಿಕೆಯನ್ನು ಪ್ರಶ್ನಿಸಿದ್ದು, ಉನ್ನತ ಮಟ್ಟದ ಸಮಿತಿ ಇದ್ದರೂ ಈ ರೀತಿ ಅವ್ಯವಸ್ಥೆ ಸಂಭವಿಸಿದೆ ಎಂದರೇ ಮೂಲ ಶಿಫಾರಸ್ಸಿನಲ್ಲೇ ಏನೋ ತಪ್ಪಿದೆ ಎಂದೇ ಅರ್ಥ ಎಂದು ಹೇಳಿದೆ. ಅಂತೆಯೇ ದೊಡ್ಡ ಪ್ರಮಾಣದ ಪರೀಕ್ಷೆಗಳನ್ನು ನಡೆಸುವಲ್ಲಿ ಪುನರಾವರ್ತಿತ ವೈಫಲ್ಯಗಳಿಗಾಗಿ ನ್ಯಾಯಾಲಯವು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿತು. ಇದರಲ್ಲಿ ಭಾಗಿಯಾಗಿರುವ ಯಾವುದೇ ಅಧಿಕಾರಿಗಳು ಅಥವಾ ಮಧ್ಯವರ್ತಿಗಳು ಸೇರಿದಂತೆ ತಪ್ಪಿತಸ್ಥರೆಂದು ಕಂಡುಬಂದವರನ್ನು ಬಿಡಬಾರದು ಎಂದು ಪೀಠ ಎಚ್ಚರಿಸಿದೆ.

ಟಿಇಟಿಯಲ್ಲಿ ಉತ್ತೀರ್ಣಕ್ಕೆ ಅವಧಿ ವಿಸ್ತರಿಸಿದ ಕೋರ್ಟ್

ಸೇವೆಯಲ್ಲಿರುವ ಶಿಕ್ಷಕರಿಗೆ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ(ಟಿಇಟಿ) ಉತ್ತೀರ್ಣರಾಗುವುದು ಕಡ್ಡಾಯವಾಗಿದೆ ಎಂದು ಸುಪ್ರೀಂ ಕೋರ್ಟ್ ಪುನರುಚ್ಚರಿಸಿದೆ. ಸೇವೆಯಲ್ಲಿ ಉಳಿಯಲು ಪರೀಕ್ಷೆಯಲ್ಲಿ ಉತ್ತೀರ್ಣರಾಗಲು 2028 ಆಗಸ್ಟ್ 31ವರೆಗೆ ಸಮಯವನ್ನು ವಿಸ್ತರಿಸಿದೆ. ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತಾ ಮತ್ತು ಮನಮೋಹನ್ ಸಿಂಗ್ ಅವರನ್ನೊಳಗೊಂಡ ನ್ಯಾಯಪೀಠವು ಅಂಜುಮಾನ್ ಇಶಾತ್-ಎ-ತಲೇಮ್ ಟ್ರಸ್ಟ್ ಪ್ರಕರಣದಲ್ಲಿ ನ್ಯಾಯಾಲಯದ ಹಿಂದಿನ ತೀರ್ಪನ್ನು ಪ್ರಶ್ನಿಸಿ ಹಲವಾರು ರಾಜ್ಯ ಸರ್ಕಾರಗಳು, ಶಿಕ್ಷಕರ ಸಂಘಗಳು ಮತ್ತು ವೈಯಕ್ತಿಕ ಶಿಕ್ಷಕರು ಸಲ್ಲಿಸಿದ್ದ 65ಕ್ಕೂ ಹೆಚ್ಚು ಪರಿಶೀಲನಾ ಅರ್ಜಿಗಳನ್ನು ವಜಾಗೊಳಿಸಿದೆ.

ದುರ್ಗಾ ಮಂದಿರದ ಮೇಲೆ ಧ್ವಜಾರೋಹಣ

ಅಯೋಧ್ಯೆ: ಸರಿಯೂ ನದಿಯೂ ನೀರು ಕರಸೇವಕರ ರಕ್ತದಿಂದ ಕೆಂಪಾಗಿದೆ. ಸಾವಿರಾರು ತಾಯಂದಿರು ತಮ್ಮ ಲಕ್ಷಾಂತರ ಮಕ್ಕಳನ್ನು ರಾಮ ಜನ್ಮಭೂಮಿ ಆಂದೋಲನದಲ್ಲಿ ಸಮರ್ಪಣೆ ಮಾಡಿದರ ಫಲವಾಗಿ ಇಂದು ಭವ್ಯ ಮಂದಿರ ನಿರ್ಮಾಣವಾಗಿದೆ ಎಂದು ಸಾಧ್ವಿ ರಿತಂಬರ ಹೇಳಿದ್ದಾರೆ.



ಅಯೋಧ್ಯೆ ಶ್ರೀ ರಾಮ ಜನ್ಮಭೂಮಿ ಮಂದಿರದ ಆವರಣದಲ್ಲಿರುವ ದುರ್ಗಾ ಮಂದಿರದ ಮೇಲೆ ಶುಕ್ರವಾರ ಸಂಜೆ ಸಾಧ್ವಿ ನಿರಂಜನ ಜ್ಯೋತಿ ಹಾಗೂ ಸಾಧ್ವಿ ರಿತಂಬರ ಧ್ವಜಾರೋಹಣ ನೆರವೇರಿಸಿದ್ದಾರೆ.

ಈ ವೇಳೆ ಮಾತನಾಡಿದ ಸಾಧ್ವಿ ರಿತಂಬರ ಅವರು, ನಾವು ನದಿ,ಗೋವು, ಪರಿಸರವನ್ನು ತಾಯಿ ಎಂದು ಕರೆಯುತ್ತೇವೆ ಅದಕ್ಕೆ ಗೌರವ ಕೊಡುವುದನ್ನು ಕಲಿಯಬೇಕು. ದೇಶದಲ್ಲಿ ಗೋವು ಹತ್ಯೆ ನಿಲ್ಲಬೇಕು ಹಾಗೂ ಲವ್ ಜೆಹಾದ್ ನಂತಹ ಕೃತ್ಯಗಳಿಗೆ ಕಡಿವಾಣ ಹಾಕಬೇಕು ಎಂದರು.

ತಮ್ಮ ಭಾಷಣದುದ್ದಕ್ಕೂ ಶ್ರೀ ರಾಮ ಜನ್ಮಭೂಮಿ ಆಂದೋಲನದಲ್ಲಿ ಮಹತ್ತರ ಪಾತ್ರ ವಹಿಸಿದ ಅಶೋಕ್ ಸಿಂಘಲ್, ಪರಮಹಂಸ ಮಹಾರಾಜ್, ಯುಗಪುರುಷ ಮಹಾರಾಜ್ ಹೀಗೆ ಅನೇಕರ ಹೆಸರನ್ನು ಪ್ರಸ್ತಾಪಿಸಿದ ಸಾಧ್ವಿ ನಿರಂಜನ ಜ್ಯೋತಿ ನಾನು ಇಲ್ಲಿ ಸಾಮಾನ್ಯ ಹಿಂದೂ ಕಾರ್ಯಕರ್ತೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ ಎಂದರು. ಈ ಸಂದರ್ಭದಲ್ಲಿ ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ಚಂಪತರಾಯ್, ಟ್ರಸ್ಟಿಗಳಾದ ಅನಿಲ ಮಿಶ್ರಾ, ಕೃಷ್ಣ ಮೋಹನ್ ,ಮಹಂತ ದಿನೇಂದ್ರ ದಾಸ ಮಹಾರಾಜ್, ಗೋಪಾಲ ಜಿ, ಹಾಗೂ ದುರ್ಗಾವಾಹಿನಿಯ ಕಾರ್ಯಕರ್ತೆಯರು ಸೇರಿದಂತೆ 4000 ಕ್ಕೂ ಮಹಿಳೆಯರು ಈ ಕಾರ್ಯಕ್ರಮ ಉಪಸ್ಥಿತರಿದ್ದರು.

ಅಯ್ಯೋ! ಅಬ್ರಹಾಂ ಒಪ್ಪಂದ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೆ ಮಧ್ಯಪ್ರಾಚ್ಯ ರಾಜತಾಂತ್ರಿಕತೆಯನ್ನು ಚುರುಕುಗೊಳಿಸುವ ಪ್ರಯತ್ನ ಆರಂಭಿಸಿದ್ದು, ಪಾಕಿಸ್ತಾನ ಸೇರಿದಂತೆ ಹಲವು ಮುಸ್ಲಿಂ ರಾಷ್ಟ್ರಗಳು ಅಬ್ರಹಾಂ ಒಪ್ಪಂದಕ್ಕೆ ಸೇರ್ಪಡೆಯಾಗಬೇಕೆಂದು ಕರೆ ನೀಡಿದ್ದಾರೆ. ಆದರೆ ಈ ಪ್ರಸ್ತಾಪ ಪಾಕಿಸ್ತಾನವನ್ನು ಅಪರೂಪದ ರಾಜತಾಂತ್ರಿಕ ದ್ವಂದ್ವಕ್ಕೆ ತಳ್ಳಿದೆ. ಕಾರಣ, ಇಸ್ರೇಲ್ ಜತೆಗೆ ಸಂಬಂಧ ಸಾಮಾನ್ಯೀಕರಿಸುವ ಯಾವುದೇ ನಿರ್ಧಾರವು ಕೇವಲ ವಿದೇಶಾಂಗ ನೀತಿಗೆ ಸೀಮಿತವಾಗದೇ ದೇಶದ ಪಾಸ್‌ಪೋರ್ಟ್, ಕಾನೂನು ಮತ್ತು ಸಾಂಪ್ರದಾಯಿಕ ರಾಜಕೀಯ ನಿಲುವಿನ ಮೇಲೆಯೂ ಪರಿಣಾಮ ಬೀರುವ ಸಾಧ್ಯತೆಯಿದೆ.





ಇಸ್ರೇಲ್ ಜತೆ ಸ್ನೇಹಕ್ಕೆ ಟ್ರಂಪ್ ಒತ್ತಡ

ಪಾಕಿಸ್ತಾನಕ್ಕೆ ನುಂಗಲಾರದ ತುತ್ತು

ಸುದ್ದಿ ಸಮಗ್ರ

ಅಬ್ರಹಾಂ ಒಪ್ಪಂದ ಎಂದರೇನು?

2020ರಲ್ಲಿ ಅಮೆರಿಕದ ಮಧ್ಯಸ್ಥಿಕೆಯಲ್ಲಿ ರೂಪುಗೊಂಡ ಒಪ್ಪಂದಗಳ ಸರಣಿಯೇ ಅಬ್ರಹಾಂ ಒಪ್ಪಂದ. ಇದರ ಉದ್ದೇಶ ಇಸ್ರೇಲ್ ಮತ್ತು ಹಲವು ಅರಬ್ ಅಥವಾ ಮುಸ್ಲಿಂ ಬಹುಸಂಖ್ಯಾತ ರಾಷ್ಟ್ರಗಳ ನಡುವಿನ ರಾಜತಾಂತ್ರಿಕ, ಆರ್ಥಿಕ ಹಾಗೂ ಭದ್ರತಾ ಸಂಬಂಧಗಳನ್ನು ಸಾಮಾನ್ಯೀಕರಿಸುವುದು. ಈ ಒಪ್ಪಂದಕ್ಕೆ ಯೆಹೂದಿ, ಕ್ರೈಸ್ತ ಮತ್ತು ಇಸ್ಲಾಂಗಳ ಸಾಮಾನ್ಯ ಪೂರ್ವಜ ಎಂದು ಪರಿಗಣಿಸಲ್ಪಡುವ ಅಬ್ರಹಾಂ ಹೆಸರನ್ನು ನೀಡಲಾಗಿದೆ.

ಟ್ರಂಪ್‌ಗೆ ಈಗ ಏಕೆ ಮುಖ್ಯ?

ಇರಾನ್ ಜತೆ ನಡೆಯುತ್ತಿರುವ ಶಾಂತಿ ಮಾತುಕತೆಗಳಿಗೆ ಪೂರಕವಾಗಿ ಮಧ್ಯಪ್ರಾಚ್ಯದಲ್ಲಿ ಇಸ್ರೇಲ್ ಸ್ವೀಕಾರಾರ್ಹತೆಯನ್ನು ಹೆಚ್ಚಿಸಲು ಟ್ರಂಪ್ ಪ್ರಯತ್ನಿಸುತ್ತಿದ್ದಾರೆ. ಹೊಸ ದೇಶಗಳು ಅಬ್ರಹಾಂ ಒಪ್ಪಂದಕ್ಕೆ ಸೇರಿದರೆ ಅದು ಪ್ರಾದೇಶಿಕ ಸ್ಥಿರತೆಗೆ ಸಹಕಾರಿ ಎಂದು ಅವರು ವಾದಿಸಿದ್ದಾರೆ. ವಿಶೇಷವಾಗಿ ಸೌದಿ ಅರೇಬಿಯಾ ಸೇರ್ಪಡೆಯಾದರೆ ಅದು ದೊಡ್ಡ ರಾಜತಾಂತ್ರಿಕ ಯಶಸ್ಸಾಗಲಿದೆ ಎಂದು ಅಮೆರಿಕದ ವಲಯಗಳು ಪರಿಗಣಿಸುತ್ತಿವೆ.

ಈ ಒಪ್ಪಂದದಿಂದ ಏನು ಲಾಭ?

ಅಬ್ರಹಾಂ ಒಪ್ಪಂದದ ಬಳಿಕ ಇಸ್ರೇಲ್ ಮತ್ತು ಸಹಿ ಹಾಕಿದ ರಾಷ್ಟ್ರಗಳ ನಡುವೆ ನೇರ ವಿಮಾನ ಸೇವೆಗಳು ಆರಂಭವಾದವು. ವ್ಯಾಪಾರ ಹಾಗೂ ಹೂಡಿಕೆ ಹೆಚ್ಚಾಯಿತು. ತಂತ್ರಜ್ಞಾನ, ರಕ್ಷಣಾ ಹಾಗೂ ಗುಪ್ತಚರ ಸಹಕಾರ ವಿಸ್ತರಿಸಿತು. ಪ್ರವಾಸೋದ್ಯಮ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಹೊಸ ಅವಕಾಶಗಳು ಸೃಷ್ಟಿಯಾದವು. ಮಧ್ಯಪ್ರಾಚ್ಯದಲ್ಲಿ ಇರಾನ್ ಪ್ರಭಾವಕ್ಕೆ ಪ್ರತಿರೋಧವಾಗಿ ಹೊಸ ಸಹಕಾರದ ವೇದಿಕೆಯೂ ರೂಪುಗೊಂಡಿತು.

ಪಾಕ್ ಪಾಸ್ ಪೋರ್ಟ್ ಬದಲಾಗಬೇಕೇ?

ಪ್ರಸ್ತುತ ಪಾಕಿಸ್ತಾನದ ಪಾಸ್‌ಪೋರ್ಟ್‌ನಲ್ಲಿ ಇಸ್ರೇಲ್ ಹೊರತುಪಡಿಸಿ ವಿಶ್ವದ ಎಲ್ಲ ರಾಷ್ಟ್ರಗಳಿಗೆ ಮಾನ್ಯ ಎಂಬ ಉಲ್ಲೇಖವಿದೆ. ಹೀಗಾಗಿ ಒಂದು ವೇಳೆ ಇಸ್ರೇಲ್‌ಗೆ ಅಧಿಕೃತ ಮಾನ್ಯತೆ ನೀಡಿದರೆ ಈ ನಿರ್ಬಂಧವನ್ನು ತೆಗೆದುಹಾಕುವುದು ಅನಿವಾರ್ಯವಾಗಲಿದೆ. ಪರಿಣಾಮವಾಗಿ ಹೊಸ ಪಾಸ್ ಪೋರ್ಟ್ ಮುದ್ರಣ, ವಲಸೆ ನಿಯಮಗಳ ಪರಿಷ್ಕರಣೆ ಹಾಗೂ ಕೆಲವು ಕಾನೂನು ತಿದ್ದುಪಡಿಗಳ ಅಗತ್ಯವೂ ಎದುರಾಗಬಹುದು.

ಪಾಕಿಸ್ತಾನ ಏಕೆ ವಿರೋಧಿಸುತ್ತಿದೆ?

ಪಾಕಿಸ್ತಾನವು ತನ್ನ ಸ್ಥಾಪನೆಯಿಂದಲೂ ಇಸ್ರೇಲ್ ಅನ್ನು ಅಧಿಕೃತವಾಗಿ ಮಾನ್ಯತೆ ನೀಡಿಲ್ಲ. ಪ್ಯಾಲೆಸ್ತೀನ್‌ಗೆ ಸ್ವತಂತ್ರ ರಾಷ್ಟ್ರದ ಮಾನ್ಯತೆ ದೊರೆಯುವವರೆಗೆ ಇಸ್ರೇಲ್ ಜತೆ ಸಂಬಂಧ ಸ್ಥಾಪಿಸುವ ಪ್ರಶ್ನೆಯೇ ಇಲ್ಲ ಎಂಬುದು ಅದರ ಸಾಂಪ್ರದಾಯಿಕ ನಿಲುವು. ಗಾಜಾ ಯುದ್ಧದ ಹಿನ್ನೆಲೆಯಲ್ಲಿ ಪಾಕಿಸ್ತಾನದ ಜನಾಭಿಪ್ರಾಯವೂ ಇಸ್ರೇಲ್ ವಿರುದ್ಧ ತೀವ್ರವಾಗಿದೆ. ಹೀಗಾಗಿ ಅಬ್ರಹಾಂ ಒಪ್ಪಂದಕ್ಕೆ ಸೇರ್ಪಡೆಯಾಗುವ ಯಾವುದೇ ನಿರ್ಧಾರ ದೇಶೀಯ ರಾಜಕೀಯವಾಗಿ ದೊಡ್ಡ ಪ್ರತಿಕ್ರಿಯೆ ಹುಟ್ಟುಹಾಕುವ ಸಾಧ್ಯತೆಯಿದೆ.

ಅರಬ್ ಮತ್ತು ಇಸ್ರೇಲ್

1979ರಲ್ಲಿ ಈಜಿಪ್ಟ್ ಹಾಗೂ 1994ರಲ್ಲಿ ಜೋರ್ಡನ್ ಇಸ್ರೇಲ್ ಜತೆ ಶಾಂತಿ ಒಪ್ಪಂದ ಮಾಡಿಕೊಂಡ ಬಳಿಕ, ಅರಬ್ ಜಗತ್ತಿನಲ್ಲಿ ಇಸ್ರೇಲ್ ಜತೆ ಸಂಬಂಧ ಸಾಮಾನ್ಯೀಕರಣದ ಅತಿದೊಡ್ಡ ಹೆಜ್ಜೆಯಾಗಿ ಅಬ್ರಹಾಂ ಒಪ್ಪಂದವನ್ನು ಪರಿಗಣಿಸಲಾಗುತ್ತದೆ. ಮಧ್ಯಪ್ರಾಚ್ಯದ ಭೌರಾಜಕೀಯ ಸಮೀಕರಣಗಳನ್ನು ಬದಲಿಸಿದ ಈ ಒಪ್ಪಂದ ಈಗ ಮತ್ತೊಮ್ಮೆ ಜಾಗತಿಕ ರಾಜತಾಂತ್ರಿಕ ಚರ್ಚೆಯ ಕೇಂದ್ರಬಿಂದುವಾಗಿದೆ.



ಪ್ರಮುಖ ದೇಶಗಳ ನಿಲುವು

ದೇಶ	ಪ್ರಸ್ತುತ ನಿಲುವು
ಯುಎಇ	ಒಪ್ಪಂದಕ್ಕೆ ಸಹಿ
ಬಹ್ರೇನ್	ಒಪ್ಪಂದಕ್ಕೆ ಸಹಿ
ಮೊರಾಕೊ	ಒಪ್ಪಂದಕ್ಕೆ ಸಹಿ
ಸೂಡಾನ್	ಪ್ರಕ್ರಿಯೆಯಲ್ಲಿ, ಪೂರ್ಣ ಜಾರಿಯಾಗಿಲ್ಲ
ಸೌದಿ ಅರೇಬಿಯಾ	ಪ್ಯಾಲೆಸ್ತೀನ್ ಪ್ರಶ್ನೆ ಬಗೆಹರಿದ ಬಳಿಕ ಮಾತ್ರ
ಪಾಕಿಸ್ತಾನ	ಸ್ಪಷ್ಟ ವಿರೋಧ
ಕತಾರ್	ಇನ್ನೂ ನಿರ್ಧಾರವಿಲ್ಲ
ಟರ್ಕಿಯೆ	ಒಪ್ಪಂದಕ್ಕೆ ಸೇರಿಲ್ಲ
ಈಜಿಪ್ಟ್	ಈಗಾಗಲೇ ಇಸ್ರೇಲ್ ಜತೆ ರಾಜತಾಂತ್ರಿಕ ಸಂಬಂಧ
ಜೋರ್ಡನ್	ಈಗಾಗಲೇ ಇಸ್ರೇಲ್ ಜತೆ ರಾಜತಾಂತ್ರಿಕ ಸಂಬಂಧ

ಸೌದಿ ಅರೇಬಿಯಾ ಯಾಕೆ ಇನ್ನೂ ಕಾಯುತ್ತಿದೆ?

ಅಬ್ರಹಾಂ ಒಪ್ಪಂದದ ವಿಸ್ತರಣೆಯಲ್ಲಿ ಸೌದಿ ಅರೇಬಿಯಾವನ್ನು ಕ್ರೌನ್ ಜುವೆಲ್ ಎಂದು ಕರೆಯಲಾಗುತ್ತದೆ. ಆದರೆ ರಿಯಾದ್ ಸ್ಪಷ್ಟವಾಗಿ ಹೇಳಿರುವುದು ಏನೆಂದರೆ, ಪ್ಯಾಲೆಸ್ತೀನ್ ರಾಷ್ಟ್ರ ಸ್ಥಾಪನೆಗೆ ಸ್ಪಷ್ಟ ಮಾರ್ಗಸೂಚಿ ಸಿಗದೆ ಇಸ್ರೇಲ್ ಜತೆ ಪೂರ್ಣ ಪ್ರಮಾಣದ ಸಂಬಂಧ ಸಾಮಾನ್ಯೀಕರಣ ಸಾಧ್ಯವಿಲ್ಲ. 2023ರ ಬಳಿಕ ಗಾಜಾ ಸಂಘರ್ಷ ತೀವ್ರಗೊಂಡಿರುವುದು ಸೌದಿ ನಿಲುವನ್ನು ಇನ್ನಷ್ಟು ಕಠಿಣಗೊಳಿಸಿದೆ.

ಯಾವ ದೇಶಗಳು ಈಗಾಗಲೇ ಸೇರಿವೆ?

2020ರಲ್ಲಿ ಮೊದಲಿಗೆ ಸಂಯುಕ್ತ ಅರಬ್ ಎಮಿರೇಟ್ಸ್ (ಯುಎಇ) ಮತ್ತು ಬಹ್ರೈನ್ ಇಸ್ರೇಲ್ ಜತೆ ಸಂಬಂಧ ಸಾಮಾನ್ಯೀಕರಣ ಒಪ್ಪಂದಕ್ಕೆ ಸಹಿ ಹಾಕಿದವು. ನಂತರ ಮೊರಾಕೊ ಮತ್ತು ಸೂಡಾನ್ ಸಹ ಪ್ರಕ್ರಿಯೆಯಲ್ಲಿ ಭಾಗಿಯಾದವು. ಇದರಿಂದ ದಶಕಗಳ ಕಾಲ ಇಸ್ರೇಲ್ ವಿರುದ್ಧದ ನಿಲುವು ಹೊಂದಿದ್ದ ಕೆಲವು ಅರಬ್ ರಾಷ್ಟ್ರಗಳು ಹೊಸ ರಾಜತಾಂತ್ರಿಕ ಅಧ್ಯಾಯ ಆರಂಭಿಸಿದವು.

ಕಿರುಸುದ್ದಿ

ಪುಣೆಯಲ್ಲಿ ನಕಲಿ ಮದ್ಯ ಸೇವಿಸಿ 14 ಮಂದಿ ಸಾವು

ಪುಣೆ: ಮಹಾರಾಷ್ಟ್ರದ ಪುಣೆಯ ಪಿಂಪ್ರಿ ಚಿಂಚ್ ವಾಡ್ ಪ್ರದೇಶದಲ್ಲಿ ನಕಲಿ ಮದ್ಯ ಸೇವನೆಯಿಂದ ಕನಿಷ್ಠ ಪಕ್ಷ 14 ಮಂದಿ ಸಾವಿಗೀಡಾಗಿದ್ದಾರೆ. ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು, ಪೊಲೀಸರು ಈ ಸಂಬಂಧ ಎಂಟು ಮಂದಿಯನ್ನು ಬಂಧಿಸಿದ್ದು, ಇನ್ನಷ್ಟು ಮಂದಿಯ ಬಂಧನವಾಗಲಿದೆ ಎಂದಿದ್ದಾರೆ. ಪಿಂಪ್ರಿ ಚಿಂಚ್‌ವಾಡ್‌ನ ಫುಗೆವಾಡ್ ಪ್ರದೇಶದಲ್ಲಿ 7 ಮಂದಿ ಬಲಿಯಾಗಿದ್ದು, ಹಡಪ್ಸಾರ್‌ನ ಪಂಧಾರೆಮಾಲಾ ಪ್ರದೇಶದಲ್ಲಿ ಐವರು ಮೃತಪಟ್ಟಿದ್ದಾರೆ. ಈ ಸಾವಿಗೆ ನಿಖರ ಕಾರಣ ಏನೆಂಬ ಬಗ್ಗೆ ಪರೀಕ್ಷಾ ವರದಿಗಾಗಿ ಕಾಯಲಾಗುತ್ತಿದ್ದು, ಇಂತಹ ಪಿಡುಗಿನ ಹಿಂದೆ ಇರುವ ಇಡಿ ವ್ಯವಸ್ಥೆಯನ್ನು ಗುರುತಿಸಲಾಗಿದ್ದು, ಇದನ್ನು ಸದೆಬಡಿಯಲಾಗುವುದು ಎಂದು ಘೋಷಿಸಿದ್ದಾರೆ. ಈ ಪ್ರದೇಶಗಳಿಗೆ ಮದ್ಯ ಪೂರೈಕೆದಾರನಾಗಿರುವ ಯೋಗೀಶ್ ವಾಂಖೇಡೆಯನ್ನು ಬಂಧಿಸಲಾಗಿದ್ದು, ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಲಾಗುತ್ತಿದೆ ಎಂದು ರಾಜ್ಯ ಅಬಕಾರಿ ಆಯುಕ್ತ ಅತುಲ್ ಕನಾಡೆ ತಿಳಿಸಿದರು.

ಪ್ರಕರಣ ಸಂಬಂಧ 8 ಮಂದಿ ಬಂಧನ

ಎಲ್-ನಿನೋ ಪ್ರಭಾವ ಎದುರಿಸಲು ಸಿದ್ಧ: ಕೇಂದ್ರ

ಹೊಸದಿಲ್ಲಿ: ಈ ವರ್ಷ ಎಲ್-ನಿನೋ ಪ್ರಭಾವ ಮತ್ತು ಅದರಿಂದ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗುವ ಹವಾಮಾನ ಇಲಾಖೆಯ ಮುನ್ಸೂಚನೆಯ ಹಿನ್ನೆಲೆಯಲ್ಲಿ , ಇಂತಹ ಯಾವುದೇ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳನ್ನು ಎದುರಿಸಲು ಸಜ್ಜಾಗುವಂತೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ರಾಜ್ಯ ಸರಕಾರಗಳಿಗೆ ಸೂಚಿಸಿದ್ದಾರೆ. ಇಂತಹ ಯಾವುದೇ ಸಂಭವನೀಯತೆಯನ್ನು ಪರಿಹರಿಸುವಲ್ಲಿ ಕೇಂದ್ರ ಕೃಷಿ ಸಚಿವಾಲಯವು ಯೋಜನೆಗಳನ್ನು ರೂಪಿಸುತ್ತಿದೆ ಎಂದೂ ಅವರು ತಿಳಿಸಿದ್ದಾರೆ.

ಜೂನ್‌ನಲ್ಲಿ ನೈಋತ್ಯ ಮುಂಗಾರಿನೊಂದಿಗೆ ಪ್ರಾರಂಭವಾಗುವ ಮುಂಬರುವ ಖಾರಿಫ್ ಋತುವಿನಲ್ಲಿ ಬೇಡಿಕೆಯನ್ನು ಪೂರೈಸಲು ಅಗತ್ಯವಿರುವ ಬೀಜಗಳು ಮತ್ತು ರಸಗೊಬ್ಬರಗಳ ಲಭ್ಯತೆ ಸಾಕಷ್ಟಿದೆ ಎಂದು ಅವರು ತಿಳಿಸಿದ್ದಾರೆ. ರಾಷ್ಟ್ರೀಯ ಕೃಷಿ ಸಮ್ಮೇಳನ - ಖಾರಿಫ್ ಅಭಿಯಾನ 2026ರ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಎಲ್-ನಿನೋ ಅಪಾಯದ ಕುರಿತು ಕೇಂದ್ರ ಸರಕಾರ ಸತತ ನಿಗಾ ಇಟ್ಟಿದೆ. ನಮಗೆ ಈಗ ಆ ಬಗ್ಗೆ ಖಚಿತವಿಲ್ಲ. ಆದರೆ ಅಂತಹ ಪರಿಸ್ಥಿತಿ ಉದ್ಭವಿಸಿದರೆ ಈ ಬಾರಿಯ ಮುಂಗಾರಿನಲ್ಲಿ ಮಳೆ ವಿಳಂಬವಾದರೆ ಅದನ್ನು ಎದುರಿಸಲು ನಾವು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ ಎಂದರು. ಎಲ್- ನಿನೋ ಎಂಬುದು ಪೂರ್ವ ಪೆಸಿಫಿಕ್ ಮಹಾಸಾಗರದಲ್ಲಿ ಮೇಲ್ಮೈ ನೀರಿನ ಅಸಹಜ ತಾಪಮಾನದಿಂದ ಉಂಟಾಗುವ ಹವಾಮಾನ ವೈಪರೀತ್ಯವಾಗಿದ್ದು, ಇದು ಜಾಗತಿಕ ಮಟ್ಟದಲ್ಲಿ ಸಹಜ ಹವಾಮಾನಕ್ಕೆ ತೊಡಕುಂಟು ಮಾಡುತ್ತದೆ.

ಈ ಬಾರಿ ಮುಂಗಾರು ಮಳೆ ದುರ್ಬಲ: ಐಎಂಡಿ

ಹೊಸದಿಲ್ಲಿ: ದೇಶದಲ್ಲಿ 2026ರ ನೈಋತ್ಯ ಮುಂಗಾರು ಅವಧಿಯಲ್ಲಿ (ಜೂನ್-ಸೆಪ್ಟೆಂಬರ್) ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಶುಕ್ರವಾರ ಮುನ್ಸೂಚನೆ ನೀಡಿದೆ. ಈ ಮೂಲಕ ತಾನೇ ಹಿಂದೆ ನೀಡಿದ್ದ ಮುನ್ಸೂಚನೆಯನ್ನು ಪರಿಷ್ಕರಿಸಿದೆ. ದೇಶಾದ್ಯಂತ ಈ ವರ್ಷದ ಮುಂಗಾರು ಮಳೆ ದೀರ್ಘಾವಧಿ ಸರಾಸರಿಯ (ಎಲ್‌ಪಿಎ) ಶೇ.90ರಷ್ಟು ದಾಖಲಾಗುವ ಸಾಧ್ಯತೆ ಇದೆ. ಏ.13ರಂದು ಪ್ರಕಟಿಸಿದ್ದ ಮೊದಲ ಮುನ್ಸೂಚನೆಯಲ್ಲಿ ಶೇ.92ರಷ್ಟು ಮಳೆಯಾಗುವ ಸಾಧ್ಯತೆ ಇದೆ ಎಂದು ಐಎಂಡಿ ಹೇಳಿತ್ತು. ಆದರೆ ಇದೀಗ ಅಂದಾಜನ್ನು ಮತ್ತಷ್ಟು ತಗ್ಗಿಸಲಾಗಿದೆ. ಐಎಂಡಿ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಮಾತನಾಡಿ, ದೇಶದ ಬಹುತೇಕ ಮಳೆಆಧಾರಿತ ಕೃಷಿ ಪ್ರದೇಶಗಳನ್ನು ಒಳಗೊಂಡಿರುವ ಮುಂಗಾರು ಕೇಂದ್ರ ವಲಯದಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗುವ ಸಾಧ್ಯತೆ ಹೆಚ್ಚಿದೆ ಎಂದು ತಿಳಿಸಿದ್ದಾರೆ. ಐಎಂಡಿಯ ವರ್ಗೀಕರಣದ ಪ್ರಕಾರ, ಮುಂಗಾರು ಅವಧಿಯಲ್ಲಿ ಮಳೆ ದೀರ್ಘಾವಧಿ ಸರಾಸರಿಯ ಶೇ.90ಕ್ಕಿಂತ ಕಡಿಮೆಯಾದರೆ ಅದನ್ನು ಮಳೆ ಕೊರತೆ ಎಂದು ಪರಿಗಣಿಸಲಾಗುತ್ತದೆ. ಕೇರಳದಲ್ಲಿ ಮೇ 26ರಂದು ಮುಂಗಾರು ಪ್ರವೇಶಿಸಲಿದೆ ಎಂದು ಈ ಹಿಂದೆ ಅಂದಾಜಿಸಲಾಗಿತ್ತು.



ಜೂನ್‌ನಲ್ಲಿ ಉಷ್ಣ ಅಲೆ ತೀವ್ರ: ಜೂನ್ ತಿಂಗಳಲ್ಲಿ ದೇಶದ ಬಹುತೇಕ ಭಾಗಗಳಲ್ಲಿ ಸಾಧಾರಣಕ್ಕಿಂತ ಹೆಚ್ಚಿನ ಗರಿಷ್ಠ ತಾಪಮಾನ ದಾಖಲಾಗುವ ಸಾಧ್ಯತೆ ಇದೆ. ಉತ್ತರ ಪ್ರದೇಶ, ಹರಿಯಾಣ, ಪಂಜಾಬ್, ಬಿಹಾರ, ಒಡಿಶಾ, ಛತ್ತೀಸ್‌ಗಢ, ಗುಜರಾತ್ ಮತ್ತು ಆಂಧ್ರ ಪ್ರದೇಶದ ಅನೇಕ ಭಾಗಗಳಲ್ಲಿ ಉಷ್ಣ ಅಲೆ ದಿನಗಳ ಸಂಖ್ಯೆ ಹೆಚ್ಚಾಗುವ ನಿರೀಕ್ಷೆಯಿದೆ.

ಭಾರತದ ಬೆಂಬಲ ಉಲ್ಲೇಖಿಸಿದ ಇಸ್ರೇಲ್

ಹೊಸದಿಲ್ಲಿ: ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಶುಕ್ರವಾರ ನಡೆದ ಕಾರ್ಯಕ್ರಮವೊಂದರಲ್ಲಿ ಭಾರತದೊಂದಿಗಿನ ದೃಢವಾದ ದ್ವಿಪಕ್ಷೀಯ ಸಂಬಂಧವನ್ನು ಒತ್ತಿಹೇಳಿದ್ದು, ಭಾರತದಿಂದ ಸಿಗುತ್ತಿರುವ ವ್ಯಾಪಕ ಸಾರ್ವಜನಿಕ ಬೆಂಬಲವನ್ನು ಶ್ಲಾಘಿಸಿದ್ದಾರೆ. ವಿಶ್ವದ ಹಲವು ರಾಷ್ಟ್ರಗಳು ಇಸ್ರೇಲ್ ಅನ್ನು ಕಾನೂನುಬಾಹಿರ ಎಂದು ಬಿಂಬಿಸಲು ಪ್ರಯತ್ನಿಸುತ್ತಿರುವ ವೇಳೆಯಲ್ಲಿ, ಭಾರತದಿಂದ ಇಸ್ರೇಲ್‌ಗೆ ಅನನ್ಯ ಬೆಂಬಲ ಸಿಗುತ್ತಿದೆ. ಜಾಗತಿಕವಾಗಿ ತಮಗೆ ಬೇರೆಲ್ಲಾ ಪ್ರದೇಶಗಳಿಗಿಂತ ಭಾರತದಲ್ಲೇ ಹೆಚ್ಚಿನ ಅನುಯಾಯಿಗಳಿದ್ದಾರೆ ಎಂದು ತಾವು ನಂಬುವುದಾಗಿ ನೆತನ್ಯಾಹು ತಿಳಿಸಿದ್ದಾರೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಫೆಬ್ರವರಿಯಲ್ಲಿ ಇಸ್ರೇಲ್‌ಗೆ ಕೈಗೊಂಡಿದ್ದ ಅಧಿಕೃತ ಪ್ರವಾಸದ ಬೆನ್ನಲ್ಲೇ ಈ ಹೇಳಿಕೆಗಳು ಹೊರಬಿದ್ದಿವೆ. ಆ ಭೇಟಿಯ ಸಂದರ್ಭದಲ್ಲಿ ಉಭಯ ನಾಯಕರು ಆತ್ಮೀಯ ಸೌಹಾರ್ದತೆ ಪ್ರದರ್ಶಿಸಿದ್ದರು ಮತ್ತು ಪ್ರಧಾನಿ ಮೋದಿಗೆ ಇಸ್ರೇಲ್‌ನ ಅತ್ಯುನ್ನತ ಸಂಸದೀಯ ಗೌರವ 'ಸ್ಪೀಕರ್ ಆಫ್ ದಿ ಕೆನೆಸೆಟ್' ಪದಕವನ್ನು ನೀಡಿ ಗೌರವಿಸಲಾಗಿತ್ತು.



ಫೆಬ್ರವರಿ ಪ್ರವಾಸದ ವೇಳೆ, ನೆತನ್ಯಾಹು ತಮ್ಮ ಪತ್ನಿ ಸಾರಾ ಅವರೊಂದಿಗಿನ ಮೊದಲ ಭೇಟಿಗಳು, ಟೆಲ್ ಅವಿವ್‌ನ ಭಾರತೀಯ ಉಪಹಾರ ಗೃಹವೊಂದರಲ್ಲಿ ನಡೆದಿದ್ದವು, ಎಂಬ ವೈಯಕ್ತಿಕ ನೆನಪನ್ನೂ ಹಂಚಿಕೊಂಡಿದ್ದರು. ಇದೇ ವೇಳೆ ನೆತನ್ಯಾಹು, ಭಾರತದ ಸಾಮಾಜಿಕ ಮಾಧ್ಯಮ ಬಳಕೆದಾರರು ಇಸ್ರೇಲ್ ಪರವಾಗಿ ಸಕ್ರಿಯವಾಗಿ ನಿಂತಿರುವುದನ್ನು ಕೃತಜ್ಞತೆಯಿಂದ ಸ್ಮರಿಸಿದರು.

ನೌಕಾಪಡೆಗೆ 48ನೇ ವೈಸ್‌ಚೀಫ್ ಆಗಿ ಅಜಯ್ ಅಧಿಕಾರ

ಹೊಸದಿಲ್ಲಿ: ಆಪರೇಷನ್ ಸಿಂದೂರ ವೇಳೆ ಉನ್ನತ ಮಟ್ಟದಲ್ಲಿ ನೌಕಾ ಯುದ್ಧ ಸನ್ನದ್ಧತೆಯನ್ನು ನಿರ್ವಹಿಸಿದ ವೈಸ್ ಅಡ್ಮಿರಲ್ ಅಜಯ್ ಕೊಚ್ಚರ್ ಅವರು ಭಾರತೀಯ ನೌಕಾಪಡೆಯ 48ನೇ ಉಪಮುಖ್ಯಸ್ಥರಾಗಿ ಶುಕ್ರವಾರ ಅಧಿಕಾರ ವಹಿಸಿಕೊಂಡರು. ಈ ಮೂಲಕ ನೌಕಾಪಡೆಯ ಕೇಂದ್ರಕಚೇರಿಗೆ ಮುಂಚೂಣಿ ಅನುಭವದ ಸಂಪತ್ತು ಬಂದಂತಾಗಿರುವುದಾಗಿ ವಿಶ್ಲೇಷಿಸಲಾಗಿದೆ. ನೌಕಾಪಡೆಯ ಸೆಕೆಂಡ್-ಇನ್ -ಕಮಾಂಡ್ ಆಗಿ ಅಧಿಕಾರ ವಹಿಸಿಕೊಳ್ಳುವ ಮುನ್ನ ಅವರು, ಭಾರತದ ಮೊದಲ ಮತ್ತು ಏಕೈಕ ಜಂಟಿ ತ್ರಿ-ಸೇವೆಗಳ ಥಿಯೇಟರ್ ಕಮಾಂಡ್ ಆದ ಅಂಡಮಾನ್ ಮತ್ತು ನಿಕೋಬಾರ್‌ನ(ಎಎನ್‌ಸಿ) ಕಮಾಂಡರ್-ಇನ್-ಚೀಫ್ ಆಗಿಯೂ ಜವಾಬ್ದಾರಿ ನಿರ್ವಹಿಸಿದ್ದರು. ಅದಕ್ಕೂ ಮುನ್ನ, ಪಶ್ಚಿಮ ನೌಕಾ ಕಮಾಂಡ್‌ನ ಸಿಬ್ಬಂದಿ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು. ಆಪರೇಷನ್ ಸಿಂದೂರ್‌ನ ವೇಳೆ, ಪಶ್ಚಿಮದ ಕಡಲ ತೀರದಲ್ಲಿ ಎದುರಾದ ಭದ್ರತಾ ಸವಾಲು ಎದುರಿಸುವಲ್ಲಿ, ನೌಕಾ ಪಡೆ ಪ್ರಮುಖ ಯುದ್ಧೋಪಕರಣಗಳನ್ನು ಮುಂಚೂಣಿಯಲ್ಲಿ ನಿಯೋಜಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದರು.

ಸಂವಿಧಾನದ 142ನೇ ವಿಧಿ ಪ್ರಯೋಗಿಸಿದ ಸುಪ್ರೀಂ ಕೋರ್ಟ್

ಹೈಕೋರ್ಟ್‌ಗಳಲ್ಲಿ ತೀರ್ಪು ವಿಳಂಬಕ್ಕೆ ಬ್ರೇಕ್

ಹೊಸದಿಲ್ಲಿ: ಹೈಕೋರ್ಟ್‌ಗಳಲ್ಲಿ ವಾದ ಮುಗಿದ ಬಳಿಕ ತೀರ್ಪು ಪ್ರಕಟಿಸಲು ಆಗುತ್ತಿರುವ ದೀರ್ಘ ವಿಳಂಬಕ್ಕೆ ಕಡಿವಾಣ ಹಾಕಲು ಸುಪ್ರೀಂ ಕೋರ್ಟ್ ಮಹತ್ವದ ಹೆಜ್ಜೆ ಇಟ್ಟಿದೆ. ಸಂವಿಧಾನದ 142ನೇ ವಿಧಿಯ ವಿಶೇಷ ಅಧಿಕಾರವನ್ನು ಬಳಸಿಕೊಂಡಿರುವ ಸುಪ್ರೀಂ ಕೋರ್ಟ್, ಕಾಯ್ದಿರಿಸಿದ 3 ತಿಂಗಳ ಒಳಗೆ ತೀರ್ಪು ಪ್ರಕಟ ಮಾಡಬೇಕು ಎಂದು ಹೇಳಿದೆ. ನ್ಯಾಯಮೂರ್ತಿಗಳ ಪೀಠವು, 'ನ್ಯಾಯ ವಿಳಂಬವಾದರೆ ಅದು ನ್ಯಾಯ ನಿರಾಕರಣೆಯಂತೆಯೇ' ಎಂದು ಸ್ಪಷ್ಟಪಡಿಸಿದ್ದು, ಕಾಯ್ದಿರಿಸಿದ ತೀರ್ಪುಗಳನ್ನು ಅನಗತ್ಯವಾಗಿ ಬಾಕಿ ಇಡುವುದು ನ್ಯಾಯಾಂಗ ವ್ಯವಸ್ಥೆಯ ವಿಶ್ವಾಸಾರ್ಹತೆಗೆ ಧಕ್ಕೆ ತರುತ್ತದೆ ಎಂದು ಕಳವಳ ವ್ಯಕ್ತಪಡಿಸಿದೆ. ಸುಪ್ರೀಂ ಕೋರ್ಟ್ ದೇಶದ ವಿವಿಧ ಹೈಕೋರ್ಟ್‌ಗಳಿಂದ ಮಾಹಿತಿ ಸಂಗ್ರಹಿಸಿ, ನ್ಯಾಯಾಧೀಶರು ತೀರ್ಪು ಕಾಯ್ದಿರಿಸಿದ ಬಳಿಕ ಅದನ್ನು ಪ್ರಕಟಿಸಲು ತೆಗೆದುಕೊಳ್ಳುವ ಸಮಯದ ಕುರಿತು ಪರಿಶೀಲನೆ ನಡೆಸಿತ್ತು. ಈ ಹಿನ್ನೆಲೆಯಲ್ಲಿ ಎಲ್ಲ ಹೈಕೋರ್ಟ್‌ಗಳಿಗೆ ಏಕರೂಪದ ನಿಯಮಗಳನ್ನು ರೂಪಿಸುವ ಅಗತ್ಯವಿದೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಹಾಗೆಯೇ, ಹೈಕೋರ್ಟ್‌ಗಳು ಜಾಮೀನು ಅರ್ಜಿ ಬಗ್ಗೆ ಅಂದೇ ತೀರ್ಪು ನೀಡಬೇಕು, ಒಂದು ವೇಳೆ ತೀರ್ಪು ಕಾಯ್ದಿಟ್ಟರೆ ಮಾರನೇ ದಿನವೇ ಪ್ರಕಟಿಸಬೇಕು ಎಂದಿದೆ. ಒಂದು ವೇಳೆ ಜಾಮೀನು ನೀಡಿದಲ್ಲಿ ಅಂದೇ, ಕೆಳ ಹಂತದ ನ್ಯಾಯಾಲಯಗಳಿಗೆ ಮಾಹಿತಿ ನೀಡಬೇಕು. ಇದರಿಂದಾಗಿ ಜಾಮೀನು ಸಿಕ್ಕವರು ಅಂದೇ ಜೈಲಿನಿಂದ ಬಿಡುಗಡೆಯಾಗುವ ಅವಕಾಶ ಸಿಗುತ್ತದೆ ಎಂದಿದೆ.

ಹೈಕೋರ್ಟ್‌ಗಳು ತೀರ್ಪುಗಳನ್ನು ಪ್ರಕಟಿಸಿದ 24 ಗಂಟೆಗಳಲ್ಲಿ ತಮ್ಮ ವೆಬ್‌ಸೈಟ್‌ಗಳಲ್ಲಿ ಅಪ್‌ಲೋಡ್ ಮಾಡಬೇಕು ಎಂಬಿತ್ಯಾದಿ ಅಂಶಗಳ ಬಗ್ಗೆಯೂ ಅದು ಸೂಚನೆ ನೀಡಿದೆ. ಹಾಗೆಯೇ, ಈ ಆದೇಶಗಳು ಯಾರೋ ಒಬ್ಬ ನ್ಯಾಯಮೂರ್ತಿ ಅಥವಾ ನ್ಯಾಯ ಸಂಸ್ಥೆಗಳಿಗೆ ಸೂಚಿಸಿ ಹೇಳಿರುವಂಥದ್ದಲ್ಲ ಎಂದು ಸ್ಪಷ್ಟಪಡಿಸಿರುವ ಕೋರ್ಟ್, ತೀರ್ಪು ಪ್ರಕಟಿಸುವಲ್ಲಿ ಆಗುತ್ತಿದ್ದ ದೀರ್ಘಾವಧಿ ವಿಳಂಬದಿಂದಾಗಿ ದೇಶಕ್ಕೇ ಅನ್ವಯವಾಗುವಂತೆ ರಚಿಸಲಾಗಿದೆ ಎಂದು ಹೇಳಿದೆ ಎಂಬುದಾಗಿ ಟೈಮ್ಸ್ ಆಫ್ ಇಂಡಿಯಾ ವರದಿ ಮಾಡಿದೆ.

ಹೈಕೋರ್ಟ್‌ಗಳಿಗೆ ಸುಪ್ರೀಂ ಸೂಚನೆ

- ಕಾಯ್ದಿರಿಸಿದ ತೀರ್ಪುಗಳ ಕುರಿತು ನಿಯಮಿತ ಮೇಲ್ವಿಚಾರಣೆ ನಡೆಸಬೇಕು.
- ತೀರ್ಪು ಬಾಕಿ ಇರುವ ಪ್ರಕರಣಗಳ ಮಾಹಿತಿಯನ್ನು ಪಾರದರ್ಶಕವಾಗಿ ನಿರ್ವಹಿಸಬೇಕು.
- ತೀರ್ಪು ಪ್ರಕಟಣೆಗೆ ಅನಗತ್ಯ ವಿಳಂಬವಾಗದಂತೆ ಮುಖ್ಯ ನ್ಯಾಯಮೂರ್ತಿಗಳು ಕ್ರಮ ಕೈಗೊಳ್ಳಬೇಕು.
- ನ್ಯಾಯಾಂಗ ಆಡಳಿತದಲ್ಲಿ ಉತ್ತರದಾಯಿತ್ವ ಹೆಚ್ಚಿಸಲು ವ್ಯವಸ್ಥೆ ರೂಪಿಸಬೇಕು.

ವರದಕ್ಷಿಣೆಗಾಗಿ ಸೊಸೆ ಅವಮಾನಿಸುವುದು ಅಮಾನವೀಯ: ಸುಪ್ರೀಂ

ಮದುವೆ ಏಕೆ? ವಧು ಅವಮಾನಿಸುವುದೇಕೆ?

ಹೊಸದಿಲ್ಲಿ: ವರದಕ್ಷಿಣೆ ಕಿರುಕುಳ ಮತ್ತು ಸಾವು ಪ್ರಕರಣಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಒಬ್ಬ ಹುಡುಗಿಯನ್ನು ಮದುವೆಯಾಗಿ, ಆಕೆಯನ್ನು ಹಾಗೂ ಆಕೆಯ ಕುಟುಂಬವನ್ನು ಅವಮಾನಿಸುವುದು ಏಕೆ? ಎಂದು ಪ್ರಶ್ನಿಸಿದೆ. ಜತೆಗೆ, ಮದುವೆ ಎನ್ನುವುದು ಪರಸ್ಪರ ಗೌರವ, ವಿಶ್ವಾಸ ಮತ್ತು ಸಹಜೀವನದ ಪವಿತ್ರ ಬಂಧವಾಗಿದ್ದು, ಅದನ್ನು ಹಣ ಮತ್ತು ಆಸ್ತಿಗಾಗಿ ನಡೆಸುವ ವ್ಯವಹಾರವನ್ನಾಗಿ ಪರಿವರ್ತಿಸಿರುವುದು ಸಮಾಜದ ದುರಂತ ಎಂದು ನ್ಯಾಯಾಲಯ ಕಿಡಿಕಾರಿದೆ.

ವರದಕ್ಷಿಣೆ ಸಾವಿನ ಆರೋಪ ಎದುರಿಸುತ್ತಿರುವ ವ್ಯಕ್ತಿಗೆ ಹೈಕೋರ್ಟ್ ನೀಡಿದ್ದ ಜಾಮೀನನ್ನು ರದ್ದುಗೊಳಿಸಿದ ವೇಳೆ ನ್ಯಾಯಮೂರ್ತಿಗಳ ಪೀಠ ಈ ಕಠಿಣ ಅಭಿಪ್ರಾಯ ವ್ಯಕ್ತಪಡಿಸಿದೆ. ಇಂತಹ ಗಂಭೀರ ಪ್ರಕರಣಗಳಲ್ಲಿ ನ್ಯಾಯಾಲಯಗಳು ಜಾಮೀನು ನೀಡುವಾಗ ಅತ್ಯಂತ ಎಚ್ಚರಿಕೆ ವಹಿಸಬೇಕು. ಇಲ್ಲವಾದರೆ ಸಮಾಜದಲ್ಲಿ ತಪ್ಪು ಸಂದೇಶ ಹೋಗುವುದರ ಜತೆಗೆ ಅಪರಾಧಿಗಳಿಗೆ ಉತ್ತೇಜನ ನೀಡಿದಂತಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಾಲಯದ ಪ್ರಕಾರ, ವರದಕ್ಷಿಣೆ ಎಂಬ ಸಾಮಾಜಿಕ ಪಿಡುಗು ಮದುವೆಯ ಪಾವಿತ್ರ್ಯವನ್ನಷ್ಟೇ ಹಾಳುಮಾಡುತ್ತಿಲ್ಲ; ಮಹಿಳೆಯರ ಮೇಲೆ ವ್ಯವಸ್ಥಿತ ದೌರ್ಜನ್ಯ ಮತ್ತು ಶೋಷಣೆಯನ್ನೂ ಮುಂದುವರಿಸುತ್ತಿದೆ. ವರದಕ್ಷಿಣೆ ಬೇಡಿಕೆಗಳು ಕ್ರೌರ್ಯಕ್ಕೆ, ಅಂತಿಮವಾಗಿ ಯುವ ವಧುವಿನ ಅಸಹಜ ಸಾವಿಗೆ ಕಾರಣವಾದಾಗ ಅದು ಕೇವಲ ಒಂದು ಕುಟುಂಬದ ಖಾಸಗಿ ಸಮಸ್ಯೆಯಾಗಿ ಉಳಿಯುವುದಿಲ್ಲ. ಅದು ಇಡೀ ಸಮಾಜದ ಆತ್ಮಸಾಕ್ಷಿಗೆ ಸವಾಲಾಗುವ ಗಂಭೀರ ಸಾಮಾಜಿಕ ಅಪರಾಧವಾಗುತ್ತದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಪ್ರಕರಣದ ವಿಚಾರಣೆ ವೇಳೆ ನ್ಯಾಯಮೂರ್ತಿಗಳು, ವಧುವಿನ ಕುಟುಂಬದಿಂದ ಹಣ, ವಾಹನ ಅಥವಾ ಇತರೆ ಆಸ್ತಿ ಪಡೆಯುವ ಉದ್ದೇಶದಿಂದ ಮದುವೆ ಮಾಡಿಕೊಳ್ಳುವುದು ಸಮಾಜದಲ್ಲಿ ಇನ್ನೂ ಮುಂದುವರಿದಿರುವ ಕಳವಳಕಾರಿ ಪ್ರವೃತ್ತಿಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ಮದುವೆಯ ನಂತರ ಸೊಸೆ ಮತ್ತು ಆಕೆಯ ಕುಟುಂಬವನ್ನು ಹೀನಾಯವಾಗಿ ನಡೆಸಿಕೊಳ್ಳುವುದು ನಾಗರಿಕ ಸಮಾಜಕ್ಕೆ ಶೋಭೆ ತರುವುದಿಲ್ಲ ಎಂದು ಹೇಳಿದರು.

ನ್ಯಾಯಾಲಯವು ವರದಕ್ಷಿಣೆ ಸಾವು ಕೇವಲ ಒಬ್ಬ ಮಹಿಳೆಯ ವಿರುದ್ಧದ ಅಪರಾಧವಲ್ಲ, ಇಡೀ ಸಮಾಜದ ವಿರುದ್ಧದ ಅಪರಾಧ ಎಂದು ಪುನರುಚ್ಚರಿಸಿದೆ. ಇಂತಹ ಪ್ರಕರಣಗಳಲ್ಲಿ ಕಾನೂನಿನ ಕಟ್ಟುನಿಟ್ಟಿನ ಅನುಷ್ಠಾನ ಅಗತ್ಯವಾಗಿದ್ದು, ನ್ಯಾಯಾಂಗವು ಯಾವುದೇ ರೀತಿಯ ಮೃದು ಧೋರಣೆ ತೋರಬಾರದು ಎಂದು ಸ್ಪಷ್ಟಪಡಿಸಿದೆ.

ಮೂರಿನಕಟ್ಟೆ ಮತ್ತೊಂದು ದತ್ತಪೀಠ ಆಗದಿರಲಿ: ಅಶೋಕ

ಭಟ್ಕಳ: ಹಿಂದುಗಳ ಶ್ರದ್ಧಾಕೇಂದ್ರವಾದ ಮೂರಿನಕಟ್ಟೆಯನ್ನು ಮತ್ತೊಂದು ದತ್ತಪೀಠದಂತೆ ವಿವಾದಿತ ಪ್ರದೇಶವನ್ನಾಗಿ ಮಾಡಬೇಡಿ ಎಂದು ಜಿಲ್ಲಾಡಳಿತ, ಪೊಲೀಸ್ ಇಲಾಖೆಗೆ ಎಚ್ಚರಿಕೆ ನೀಡಿದ ರಾಜ್ಯದ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು, ತಕ್ಷಣ ಇದನ್ನು ಸರ್ಕಾರ ಮರು ನಿರ್ಮಾಣ ಮಾಡದೇ ಇದ್ದರೆ ನಾನೇ ಬಂದು ನಿರ್ಮಿಸುವೆ ಎಂದು ಎಚ್ಚರಿಸಿದ್ದಾರೆ.



ಅವರು ಶುಕ್ರವಾರ ಮೂರಿನಕಟ್ಟೆ ಧ್ವಂಸ ಖಂಡಿಸಿ ಇಲ್ಲಿನ ಬಿಜೆಪಿ ಮತ್ತು ಹಿಂದೂ ಸಂಘಟನೆಗಳ ವತಿಯಿಂದ ನಡೆದ ಬೃಹತ್ ಪ್ರತಿಭಟನಾ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು. ಮುರಿನಕಟ್ಟೆ ಪ್ರದೇಶ ಹಿಂದೂಗಳ ಶ್ರದ್ಧಾ ಭಕ್ತಿಯ ಸ್ಥಳವಾಗಿದೆ. ಈ ಪ್ರದೇಶ ದಲ್ಲಿ ನಿರ್ಮಿಸಿದ್ದ ಕಟ್ಟೆಯನ್ನು ಧ್ವಂಸ ಮಾಡಿದವರನ್ನು ಗೂಂಡಾ ಕಾಯ್ದೆ ಹಾಕಿ ಗಡಿಪಾರು ಮಾಡಬೇಕು. ಕಟ್ಟೆ ಧ್ವಂಸ ಮಾಡಿದವರು ದೇಶದ್ರೋಹಿಗಳು ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಕಟ್ಟೆಯನ್ನು ಇದ್ದ ಸ್ಥಳದಲ್ಲೇ ನಿರ್ಮಿಸಿಕೊಡಬೇಕು ಎಂದು ಒತ್ತಾಯಿಸಿದರು.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಇದ್ದ ಸ್ಥಳದಲ್ಲೇ ಕಟ್ಟೆ ಕಟ್ಟುತ್ತೇವೆ. ಮುಸ್ಲಿಮರಿಗೆ ಮೂರಿನಕಟ್ಟೆ ಸಂಬಂಧ ಇಲ್ಲದಿದ್ದರೂ ಧ್ವಂಸ ಮಾಡುವುದರ ಮೂಲಕ ಸಮಾಜದಲ್ಲಿ ಅಶಾಂತಿ ಮೂಡಿಸಿದ್ದಾರೆ. ಕಟ್ಟೆ ಧ್ವಂಸಕ್ಕೆ ಕುಮ್ಮಕ್ಕು ನೀಡಿದ ಮುಖಂಡರ ಮೇಲೂ ಕೇಸು ದಾಖಲಿಸಿ ಬಂಧಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಮಾಜಿ ಸಚಿವ ಶಿವಾನಂದ ನಾಯ್ಕ, ರಾಜ್ಯ ಬಿಜೆಪಿ ಉಪಾಧ್ಯಕ್ಷೆ ರೂಪಾಲಿ ನಾಯ್ಕ, ಮಾಜಿ ಶಾಸಕ ಸುನೀಲ ನಾಯ್ಕ, ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್.ಹೆಗಡೆ, ಬಿಜೆಪಿ ಮುಖಂಡ ಗೋವಿಂದ ನಾಯ್ಕ, ಬಿಜೆಪಿ ಮಂಡಲಾಧ್ಯಕ್ಷ ಲಕ್ಷ್ಮೀನಾರಾಯಣ ನಾಯ್ಕ, ಮಾಜಿ ಎಮ್ಮೆಲ್ಸಿ ಸಿದ್ದರಾಮಣ್ಣ ಸೇರಿದಂತೆ ಸಾವಿರಾರು ಜನರು ಪಾಲ್ಗೊಂಡಿದ್ದರು.

ರಾಮ ಬಾಣ



ಬಿಜೆಪಿ ಸ್ವಂತ ಶಕ್ತಿಯ ಮೇಲೆ ಅಧಿಕಾರ: ಬೊಮ್ಮಾಯಿ

ಹಾವೇರಿ: ನಿರ್ಗಮಿತ ಸಿಎಂ ಸಿದ್ದರಾಮಯ್ಯ ರಾಜ್ಯ ರಾಜಕಾರಣದಲ್ಲಿಯೇ ಇರುತ್ತೇನೆ ಎಂದಿರುವುದು ಡಿ.ಕೆ.ಶಿವಕುಮಾರ್‌ಗೆ ತೂಗುಗತ್ತಿ. ರಾಜ್ಯದಲ್ಲಿ ಯಾವುದೇ ಸಂದರ್ಭದಲ್ಲಿ ಚುನಾವಣೆ ನಡೆದರೂ ಬಿಜೆಪಿ ಸ್ವಂತ ಶಕ್ತಿಯ ಮೇಲೆ ಅಧಿಕಾರಕ್ಕೆ ಬರುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿದ್ದರಾಮಯ್ಯನವರು 4 ದಶಕಗಳ ಕಾಲ ಸುದೀರ್ಘ ರಾಜಕಾರಣದಲ್ಲಿದ್ದಾರೆ. 1983ರಲ್ಲಿ ರಾಜಕೀಯಕ್ಕೆ ಬಂದಿದ್ದರು. ಅವರು ನಮ್ಮ ತಂದೆಯವರಿಗೆ ಆತ್ಮೀಯರು, ನಮ್ಮ ತಂದೆಯವರ ಕ್ಯಾಬಿನೆಟ್‌ನಲ್ಲಿ ಸ್ಟೇಟ್ ಮಿನಿಸ್ಟರ್ ಆಗಿದ್ದರು. ನಂತರ ಕ್ಯಾಬಿನೆಟ್ ಮಂತ್ರಿ ಮಾಡಿದರು. ಎಲ್ಲಕ್ಕಿಂತ ಹೆಚ್ಚು ಅವರು ಅಹಿಂದ ಮಾಡಿದಾಗ ನಾನೊಬ್ಬನೇ ಅಹಿಂದ ವರ್ಗ ಬಿಟ್ಟು ಮುಖ್ಯ ಭಾಷಣ ಮಾಡಿದ್ದೆ. ಸಭಾಪತಿ ಬಸವರಾಜ ಹೊರಟ್ಟಿ ಅವರ ಸನ್ಮಾನ ಸಮಾರಂಭಕ್ಕೆ ಬಂದಾಗ ಅವರೇ ನೆನಪು ಮಾಡಿದ್ದರು. 2007ರಲ್ಲಿ ಜೆಡಿಎಸ್‌ನಿಂದ ಹೊರ ಬಂದು ಕಾಂಗ್ರೆಸ್‌ನಿಂದ ಉಪ ಚುನಾವಣೆಗೆ ಸ್ಪರ್ಧೆ ಮಾಡಿದ್ದರು. ಆಗ ನಾನು ಅವರಿಗೆ ಸಹಾಯ ಮಾಡಿದ್ದೆ. ಯಾವಾಗ ಅವರಿಗೆ ಕಷ್ಟ ಕಾಲ ಬಂದಿದೆ ಆಗ ಸಹಾಯ ಮಾಡಿದ್ದೇನೆ. ಯಾವಾಗ ಅವರು ಕಾಂಗ್ರೆಸ್‌ಗೆ ಹೋದರೋ ಆಗ ಅವರ ರಾಜಕೀಯ ಸಿದ್ಧಾಂತ ಬೇರೆಯಾಗಿದೆ ಎಂದರು.

ಮುಂದಿನ ದಿನಗಳಲ್ಲಿ ಸಿದ್ದರಾಮಯ್ಯ ಅವರ ಬೆಂಬಲಿಗರಿಗೆ ಎಷ್ಟು ಜನರಿಗೆ ಸಚಿವ ಸ್ಥಾನ ಸಿಗುತ್ತದೆ ಅವರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎನ್ನುವುದರ ಮೇಲೆ ಭವಿಷ್ಯ ನಿಂತಿದೆ. ಈ ಮೂರು ವರ್ಷದ ಕಾಂಗ್ರೆಸ್ ಆಡಳಿತದ ಬಗ್ಗೆ ಜನರು ಭ್ರಮ ನಿರಸನಗೊಂಡಿದ್ದಾರೆ. ಎಸ್ಸಿ ಎಸ್ಟಿ, ಒಬಿಸಿ ಜನರು ಬೇಸರಗೊಂಡಿದ್ದಾರೆ. ಅಭಿವೃದ್ಧಿ ಶೂನ್ಯವಾಗಿದೆ ಎಂದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಡಿಕೆಶಿಯವರು ಬಾಂಗ್ಲಾದವರನ್ನು ಬ್ರದರ್ಸ್ ಎನ್ನುತ್ತಾರೆ, ಅವರು ಇವರಿಗೆ ಯಾವ ರೀತಿ ಬ್ರದರ್ಸ್ ಅಂತ ತಿಳಿಯುತ್ತಿಲ್ಲ
- ಪ್ರಹ್ಲಾದ ಜೋಷಿ

- ಯಾವ ರೀತಿಯಲ್ಲೂ ಬ್ರದರ್ಸ್ ಅಲ್ಲವಾದರೂ ಯಾವುದೋ ಭೀತಿಯಿಂದ ಬ್ರದರ್ಸ್ ಆಗಲು ಸಾಧ್ಯವಾಗಿದೆ!

ದಿನ ಭವಿಷ್ಯ

ಮೇಷ
ಕೆಲಸದ ಒತ್ತಡ ಹೆಚ್ಚಾದರೂ ನಿಮ್ಮ ಉತ್ಸಾಹಕ್ಕೆ ಕೊರತೆಯಿಲ್ಲ. ವೃತ್ತಿಯಲ್ಲಿ ಪೂರಕ ಬೆಳವಣಿಗೆ. ಕೌಟುಂಬಿಕ ಹೊಣೆ ಅಧಿಕ.

ವೃಷಭ
ಕೆಲಸದಲ್ಲಿ ಸಂಕಷ್ಟ. ಆದರೆ ಖಾಸಗಿ ಬದುಕಿಗೆ ತೊಂದರೆ ಉಂಟಾಗದು. ಕುರುಡಾಗಿ ಅನ್ಯರನ್ನು ಅನುಕರಿಸಬೇಡಿ. ಸ್ವಂತಿಕೆಗೆ ಗಮನ ಕೊಡಿ.

ಮಿಥುನ
ವೃತ್ತಿಯಲ್ಲಿ ಹೆಚ್ಚುವರಿ ಹೊಣೆ. ಆಸ್ತಿಪಾಸ್ತಿ ಖರೀದಿಗೆ ಯೋಚಿಸಿದ್ದರೆ ಅನುಕೂಲ ಸಮಯ. ಬಂಧುಗಳ ಸಹಕಾರ. ಹೊಟ್ಟೆನೋವು ಕಾಡೀತು.

ಕಟಕ
ವೃತ್ತಿಯಲ್ಲಿ ಎಲ್ಲವೂ ಸಲೀಸು. ಆದರೆ ಮನೆಯಲ್ಲಿ ಅಭಿಪ್ರಾಯ ಭೇದ, ವಾಗ್ವಾದ ಸಂಭವ. ಮುಖ್ಯ ವಿಷಯದಲ್ಲಿ ಇಬ್ಬಂದಿತನ ಕಾಡಲಿದೆ.

ಸಿಂಹ
ಧಾರ್ಮಿಕ ಕ್ಷೇತ್ರದಲ್ಲಿ ಸಕ್ರಿಯರಾಗುವ ಅವಕಾಶ. ಸ್ವಂತ ಉದ್ಯೋಗಿಗಳಿಗೆ ಯಶಸ್ಸು. ಆರೋಗ್ಯ ಸಮಸ್ಯೆ ಶಮನ. ಸಾಂಸಾರಿಕ ಸೌಹಾರ್ದ.

ಕನ್ಯಾ
ಪ್ರಮುಖ ವ್ಯಕ್ತಿಯ ಸಂಪರ್ಕ ಸಾಧಿಸುವಿರಿ. ನಿಮ್ಮ ಕಾರ್ಯಕ್ಕೆ ನೆರವು ದೊರಕಲಿದೆ. ದೈಹಿಕ ನೋವು ಇದ್ದರೆ ಇಂದು ಶಮನವಾಗಲಿದೆ.

ತುಲಾ
ಹಣದ ವಿಚಾರದಲ್ಲಿ ಎಚ್ಚರದ ಹೆಜ್ಜೆಯಿಡಿ. ರಿಸ್ಕ್ ಇರುವ ಕ್ಷೇತ್ರದಲ್ಲಿ ಹಣ ಹೂಡಬೇಡಿ. ಕೆಲವರ ಟೀಕೆ ಎದುರಿಸುವಿರಿ. ಕುಟುಂಬಸ್ಥರ ಬೆಂಬಲ.

ವೃಶ್ಚಿಕ
ನಿಮ್ಮ ಕ್ರಿಯಾಶೀಲತೆ ಎಲ್ಲರ ಗಮನವನ್ನು ಸೆಳೆಯಲಿದೆ. ವೃತ್ತಿ ಕ್ಷೇತ್ರದಲ್ಲಿ ವಾಗ್ವಾದಕ್ಕೆ ಆಸ್ಪದ ನೀಡದಿರಿ. ಆರೋಗ್ಯ ಸುಸ್ಥಿರ.

ಧನು
ವೃತ್ತಿಯಲ್ಲಿ ಒತ್ತಡ. ಹಾಗಾಗಿ ಅಸಹನೆ ಹೆಚ್ಚು. ಉದ್ಯಮ ಕ್ಷೇತ್ರ ವಿಸ್ತಾರಕ್ಕೆ ಅವಕಾಶವಿದೆ. ಎಲ್ಲದರ ಮಧ್ಯೆ ಮನಶ್ಶಾಂತಿಗೆ ತುಡಿಯುವಿರಿ.

ಮಕರ
ಕೆಲಸದಲ್ಲಿ ಅಡ್ಡಿ. ಮಾನಸಿಕ ಖಿನ್ನತೆ. ಇತರರ ವಿಶ್ವಾಸದ ಕೊರತೆ. ದಂಪತಿ ಮಧ್ಯೆ ವಾಗ್ವಾದ ನಡೆದೀತು. ಹಣಕಾಸು ಪರಿಸ್ಥಿತಿ ಕ್ಲಿಷ್ಟಕರ.

ಕುಂಭ
ದೀರ್ಘಕಾಲದ ಬಳಿಕ ಆರ್ಥಿಕ ದೃಢತೆ. ಹೂಡಿಕೆಯಿಂದ ಲಾಭ. ಇತರರು ಹೇಳುವುದನ್ನು ಬೇಗ ನಂಬುತ್ತೀರಿ. ಪರಾಮರ್ಶೆ ಒಳಿತು.

ಮೀನ
ಫಲಪ್ರದ ದಿನ. ಆದರೂ ದಿನವಿಡೀ ಒತ್ತಡ. ವಿರಾಮದ ಅವಧಿಯಲ್ಲಿ ಪ್ರೀತಿಪಾತ್ರರ ಸಂಗದಲ್ಲಿ ಸಂಭ್ರಮಿಸುವ ಅವಕಾಶ. ಖರ್ಚು ಹೆಚ್ಚಲಿದೆ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 2,7,0,4

ಆರ್ಟ್ ಆಫ್ ಲಿವಿಂಗ್‌ನ 45ನೇ ವಾರ್ಷಿಕೋತ್ಸವದಲ್ಲಿ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅಭಿಮತ

ಯುವಕರಿಗೆ ರವಿಶಂಕರ್ ಗುರೂಜಿ ಮಾದರಿ

ಬೆಂಗಳೂರು: ಯುವ ಮನಸ್ಸುಗಳು ಆತ್ಮನಿಯಂತ್ರಣದಿಂದ ಮುನ್ನಡೆಯಬೇಕೇ ಹೊರತು ವ್ಯಸನಗಳಿಂದಲ್ಲ ಎಂದು ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹೇಳಿದರು.

ಬೆಂಗಳೂರಿನಲ್ಲಿ ನಡೆದ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ 45ನೇ ವಾರ್ಷಿಕೋತ್ಸವ ಹಾಗೂ ರವಿಶಂಕರ್ ಗುರೂಜಿ ಅವರ 70ನೇ ಜನ್ಮ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅವರು, ಯುವ ಮನಸ್ಸುಗಳು ಹಾನಿಕಾರಕ ವ್ಯಸನಗಳಿಗಿಂತ ಹೆಚ್ಚಾಗಿ ಆತ್ಮನಿಯಂತ್ರಣ ಮತ್ತು ಸಕಾರಾತ್ಮಕ ಮೌಲ್ಯಗಳಿಂದ ಮಾರ್ಗ ದರ್ಶನ ಪಡೆಯಬೇಕು ಎಂದರು. ಆಧುನಿಕತೆ ಮತ್ತು ಪ್ರಾಚೀನ ಪರಂಪರೆ ಪರಸ್ಪರ ಪೂರಕವಾಗಿವೆ. ಯುವಜನರು ಪ್ರಾಚೀನ ಮತ್ತು ಆಧುನಿಕತೆಯನ್ನು ಒಟ್ಟಿಗೆ ಕೊಂಡೊಯ್ಯಬಹುದಾದ ಸ್ಫೂರ್ತಿದಾಯಕ ಮಾದರಿಯನ್ನು ರವಿಶಂಕರ್ ಗುರೂಜಿ ಸಮಾಜದ ಮುಂದೆ ಇಟ್ಟಿದ್ದಾರೆ. ಸಂಸ್ಥೆಯ ಸೇವಾ ಆಧಾರಿತ ಉಪಕ್ರಮಗಳಲ್ಲಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಭಕ್ತಿ ಎಂದರೆ ಕೇವಲ ಆರಾಧನೆಯಲ್ಲ. ಭಕ್ತಿ ಎಂದರೆ ಸ್ವತಃ ತನ್ನ ಬಗ್ಗೆ, ಕುಟುಂಬ, ಸಮಾಜ, ರಾಷ್ಟ್ರ ಮತ್ತು ಮಾನವೀಯತೆಯೆಡೆಗಿನ ಸಮರ್ಪಣೆಯಾಗಿದೆ. ನಿಜವಾದ ಭಕ್ತಿ ಎಂದರೆ ಮಾನವೀಯತೆಗೆ ಸಮರ್ಪಿಸಿಕೊಳ್ಳುವುದು. ಆಧ್ಯಾತ್ಮಿಕತೆಯು ಜನರು ಇತರರೊಂದಿಗೆ ಶಾಂತಿಯಿಂದ ಬದುಕುವುದನ್ನು ಕಲಿಸುತ್ತದೆ ಮತ್ತು ಜೀವನವನ್ನು ಅರ್ಥಪೂರ್ಣ ಹಾಗೂ ಪರಿಪೂರ್ಣವಾಗಿಸುತ್ತದೆ ಎಂದು ಉಪ ರಾಷ್ಟ್ರಪತಿಯವರು ಹೇಳಿದರು.

ಸಂಘರ್ಷ ಮತ್ತು ಅನಿಶ್ಚಿತತೆಯಿಂದ ಕೂಡಿದ ಜಗತ್ತಿನಲ್ಲಿ ರವಿಶಂಕರ್ ಅವರು ಜ್ಞಾನ, ಜಾಗೃತಿ, ಶಾಂತಿ ಮತ್ತು ಸಾಮರಸ್ಯದ ಮೌಲ್ಯಗಳೊಂದಿಗೆ ಮಾನವಕುಲಕ್ಕೆ ಪ್ರೇರಣೆ ನೀಡುತ್ತಿದ್ದಾರೆ. ಧ್ಯಾನ, ಸೇವೆ, ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಪರಿಸರ ಉಪಕ್ರಮ ಗಳು ಮತ್ತು ಸರ್ವಧರ್ಮ ಸಂವಾದಗಳ ಮೂಲಕ ಸಾಮಾಜಿಕ ಪರಿವರ್ತನೆಯಲ್ಲಿ ಆಧ್ಯಾತ್ಮಿಕತೆಯು ವಹಿಸಬಹುದಾದ ಪ್ರಮುಖ ಪಾತ್ರವನ್ನು ಆರ್ಟ್ ಆಫ್ ಲಿವಿಂಗ್ ಪ್ರದರ್ಶಿಸಿದೆ. ಆರ್ಟ್ ಆಫ್ ಲಿವಿಂಗ್ ಆಂದೋಲನವು ಖಂಡಗಳು, ಸಂಸ್ಕೃತಿಗಳು ಮತ್ತು ತಲೆಮಾರುಗಳಾದ್ಯಂತ ಲಕ್ಷಾಂತರ ಜನರ ಜೀವನವನ್ನು ಸ್ಪರ್ಶಿಸಿದೆ. 181 ದೇಶಗಳಲ್ಲಿ ಕೇಂದ್ರಗಳನ್ನು ಹೊಂದಿದೆ ಎಂದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, ಪ್ರೀತಿ, ಶಾಂತಿ, ಸೇವೆ, ಸಾಮರಸ್ಯದ ಮೌಲ್ಯಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಹಿಂಸಾ ಚಾರ-ಮುಕ್ತ ಮತ್ತು ಒತ್ತಡ- ಮುಕ್ತ ಸಮಾಜ ನಿರ್ಮಾಣಕ್ಕೆ ಆಧ್ಯಾತ್ಮಿಕತೆ, ಮಾನ ವೀಯ ಸೇವೆ ಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದರು.

ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಜಾಗತಿಕ ಚಳವಳಿ ಕರ್ನಾಟಕದ ಪವಿತ್ರ ನೆಲದಲ್ಲಿ ಬೇರು ಬಿಟ್ಟಿರುವುದು ರಾಜ್ಯಕ್ಕೆ ಹೆಮ್ಮೆಯ ಸಂಗತಿ. ಮಾನವೀಯ ಸೇವೆಯೊಂದಿಗೆ ಪರಿಸರ ಸಂರಕ್ಷಣೆಯಲ್ಲಿಯೂ ಸಂಸ್ಥೆಯು ಮಹತ್ವದ ಕೊಡುಗೆ ನೀಡುತ್ತಿದೆ. ನವೀಕರಿಸಬಹುದಾದ ಇಂಧನ ಯೋಜನೆಗಳು, ತ್ಯಾಜ್ಯ ಮರುಬಳಕೆ ನವೀನತೆಗಳು ಹಾಗೂ ಗ್ರಾಮೀಣ ವಿದ್ಯುದ್ದೀಕರಣ ಉಪಕ್ರಮಗಳ ಮೂಲಕ ಸುಸ್ಥಿರ ಅಭಿವೃದ್ಧಿಗೆ ಉತ್ತೇಜನ ನೀಡುತ್ತಿದೆ ಎಂದರು. ಆರ್ಟ್ ಆಫ್ ಲಿವಿಂಗ್ ಫೌಂಡೇಶನ್‌ನ ಸ್ಮರಣಾರ್ಥ ಅಂಚೆ ಚೀಟಿಯನ್ನು ಬಿಡುಗಡೆ ಮಾಡಲಾಯಿತು. ಆರ್ಟ್ ಆಫ್ ಲಿವಿಂಗ್ ಫೌಂಡೇಶನ್‌ನ ರವಿಶಂಕರ್ ಗುರೂಜಿ ಉಪಸ್ಥಿತರಿದ್ದರು.

ನರೇಂದ್ರ ಮೋದಿಯಿಂದ ಡಿಜಿಟಲ್ ಇಂಡಿಯಾ



ದಾವಣಗೆರೆ: ಭಾರತವನ್ನು ತಾಂತ್ರಿಕ ಪ್ರಗತಿ ಮತ್ತು ಜಾಗತಿಕ ಜ್ಞಾನದ ನಾಯಕತ್ವದತ್ತ ಮುನ್ನಡೆಸುವ ಯುವ ಪ್ರತಿಭೆಗಳನ್ನು ರೂಪಿಸು ವಲ್ಲಿ ಇಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿದೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.

ನಗರದ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಶುಕ್ರವಾರ ಕಾಲೇಜಿನ ಅಮೃತ ಮಹೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು. ಭಾರತವು ತಂತ್ರಜ್ಞಾನ, ನಾವೀನ್ಯತೆ ಮತ್ತು ತನ್ನ ಯುವಶಕ್ತಿಯ ಅಪಾರ ಬಲದಿಂದ ಪ್ರೇರಿತವಾದ ಪರಿವರ್ತನಾ ಯುಗಕ್ಕೆ ಸಾಕ್ಷಿಯಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರ ಡಿಜಿಟಲ್ ಇಂಡಿಯಾ, ಮೇಕ್ ಇನ್ ಇಂಡಿಯಾ, ಸ್ಟಾರ್ಟ್ ಅಪ್ ಇಂಡಿಯಾ, ಸ್ಕಿಲ್ ಇಂಡಿಯಾ, ಸೆಮಿಕಂಡಕ್ಟರ್ ತಯಾರಿಕೆ, ಹಸಿರು ಇಂಧನ ಮತ್ತು ಆತ್ಮನಿರ್ಭರ ಭಾರತದಂತಹ ಉಪಕ್ರಮಗಳು ಯುವ ಇಂಜಿನಿಯರ್, ಸಂಶೋಧಕರು ಮತ್ತು ಉದ್ಯಮಿಗಳಿಗೆ ಅಭೂತಪೂರ್ವ ಅವಕಾಶ ಸೃಷ್ಟಿಸುತ್ತಿವೆ. 2047ರೊಳಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಭಾರತದ ಆಶಯವು ಬಹುಮಟ್ಟಿಗೆ ಎಂಜಿನಿಯರ್, ವಿಜ್ಞಾನಿಗಳು, ಸಂಶೋಧಕರು ಮತ್ತು ಉದ್ಯಮಿಗಳ ಮೇಲೆ ಅವಲಂಬಿತವಾಗಿದೆ ಎಂದರು.

ಯುಬಿಡಿಟಿ ಕಾಲೇಜಿನ 75 ವರ್ಷಗಳ ಪಯಣವು ದೃಷ್ಟಿಕೋನ, ಪರಿಶ್ರಮ, ಶೈಕ್ಷಣಿಕ ಶ್ರೇಷ್ಠತೆ ಮತ್ತು ಸಮಾಜಸೇವೆಯ ಪ್ರತಿಬಿಂಬ ವಾಗಿದೆ. ದೂರದೃಷ್ಟಿಯ ಸಂಸ್ಥಾಪಕರು, ಬದ್ಧತೆಯುಳ್ಳ ಶಿಕ್ಷಕರು, ಸಮರ್ಪಿತ ಆಡಳಿತಗಾರರು, ಪರಿಶ್ರಮಿ ವಿದ್ಯಾರ್ಥಿಗಳು ಮತ್ತು ಹಳೆಯ ವಿದ್ಯಾರ್ಥಿಗಳ ಕೊಡುಗೆಗಳಿಂದ ಶ್ರೇಷ್ಠ ಸಂಸ್ಥೆಗಳು ತಲೆಮಾರುಗಳ ಅವಧಿಯಲ್ಲಿ ನಿರ್ಮಾಣವಾಗುತ್ತವೆ. ಬ್ರಹ್ಮಪ್ಪ ದೇವೇಂದ್ರಪ್ಪ ತವನಪ್ಪನವರ್ ರವರ ದೂರದೃಷ್ಟಿಯ ದಾನಶೀಲತೆ ಮತ್ತು ಸಂಸ್ಥೆಯ ಸ್ಥಾಪನೆಗೆ ಆಶೀರ್ವಾದ ನೀಡಿದ ಮೈಸೂರು ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ರ ಕೊಡುಗೆ ಸ್ಮರಣೀಯ. ಇಂತಹ ಸಂಸ್ಥೆಗಳು ಶಿಕ್ಷಣ ಮತ್ತು ರಾಷ್ಟ್ರ ನಿರ್ಮಾಣದತ್ತ ತಮ್ಮ ಶಾಶ್ವತ ಬದ್ಧತೆಯ ಮೂಲಕ ತಲೆಮಾರುಗಳಿಗೆ ಸ್ಫೂರ್ತಿ ನೀಡುತ್ತವೆ ಎಂದು ಪ್ರಶಂಶಿಸಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾಂದನಾಥ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮಾಜಿ ಸಚಿವರಾದ ಎಂ.ಸಿ.ಸುಧಾಕರ್, ಎಸ್.ಎಸ್.ಮಲ್ಲಿಕಾರ್ಜುನ್, ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಮೈಸೂರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇದ್ದರು.

ಡಿ.ಕೆ.ಶಿವಕುಮಾರ್‌ಗೆ ಇಂದು ಪಟ್ಟ

ಪುಟ ೧➡ ಬಳಿಕ ಲೋಕಭವನಕ್ಕೆ ಮಾಹಿತಿ ರವಾನಿಸಲಾಗುತ್ತದೆ.

ದಿಲ್ಲಿಯಲ್ಲಿ ಬಿರುಸಿನ ಚಟುವಟಿಕೆ: ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಹೊಸದಿಲ್ಲಿಗೆ ತೆರಳಿದ್ದ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಶುಕ್ರವಾರ ದಿನವಿಡಿ ರಾಜಕೀಯ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದರು. ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಂಭವನೀಯ ಸಿಎಂ ಡಿ.ಕೆ.ಶಿವಕುಮಾರ್ ಇಬ್ಬರೂ ಪ್ರತ್ಯೇಕವಾಗಿ ತಮ್ಮದೇ ಆದ ಕಾರ್ಯತಂತ್ರಗಳಲ್ಲಿ ತೊಡಗಿಸಿಕೊಂಡಿದ್ದರು.

ಸೋನಿಯಾ ನಿವಾಸಕ್ಕೆ ಸಿದ್ದರಾಮಯ್ಯ ಭೇಟಿ: 10 ಜನಪತ್‌ನಲ್ಲಿರುವ ಸೋನಿಯಾ ಗಾಂಧಿ ನಿವಾಸದಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯರನ್ನು ಭೇಟಿ ಮಾಡಿದ ಸಿದ್ದರಾಮಯ್ಯ ಅವರು, ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದ ತಿಳಿಸಿದ್ದಾರೆ. ಕಾಂಗ್ರೆಸ್‌ನಲ್ಲಿ ನನ್ನನ್ನು ಅತ್ಯಂತ ಗೌರವಯುತವಾಗಿ ನಡೆಸಿಕೊಂಡಿದ್ದೀರಿ. ನಾನು ನಿಮಗೆ ನೀಡಿದ ಮಾತಿನಂತೆ ನನ್ನ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ಸೋನಿಯಾ ಹಾಗೂ ರಾಹುಲ್ ಗಾಂಧಿ ಅವರ ಬಳಿ ಹೇಳಿದ್ದಾರೆ.

ಖರ್ಗೆ ಆಶೀರ್ವಾದ ಪಡೆದ ಡಿಕೆಶಿ

ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ಡಿ.ಕೆ. ಶಿವಕುಮಾರ್ ಇಬ್ಬರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಅಲ್ಲದೇ ಮಲ್ಲಿಕಾರ್ಜುನ ಖರ್ಗೆ ಅವರ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆದುಕೊಂಡರು. ಅಂತೆಯೇ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿದ ಡಿ.ಕೆ. ಶಿವಕುಮಾರ್, ಹೊಸ ಸರ್ಕಾರ ರಚನೆ ಬಗ್ಗೆ ಮಾತುಕತೆ ನಡೆಸಿದ್ದಾರೆ.

ಸಿದ್ದರಾಮಯ್ಯ-ರಾಹುಲ್ ಆಲಿಂಗನ

ಪುಟ ೧➡ ಬಳಿಕ ರಾಜಾಜಿ ಮಾರ್ಗದಲ್ಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸಕ್ಕೆ ಸಿದ್ದರಾಮಯ್ಯ ಭೇಟಿ ನೀಡಿ, ತಮಗೆ ಸಹಕಾರ ನಿಡಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿದ್ದಾರೆ. ಬಳಿಕ ಲೋದಿ ರಸ್ತೆಯಲ್ಲಿರುವ ಕೆ.ಸಿ.ವೇಣುಗೋಪಾಲ್ ನಿವಾಸಕ್ಕೆ ತೆರಳಿ ವೇಣುಗೋಪಾಲರನ್ನು ಭೇಟಿಯಾಗಿ ಅವರಿಗೆ ಧನ್ಯವಾದ ಸಲ್ಲಿಸಿದ್ದಾರೆ. ಹೈಕಮಾಂಡ್ ನಾಯಕರ ಭೇಟಿಯ ಸಿದ್ದರಾಮಯ್ಯ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ.



ಸಿದ್ದರಾಮಯ್ಯ ರಾಜೀನಾಮೆ ಅಂಗೀಕರಿಸಿದ ರಾಜ್ಯಪಾಲ

ಪುಟ ೧➡ ಈ ಮೂಲಕ ಸಿದ್ದರಾಮಯ್ಯ ನೇತೃತ್ವದ ಸಂಪುಟ ವಿಸರ್ಜನೆಗೊಂಡಿದೆ. ಆದರೆ, ಮುಂದಿನ ಸರ್ಕಾರ ರಚನೆಯಾಗುವರೆಗೂ ಹಂಗಾಮಿಯಾಗಿ ಮುಂದುವರಿಯುವಂತೆ ರಾಜ್ಯಪಾಲರು ಸಿದ್ದರಾಮಯ್ಯ ಅವರಿಗೆ ಸೂಚಿಸಿದ್ದಾರೆ. ರಾಜ್ಯ ಸಚಿವ ಸಂಪುಟ ವಿಸರ್ಜನೆಗೊಂಡಿರುವ ಬಗ್ಗೆ ಗೆಜೆಟ್ ಅಧಿಸೂಚನೆ ಪ್ರಕಟವಾಗಿದ್ದು, ಸಚಿವರಿಗೆ ಹಂಚಿಕೆಯಾಗಿದ್ದ ಸರ್ಕಾರಿ ವಾಹನಗಳನ್ನು ವಾಪಸ್ ತೆಗೆದುಕೊಳ್ಳಲಾಗಿದೆ. ಹೀಗಾಗಿ ಮಾಜಿ ಸಚಿವರೆಲ್ಲರೂ ಖಾಸಗಿ ವಾಹನಗಳಿಗೆ ಶಿಫ್ಟ್ ಆಗಿದ್ದಾರೆ. ಇನ್ನೊಂದೆಡೆ ಸಚಿವರ ಸರ್ಕಾರಿ ನಾಮಫಲಕಗಳನ್ನು ತೆರವುಗೊಳಿಸಲಾಗಿದೆ.

ಆಪ್ತರ ಪಟ್ಟಿ ಹಿಡಿದು ದಿಲ್ಲಿಗೆ ತೆರಳಿದ್ದ ಡಿಕೆಶಿ: ಡಿ.ಕೆ.ಶಿವಕುಮಾರ್, ತಮ್ಮ ಕ್ಯಾಬಿನೆಟ್ ಸಚಿವರ ಅಂತಿಮ ಪಟ್ಟಿಯೊಂದಿಗೆ ದಿಲ್ಲಿಗೆ ತೆರಳಿದ್ದರು. ವಿಮಾನದಲ್ಲೇ ಕುಳಿತು ಆಪ್ತ ಶಾಸಕರ ಪಟ್ಟಿಯನ್ನು ಪರಿಶೀಲಿಸಿರುವ ಅವರು, ಹೈಕಮಾಂಡ್ ನಾಯಕರಿಗೆ ಇದನ್ನೇ ಸಲ್ಲಿಸಲಿದ್ದಾರೆ ಎಂದು ಹೇಳಲಾಗುತ್ತಿದೆ. ಹೈಕಮಾಂಡ್ ಒಪ್ಪಿಗೆ ನೀಡಿದರೆ, ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರದ ಜತೆ ಜತೆಯಲ್ಲೇ ಸಚಿವರ ಪದಗ್ರಹಣವೂ ನಡೆಯುವ ಸಾಧ್ಯತೆಯಿದೆ.

> **ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ 2 ಬಾರಿ ಸೇವೆ ಸಲ್ಲಿಸಿದ್ದು, ತಮ್ಮ ಆಡಳಿತಾವಧಿಯಲ್ಲಿ ಸಮಾನತೆ, ಸೌಹಾರ್ದತೆ ಹಾಗೂ ಹಿಂದುಳಿದವರ ಕಲ್ಯಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು. ಕರ್ನಾಟಕ ಹಾಗೂ ಕಾಂಗ್ರೆಸ್ ಅವರ ಸಾರ್ವಜನಿಕ ಸೇವೆಗೆ ಸದಾ ಕೃತಜ್ಞವಾಗಿದೆ. ಅವರಿಗೆ ಉತ್ತಮ ಆರೋಗ್ಯ ಹಾಗೂ ಜನಸೇವೆಯಲ್ಲಿ ಮುಂದುವರಿದ ಯಶಸ್ಸು ದೊರೆಯಲಿ.**
> ■ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಸಂಸದರಿಂದ ಸೇತುವೆ ಕಾಮಗಾರಿ ಪರಿಶೀಲನೆ

ಬೈಂದೂರು: ಕರಾವಳಿ ಹಾಗೂ ಮಲೆನಾಡು ಭಾಗದ ಸಂಪರ್ಕ ಕ್ರಾಂತಿಗೆ ಅತ್ಯಂತ ನಿರ್ಣಾಯಕವಾಗಿರುವ ರಾಷ್ಟ್ರೀಯ ಹೆದ್ದಾರಿ-766ಸಿ ರಸ್ತೆ ಅಭಿವೃದ್ಧಿ ಯೋಜನೆಯಡಿ, ಶರಾವತಿ ಹಿನ್ನೀರಿನ ಬೆಕ್ಕೋಡಿ ಪ್ರದೇಶದಲ್ಲಿ ತಲೆಎತ್ತಲಿರುವ ಎರಡು ಪ್ರಮುಖ ಬೃಹತ್ ಸೇತುವೆಗಳ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಶುಕ್ರವಾರ ಸಂಸದ ಬಿ.ವೈ. ರಾಘವೇಂದ್ರ ಅವರು ಸಂಬಂಧಿಸಿದ ರಾಷ್ಟ್ರೀಯ ಹೆದ್ದಾರಿ ವಲಯದ ಹಿರಿಯ ಇಲಾಖಾ ಅಧಿಕಾರಿಗಳು ಹಾಗೂ ತಾಂತ್ರಿಕ ಸಿಬ್ಬಂದಿಗಳೊಂದಿಗೆ ಭೇಟಿ ನೀಡಿ ಜಂಟಿ ಸ್ಥಳ ಪರಿಶೀಲನೆ ನಡೆಸಿದರು.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಒಟ್ಟು 13.832 ಕಿ.ಮೀ ಉದ್ದದ ಸಂಪೂರ್ಣ ಮರು-ಜೋಡಣೆ ಒಳಗೊಂಡಿರುವ ಈ ಬೃಹತ್ ಯೋಜನೆಯ ಒಟ್ಟು ಮಂಜೂರಾದ ವೆಚ್ಚ ರೂ. 313.56 ಕೋಟಿ. ಮಲೆನಾಡಿನ ಸಾರಿಗೆ ವ್ಯವಸ್ಥೆಯನ್ನೇ ಬದಲಾಯಿಸಲಿರುವ ಈ ಯೋಜನೆಯ ಪ್ರಗತಿಯನ್ನು ವೇಗಗೊಳಿಸಲು ಇಲಾಖೆಯ ಮುಖ್ಯ ಇಂಜಿನಿಯರ್‌ಗಳು ಮತ್ತು ಗುತ್ತಿಗೆದಾರರೊಂದಿಗೆ ಸವಿಸ್ತಾರವಾಗಿ ಚರ್ಚಿಸಿದರು.

ಮಾಜಿ ಸಚಿವ ವೆಂಕಟರಮಣಪ್ಪ ನಿಧನ

ಬೆಂಗಳೂರು: ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಮಾಜಿ ಸಚಿವ ವೆಂಕಟರಮಣಪ್ಪ (80) ಶುಕ್ರವಾರ ನಿಧನರಾಗಿದ್ದಾರೆ. ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಬೆಳಗ್ಗೆ 6 ಗಂಟೆ ಸುಮಾರಿಗೆ ಹೃದಯಾಘಾತದಿಂದ ಕೊನೆಯುಸಿರೆಳೆದಿದ್ದು, ಪುತ್ರ ಶಾಸಕ ಹೆಚ್.ವಿ. ವೆಂಕಟೇಶ್, ಕುಮಾರಸ್ವಾಮಿ, ಪುತ್ರಿ ಪದ್ಮಾವತಿ ಅವರನ್ನ ಅಗಲಿದ್ದಾರೆ. ಅನಾರೋಗ್ಯಕ್ಕೀಡಾಗಿದ್ದ ವೆಂಕಟರಮಣಪ್ಪ ಅವರನ್ನ ಬೆಂಗಳೂರಿನ ಫೋರ್ಟೀಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೆಂಕಟರಮಣಪ್ಪ ಅವರು 2008ರ ಅವಧಿಯಲ್ಲಿ ರೇಷ್ಮೆ ಮತ್ತು ಸಣ್ಣ ಕೈಗಾರಿಕಾ ಸಚಿವರಾಗಿ, 2018ರಲ್ಲಿ ಕಾರ್ಮಿಕ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಒಟ್ಟು ನಾಲ್ಕು ಬಾರಿ ಶಾಸಕರಾಗಿ ಚುನಾಯಿತರಾಗಿದ್ದರು. ಪಟ್ಟಣದ ಗುರುಭವನದಲ್ಲಿ ಇಂದು ಮಧ್ಯಾಹ್ನ ಮೃತರ ಪಾರ್ಥೀವ ಶರೀರವನ್ನು ಸಾರ್ವಜನಿಕ ಅಂತಿಮ ದರ್ಶನಕ್ಕೆ ಇಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಣ್ಯರ ಕಂಬನಿ

ಮಾಜಿ ಸಚಿವ ವೆಂಕಟರಮಣಪ್ಪ ನಿಧನಕ್ಕೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಚಿವರಾದ ಡಾ.ಜಿ.ಪರಮೇಶ್ವರ್, ಎಂ.ಬಿ.ಪಾಟೀಲ್, ಶಿವರಾಜ್ ತಂಗಡಗಿ, ಕೃಷ್ಣ ಬೈರೇಗೌಡ ಸೇರಿದಂತೆ ಹಲವು ನಾಯಕರು ಕಂಬನಿ ಮಿಡಿದಿದ್ದಾರೆ.

ಕಟ್ಟಿಣ ಹಳ್ಳದಲ್ಲಿ ಪತ್ತೆಯಾದ ಚಾಲುಕ್ಯರ ಹೊಸ ಶಾಸನ | ಲಕ್ಕುಂಡಿ ಅಭಿವೃದ್ಧಿಗೆ ವಿಶೇಷ ಒತ್ತು

ಪ್ರಾಧಿಕಾರಕ್ಕೆ 300ಕ್ಕೂ ಹೆಚ್ಚು ಪ್ರಾಚ್ಯಾವಶೇಷ ಹಸ್ತಾಂತರ

▸ ರುದ್ರಗೌಡ ಪಾಟೀಲ

ದಿಗಂತ ವಿಶೇಷ

ಗದಗ: ದಕ್ಷಿಣ ಭಾರತದ ಶಿಲ್ಪ ಕಲೆಯ ತೊಟ್ಟಿಲು ಐತಿಹಾಸಿಕ ಲಕ್ಕುಂಡಿ ಗ್ರಾಮದಲ್ಲಿ ಐತಿಹ್ಯವಿರುವ 101 ಗುಡಿ, 101 ಭಾವಿಗಳನ್ನು ಪತ್ತೆ ಹಚ್ಚಿ ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿಸುವ ಕನಸು ಕಂಡಿರುವ ಸರ್ಕಾರಕ್ಕೆ ಮತ್ತಷ್ಟು ಬಲ ಬಂದಿದೆ. ರೈತನೋರ್ವ ತಮ್ಮ ಜಮೀನಿನಲ್ಲಿ ಹಾಕಲಾಗಿದ್ದ 300ಕ್ಕೂ ಹೆಚ್ಚು ಪ್ರಾಚ್ಯಾವಶೇಷ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡಿದ್ದಾರೆ.

ಗ್ರಾಮದ ಪ್ರಸಿದ್ಧ ಮಾಣಿಕೇಶ್ವರ ಮತ್ತು ಮುಸ್ಕಿನ ಭಾವಿ ಕಲ್ಯಾಣಿಯ ಕೂಗುಳತೆಯ ದೂರದಲ್ಲಿರುವ ರೈತ ಬಸಪ್ಪ ಮುಸ್ಕಿನಭಾವಿ ಜಮೀನಿನ ಬದುವಿನಲ್ಲಿ ಹೂತು ಹೋಗಿದ್ದ 300 ಪ್ರಾಚ್ಯಾವಶೇಷಗಳನ್ನು ಬಯಲು ವಸ್ತು ಸಂಗ್ರಾಲಯಕ್ಕೆ ಹಸ್ತಾಂತರಿಸಿದ್ದು ಮೆಚ್ಚುಗೆ ವ್ಯಕ್ತವಾಗಿದೆ.

3 ಬಾವಿ, ಶಾಸನ ತೋರಿಸಿದ ಬಸಪ್ಪ: ತನ್ನ ಜಮೀನಿನಲ್ಲಿ 300 ಪ್ರಾಚ್ಯಾವಶೇಷಗಳು ಸೇರಿದಂತೆ ಪ್ರಾಚ್ಯಾವಶೇಷಗಳಿಂದ ನಿರ್ಮಾಣವಾದ



ಗ್ರಾಮದ ವಿವಿಧ ಭಾಗಗಳಲ್ಲಿದ್ದ ಕಳ್ಳಿಮಠ, ಉಮಚಗಿ, ಮತ್ತು ಶೆಟ್ಟರ ಭಾವಿಗಳನ್ನು ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ತಂದಿರುವ ಬಸಪ್ಪ ಅವರು ಕಟ್ಟಿಣ ಹಳ್ಳದಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ಶಾಸನವೊಂದನ್ನು ತೋರಿಸಿದ್ದು ಈ ಶಾಸನವು ಅತ್ಯಂತ ಮಹತ್ವದ್ದಾಗಿದೆ.

ಎಚ್‌ಕೆಪಿ ಶ್ಲಾಘನೆ

ಮಾಜಿ ಸಚಿವ ಎಚ್.ಕೆ.ಪಾಟೀಲ ರೈತ ಬಸಪ್ಪ ಮುಸ್ಕಿನಭಾವಿಗೆ ದೂರವಾಣಿ ಮೂಲಕ ಸಂಪರ್ಕ ಮಾಡಿ ರೈತನ ಕಾರ್ಯವನ್ನು ಶ್ಲಾಘಿಸಿ ಪ್ರಾಚ್ಯಾವಶೇಷಗಳ ಅನ್ವೇಷಣೆಗೆ ಸರ್ಕಾರ ಜತೆಗೆ ಕೈಜೋಡಿಸಿದ್ದು ಉತ್ತಮ ಕಾರ್ಯವಾಗಿದೆ. ಸರ್ಕಾರದಿಂದ ನಿಮಗೆ ಬಹುಮಾನ ನೀಡುವ ಕಾರ್ಯವನ್ನು ಮಾಡುತ್ತೇವೆ ಎಂದು ಭರವಸೆ ನೀಡಿದ್ದಾರೆ.

ಚಾಲುಕ್ಯ ಚಕ್ರವರ್ತಿ ಶಾಸನ: ಲಕ್ಕುಂಡಿಯಿಂದ ಸುಮಾರು 2-3 ಕಿ.ಮೀ. ದೂರದಲ್ಲಿರುವ ಕಟ್ಟಿ ಹಾಳದಲ್ಲಿ ನಾಥವಾಗಿ ಬಿದ್ದಿರುವ ಶಾಸನವು ಕಲ್ಯಾಣ ಚಾಲುಕ್ಯರಸರ ಕಾಲದ್ದಾಗಿದೆ. ಇದೊಂದು ಹೊಸ ಶಾಸನವಾಗಿದೆ. ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಒಂದು ತುಂಡು ಶಾಸನವಾಗಿದ್ದು 13 ಸಾಲುಗಳನ್ನು ಒಳಗೊಂಡಿದೆ. ಚಾಲುಕ್ಯ ಪ್ರಶಸ್ತಿ ಹೆಸರಿರುವ ಈ ಶಾಸನವು ಚಾಲುಕ್ಯ ಚಕ್ರವರ್ತಿ 2ನೇ ಜಗದೇಕಮಲ್ಲ ನಾಳ್ವಿಕೆಯನ್ನು ಸೂಚಿಸುತ್ತದೆ. ಇದರಲ್ಲಿ ಕುಂತಳನಾಡು, ಮಾಸವಾಡಿ ಆಡಳಿತದ ಘಟಕಗಳ ಉಲ್ಲೇಖವಿದೆ.

ಜಗದೇಕಮಲ್ಲ ದೇವನು ಒಬ್ಬ ಮಹಾಮಂಡೇಶ್ವರನ ಪ್ರಶಸ್ತಿಯನ್ನು ಹೊಗಳಿದೆ. ಆದರೆ, ಅವನ ಹೆಸರು ಲಭ್ಯವಿಲ್ಲ. ಶಾಸನದ ಭಾಗ ಬಹುತೇಕ ತುಂಡಾಗಿಕಳೆದು ಹೋಗಿರುವುದರಿಂದ ಹೆಚ್ಚಿನ ವಿವರಗಳು ಅಲಭ್ಯ. ಶಾಸನದ ಆರಂಭದಲ್ಲಿ ಶಿವಸ್ತುತಿ ಇರುವುದರಿಂದ ಶಿವಾಲಯಕ್ಕೆ ಭೂದಾನ ಕೊಟ್ಟ ಶಾಸನವಾಗಿರಬಹುದು. ಶಾಸನದ ಸ್ಪಷ್ಟ ಕಾಲ ಲಭ್ಯವಿಲ್ಲ. ಜಗದೇಮಲ್ಲನ ಆಳ್ವಿಕೆಯ ಕಾಲ ಕ್ರಿಶ 1139-1149 ಹಾಗಾಗಿ ಹತ್ತು ವರ್ಷದ ರಾಜ್ಯಾಡಳಿತ ಅವಧಿಯಲ್ಲಿ ಈ ಶಾಸನ ರಚನೆಯಾಗಿದೆ. ಲಿಪಿ ದೃಷ್ಠಿಯಿಂದ ಶಾಸನದ ಕಾಲ 12ನೇ ಶತಮಾನದ ರಚನೆ ಎಂದು ಶಾಸನ ಸಂಶೋಧಕ ಡಾ.ರವಿಕುಮಾರ ನವಲಗುಂದ ಸಂಶೋಧಿಸಿದ್ದಾರೆ ಎಂದು ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸಲಹಾ ಸಮಿತಿಯ ಸದಸ್ಯ ಸಿದ್ಧಲಿಂಗೇಶ್ವರ ಪಾಟೀಲ ಹಾಗೂ ಆಯುಕ್ತ ಶರಣು ಗೋಗೇರಿ ತಿಳಿಸಿದ್ದಾರೆ.

> **ಲಕ್ಕುಂಡಿ ಜನತೆ ತಮ್ಮೂರಿನ ಇತಿಹಾಸ ಬೆಳಕಿಗೆ ಬರಲು ಪ್ರಾಚ್ಯಾವಶೇಷಣೆಯಲ್ಲಿ ಪಾಲ್ಗೊಂಡು ಇಲ್ಲಿಯ ಸಂಸ್ಕೃತಿ, ಸಂಪ್ರದಾಯ ಎತ್ತರಕ್ಕೆ ಬೆಳೆಯಲು ಸಹಕರಿಸುತ್ತಿದೆ.**
> ■ ಎಚ್.ಕೆ.ಪಾಟೀಲ, ಮಾಜಿ ಸಚಿವ

> **ಗ್ರಾಮದ ಹಿರಿಯರು, ಯುವಕರು ಪ್ರಾಚ್ಯಾವಶೇಷಗಳ ಅನ್ವೇಷಣೆಯಲ್ಲಿ ಭಾಗವಹಿಸಿ ಈವರೆಗೂ 3 ಸಾವಿರಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳು ಪತ್ತೆಯಾಗಲು ಬೆನ್ನೆಲುಬಾಗಿ ನಿಂತಿದ್ದು ಸಂತಸ ತಂದಿದೆ.**
> ■ ಸಿದ್ಧಲಿಂಗೇಶ್ವರ ಪಾಟೀಲ, ಸದಸ್ಯ ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ

> **ನಮ್ಮ ಜಮೀನಿನ ಬದುವಿನಲ್ಲಿ ಹಳೆಯ ಕಾಲದ ಗುಡಿಯ ಕಲ್ಲುಗಳು ಹಲವಾರು ವರ್ಷಗಳಿಂದ ಇದ್ದಿದ್ದವು ಅವುಗಳನ್ನು ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ಸಿದ್ದು ಪಾಟೀಲ ಅವರಿಗೆ ತಿಳಿಸಿ ಹಸ್ತಾಂತರ ಮಾಡಿದ್ದೇವೆ.**
> ■ ಬಸಪ್ಪ ಮುಸ್ಕಿನಭಾವಿ, ರೈತ

ಜೂ.5ರಿಂದ 21ರವರೆಗೆ ವಿಶೇಷ ಕಾರ್ಯಕ್ರಮ

ಕಲಬುರಗಿ: ಪ್ರಧಾನಮಂತ್ರಿ ಮೋದಿಯವರ ನೇತೃತ್ವದ ಎನ್‌ಡಿಎ ಸರ್ಕಾರವು ದೇಶ ಮೊದಲು ಎಂಬ ಧ್ಯೇಯದೊಂದಿಗೆ ಕಳೆದ 12 ವರ್ಷಗಳಿಂದ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದು, ಜೂನ್ 7ಕ್ಕೆ 12 ವರ್ಷಗಳನ್ನು ಪೂರ್ಣಗೊಳಿಸಲಿದೆ. ಈ ನಿಟ್ಟಿನಲ್ಲಿ ದೇಶಾದ್ಯಂತ ಜೂನ್ 5ರಿಂದ 21ರ ವರೆಗೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.



ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಪಕ್ಷದ ಸಂಘಟನೆ ಹಾಗೂ ಮುಂಬರುವ ದಿನಗಳಲ್ಲಿ ನಡೆಸುವ ಹೋರಾಟಗಳ ಕುರಿತಾದ ಜಿಲ್ಲಾ ಮಟ್ಟದ ಸಂಘಟನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ಕೇಂದ್ರ ಸರ್ಕಾರವು ಬಡವರು, ಶೋಷಿತರು ಮತ್ತು ವಂಚಿತರ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳನ್ನು ಜಾರಿಗೆ ತಂದು, ರೈತರ ಹಿತಾಸಕ್ತಿ ರಕ್ಷಣೆ, ಮಹಿಳಾ ಸಬಲೀಕರಣ, ದೇಶದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದೆ ಎಂದರು.

ಜಾಗತಿಕ ಸವಾಲುಗಳನ್ನು ಅವಕಾಶಗಳಾಗಿ ಪರಿವರ್ತಿಸಿ ವಿಕಸಿತ ಭಾರತ ಗುರಿಯತ್ತ ಸರ್ಕಾರ ವೇಗವಾಗಿ ಸಾಗುತ್ತಿದೆ.ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ದೀರ್ಘಕಾಲ ಸೇವೆ ಸಲ್ಲಿಸುತ್ತಿರುವ ನಿರಂತರವಾಗಿ ಚುನಾಯಿತ ಪ್ರಧಾನಮಂತ್ರಿಗಳಲ್ಲಿ ಒಬ್ಬರಾಗಿದ್ದು, ಸಾರ್ವಜನಿಕ ಸೇವೆಯಲ್ಲಿ ಮತ್ತೊಂದು ಮಹತ್ವದ ಮೈಲಿಗಲ್ಲು ಸಾಧಿಸಿದ್ದು, ಎನ್‌ಡಿಎ ಸರ್ಕಾರದ 12 ವರ್ಷಗಳ ವಿಶ್ವಾಸ ಅಭಿವೃದ್ಧಿ ಮತ್ತು ಜನಕಲ್ಯಾಣ ಕಾರ್ಯಕ್ರಮದ ಅಂಗವಾಗಿ ಜೂನ್ 5ರಿಂದ 21ರವರೆಗೆ ದೇಶಾದ್ಯಂತ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲು ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಸೂಚನೆ ನೀಡಿದ್ದಾರೆ ಎಂದರು. ಸಭೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಬಿಜೆಪಿ ನಗರಾಧ್ಯಕ್ಷ ಚಂದು ಪಾಟೀಲ್, ಮಾಜಿ ಸಂಸದ ಡಾ.ಉಮೇಶ್ ಜಾಧವ್, ವಿಧಾನ ಪರಿಷತ್ ಸದಸ್ಯ ಬಿ.ಜಿ. ಪಾಟೀಲ್ ಇದ್ದರು.

ಸೇವಂತಿ ಹೂ…



ಚಿಕ್ಕಬಳ್ಳಾಪುರದಲ್ಲಿ ಶುಕ್ರವಾರ ಸೇವಂತಿಗೆ ಹೂ ಬಿಡಿಸುವ ಕಾರ್ಯದಲ್ಲಿ ನಿರತರಾದ ಮಹಿಳೆಯರು.

ಭೀಮಾತೀರದಲ್ಲಿ 6 ಮಂದಿ ಹತ್ಯೆ

ವಿಜಯಪುರ/ಚಡಚಣ: ಕೆಲ ದಿನಗಳಿಂದ ಶಾಂತವಾಗಿದ್ದ ಭೀಮಾತೀರದಲ್ಲಿ ಮತ್ತೆ ರಕ್ತದೋಕುಳಿ ಹರಿದಿದ್ದು, ಒಂದೇ ಕುಟುಂಬದ ಐದು ಜನ ಸೇರಿ 6 ಜನರನ್ನು ಕಬ್ಬು ಕಡಿಯುವ ಕೊಯ್ತಾದಿಂದ ಕೊಚ್ಚಿ ಬರ್ಬರ ಹತ್ಯೆ ಮಾಡಿರುವ ಘಟನೆ ಜಿಲ್ಲೆಯ ಚಡಚಣ ತಾಲೂಕಿನ ಗೋವಿಂದಪುರ ಗ್ರಾಮದಲ್ಲಿ ನಡೆದಿದೆ.

ಇಲ್ಲಿನ ಚಂದು ರೇವಣಸಿದ್ದಪ್ಪ ನಿರಾಳೆ (55), ದುಂಡಪ್ಪ ರೇವಣಸಿದ್ದ ನಿರಾಳೆ (65), ಶಿವಪುತ್ರ ರೇವಣಸಿದ್ದಪ್ಪ ನಿರಾಳೆ (58), ರಾಹುಲ್ ಶಿವಪುತ್ರ ನಿರಾಳೆ (25), ಸಮರ್ಥ ಶಿವಪುತ್ರ ನಿರಾಳೆ (23) ಹಾಗೂ ಶಬ್ಬೀರ್ ಬಾಬುಸಾಬ್ ಅತ್ತಾರ (45) ಮೃತಪಟ್ಟವರು. ಇನ್ನು ಈ ಘಟನೆಯಲ್ಲಿ ಅರವಿಂದ ಯಶವಂತ ಕಟಗೆ (72), ಸಂದೀಪ ಭಾರತ ಮಾನೆ (33) ಗಾಯಗೊಂಡಿದ್ದಾರೆ. ಚಡಚಣದ ನಿರಾಳೆ ಕುಟುಂಬವು ನೀವರಗಿಯ ತೇಲಿ ಕುಟುಂಬದಿಂದ ಗೋವಿಂದಪುರ ಗ್ರಾಮದ ಸುಮಾರು 25 ಎಕರೆ ಭೂಮಿಯನ್ನು ಖರೀಸಿದ್ದರು. ನೀವರಗಿ ಗ್ರಾಮದ ತೇಲಿ ಕುಟುಂಬ ಮತ್ತು ಆರೋಪಿಗಳು ಎನ್ನಲಾದ ಗೊಳಗಿ ಎಂಬವರ ಮಧ್ಯೆ ಕಳೆದ 15- 16 ವರ್ಷಗಳಿಂದ ಈ ಜಮೀನಿನ ಕುರಿತು ವಿವಾದವಿತ್ತು. ತೇಲಿ ಕುಟುಂಬ ಕಳೆದ 15 ವರ್ಷಗಳಿಂದ ಈ ಜಮೀನಿನಲ್ಲಿ ಕೃಷಿ ಮಾಡುತ್ತಿರಲಿಲ್ಲ. ಅಲ್ಲದೆ ಅದನ್ನು ಚಡಚಣದ ನಿರಾಳೆ ಕುಟುಂಬಕ್ಕೆ ಮಾರಾಟ ಮಾಡಿತ್ತು. ಈ ಜಮೀನಿನ ವ್ಯಾಜ್ಯವೇ 6 ಜನರ ಕೊಲೆಗೆ ಕಾರಣವಾಗಿದೆ ಎಂದು ಪೊಲೀಸರು ಶಂಕಿಸಿದ್ದಾರೆ.

ಆರೋಪಿಗಳ ಪತ್ತೆಗೆ ವಿಶೇಷ ತಂಡ

ಶುಕ್ರವಾರ ನಡೆದ ಘಟನೆಯಲ್ಲಿ ಒಂದೇ ಕುಟುಂಬದ ಐವರು ಸೇರಿದಂತೆ ಒಟ್ಟು ಆರು ಮಂದಿ ಮೃತಪಟ್ಟಿರುವುದು ಭೀಮಾತೀರ ಪ್ರದೇಶವನ್ನು ಬೆಚ್ಚಿ ಬೀಳಿಸಿದೆ. ಘಟನೆ ಗ್ರಾಮದಲ್ಲಿ ಆತಂಕದ ವಾತಾವರಣ ಸೃಷ್ಟಿಸಿದ್ದು, ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ವಿಜಯಪುರದ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ. ಈ ಸಂಬಂಧ ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಆರೋಪಿಗಳ ಪತ್ತೆಗೆ ವಿಶೇಷ ತಂಡಗಳನ್ನು ರಚಿಸಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಕಿರುಸುದ್ದಿ

ಒತ್ತಡಕ್ಕೆ ಮಣಿದು ಸಿಎಂ ರಾಜೀನಾಮೆ: ಅಶೋಕ

ಭಟ್ಕಳ: ರಾಜ್ಯ ಕಾಂಗ್ರೆಸ್ ಹೈಕಮಾಂಡಿಗೆ ಎ.ಟಿ.ಎಂ ಯಂತ್ರ ಆಗಲಿದೆ ಎಂದು ರಾಜ್ಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು. ಭಟ್ಕಳದಲ್ಲಿ ಮೂರಿನಕಟ್ಟೆ ಪ್ರತಿಭಟನೆಯಲ್ಲಿ ಪಾಲ್ಗೊಂಡು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಹುದ್ದೆಯನ್ನು ಸಿದ್ದರಾಮಯ್ಯ ಬಿಟ್ಟು ಕೊಟ್ಟಿಲ್ಲ ಡಿ.ಕೆ.ಶಿವಕುಮಾರ ಅವರು ಅದನ್ನು ಕಿತ್ತುಕೊಂಡಿದ್ದಾರೆ. ಅವರ ಒತ್ತಡಕ್ಕೆ ಮಣಿದು ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ಅವರಿಗೆ ಸ್ವಲ್ಪವೂ ಕಾಲಾವಕಾಶ ನೀಡದೆ ರಾಜೀನಾಮೆ ಪಡೆದಿದೆ ಎಂದರೆ ಕಾಂಗ್ರೆಸ್ ಹೈಕಮಾಂಡ್ ಕಣ್ಣಿಟ್ಟ ಎ.ಟಿ.ಎಂಗೆ ಡಿ.ಕೆ. ಶಿವಕುಮಾರ ಮುಖ್ಯಸ್ಥರಾಗಲಿದ್ದಾರೆ ಎಂದು ವ್ಯಂಗ್ಯವಾಡಿದರು. ಸಿದ್ದರಾಮಯ್ಯ ಅವರ ಅವಧಿಯಲ್ಲಿದ್ದ ಭ್ರಷ್ಟಾಚಾರ ಈಗ ಇನ್ನಷ್ಟು ಹೆಚ್ಚಲಿದ್ದು, ರಾಜ್ಯದ ಜನತೆ ಸಮಸ್ಯೆ ಹೆಚ್ಚಲಿದೆ.ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ ಇಬ್ಬರೂ ಒಂದೇ ಮನಸ್ಥಿತಿಯವರಾಗಿದ್ದು, ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟಕ್ಕೆ ಯತ್ನಿಸಿದ ಉಗ್ರನನ್ನು ಬ್ರದರ್ ಎಂದು ಕರೆದ ಡಿ.ಕೆ.ಶಿವಕುಮಾರ ಸಿಎಂ ಆದರೆ ಯಾವ ಪರಿಸ್ಥಿತಿ ಇರಲಿದೆ ಎನ್ನುವುದನ್ನು ಯೋಚಿಸಬೇಕಿದೆ ಎಂದು ಹೇಳಿದರು. ಸಂಪದ ವಿಶ್ವೇಶ್ವರ ಹೆಗಡೆ ಕಾಗೇರಿ, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ, ಮಾಜಿ ಶಾಸಕ ಸುನೀಲ ನಾಯ್ಕ ಇದ್ದರು.



ಹಣ ದುರುಪಯೋಗ; ಮೂವರು ಇಒ ಅಮಾನತು

ಮಧುಗಿರಿ: ತಾಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ನಿವೃತ್ತ, ಸ್ವಯಂ ನಿವೃತ್ತಿ ಹಾಗೂ ಮರಣ ಹೊಂದಿದ ಸರ್ಕಾರಿ ನೌಕರರ ಗಳಿಕೆ ರಜೆ ನಗದೀಕರಣದಲ್ಲಿ ಬರೋಬ್ಬರಿ 4,24,06,997ರೂ. ಗಳ ಬೃಹತ್ ಆರ್ಥಿಕ ಅಕ್ರಮ ನಡೆದಿ ರುವುದು ಸಾಬೀತಾಗಿದೆ. ಈ ಹಿನ್ನೆಲೆಯಲ್ಲಿ ಮೂವರು ಕಾರ್ಯನಿರ್ವಾಹಕ ಅಧಿಕಾರಿಗಳನ್ನು (ಇಒ) ಸೇವೆಯಿಂದ ತಕ್ಷಣವೇ ಅಮಾನತುಗೊಳಿಸಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಂಟಿ ಕಾರ್ಯದರ್ಶಿ ಜಯಲಕ್ಷ್ಮಿ ಆದೇಶ ಹೊರಡಿಸಿದ್ದಾರೆ. ವಿಶೇಷ ಲೆಕ್ಕ ಪರಿಶೋಧನಾ ತಂಡವು ನಡೆಸಿದ ಪರಿಶೀಲನೆಯಲ್ಲಿ ಈ ಭ್ರಷ್ಟಾಚಾರ ಬೆಳಕಿಗೆ ಬಂದಿದೆ.

ಅಮಾನತುಗೊಂಡ ಅಧಿಕಾರಿಗಳು: ದೊಡ್ಡಸಿದ್ದಯ್ಯ ಹಿಂದಿನ ಇಒ, ಮಧುಗಿರಿ – ಹಾಲಿ ಇಒ, ಚಿಕ್ಕನಾಯಕನಹಳ್ಳಿ, ಲಕ್ಷ್ಮಣ್ ಹಾಲಿ ಇಒ, ಮಧುಗಿರಿ, ಶಶಿಧರ್ ಎಚ್ ಹಿಂದಿನ ಇಒ, ಮಧುಗಿರಿ – ಹಾಲಿ ಇಒ, ಚಳ್ಳಕೆರೆ, ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ಅನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ.

ರಸ್ತೆ ಅಪಘಾತ: ಐವರು ಸಾವು

ಚಿತ್ರದುರ್ಗ: ಕಾರಿನ ಟೈರ್ ಸ್ಫೋಟಗೊಂಡ ಪರಿಣಾಮ ಲಾರಿಗೆ ಕಾರಿಗೆ ಡಿಕ್ಕಿ ಹೊಡೆದು ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಐದು ಜನ ಮೃತಪಟ್ಟಿರುವ ಘಟನೆ ಮೊಳಕಾಲ್ಮುರು ತಾಲೂಕಿನ ತುಮಕೂರ್ಲಹಳ್ಳಿ ಬಳಿಯ ಶ್ರೀನಿವಾಸ ಡಾಬಾ ಬಳಿ ಗುರುವಾರ ರಾತ್ರಿ ಸಂಭವಿಸಿದೆ. ಮೃತರನ್ನು ಚಳ್ಳಕೆರೆ ನಗರದ ನಿವಾಸಿಗಳಾದ ಕಾರಿನ ಚಾಲಕ ರಘು (40), ರುದ್ರೇಶ್ (36), ಮಲ್ಲಿಕಾರ್ಜುನ (38), ಚಳ್ಳಕೆರೆ ನಗರಸಭೆ ಸದಸ್ಯ ಪ್ರಮೋದ್ (35) ಹಾಗೂ ಚಳ್ಳಕೆರೆ ತಾಲ್ಲೂಕಿನ ಮೀರದಿಮ್ಮನಹಳ್ಳಿ ನಿವಾಸಿ ಸೋಮಶೇಖರ (35) ಎಂದು ಗುರುತಿಸಲಾಗಿದೆ.

ಸಿಎಂ ರಾಜೀನಾಮೆ ಕುರಿತು ಡಿ.ಕೆ.ಶಿವಕುಮಾರ್ ಎಕ್ಸ್‌ನಲ್ಲಿ ಭಾವನಾತ್ಮಕ ಪೋಸ್ಟ್

ಮೇರು ನಾಯಕ ಸಿದ್ದು

ಬೆಂಗಳೂರು: ದೇವರು ವರನೂ ಕೊಡಲ್ಲ, ಶಾಪನೂ ಕೊಡಲ್ಲ. ಅವಕಾಶ ಮಾತ್ರ ಕೊಡುತ್ತಾನೆ. ಆ ಕೊಟ್ಟಿರುವ ಅವಕಾಶದಲ್ಲಿ ನಾವು ಏನು ಸಾಧನೆ ಮಾಡುತ್ತೇವೆ ಎಂಬುದು ಮುಖ್ಯ. ಇದಕ್ಕೆ ಅತ್ಯುತ್ತಮ ಉದಾಹರಣೆಯೇ ನಮ್ಮ ಸಿದ್ದರಾಮಯ್ಯನವರು ಎಂದು ಸಿದ್ದರಾಮಯ್ಯ ರಾಜೀನಾಮೆ ಕುರಿತು ಡಿ.ಕೆ. ಶಿವ ಕುಮಾರ್ ಭಾವನಾತ್ಮಕವಾಗಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮೈಸೂರು ಜಿಲ್ಲೆಯ ಹಳ್ಳಿಯೊಂದರಲ್ಲಿ ಹುಟ್ಟಿ, ಬೆಳೆದು, ಹೋರಾಟದ ಮೂಲಕ ರಾಜಕೀಯಕ್ಕೆ ಬಂದು, ಸಾಮಾಜಿಕ ನ್ಯಾಯದ ಹರಿಕಾರ ಹಾಗೂ ಬಡವರ ಬಂಧುವಾಗಿ ಕರ್ನಾಟಕದ ಮುಖ್ಯಮಂತ್ರಿ ಯಾಗಿ ಸೇವೆ ಸಲ್ಲಿಸಿದ ನನ್ನ ಆತ್ಮೀಯರಾದ ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಯಶಸ್ವಿ, ಪ್ರಭಾವಶಾಲಿ ಹಾಗೂ ದೀರ್ಘಾವಧಿ ಮುಖ್ಯಮಂತ್ರಿಯಾಗಿ ಜನಮಾನಸದಲ್ಲಿ ನೆಲೆಸಿರುವ ಅವರು, ಭಾರತೀಯ ರಾಜಕಾರಣದ ಧೀಮಂತ ನಾಯಕ.

ಜನಪರ ಯೋಜನೆಗಳಿಂದ ಹಿಡಿದು ರಾಜ್ಯದಲ್ಲಿ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಅವರು ನೀಡಿದ ಕೊಡುಗೆ ಅವಿಸ್ಮರಣೀಯ. ಸುಮಾರು ಐವತ್ತು ವರ್ಷಗಳ ಅವರ ಅಗಾಧ ರಾಜಕೀಯ ಅನುಭವ, ಸಾಮಾಜಿಕ ಕಳಕಳಿ ಮತ್ತು ಜನಪರ ಯೋಜನೆಗಳು ಸದಾ ಸ್ಮರಣೀಯ. 2020ರಲ್ಲಿ ನಾನು ಕೆಪಿಸಿಸಿ ಅಧ್ಯಕ್ಷ ನಾಗಿ ಆಯ್ಕೆಯಾದ ದಿನದಿಂದಲೂ ಇಂದಿನವರೆಗೆ, ಸಿದ್ದರಾಮಯ್ಯನವರು ನನ್ನ ಹೆಗಲಿಗೆ ಹೆಗಲು ಕೊಟ್ಟು ಪಕ್ಷ ಸಂಘಟನೆಯಲ್ಲಿ ಜೊತೆಯಾಗಿ ನಿಂತಿದ್ದಾರೆ.

ಅವರ ಆಡಳಿತದಲ್ಲಿ ನಾನು ಸಚಿವನಾಗಿ, ಡಿಸಿಎಂ ಆಗಿ ಮಾರ್ಗದರ್ಶನ ಪಡೆದು ಕೊಂಡಿದ್ದು ನನ್ನ ಭಾಗ್ಯ. ಮುಂದಿನ ದಿನಗಳಲ್ಲೂ ರಾಜ್ಯದ ಹಿತದೃಷ್ಟಿಯಿಂದ ಹಾಗೂ ನಮ್ಮ ಪಕ್ಷದ ಬಲವರ್ಧನೆಗೆ ಅವರ ಮಾರ್ಗದರ್ಶನ, ಹಿರಿಯ ಅನುಭವ ನಮಗೆ ಹೀಗೆಯೇ ಮುಂದುವರಿಯಲಿ ಎಂದು ಆಶಿಸುತ್ತೇನೆ. ಕರ್ನಾಟಕದ ಪ್ರಗತಿಗಾಗಿ ನಾವೆಲ್ಲರೂ ಒಟ್ಟಾಗಿ ನಡೆಯೋಣ ಎಂದು ಪೋಸ್ಟ್ ಮಾಡಿದ್ದಾರೆ.



ಸಿದ್ದರಾಮಯ್ಯ ಅವರನ್ನು ಶ್ಲಾಘಿಸಿದ ಮಲ್ಲಿಕಾರ್ಜುನ ಖರ್ಗೆ

ಹೊಸದಿಲ್ಲಿ/ಬೆಂಗಳೂರು: ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಾರ್ವಜನಿಕ ಜೀವನವನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಶ್ಲಾಘಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದಿರುವ ಅವರು, ಸಿದ್ದರಾಮಯ್ಯ ಅವರ ಸಾರ್ವಜನಿಕ ಜೀವನ ಸದಾ ಗೌರವ, ಕರುಣೆ ಮತ್ತು ಸಾಮಾಜಿಕ ನ್ಯಾಯದ ಬದ್ಧತೆಯನ್ನು ಪ್ರತಿಬಿಂಬಿಸಿದೆ ಎಂದು ಖರ್ಗೆ ಹೇಳಿದ್ದಾರೆ. ಸಿದ್ದರಾಮಯ್ಯ ಅವರು ತಮ್ಮ ಜೀವನದ ಆರಂಭದಿಂದಲೇ ಸಮಾನತೆ ಮತ್ತು ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ನಿರಂತರವಾಗಿ ಹೋರಾಡಿದ್ದಾರೆ. ಸರಳ ಹಿನ್ನೆಲೆಯಿಂದ ಬಂದ ಸಿದ್ದರಾಮಯ್ಯ ಅವರು ಕರ್ನಾಟಕದ ಮುಖ್ಯಮಂತ್ರಿಯಾಗಿ ಎರಡು ಬಾರಿ ಸೇವೆ ಸಲ್ಲಿಸಿದ್ದು, ತಮ್ಮ ಆಡಳಿತಾವಧಿಯಲ್ಲಿ ಸಮಾನತೆ, ಸೌಹಾರ್ದತೆ ಹಾಗೂ ಹಿಂದುಳಿದವರ ಕಲ್ಯಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು ಎಂದು ತಿಳಿಸಿದ್ದಾರೆ. ಕರ್ನಾಟಕ ಹಾಗೂ ಕಾಂಗ್ರೆಸ್ ಪಕ್ಷವು ಅವರ ಸಾರ್ವಜನಿಕ ಸೇವೆಗೆ ಸದಾ ಕೃತಜ್ಞವಾಗಿದೆ. ಸಿದ್ದರಾಮಯ್ಯ ಅವರಿಗೆ ಉತ್ತಮ ಆರೋಗ್ಯ ಹಾಗೂ ಜನಸೇವೆಯಲ್ಲಿ ಮುಂದುವರಿದ ಯಶಸ್ಸು ದೊರೆಯಲಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾರೈಸಿದ್ದಾರೆ.



ಅಹಿಂದ ಧ್ವಜ ಹಿಡಿದು ಮುನ್ನಡೆಯುತ್ತೇನೆ: ಸತೀಶ್

ಬೆಂಗಳೂರು: ಅಹಿಂದ ಅಂದರೆ ಸುಮಾರು 500 ಜಾತಿಗಳಿವೆ. ನಾನು ಅಹಿಂದ ಧ್ವಜ ಹಿಡಿದು ಮುನ್ನಡೆಯುತ್ತೇನೆ. ಯಾರಾದರೂ ಒಬ್ಬರು ಅಹಿಂದ ಧ್ವಜ ಒಯ್ಯಲೇಬೇಕಲ್ವಾ? ಹೊಸ ಅಹಿಂದ ನಾಯಕ ಉದಯ ಆಗಲೇಬೇಕು, ಆ ವ್ಯವಸ್ಥೆ ರಾಜ್ಯದಲ್ಲಿದೆ ಎಂದು ಸತೀಶ್ ಜಾರಕಿಹೊಳಿ ತಿಳಿಸಿದರು.

ಸಚಿವ ಸ್ಥಾನಕ್ಕಾಗಿ ಶಾಸಕರಿಂದ ಲಾಬಿ

ಬೆಂಗಳೂರು: ರಾಜೀನಾಮೆ ಪ್ರಹಸನ ಮುಗಿಯುತ್ತಿದ್ದಂತೆ ಸಿಎಂ ಮತ್ತು ಡಿಸಿಎಂ ದೆಹಲಿಗೆ ಪ್ರಯಾಣ ಬೆಳೆಸುತ್ತಿದ್ದಂತೆ ಬೆಂಬಲಿಗ ಶಾಸಕರು ಮತ್ತು ಕೆಲ ವಿಧಾನ ಪರಿಷತ್ತಿನ ಸದಸ್ಯರು ಕೂಡ ಅವರನ್ನು ಹಿಂಬಾಲಿಸಿದ್ದಾರೆ. ಡಜನ್‌ಗೂ ಹೆಚ್ಚು ಶಾಸಕರು ಅಲ್ಲಿಯೇ ಬೀಡುಬಿಟ್ಟು, ಸಂಪುಟದಲ್ಲಿ ಸೇರಲು ಲಾಬಿ ಶುರು ಮಾಡಿದ್ದಾರೆ.

ಕೆಲ ಶಾಸಕರು ಶುಕ್ರವಾರ ಬೆಳಿಗ್ಗೆ ದೆಹಲಿಗೆ ಹಾರಿದ್ದರೆ, ಹಲವರು ರಾತ್ರಿಯೇ ತೆರಳಿದ್ದಾರೆ. ಜಾತಿ, ಪ್ರದೇಶ, ಪಕ್ಷನಿಷ್ಠೆ, ವ್ಯಕ್ತಿನಿಷ್ಠೆ ಹೀಗೆ ವಿವಿಧ ನೆಲೆಗಳಲ್ಲಿ ತಮ್ಮ ನಾಯಕರ ಮೇಲೆ ಪ್ರಭಾವ ಬೀರಲು ಕಸರತ್ತು ನಡೆಸಿದ್ದಾರೆ. ಈ ಹಿನ್ನೆಲೆಯಲ್ಲಿ ದೆಹಲಿ ನಾಯಕರನ್ನೂ ಭೇಟಿಯಾಗಲು ಯತ್ನಿಸುತ್ತಿದ್ದಾರೆ.

ಕ್ಷೇತ್ರದ ಪ್ರಮುಖ ಮುಖಂಡರೊಂದಿಗೆ ದೆಹಲಿ ಪ್ರಯಾಣ ಬೆಳೆಸಿರುವ ಶಾಸಕರು ಮತ್ತು ಮೂರ್ನಾಲ್ಕು ಜನ ಮೇಲ್ಮನೆ ಸದಸ್ಯರು, ತಮ್ಮ ರಾಜಕೀಯ ಪಯಣ ಸೇರಿದಂತೆ ಯುಕ್ತ ಮಾಹಿತಿಯ ಪ್ರತಿ ಹಿಡಿದುಕೊಂಡು ನಾಯಕರ ಸಂಪರ್ಕಕ್ಕೆ ಯತ್ನಿಸುತ್ತಿದ್ದಾರೆ. ಈ ತಂಡದಲ್ಲಿ 3 ಮತ್ತು ಅದಕ್ಕಿಂತ ಹೆಚ್ಚು ಸಲ ಶಾಸಕರಾದವರು ಹಾಗೂ ಯುವ ಶಾಸಕರೂ ಇದ್ದಾರೆ. ಇದರಲ್ಲಿ ಕೆಲವರು ಡಿ.ಕೆ. ಶಿವಕುಮಾರ್ ಬಣದಲ್ಲಿ ಗುರುತಿಸಿಕೊಂಡವರಿದ್ದರೆ, ಹಲವರು ಸಿದ್ದರಾಮಯ್ಯ ಅವರಿಗೆ ನಿಷ್ಠರಾದವರು ಆಗಿದ್ದಾರೆ.

ಈ ಎರಡೂ ಬಣಗಳ ಹೊರತಾಗಿ ಪಕ್ಷಕ್ಕೆ ನಿಷ್ಠರಾಗಿದ್ದು, ವರಿಷ್ಠರ ಕೋಟಾದಲ್ಲಿ ಸಂಪುಟದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳುವ ಹವಣಿಕೆಯಲ್ಲೂ ಕೆಲವರಿದ್ದಾರೆ. ಸಂಪುಟದಲ್ಲಿ ಸ್ಥಾನ ಸಿಗದಿದ್ದರೂ, ಕೊನೆಪಕ್ಷ ನಿಗಮ-ಮಂಡಳಿಯಾದರೂ ಸಿಗಬಹುದು ಎಂಬ ಲೆಕ್ಕಾಚಾರವೂ ಇದರ ಹಿಂದಿದೆ ಎಂದು ಮೂಲಗಳು ತಿಳಿಸಿವೆ. ಆದರೆ, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಒಳಗೊಂಡಂತೆ ಸಂಪುಟ ರಚನೆಯಲ್ಲಿ ನಿರ್ಣಾಯಕ ಪಾತ್ರ ವಹಿಸಲಿರುವ ನಾಯಕರು ಈಗಾಗಲೇ ತಮ್ಮದೇ ಆದ ಪಟ್ಟಿ ಸಿದ್ಧಪಡಿಸಿಟ್ಟುಕೊಂಡಿದ್ದಾರೆ. ಅದನ್ನು ಕ್ರೋಢೀಕರಿಸಿ, ಅಂತಿಮ ಪಟ್ಟಿಯನ್ನು ವರಿಷ್ಠರ ಮುಂದಿಡಲಾಗುತ್ತದೆ ಎಂದು ಹೇಳಲಾಗಿದೆ.

ಕೋಲಾರಕ್ಕೆ ಮೂರು ಸಚಿವ ಸ್ಥಾನ ಕೊಡಿ

ಈ ಮಧ್ಯೆ, ಕೋಲಾರ ಜಿಲ್ಲೆಯ ಕಾಂಗ್ರೆಸ್ ನಾಯಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದು, ಜಿಲ್ಲೆಗೆ ಒಟ್ಟು ಮೂರು ಸಚಿವ ಸ್ಥಾನಗಳನ್ನು ನೀಡುವಂತೆ ಒತ್ತಾಯಿಸಿದ್ದಾರೆ. ಕೋಲಾರ ಜಿಲ್ಲೆಯ ಶಾಸಕರಿಗೆ ಸಾಮಾಜಿಕನ್ಯಾಯ ಮತ್ತು ಜಾತಿ ಸಮೀಕರಣದ ಆಧಾರದ ಮೇಲೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿರುವ ಮುಖಂಡರು, ಈ ಪೈಕಿ ಸತತ ಮೂರು ಬಾರಿ ಗೆದ್ದಿರುವ ಎಸ್.ಎನ್. ನಾರಾಯಣಸ್ವಾಮಿ ಅವರಿಗೆ ಪರಿಶಿಷ್ಟ ಜಾತಿ (ಬಲಗೈ) ಕೋಟಾದಡಿ ಸಚಿವ ಸ್ಥಾನ ನೀಡಬೇಕು. ಅದೇ ರೀತಿ, ಎರಡನೇ ಬಾರಿ ಆಯ್ಕೆಯಾದ ಮಾಲೂರಿನ ಶಾಸಕ ಕೆ.ವೈ. ನಂಜೇಗೌಡ ಮತ್ತು ಕೋಲಾರ ಶಾಸಕ ಕೊತ್ತೂರು ಜಿ. ಮಂಜುನಾಥ್ ಅವರಿಗೆ ಸಾಮಾನ್ಯ ಕೋಟಾದಡಿ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಒಬಿಸಿಗೆ ರಾಹುಲ್ ಅಪಮಾನ: ಶ್ರೀರಾಮುಲು

ಬಳ್ಳಾರಿ: ಒಬಿಸಿ ನಾಯಕರ ಬಗ್ಗೆ ಮಾರುದ್ದ ಮಾತನಾಡುತ್ತಿದ್ದ ಎಐಸಿಸಿ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ, ಒಬಿಸಿ ಪ್ರಬಲ ನಾಯಕ ಸಿಎಂ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ, ಒಬಿಸಿ ಸಮುದಾಯಕ್ಕೆ ಅಪಮಾನ ಮಾಡಿದ್ದಾರೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ವಾಗ್ದಾಳಿ ನಡೆಸಿದರು.



ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಧಾನ ಮಂತ್ರಿ ಮೋದಿ ಅವರ ಸಂಪುಟದಲ್ಲಿ ಎಷ್ಟು ಜನರು ಒಬಿಸಿ ಅವರಿದ್ದಾರೆ ಎಂದು ಪ್ರಶ್ನಿಸುತ್ತಿದ್ದ ರಾಹುಲ್ ಗಾಂಧಿ ಮಾಡಿದ್ದೇನು?. ಕುರುಬ ಸಮಾಜದ, ಒಬಿಸಿ ವರ್ಗದ ಪ್ರಭಾವಿ ನಾಯಕ ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಿ ಅವರನ್ನು ಅಪಮಾನ ಮಾಡಿದ್ದಾರೆ. ಇದು ರಾಜ್ಯದ ಒಬಿಸಿ ಎಲ್ಲ ನಾಯಕರ ಕಣ್ಣನ್ನು ಕೆಂಪಾಗಿಸಿದೆ ಎಂದರು.

ಕುರುಬಸಮುದಾಯದವರುಹೋರಾಟದಹಾದಿತುಳಿದಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರನ್ನು ಬಲವಂತವಾಗಿ ಕೆಳಗಿಳಿಸಲಾಗಿದೆ. ಸಿದ್ದರಾಮಯ್ಯ ಅವರ ಮೊಗದಲ್ಲಿ ತೀವ್ರ ದುಃಖ ಕಾಣಿಸುತ್ತಿದೆ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯನ್ನಾಗಿ ಮುಂದುವರಿಯಲು ಕೈ ನಾಯಕರು ಬಿಡಲಿಲ್ಲ. ಒತ್ತಾಯದಿಂದ ಅವರನ್ನು ರಾಹುಲ್ ರಾಜೀನಾಮೆ ಕೊಡಿಸಿದ್ದಾರೆ. ಕಾಂಗ್ರೆಸ್‌ನ ಈ ಬೆಳವಣಿಗೆ ಇಡೀ ಒಬಿಸಿ ಸಮುದಾಯವರನ್ನು ಕೆರಳಿಸಿದೆ ಎಂದರು.

3 ವರ್ಷ ಸಿದ್ದರಾಮಯ್ಯ ಅವರನ್ನು ನೆಮ್ಮದಿಯಿಂದ ಆಡಳಿತ ನಡೆಸಲು ಬಿಡಲಿಲ್ಲ, ಅವರ ಕುರ್ಚಿ ಕಾಲನ್ನು ಡಿಕೆಶಿ, ಖರ್ಗೆ ಅವರು ಎಳೆಯುತ್ತಿದ್ದರು. ಬಹುತೇಕ ಆಕಾಂಕ್ಷಿಗಳು ಸಿಎಂ ಕುರ್ಚಿಯನ್ನು ಎಳೆದಾಡಿ,ಎಳೆದಾಡಿ ಕುರ್ಚಿ ಸಡಿಲವಾಗಿತ್ತು. ಬ್ಯಾಲೆನ್ಸ್ ತಪ್ಪಿರುವ ಕುರ್ಚಿಯನ್ನು ಡಿ.ಕೆ.ಶಿವಕುಮಾರ ಅವರಿಗೆ ಕೊಟ್ಟಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ ಅಧಿಕಾರಕ್ಕೆ ತರಲು ಸಂಕಲ್ಪ

ರಾಜ್ಯದಿಂದ ಕಾಂಗ್ರೆಸ್ ತೊಲಗಬೇಕು ಎಂದು ಜನರು ಸಂಕಲ್ಪ ಮಾಡಿದ್ದಾರೆ. 2028ರಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಪಡೆದು ಅಧಿಕಾರಕ್ಕೆ ಬರಲಿದೆ. ಇದರಲ್ಲಿ ಅನುಮಾನವೇ ಬೇಡ. ಅಹಿಂದ ನಾಯಕ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿ ಕಾಂಗ್ರೆಸ್ ದೊಡ್ಡ ತಪ್ಪು ಮಾಡಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಿದ್ದರಾಮಯ್ಯ ಅವರಿಂದಲೇ ಹೆಚ್ಚು ಶಾಸಕರು ಗೆಲುವು ಸಾಧಿಸಿದ್ದು, ಕಾಂಗ್ರೆಸ್‌ನಿಂದ ಸಿದ್ದರಾಮಯ್ಯ ಅಲ್ಲ, ಸಿದ್ದರಾಮಯ್ಯ ಅವರಿಂದಲೇ ಕಾಂಗ್ರೆಸ್ ಇದೆ. ಇದನ್ನು ವರಿಷ್ಠರು ಮರೆತಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಎಲ್ಲ ಸಮುದಾಯದವರು ಸೇರಿ ಕಾಂಗ್ರೆಸ್ ಮುಗಿಸುವ ಕೆಲಸ ಮಾಡಲಿದ್ದಾರೆ ಎಂದರು.

ಯಾವುದೇ ಜವಾಬ್ದಾರಿ ನಿಭಾಯಿಸಲು ಸಿದ್ಧ

ಬೆಂಗಳೂರು: ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದು, ಪಕ್ಷ ನೀಡುವ ಯಾವುದೇ ಜವಾಬ್ದಾರಿ ನಿಭಾಯಿಸಲು ಸಿದ್ಧ ಎಂದು ಮಾಜಿ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಶುಕ್ರವಾರ ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿ, ನಾನು ಈ ಹಿಂದೆ ಪೌರಾಡಳಿತ ಸಚಿವನಾಗಿ ಹಲವು ಸುಧಾರಣೆ ತಂದಿದ್ದೇನೆ. ಸಮ್ಮಿಶ್ರ ಸರ್ಕಾರದ ಸಮಯದಲ್ಲಿ ಮತ್ತು ಬಿಜೆಪಿ ಆಡಳಿತ ಇದ್ದಾಗ 5 ವರ್ಷಗಳ ಕಾಲ ಕೆಪಿಸಿಸಿ ಕಾರ್ಯಾಧ್ಯಕ್ಷನಾಗಿ ಪಕ್ಷ ಸಂಘಟನೆಗಾಗಿ ಶ್ರಮಿಸಿದ್ದೇನೆ. ವರಿಷ್ಠರು ಕೈಗೊಳ್ಳುವ ನಿರ್ಧಾರಕ್ಕೆ ನಾನು ಬದ್ಧ ಎಂದರು. ಪಕ್ಷ ನಿಷ್ಠರು ಮತ್ತು ದಕ್ಷತೆಯಿಂದ ಕೆಲಸ ಮಾಡಿದವರನ್ನು ಕಾಂಗ್ರೆಸ್ ಪಕ್ಷ ಸದಾ ಗುರುತಿಸಿ, ಸ್ಥಾನಮಾನ ನೀಡಿದೆ. ನಾನು ಪ್ರಸ್ತುತ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷನೂ ಆಗಿದ್ದು, ನಮ್ಮ ಸಮುದಾಯಕ್ಕೆ ಸೂಕ್ತ ಸ್ಥಾನ ಮಾನ ದೊರಕಬೇಕು. ಹೆಚ್ಚಿನ ಶಾಸಕರಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ಸಿಗಬೇಕು ಎಂಬುದು ನನ್ನ ಆಶಯ ಎಂದರು.



ಪಕ್ಷ ಯಾವುದೇ ಜವಾಬ್ದಾರಿ ನೀಡಿದರೂ ಕಾಯ, ವಾಚ, ಮನಸಾ ಹಾಗೂ ಶ್ರದ್ಧೆಯಿಂದ ಕೆಲಸ ಮಾಡುತ್ತೇನೆ. ಪಕ್ಷದ ವರಿಷ್ಠರು, ಸಮಾಜದ ವಿವಿಧ ಸ್ತರಗಳ ಜನರು ಅರಣ್ಯ ಸಚಿವನಾಗಿ ನಾನು ಮಾಡಿರುವ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಂಘಟಿತ ಪ್ರಯತ್ನದಿಂದ ಪಕ್ಷಕ್ಕೆ ಬಲ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಾವು ಸ್ವಇಚ್ಛೆಯಿಂದ ರಾಜೀನಾಮೆ ನೀಡಿರುವುದಾಗಿ ಹೇಳಿದ್ದಾರೆ. ಜೊತೆಗೆ ರಾಜ್ಯ ರಾಜಕಾರಣದಲ್ಲೇ ಇದ್ದು ಪಕ್ಷ ಬೆಳೆಸುವುದಾಗಿ ತಿಳಿಸಿದ್ದಾರೆ. ಕಳೆದ 3 ವರ್ಷಗಳಲ್ಲಿ ಅವರು ಪಂಚ ಗ್ಯಾರಂಟಿಗಳನ್ನು ಜಾರಿ ಮಾಡಿ ಉತ್ತಮವಾಗಿ ಸರ್ಕಾರ ಕೊಟ್ಟಿದ್ದಾರೆ. ಅವರ ಹೆಗಲಿಗೆ ಹೆಗಲು ಕೊಟ್ಟು ಡಿ.ಕೆ. ಶಿವಕುಮಾರ್ ಅವರು ಉಪ ಮುಖ್ಯಮಂತ್ರಿಗಳಾಗಿ ಉತ್ತಮ ಕಾರ್ಯ ಮಾಡಿದ್ದಾರೆ. ಉಪ ಚುನಾವಣೆಗಳಲ್ಲಿ ಪಕ್ಷ ಜಯಭೇರಿ ಬಾರಿಸಿದೆ. ತಾವೂ ಉಪ ಚುನಾವಣೆಗಳಲ್ಲಿ ಪಕ್ಷದ ಪರ ಪ್ರಚಾರ ಮಾಡಿದ್ದೇನೆ ಎಂದ ಅವರು ಕಳೆದ ಸಚಿವ ಸಂಪುಟದಲ್ಲಿದ್ದ ಎಲ್ಲ ಸಚಿವರೂ ತಮ್ಮ ಜವಾಬ್ದಾರಿ ನಿಭಾಯಿಸಿದ್ದಾರೆ. ಎಲ್ಲರ ಸಂಘಟಿತ ಪ್ರಯತ್ನದಿಂದ ಪಕ್ಷಕ್ಕೆ ಹೆಚ್ಚಿನ ಬಲ ಬರಲಿದೆ ಎಂದರು.

ಕೆಂಗಲ್ ಹನುಮಂತಯ್ಯ ಬಳಿಕ ಸಿಎಂ ಹುದ್ದೆಗೇರಿದ ಜಿಲ್ಲೆಯ 2ನೇ ನಾಯಕ ಡಿ.ಕೆ.ಶಿವಕುಮಾರ್!

ಬೆಂ.ದಕ್ಷಿಣ ಜಿಲ್ಲೆಗೆ ಐದು ಬಾರಿ ಮುಖ್ಯಮಂತ್ರಿ ಸ್ಥಾನ

ಎಸ್. ರುದ್ರೇಶ್ವರ

ರಾಮನಗರ: ರಾಜ್ಯಕ್ಕೆ ನಾಲ್ವರು ಮುಖ್ಯಮಂತ್ರಿಗಳನ್ನು ಕೊಡುಗೆಯಾಗಿ ನೀಡಿರುವ ಬೆಂಗಳೂರು ದಕ್ಷಿಣ ಜಿಲ್ಲೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮೂಲಕ ಐದನೇ ಬಾರಿಗೆ ಮುಖ್ಯಮಂತ್ರಿ ಸ್ಥಾನ ಸಿಗುವ ನಿರೀಕ್ಷೆ ದಟ್ಟವಾಗಿದೆ.



ಬೆಂ.ದಕ್ಷಿಣ (ರಾಮನಗರ) ಜಿಲ್ಲೆಯಿಂದ ಕಾಂಗ್ರೆಸ್ ಸರ್ಕಾರದಲ್ಲಿ ಸಿಎಂ ಗಾದಿ ಅಲಂಕರಿಸಿದವರಲ್ಲಿ 2ನೇ ನಾಯಕ ಎಂಬ ಪ್ರಶಂಸೆಗೆ ಪಾತ್ರರಾಗಲಿದ್ದಾರೆ. ಈ ಹಿಂದೆ ಕಾಂಗ್ರೆಸ್ ಸರ್ಕಾರದಲ್ಲಿ ಕೆಂಗಲ್ ಹನುಮಂತಯ್ಯ ಮುಖ್ಯ ಮಂತ್ರಿಯಾಗಿದ್ದರು. ಆ ನಂತರ ಜನತಾ ಪಕ್ಷ ಸರ್ಕಾರದಲ್ಲಿ ರಾಮಕೃಷ್ಣ ಹೆಗಡೆ, ಜನತಾದಳ ಸರ್ಕಾರದಲ್ಲಿ ಎಚ್.ಡಿ. ದೇವೇಗೌಡ ಹಾಗೂ ಜೆಡಿಎಸ್-ಬಿಜೆಪಿ, ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರ್ಕಾರಗಳಲ್ಲಿ ಎಚ್.ಡಿ.ಕುಮಾರಸ್ವಾಮಿ ಮುಖ್ಯ ಮಂತ್ರಿಗಳಾಗಿ ಆಡಳಿತ ನಡೆಸಿದ್ದರು.

ವಿಧಾನಸೌಧದ ನಿರ್ಮಾತೃ ಮಾಜಿ ಸಿಎಂ ಕೆಂಗಲ್ ಹನುಮಂತಯ್ಯ ಮೂಲತಃ ರಾಮನಗರ ತಾಲ್ಲೂಕಿನವರು. 1952 ಮತ್ತು 1957ರ ಚುನಾವಣೆಗಳಲ್ಲಿ ರಾಮನಗರ ಕ್ಷೇತ್ರದಿಂದ ಕೆಂಗಲ್ ಆಯ್ಕೆ ಯಾಗಿದ್ದರು. 1952ರ ಮೊದಲ ವಿಧಾನಸಭೆಯಲ್ಲಿ ಮೈಸೂರು ರಾಜ್ಯದ ಪ್ರಭಾವಿ ನಾಯಕರಾಗಿದ್ದ ಕೆಂಗಲ್ ಅವರಿಗೆ ಮುಖ್ಯಮಂತ್ರಿ ಪದವಿ ಒಲಿದು 4 ವರ್ಷ 5 ತಿಂಗಳು ಆಡಳಿತ ನಡೆಸಿದ್ದರು.

1983ರಲ್ಲಿ ರಾಜ್ಯದಲ್ಲಿ ಮೊಟ್ಟದ ಮೊದಲ ಬಾರಿಗೆ ರಾಮಕೃಷ್ಣ ಹೆಗಡೆ ನೇತೃತ್ವದಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಅಧಿಕಾರಕ್ಕೆ ಬಂದಿತು. ಬಿಜೆಪಿ ಬೆಂಬಲದೊಂದಿಗೆ ಅಧಿಕಾರಕ್ಕೆ ಬಂದ ಜನತಾ ಪಕ್ಷದ ಸರ್ಕಾರದಲ್ಲಿ ರಾಮಕೃಷ್ಣ ಹೆಗಡೆ ಅವರಿಗೆ ಸಿಎಂ ಹುದ್ದೆ ಒಲಿದಿತ್ತು. ಆದರೆ, ಹೆಗಡೆಯವರು ಉಭಯ ಸದನಗಳ ಸದಸ್ಯರಾಗಿರಲಿಲ್ಲ.

ಆರು ತಿಂಗಳೊಳಗೆ ವಿಧಾನಸಭೆ ಅಥವಾ ವಿಧಾನ ಪರಿಷತ್ ಸದಸ್ಯರಾಗಬೇಕಿತ್ತು. ಅವರಿಗಾಗಿ ಕನಕಪುರದಿಂದ ಚುನಾಯಿತರಾಗಿದ್ದ ಪಿ.ಜಿ.ಆರ್. ಸಿಂಧ್ಯಾ ಸ್ಥಾನ ತೆರವು ಮಾಡಿಕೊಟ್ಟರು. ಕನಕಪುರದಲ್ಲಿ ನಡೆದ ಮರು ಚುನಾವಣೆಯಲ್ಲಿ ಬನ್ನಿಮಕೋಡ್ಲು ಲಿಂಗೇಗೌಡ ಎದುರು ರಾಮಕೃಷ್ಣ ಹೆಗಡೆ ಗೆಲುವು ಸಾಧಿಸಿ ಸದನದ ಸದಸ್ಯರಾದರು. 7ನೇ ವಿಧಾನಸಭೆಯಲ್ಲಿ ಹೆಗಡೆ ಅವರು 10ನೇ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದರು. ಈಗ ಶಿವಕುಮಾರ್ ಅವಕಾಶ ದೊರೆತರೆ 16ನೇ ವಿಧಾನಸಭೆಯಲ್ಲಿ 24ನೇ ಮುಖ್ಯಮಂತ್ರಿ ಆದಂತಾ ಗುತ್ತದೆ. ಇಷ್ಟೇ ಅಲ್ಲದೆ, ಕನಕಪುರ ಕ್ಷೇತ್ರಕ್ಕೆ 2ನೇ ಬಾರಿ ಸಿಎಂ ಹುದ್ದೆ ಲಭಿಸಿದಂತಾಗುತ್ತದೆ.

1994ರ ಚುನಾವಣೆಯಲ್ಲಿ ರಾಜ್ಯದಲ್ಲಿ ಜನತಾದಳ ಪರ ಅಲೆ ಇತ್ತು. ಆಗ ಪಕ್ಷದ ಚುಕ್ಕಾಣಿ ಹಿಡಿದಿದ್ದ ದೇವೇಗೌಡ ಅವರೇ ಮುಂದಿನ ಸಿಎಂ ಎನ್ನುವ ಕೂಗು ಎದ್ದಿತ್ತು. ಆ ವೇಳೆ ರಾಮ ನಗರದಿಂದ ಸ್ಪರ್ಧಿಸುವಂತೆ ಸ್ಥಳೀಯ ಮುಖಂಡರು ದುಂಬಾಲು ಬಿದ್ದಿದ್ದರು. ಸ್ವಕ್ಷೇತ್ರ ಹೊಳೆನರಸೀಪುರ, ರಾಮನಗರ ಪೈಕಿ ಯಾವ ಕ್ಷೇತ್ರದಿಂದ ಸ್ಪರ್ಧಿಬೇಕೆಂಬ ಗೊಂದಲದಲ್ಲಿದ್ದರು.

ಎಚ್‌ಡಿಡಿಗೆ ಪ್ರಧಾನಮಂತ್ರಿ ಹುದ್ದೆ

ಆ ಚುನಾವಣೆಯಲ್ಲಿ ರಾಮನಗರದಿಂದಲೇ ಗೆದ್ದ ದೇವೇಗೌಡರು ಮುಖ್ಯಮಂತ್ರಿ ಹುದ್ದೆಗೇರಿ 17 ತಿಂಗಳು ಆಡಳಿತ ನಡೆಸಿದರು. ಇಷ್ಟು ಮಾತ್ರವಲ್ಲದೆ, ರಾಮನಗರ ಪ್ರತಿನಿಧಿಯಾಗಿದ್ದಾಗಲೇ ಪ್ರಧಾನಮಂತ್ರಿ ಹುದ್ದೆಯೂ ಒಲಿಯಿತು. ಪ್ರಧಾನಿಯಾದ ನಂತರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. 2004ರಲ್ಲಿ ರಾಮನಗರ ಕ್ಷೇತ್ರದಿಂದ ವಿಧಾನಸಭೆಗೆ ಮೊದಲ ಬಾರಿ ಪ್ರವೇಶಿಸಿದ ಕುಮಾರಸ್ವಾಮಿ ಜೆಡಿಎಸ್ - ಬಿಜೆಪಿ ಮೈತ್ರಿ ಸರ್ಕಾರದಲ್ಲಿ 20 ತಿಂಗಳು ಮುಖ್ಯಮಂತ್ರಿಯಾದರು. ಆನಂತರ 2018ರಲ್ಲಿ ಜೆಡಿಎಸ್ - ಕಾಂಗ್ರೆಸ್ ದೋಸ್ತಿ ಸರ್ಕಾರದಲ್ಲಿ 2ನೇ ಬಾರಿ ಕೇವಲ 14 ತಿಂಗಳು ಸಿಎಂ ಹುದ್ದೆ ನಿಭಾಯಿಸಿದ್ದರು. ಈಗ 2026ರಲ್ಲಿ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಆಗುವ ಯೋಗ ಕೂಡಿ ಬಂದಿದೆ.

ರಾಜ್ಯಸಭೆ ಅಭ್ಯರ್ಥಿಗಳ ಪಟ್ಟಿ ಶೀಘ್ರ

ಬೆಂಗಳೂರು: ನನಗೆ ಬಂದಿರುವ ಮಾಹಿತಿ ಪ್ರಕಾರ ಎಲ್ಲಾ ರಾಜ್ಯಗಳ ರಾಜ್ಯಸಭೆ ಅಭ್ಯರ್ಥಿಗಳ ಪಟ್ಟಿಯನ್ನು ಒಟ್ಟಿಗೆ ಬಿಡುಗಡೆ ಮಾಡಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಹೊಸದಿಲ್ಲಿಯಲ್ಲಿ ಶುಕ್ರವಾರ ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಚುನಾವಣೆ ಅಭ್ಯರ್ಥಿಗಳ ಆಯ್ಕೆ ಕುರಿತ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ. ವೇಣುಗೋಪಾಲ್ ಅವರು ರಾಜ್ಯಸಭೆ ಅಭ್ಯರ್ಥಿಗಳ ಆಯ್ಕೆ ವಿಚಾರವಾಗಿ ಚರ್ಚೆ ಮಾಡಿರುವುದನ್ನು ಈಗಾಗಲೇ ತಿಳಿಸಿದ್ದಾರೆ. ನಮ್ಮ ನಾಯಕರು ನಮ್ಮ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದಾರೆ. ಎಲ್ಲಾ ತೀರ್ಮಾನ ಆದ ಬಳಿಕ ನಮ್ಮ ನಾಯಕರು ಮಾಹಿತಿ ನೀಡುತ್ತಾರೆ. ಇದು ನನ್ನ ವ್ಯಾಪ್ತಿಗೆ ಬರುವುದಿಲ್ಲ ಎಂದು ತಿಳಿಸಿದ್ದಾರೆ. ನೀವು ಮುಖ್ಯಮಂತ್ರಿ ಆಗಿ ಯಾವಾಗ ಪ್ರಮಾಣ ವಚನ ಸ್ವೀಕರಿಸುವಿರಿ ಎಂಬ ಪ್ರಶ್ನೆಗೆ, ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ನಾಯಕನ ಆಯ್ಕೆ ಆಗಬೇಕಿದೆ. ನಂತರ ತೀರ್ಮಾನ ಆಗಲಿದೆ ಎಂದರು.

ಯೋಜನಾಧಿಕಾರಿಗೆ ಶೋಕಾಸ್ ನೋಟಿಸ್

ಬೆಂಗಳೂರು: ಸುಮಾರು 9,590 ಕೆ.ಜಿ. ಹಾಲಿನ ಪುಡಿ ದುರುಪಯೋಗಪಡಿಸಿಕೊಂಡ ಆರೋಪದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿ ವೃದ್ಧಿ ಯೋಜನಾಧಿಕಾರಿಗೆ ಕಾರಣ ಕೇಳಿ ಸರ್ಕಾರ ಜಾರಿ ಮಾಡಿದ್ದ ಶೋಕಾಸ್ ನೋಟಿಸ್‌ಗೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.



ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜಾರಿ ಮಾಡಿದ್ದ ಶೋಕಾಸ್ ನೋಟಿಸ್‌ಗೆ ತಡೆ ನೀಡಬೇಕು ಎಂದು ಕೋರಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿ ಎಂ. ಆರ್. ನಂದಕುಮಾರ್ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಅನಂತ್‌ರಾಮನಾಥ್ ಹೆಗಡೆ ಮತ್ತು ನ್ಯಾ. ಗೀತಾ ಕೆ.ಬಿ. ಅವರನ್ನೊಳಗೊಂಡ ವಿಭಾಗೀಯ ಪೀಠವು ಈ ಆದೇಶ ಮಾಡಿದೆ.

‘ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆ’ ಬೆಳೆದು ಬಂದ ಹಾದಿ







ಮಹಾತ್ಮಾ ಗಾಂಧೀಜಿಯವರ ಗ್ರಾಮಸ್ವರಾಜ್ಯದ ಪರಿಕಲ್ಪನೆಯಲ್ಲಿ, ಗ್ರಾಮೀಣ ಉದ್ಯಮಶೀಲತೆ ಅಭಿವೃದ್ಧಿಯ ಚಿಂತನೆಯಡಿಯಲ್ಲಿ, ಮುಖ್ಯವಾಗಿ ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣ ಹಾಗೂ ಸ್ವಾವಲಂಬನೆಗೆ ಪ್ರಾಮುಖ್ಯತೆಯನ್ನು ನೀಡುವ ನಿಟ್ಟಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಮತ್ತು ಮಾತೃಶ್ರೀಹೇಮಾವತಿಹೆಗ್ಗಡೆಯವರಕನಸಿನಕೂಸು ‘ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆ’.

ಡಾ. ಡಿ. ವೀರೇಂದ್ರ ಹೆಗ್ಗಡೆಯವರ ದೂರದೃಷ್ಟಿಯ ನಾಯಕತ್ವದಲ್ಲಿ ಸ್ಥಾಪಿತವಾದ ಎಸ್‌ಕೆಡಿಆರ್‌ಡಿಪಿ ಮತ್ತು ರುಡ್‌ಸೆಟ್ ಸಂಸ್ಥೆ ಮುಂತಾದ ಮಹತ್ವದ ಸಾಮಾಜಿಕ ಸಂಸ್ಥೆಗಳ ಸಾಲಿನಲ್ಲಿ, ಸಿರಿ ತನ್ನ ವಿಶಿಷ್ಟ ಸಾಮಾಜಿಕ ದೃಷ್ಟಿಕೋನದಿಂದ ವಿಶೇಷ ಸ್ಥಾನವನ್ನು ಪಡೆದಿದೆ.

ಸಿರಿ ಸಂಸ್ಥೆಯ ಪ್ರಮುಖ ವೈಶಿಷ್ಟ್ಯವೆಂದರೆ ಇದು ಲಾಭಗಳಿಸುವ ಉದ್ದೇಶದಿಂದ ಆರಂಭಿಸಲ್ಪಟ್ಟ ಸಂಸ್ಥೆಯಲ್ಲ.ಬದಲಾಗಿ,ಗ್ರಾಮೀಣಉದ್ಯಮಶೀಲತೆ ಅಭಿವೃದ್ಧಿಯ ಚಿಂತನೆಯಡಿಯಲ್ಲಿ ಮುಖ್ಯವಾಗಿ ಸಮಾಜದ ಹಿಂದುಳಿದವರ್ಗಗಳು, ಪರಿಶಿಷ್ಟಜಾತಿ ಸಮುದಾಯಗಳು, ಅಲ್ಪಸಂಖ್ಯಾತರು ಹಾಗೂ ಆರ್ಥಿಕವಾಗಿ ದುರ್ಬಲ ಮಹಿಳೆಯರಿಗೆ ಗೌರವಯುತ ಜೀವನ, ಉದ್ಯೋಗ, ಆತ್ಮವಿಶ್ವಾಸ ಮತ್ತು ಆರ್ಥಿಕ ಸ್ವಾವಲಂಬನೆ ಒದಗಿಸುವ ಮಹತ್ತರವಾದ ಉದ್ದೇಶದಿಂದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು,ಶ್ರೀಕ್ಷೇತ್ರಧರ್ಮಸ್ಥಳಗ್ರಾಮಾಭಿವೃದ್ಧಿ ಯೋಜನೆಯ ಹಣಕಾಸಿನ ನೆರವಿನೊಂದಿಗೆ ‘ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಯನ್ನು 2004ರಲ್ಲಿ ಬೆಳ್ತಂಗಡಿಯಲ್ಲಿ ಪ್ರಾರಂಭಿಸಿದರು.

ಹೀಗೆ ಪ್ರಾರಂಭಗೊಂಡ ಸಿರಿ ಸಂಸ್ಥೆಯಲ್ಲಿ, ಯಾವುದೇ ರೀತಿಯ ವಿಶೇಷ ಅನುಭವ, ಪರಿಣತಿ ಇಲ್ಲದ ಗ್ರಾಮೀಣ ಮಹಿಳೆಯರಿಗೆ ವೇತನ ಸಹಿತವಾಗಿ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನೀಡಿ ಅವರಿಂದ ಉತ್ತಮ ಗುಣಮಟ್ಟದ ಸಿದ್ಧ ಉಡುಪು ಉತ್ಪನ್ನಗಳು, ಫಿನಾಯಿಲ್, ಅಗರಬತ್ತಿ, ಕೋಕಂ ಜ್ಯೂಸ್, ಉಪ್ಪಿನಕಾಯಿ ಉತ್ಪನ್ನಗಳು ಸೇರಿದಂತೆ ಹಲವು ಬಗೆಯ ಗೃಹೋಪಯೋಗಿ ಉತ್ಪನ್ನಗಳನ್ನು ತಯಾರಿಸುವಂತೆ ಮಾಡುವುದು ಸಿರಿಯ ವಿಶೇಷತೆಯಾಗಿದೆ.

ಸಿರಿ ಉತ್ಪನ್ನಗಳನ್ನು ತಯಾರಿಸಲು ಪೂರಕವಾಗುವಂತೆ ಸುಮಾರು 50-60 ಹಳ್ಳಿಗಳಲ್ಲಿ ಘಟಕಗಳನ್ನುಸ್ಥಾಪಿಸಿ,ಅಲ್ಲಿರುವಬಡಮಹಿಳೆಯರಿಗೆ ಉತ್ಪಾದನೆಗೆ ಬೇಕಾಗುವ ಕಚ್ಚಾಸಾಮಾಗ್ರಿಗಳನ್ನು ಪೂರೈಸಿ, ಅವರಿಂದತಯಾರಿಸಲಾದಉತ್ಪನ್ನಗಳನ್ನು ಸಿರಿ ಸಂಸ್ಥೆಗೆ ತಂದು ಆಯ್ದ ಪ್ರದೇಶಗಳಲ್ಲಿ ಸಿರಿ ಬ್ರಾಂಡ್‌ನಲ್ಲಿ ಮಾರಾಟ ಮಾಡಲಾಗುತ್ತಿತ್ತು.

ಬೇರೆ ಬೇರೆ ಕಡೆಗಳಲ್ಲಿರುವ ಘಟಕಗಳಿಂದ ಉತ್ಪನ್ನಗಳನ್ನು ಸಿರಿ ಸಂಸ್ಥೆಗೆ ಸಾಗಿಸಲು ಅಧಿಕ ಸಾಗಾಟದ ವೆಚ್ಚ ವ್ಯಯವಾಗುತ್ತಿರುವುದರ ಜೊತೆಗೆ ಉತ್ಪನ್ನಗಳಗುಣಮಟ್ಟವನ್ನುಕಾಪಾಡಲುಬಹಳಷ್ಟು ಸಮಸ್ಯೆಗಳಾಗುತ್ತಿರುವ ಬಗ್ಗೆ ಸಿರಿಯ ವ್ಯವಸ್ಥಾಪಕ ನಿರ್ದೇಶಕ ಕೆ. ಎನ್. ಜನಾರ್ದನ ಅವರು ಪೂಜ್ಯರು ಹಾಗೂ ಮಾತೃಶ್ರೀ ಅಮ್ಮನವರಲ್ಲಿ ಚರ್ಚಿಸಿದಾಗ, ಈ ಎಲ್ಲಾ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವ ಜೊತೆಗೆ ಸಿರಿಯ ವಿವಿಧ ಉತ್ಪಾದನಾ ವಿಭಾಗಗಳು ಒಂದೇ ಸೂರಿನಡಿ ಕಾರ್ಯಾಚರಿಸುವ ನಿಟ್ಟಿನಲ್ಲಿಪೂಜ್ಯರುಹಾಗೂಮಾತೃಶ್ರೀಅಮ್ಮನವರು ಬೆಳ್ತಂಗಡಿಯ ರೆಂಕೆದಗುತ್ತುವಿನ ಬಳಿ ಸುಮಾರು ಏಳು ಎಕರೆ ನಿವೇಶನವನ್ನು 2023 ಫೆಬ್ರವರಿಯಲ್ಲಿ ಖರೀದಿಸಿ,ಈವಿಶಾಲವಾದಸೌರಶಕ್ತಿಯಿಂದಬೆಳಗುವ ಸಿರಿ ಪರಿಸರದಲ್ಲಿ 71.00 ಕೋಟಿ ರೂ. ವೆಚ್ಚದಲ್ಲಿ ಸುಮಾರು 1.50ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಸಿರಿ ಸಂಸ್ಥೆಗೆ ನೂತನವಾದ ಬೃಹತ್ ಕಟ್ಟಡವನ್ನು ನಿರ್ಮಿಸಿ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಅಳವಡಿಸುವಂತಹ ಐತಿಹಾಸಿಕ ಕಾರ್ಯಕ್ಕೆ 2023ನೇ ವರ್ಷದ ಮಾರ್ಚ್ ತಿಂಗಳಲ್ಲಿ ಪೂಜ್ಯರು ಹಾಗೂ ಅಮ್ಮನವರು ಶಿಲಾನ್ಯಾಸವನ್ನು ನೆರವೇರಿಸಿದರು. 20-03-2025ರಂದು ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ತದನಂತರ ಹೊಸ ಕಟ್ಟಡದಲ್ಲಿ ಸಿರಿ ಉತ್ಪನ್ನಗಳ ಉತ್ಪಾದನಾ ಕಾರ್ಯ ಚಟುವಟಿಕೆಗಳನ್ನು ಆರಂಭಿಸಲಾಯಿತು.

ಶ್ರೀಧರ್ಮಸ್ಥಳಸಿರಿಗ್ರಾಮೋದ್ಯೋಗಸಂಸ್ಥೆಯು ದಕ್ಷಿಣಕನ್ನಡಜಿಲ್ಲೆಯ2000ಸ್ವ-ಸಹಾಯಗುಂಪುಗಳ ಮಾಲಿಕತ್ವ ಹೊಂದಿರುವ ಕಲಂ 8ರ ಕಂಪೆನಿ ಕಾಯ್ದೆ 2013ರ ಅಡಿಯಲ್ಲಿ ನೋಂದಾವಣೆಗೊಂಡ ಸಂಸ್ಥೆಯಾಗಿದ್ದು,ಸಿರಿಸಂಸ್ಥೆಯುಯಾವುದೇಲಾಭದ ಉದ್ದೇಶವಿಲ್ಲದೆಕಾರ್ಯನಿರ್ವಹಿಸುತ್ತಿರುವುದರಿಂದ ಆದಾಯ ತೆರಿಗೆ ಕಾಯ್ದೆ-1961ರ ಅಡಿಯಲ್ಲಿ ವಿಶೇಷವಾಗಿ ನೀಡಲ್ಪಡುವ ಕಲಂ 12ಎ ಮತ್ತು ಕಲಂ 80ಜಿಯ ಆದಾಯ ತೆರಿಗೆ ವಿನಾಯಿತಿಯನ್ನು ಪಡೆದುಕೊಂಡಿದೆ. ಸುಮಾರು ಒಂದು ಸಾವಿರಕ್ಕೂ ಮಿಕ್ಕಿ ಇಂತಹ ಮಹಿಳಾ ಸಿಬ್ಬಂದಿಗಳನ್ನು ಹೊಂದಿರುವ ಸಿರಿ ಸಂಸ್ಥೆಯಲ್ಲಿ ಗ್ರಾಮೀಣ ಮಹಿಳೆಯರುಉತ್ಪಾದಿಸುವಉತ್ಕೃಷ್ಟಗುಣಮಟ್ಟದ ಗೃಹೋಪಯೋಗಿ ಆಹಾರೋತ್ಪನ್ನಗಳು, ಸಿರಿಧಾನ್ಯಗಳು, ಸಿದ್ಧ ಉಡುಪುಗಳು, ಅಗರಬತ್ತಿ, ರೆಕ್ಸಿನ್, ಶುಚಿಕಾರಕ ಇತ್ಯಾದಿ ಉತ್ಪನ್ನಗಳನ್ನು ಸಿರಿ ಬ್ರಾಂಡ್‌ನಲ್ಲಿ ಮಾರಾಟ ಮಾಡಲಾಗುತ್ತಿದ್ದು, ಈ ಮೂಲಕ ಪ್ರತ್ಯಕ್ಷವಾಗಿ/ಪರೋಕ್ಷವಾಗಿ 5000ಕ್ಕೂ ಹೆಚ್ಚು ಬಡ ಕುಟುಂಬಗಳಿಗೆ ಆಶ್ರಯ ನೀಡಿ, ಅವರ ಬಾಳು ಹಸನಾಗಿಸುವಲ್ಲಿ ಶ್ರಮಿಸುತ್ತಿದೆ.

ಅಗರಬತ್ತಿ ಉತ್ಪನ್ನಗಳ ಉತ್ಪಾದನಾ ಘಟಕ

ಅದೇ ರೀತಿ ವೈಷ್ಣವಿ ಬ್ಲಾಕ್‌ನ ಒಂದನೇ ಮಹಡಿಯಲ್ಲಿ ಅತ್ಯಾಧುನಿಕ ಮೆಷಿನರಿಗಳೊಂದಿಗೆ ಸಿರಿ ಸಂಸ್ಥೆಯ ಅಗರಬತ್ತಿ ಉತ್ಪಾದನಾ ಘಟಕವು ಕಾರ್ಯಾಚರಿಸುತ್ತಿದ್ದು, ಇಲ್ಲಿ ಅಗರಬತ್ತಿ ಉತ್ಪನ್ನಗಳ ಪ್ರಮಾಣ ಮತ್ತು ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಆಧುನಿಕ ತಂತ್ರಜ್ಞಾನವನ್ನು ಹೊಂದಿರುವ ಡಿಪ್ಪಿಂಗ್ ಮೆಷಿನ್, ಕೌಂಟಿಂಗ್ ಮತ್ತು ಲೇಡಿ ಪ್ಯಾಕಿಂಗ್ ಮೆಷಿನರಿಗಳನ್ನು, ವಿಭೂತಿ ಸುವಾಸನೆಯ ಒಟ್ಟು 22 ಬಗೆಯ ಅಗರಬತ್ತಿಗಳನ್ನು ಉತ್ಪಾದಿಸಿ ರೋಲ್, ಪೌಚ್ ಹಾಗೂ ಪ್ಯಾಕೆಟ್‌ಗಳಲ್ಲಿ ಗ್ರಾಹಕರಿಗೆ ಪೂರೈಸಲಾಗುತ್ತಿದೆ.

ಸಿರಿ ಕೇಂದ್ರ ಕಚೇರಿಗೆ ಧರ್ಮಸ್ಥಳ, ಉಜಿರೆ, ಬೆಳ್ತಂಗಡಿ, ವೇಣೂರು, ಗೇರುಕಟ್ಟೆ, ಉಪ್ಪಿನಂಗಡಿ, ನಾರಾವಿ, ಗುರುವಾಯನಕೆರೆ, ಮಡಂತ್ಯಾರು, ಪುಂಜಾಲಕಟ್ಟೆಇತ್ಯಾದಿಕಡೆಗಳಿಂದಕೆಲಸಕ್ಕಾಗಿಬರುವ ಸಿಬ್ಬಂದಿಗಳಿಗೆ ಬೆಳಿಗ್ಗೆ ಮತ್ತು ಸಂಜೆ ತಮ್ಮ ಕರ್ತವ್ಯದ ಸ್ಥಳಕ್ಕೆ ಬಂದು ಹೋಗಲು ಅನುಕೂಲವಾಗುವಂತೆ ಉಚಿತವಾಗಿ ಎರಡು ಬಸ್ಸುಗಳ ಸೌಕರ್ಯವನ್ನು ಒದಗಿಸಲಾಗಿದೆ.

ಸಿಬ್ಬಂದಿಗಳಿಗೆ ಹಾಸ್ಟೆಲ್ ಸೌಕರ್ಯ

ದೂರದ ಊರುಗಳಿಂದ ಸಿರಿ ಸಂಸ್ಥೆಗೆ ಉದ್ಯೋಗಕ್ಕಾಗಿ ಬರುವಂತಹ ಹೆಣ್ಣುಮಕ್ಕಳಿಗೆ ಸಹಕಾರಿಯಾಗುವ ಉದ್ದೇಶದಿಂದ ಸಿರಿ ಸಂಸ್ಥೆಯಲ್ಲಿಯೇ ಎಲ್ಲಾ ಮೂಲಭೂತ ಸೌಕರ್ಯಗಳನ್ನೊಳಗೊಂಡಸುಸಜ್ಜಿತವಾದಹಾಸ್ಟೆಲ್ ವ್ಯವಸ್ಥೆಯನ್ನೂ ಒದಗಿಸಲಾಗಿದೆ.

ವಸತಿ ಗೃಹ (ಬ್ರಾಹ್ಮಣಿ)

ಸಿರಿ ಸಂಸ್ಥೆಯ ನೂತನ ಕಟ್ಟಡದ ಆವರಣದಲ್ಲಿ ಸಿರಿಸಂಸ್ಥೆಯವ್ಯವಸ್ಥಾಪಕನಿರ್ದೇಶಕರವಸತಿಗೃಹದ ಜೊತೆಗೆ ಸಂಸ್ಥೆಗೆ ಆಗಮಿಸುವ ವಿಶೇಷ ಅತಿಥಿಗಳಿಗೆ ಉಳಿದುಕೊಳ್ಳಲು4ಸುಸಜ್ಜಿತಅತಿಥಿಗೃಹಗಳವ್ಯವಸ್ಥೆ ಹಾಗೂ ದೂರದ ಊರಿನಿಂದ ಆಗಾಗ ಬಂದು ಕೆಲಸ ನಿರ್ವಹಿಸುವಸಿಬ್ಬಂದಿಗಳಿಗಾಗಿ11 ವಸತಿಗೃಹಗಳು, ಜಿಮ್ ಇಕ್ವಿಪ್‌ಮೆಂಟ್ ಕೊಠಡಿ ಮತ್ತು ಮೆಡಿಟೇಶನ್ ಕೊಠಡಿಯ ಸೌಲಭ್ಯವಿದೆ.

ಸಿರಿ ಸಿಬ್ಬಂದಿಗಳ ಪುಟ್ಟ ಮಕ್ಕಳಿಗೆ ಶಿಶು ವಿಹಾರ (ಮಗು)

ಸಿರಿ ಸಂಸ್ಥೆಯಲ್ಲಿ ಶೇ.90ರಷ್ಟು ಮಹಿಳಾ ಸಿಬ್ಬಂದಿಗಳೇ ಕಾರ್ಯನಿರ್ವಹಿಸುವುದರಿಂದ, ಇವರಿಗೆಸಹಕಾರಿಯಾಗುವನಿಟ್ಟಿನಲ್ಲಿಸಿರಿಸಿಬ್ಬಂದಿಗಳ 5 ವರ್ಷ ವಯಸ್ಸಿನೊಳಗಿನ ಪುಟ್ಟ ಮಕ್ಕಳ ಲಾಲನೆ ಪಾಲನೆಗಾಗಿ ಸಿರಿ ಸಂಸ್ಥೆಯಲ್ಲಿಯೇ ಸುಸಜ್ಜಿತವಾದ ಶಿಶುವಿಹಾರದ ವ್ಯವಸ್ಥೆಯನ್ನು ಮಾಡಲಾಗಿದೆ. ಇಲ್ಲಿ ಮಕ್ಕಳಿಗೆ ಆಟೋಟ ಚಟುವಟಿಕೆಗಳ ಜೊತೆಗೆ ಸಿರಿ ಪುಷ್ಟಿ ಮೊದಲಾದ ಪೌಷ್ಟಿಕಾಂಶಯುಕ್ತ ಆಹಾರ ನೀಡುವ ಮೂಲಕ ಮಕ್ಕಳ ಆರೋಗ್ಯದ ಕಾಳಜಿ ವಹಿಸಲಾಗುತ್ತಿದೆ.

ಬಿಸಿ ಭೋಜನದ ವ್ಯವಸ್ಥೆ (ನೈವೇದ್ಯಂ)

ಸಿರಿ ಸಂಸ್ಥೆಯ ನೂತನ ಉತ್ಪಾದನಾ ಸಂಕೀರ್ಣದ ವಿವಿಧ ವಿಭಾಗಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆಮಧ್ಯಾಹ್ನದಊಟದವ್ಯವಸ್ಥೆಯನ್ನು ಒದಗಿಸಲು ನೂತನ ಕಟ್ಟಡದಲ್ಲಿ ಸುಸಜ್ಜಿತ ಭೋಜನಶಾಲೆಯನ್ನು ನಿರ್ಮಿಸಲಾಗಿದೆ. ತನ್ಮೂಲಕ ಇತರ ಖಾಸಗಿ ಸಂಸ್ಥೆಗಳಲ್ಲಿರುವಂತೆ ಎಲ್ಲಾ ಸಿಬ್ಬಂದಿಗಳಿಗೂ ರಿಯಾಯಿತಿ ದರದಲ್ಲಿ ಮಧ್ಯಾಹ್ನ ಶುಚಿ-ರುಚಿಯಾದ ಬಿಸಿ ಊಟದ ವ್ಯವಸ್ಥೆ ಒದಗಿಸಲಾಗಿದೆ. ಜೊತೆಗೆ ಸಿರಿ ಹಾಸ್ಟೆಲ್‌ನಲ್ಲಿ ವಾಸ್ತವ್ಯವಿರುವ ಸಿಬ್ಬಂದಿಗಳಿಗೂ ರಿಯಾಯಿತಿ ದರದಲ್ಲಿಪೌಷ್ಟಿಕಾಂಶಯುಕ್ತ ಊಟ-ಉಪಾಹಾರದ ವ್ಯವಸ್ಥೆಯನ್ನು ಒದಗಿಸಲಾಗಿದೆ.

ಸಿರಿಸಂಸ್ಥೆಯಮುಖ್ಯಪ್ರವೇಶದ್ವಾರದಬಳಿಯಲ್ಲಿ ಸಿರಿ ಉತ್ಪನ್ನಗಳ ಮಾರಾಟ ಮಳಿಗೆ ಮತ್ತು ‘ಸಿರಿ ಕೆಫೆ’ಯನ್ನು ತೆರೆಯಲಾಗಿದ್ದು, ಇದರಿಂದ ಬೆಳ್ತಂಗಡಿ ರೆಂಕೆದಗುತ್ತು - ಗೇರುಕಟ್ಟೆ - ಉಪ್ಪಿನಂಗಡಿ ಮಾರ್ಗವಾಗಿ ಸಂಚರಿಸುವ ವಾಹನಸವಾರರಿಗೆ, ಹೊರಗಿನಿಂದ ಬರುವ ಇತರ ಗ್ರಾಹಕರು ಸೇರಿದಂತೆ ಸಂಸ್ಥೆಯ ಸಿಬ್ಬಂದಿಗಳು/ಘಟಕಗಳ ಸದಸ್ಯರಿಗೆ, ತುಂಬಾ ಅನುಕೂಲವಾಗಿದೆ.

ಸಿರಿ ಸಂಸ್ಥೆಯ ನೂತನ ಕೇಂದ್ರ ಕಚೇರಿ ಆವರಣದಲ್ಲಿರುವ ‘ಶ್ರೀಸನ್ನಿ’ಬ್ಲಾಕ್‌ನಒಂದನೇಮಹಡಿಯಲ್ಲಿ ವಿವಿಧಬಗೆಯಉಪ್ಪಿನಕಾಯಿಗಳಉತ್ಪಾದನಾಘಟಕ ಕಾರ್ಯಾಚರಿಸುತ್ತಿದ್ದು, ಉತ್ಪನ್ನಗಳ ಶುಚಿತ್ವ ಮತ್ತು ಗುಣಮಟ್ಟವನ್ನು ಕಾಪಾಡಲು ಸದರಿ ಘಟಕದಲ್ಲಿ ಅಳವಡಿಸಲಾಗಿರುವಅತ್ಯಾಧುನಿಕತಂತ್ರಜ್ಞಾನವನ್ನು ಹೊಂದಿರುವಬ್ಲೈಂಡಿಂಗ್‌ಮೆಷಿನ್,ಪಿಕಲ್‌ಫಿಲ್ಲಿಂಗ್ ಮೆಷಿನ್, ವೆಜಿಟೇಬಲ್ ಕಟ್ಟಿಂಗ್ ಮೆಷಿನ್‌ಗಳನ್ನು ಬಳಸಿಕೊಂಡು ಉತ್ಪಾದಿಸಲಾದ ಉಪ್ಪಿನಕಾಯಿ ಉತ್ಪನ್ನಗಳನ್ನು ಕೈಗಳಿಂದ ಮುಟ್ಟದೆ, ಇದಕ್ಕೆ ಬದಲಾಗಿ ಬಾಟಲ್/ಪೌಚ್ ಫಿಲ್ಲಿಂಗ್ ಮೆಷಿನರಿಗಳ ಮೂಲಕ ಪ್ಯಾಕಿಂಗ್ ಕೆಲಸಕಾರ್ಯಗಳನ್ನು ಪೂರ್ಣಗೊಳಿಸಿ ಶುಚಿ-ರುಚಿಯಾದ ಹುಣಸೆಹುಳಿ, ನಿಂಬೆಹಣ್ಣು, ಮಾವಿನಕಾಯಿ, ಮಿಕ್ಸೆಡ್ ತರಕಾರಿಗಳ ಉಪ್ಪಿನಕಾಯಿ ಇತ್ಯಾದಿಗಳನ್ನು ವಾಟರ್‌ಬೇಸ್ ಮತ್ತು ಆಯಿಲ್‌ಬೇಸ್‌ನಲ್ಲಿತಯಾರಿಸಿಮಾರುಕಟ್ಟೆಗೆ ಪೂರೈಸಲಾಗುತ್ತದೆ.

ಸಿದ್ಧ ಉಡುಪುಗಳ ಉತ್ಪಾದನಾ ಘಟಕ

ಕೇಂದ್ರ ಕಚೇರಿ ಆವರಣದಲ್ಲಿರುವ ಶ್ರೀ ಸನ್ನಿಧಿ ಬ್ಲಾಕ್‌ನಲ್ಲಿ ಸಿರಿ ಸಂಸ್ಥೆಯ ಸಿದ್ಧ ಉಡುಪು ಉತ್ಪಾದನಾ ಘಟಕ ಕಾರ್ಯಾಚರಿಸುತ್ತಿದ್ದು, ಸದ್ರಿ ಘಟಕದಲ್ಲಿ ಅಳವಡಿಸಲಾಗಿರುವ ಬ್ಯಾಂಡ್ ನೈಫ್ ಮೆಷಿನ್, ಫ್ಯಾಬ್ರಿಕ್ ಚೆಕ್ಕಿಂಗ್ ಮೆಷಿನ್, ಕಫ್ ಟರ್ನಿಂಗ್ ಮೆಷಿನ್, ಕೀಹೋಲ್ ಮೆಷಿನ್, ಪ್ರೊಫೈಲ್ ಮೆಷಿನ್‌ಗಳನ್ನು ಹೊಂದಿರುವ ಮೆಷಿನರಿಗಳನ್ನು ಉಪಯೋಗಿಸಿಕೊಂಡು, ಪುರುಷರಿಗಾಗಿ ಅಡಿಸ್ಟೆಡ್ ಪ್ರೀಮಿಯಂ ಶರ್ಟ್‌ಗಳು, ಸ್ವದೇಶಿ ಪ್ರೀಮಿಯಂ ಶರ್ಟ್‌ಗಳು, ಖಾದಿ ಶರ್ಟ್, ಅಡಿಸ್ಟೆಡ್ ಪ್ಯಾಂಟ್ ಇತ್ಯಾದಿ ಉತ್ತಮ ಗುಣಮಟ್ಟವನ್ನು ಹೊಂದಿರುವ ಉತ್ಪನ್ನಗಳನ್ನು ತಯಾರಿಸಲಾಗುತ್ತದೆ. ಮಹಿಳೆಯರಿಗಾಗಿ ಕುರ್ತಿಗಳು, ಟಾಪ್ಸ್, ನೈಟಿ, ಸೀರೆ, ಸ್ಕರ್ಟ್ ಮೊದಲಾದ ನವನವೀನ ಮಾದರಿಯ ಸಿದ್ಧ ಉಡುಪುಗಳನ್ನು ಉತ್ಪಾದಿಸಲಾಗುತ್ತಿದೆ. ಅಲ್ಲದೆ ಎಸ್.ಡಿ.ಎಮ್. ಶಿಕ್ಷಣ ಸಂಸ್ಥೆಗಳು ಸೇರಿದಂತೆ ರಾಜ್ಯಾದ್ಯಂತ ಇರುವ ಹಲವಾರು ಶಾಲಾ-ಕಾಲೇಜುಗಳು, ವಿವಿಧ ಭಜನಾ ಮಂಡಳಿಗಳು, ಪೆಟ್ರೋಲ್ ಪಂಪ್‌ಗಳು, ಖಾಸಗಿ ಆಸ್ಪತ್ರೆಗಳು ಮುಂತಾದ ಸಂಸ್ಥೆಗಳಿಂದ ಸಮವಸ್ತ್ರ ಉತ್ಪನ್ನಗಳಿಗೆ ಬೇಡಿಕೆ ಸಂಗ್ರಹಿಸಿ ಸಕಾಲದಲ್ಲಿ ಸಿದ್ಧಪಡಿಸಿ ಉತ್ಪನ್ನಗಳನ್ನು ಪೂರೈಕೆ ಮಾಡಲಾಗುತ್ತಿದೆ.

ಪ್ಯಾಕಿಂಗ್ ಘಟಕ

ಸಿರಿ ಸಂಸ್ಥೆಯ ಇಂದ್ರಾಣಿ ಬ್ಲಾಕ್‌ನ ನೆಲಮಹಡಿಯಲ್ಲಿ ದೀಪದ ಎಣ್ಣೆ /ಕೊಬ್ಬರಿಎಣ್ಣೆ ಪ್ಯಾಕಿಂಗ್ ಘಟಕ, ಕೋಕಂ ಸ್ಕ್ವ್ಯಾಷ್ ಮತ್ತು ಜ್ಯೂಸ್ ಘಟಕ ಹಾಗೂ ಶೇಂಗಾ ಚಿಕ್ಕಿ ಉತ್ಪನ್ನಗಳ ಉತ್ಪಾದನಾಘಟಕಕಾರ್ಯನಿರ್ವಹಿಸುತ್ತಿದೆ.ಕೋಕಂ ಸ್ಕ್ವಾಷ್‌ಘಟಕದಲ್ಲಿರೈತರಿಂದಖರೀದಿಸಲಾದಕೋಕಂ ಉತ್ಪನ್ನಗಳನ್ನು ಶುಚಿಗೊಳಿಸಿ, ರಸ ಹಿಂಡಿ, ಇದಕ್ಕೆ ಸಕ್ಕರೆ ಮಿಶ್ರಣಗೊಳಿಸಿ ಕುದಿಸಿ, ಆರಿಸಿದ ಜ್ಯೂಸನ್ನು ಬಾಟಲಿಗಳಿಗೆ ತುಂಬಿಸಿ, ಅತಿ ಕಡಿಮೆ ಅವಧಿಯಲ್ಲಿ ಹೆಚ್ಚಿನಪ್ರಮಾಣದಮತ್ತುಗುಣಮಟ್ಟದಉತ್ಪನ್ನಗಳನ್ನು ಮಾರುಕಟ್ಟೆಗೆಪೂರೈಸುವನಿಟ್ಟಿನಲ್ಲಿಸದರಿಘಟಕದಲ್ಲಿ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಸ್ಟೀಜರ್, ಹೀಟಿಂಗ್ ವೆಸಲ್, ಕೂಲಿಂಗ್‌ಟ್ಯಾಂಕ್, ಆಟೋಮೆಟಿಕ್‌ಫಿಲ್ಲಿಂಗ್ ಯಂತ್ರೋಪಕರಣಗಳನ್ನು ಬಳಸಿಕೊಂಡು ಕೋಕಂ ಸ್ಕ್ವಾಷ್‌ಬಾಟಲ್‌ಉತ್ಪನ್ನಗಳನ್ನುತಯಾರಿಸಲಾಗುತ್ತಿದೆ. ಅದೇ ರೀತಿ ಎಣ್ಣೆ ಪ್ಯಾಕಿಂಗ್ ಘಟಕದಲ್ಲಿ ಸುಮಾರು 3000 ಟನ್ ತೂಕದ ದೀಪದಎಣ್ಣೆ, ರೋಸ್ಟಿಂಗ್/ನಾನ್-ರೋಸ್ಟಿಂಗ್ ಕೊಬ್ಬರಿಎಣ್ಣೆಯನ್ನು ಆಯಿಲ್ ಸ್ಟೋರೇಜ್ ಟ್ಯಾಂಕ್‌ನಲ್ಲಿಸಂಗ್ರಹಿಸಿ, ಈ ಎಣ್ಣೆಯನ್ನು ಆಟೋಮ್ಯಾಟಿಕ್ ಪೌಚ್‌ಫಿಲ್ಲಿಂಗ್ ಮತ್ತು ಬಾಟಲ್ ಫಿಲ್ಲಿಂಗ್ ಯಂತ್ರೋಪಕರಣಗಳನ್ನು ಬಳಸಿಕೊಂಡು ಪ್ಯಾಕಿಂಗ್ ಕೆಲಸಕಾರ್ಯಗಳನ್ನು ನಿರ್ವಹಿಸುವ ಮೂಲಕ ಬೇಡಿಕೆಗನುಗುಣವಾಗಿ ಮಾರುಕಟ್ಟೆಗೆ ಪೂರೈಸಲಾಗುತ್ತಿದೆ.

ಸಿರಿ ಮಿಲೆಟ್ ಕೆಫೆ, ಬೆಳ್ತಂಗಡಿ

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನಲ್ಲಿ ಪ್ರಪ್ರಥಮವಾಗಿಆರಂಭಿಸಲಾದಏಕೈಕಸಿರಿಧಾನ್ಯದ ಉಪಹಾರಗೃಹದಲ್ಲಿಶುಚಿ-ರುಚಿಯಾದಆರೋಗ್ಯಕರ ಸಿರಿಧಾನ್ಯಗಳ ಭೋಜನ ಮತ್ತು ಖಾದ್ಯಗಳನ್ನು ತಯಾರಿಸಿ ಗ್ರಾಹಕರಿಗೆ ಉಣಬಡಿಸಲಾಗುತ್ತಿದೆ.

ಸಿರಿ ಲೈನ್ ಸೇಲ್ಸ್ ಮತ್ತು ಶಾಪ್ ಆನ್ ವೀಲ್ಸ್

ರಾಜ್ಯಾದ್ಯಂತ ಸಿರಿಯ 10 ಲೈನ್ ಸೇಲ್ ವಾಹನಗಳು ಹಾಗೂ 5 ಶಾಪ್ ಆನ್ ವೀಲ್ಸ್ ವಾಹನಗಳ ಮುಖಾಂತರ ರಾಜ್ಯದೆಲ್ಲೆಡೆ ಇರುವ ಗ್ರಾಹಕರಿಗೆ ಸಮಯಕ್ಕೆ ಸರಿಯಾಗಿ ಸಿರಿ ಉತ್ಪನ್ನಗಳನ್ನು ಪೂರೈಸಲಾಗುತ್ತಿದೆ.

ಫ್ರಾಂಚೈಸಿ ಮಳಿಗೆಗಳು

ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿರುವ ಯುವಕ ಯುವತಿಯರು ನಗರ ಪ್ರದೇಶದಲ್ಲಿ ಸಿರಿ ಫ್ರಾಂಚೈಸಿ ಮಳಿಗೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಗ್ರಾಮೀಣ ಸಿರಿ ಮಳಿಗೆಗಳನ್ನು ತೆರೆದು, ಸಿರಿ ಉತ್ಪನ್ನಗಳನ್ನು ಮಾರಾಟ ಮಾಡಿ ಸ್ವಉದ್ಯೋಗದಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಸಬಲರಾಗಿದ್ದಾರೆ.

◆ಕೆ. ಎನ್. ಜನಾರ್ಧನ, ವ್ಯವಸ್ಥಾಪಕ ನಿರ್ದೇಶಕರು, ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆ (ಆರ್)

ಮಾರ್ನಿಂಗ್ ಶೋ



ಎನ್.ಹೆಚ್.66 ಚಿತ್ರೀಕರಣ ಮುಕ್ತಾಯ

ರಾಯ ಫಿಲಂಸ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ ನೂತನ ಚಿತ್ರ ಎನ್.ಹೆಚ್. 66. ಮಂಜುನಾಥ ಟಿ. ಆರ್. ಅವರ ನಿರ್ಮಾಣ ಹಾಗೂ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರದ ಚಿತ್ರೀಕರಣ ಇದೀಗ ಮುಕ್ತಾಯಗೊಂಡಿದೆ, ಎನ್.ಹೆಚ್. 66 ಒಂದು ರೋಡ್ ಥ್ರಿಲ್ಲರ್ ಕಥಾಹಂದರ ಒಳಗೊಂಡ ಚಲನಚಿತ್ರವಾಗಿದ್ದು, ಕಾಂತಾರ ಖ್ಯಾತಿಯ ನಟ ಪ್ರಮೋದ್ ಶೆಟ್ಟಿ ಅವರು ಈ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.



ನಿರ್ದೇಶಕ ಮಂಜುನಾಥ ಟಿ ಆರ್. ಅವರು ಮಂಗಳೂರು ಮತ್ತು ಮುಂಬೈ ನಡುವಿನ ಅನೇಕ ರೋಡ್ ಲೊಕೇಶನ್‌ಗಳಲ್ಲಿ ಎನ್. ಹೆಚ್. 66 ಚಿತ್ರಕ್ಕೆ ವ್ಯಾಪಕ ಶೂಟಿಂಗ್ ನಡೆಸಿದ್ದಾರೆ, ಕಳೆದ ತಿಂಗಳು ರಾಯರ ಸನ್ನಿಧಿಯಲ್ಲಿ ಈ ಚಿತ್ರಕ್ಕೆ ಚಾಲನೆ ದೊರಕಿತ್ತು. ಈ ಕಥೆಯನ್ನು ಜೀವಂತಗೊಳಿಸಲು ಅವಿಶ್ರಾಂತವಾಗಿ ಶ್ರಮಿಸಿದ ಪ್ರತಿಭಾನ್ವಿತ ಪಾತ್ರವರ್ಗ ಪ್ರಮೋದ್ ಶೆಟ್ಟಿ, ರಾಜೇಶ್ ನಟರಂಗ, ಶ್ರುತಿ ಹರಿಹರನ್ ಮತ್ತು ತಂಡವನ್ನು ಈ ಚಿತ್ರ ಒಟ್ಟುಗೂಡಿಸುತ್ತದೆ.

ನಿರ್ದೇಶಕ ಮತ್ತು ನಿರ್ಮಾಪಕರಾದ ಮಂಜುನಾಥ ಟಿ.ಆರ್. ಅವರ ನೇತೃತ್ವದಲ್ಲಿ, ಈ ಚಿತ್ರವು ಪ್ರೇಕ್ಷಕರಿಗೆ ಆಕರ್ಷಕವಾದ ಸಿನಿಮೀಯ ರೋಡ್ ಥ್ರಿಲ್ಲರ್ ಕಥೆಯ ಅನುಭವವನ್ನು ನೀಡುತ್ತದೆ ಎಂದು ನಿರ್ದೇಶಕ ಮಂಜುನಾಥ ಟಿ. ಆರ್. ಹೇಳುತ್ತಾರೆ.

ಎನ್.ಹೆಚ್. 66 ಚಿತ್ರ ಪ್ರತಿಯೊಬ್ಬರ ಕಠಿಣ ಪರಿಶ್ರಮದಿಂದ ತುಂಬಿದ ಅದ್ಭುತ ಪ್ರಯಾಣವಾಗಿದೆ,

ನಾವೀಗ ಪೋಸ್ಟ್-ಪ್ರೊಡಕ್ಷನ್‌ಗೆ ಹೋಗಲು ಉತ್ಸುಕರಾಗಿದ್ದೇವೆ, ಮತ್ತು ಶೀಘ್ರದಲ್ಲೇ ಚಿತ್ರವನ್ನು ಕನ್ನಡ ಪ್ರೇಕ್ಷಕರ ಮುಂದೆ ತರುತ್ತಿದ್ದೇವೆ. ಚಿತ್ರೀಕರಣ ಪೂರ್ಣಗೊಂಡ ನಂತರ, ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಕೆಲಸಗಳಿಗೆ ಅಣಿಯಾಗಿದೆ, ಟೀಸರ್, ಟ್ರೇಲರ್, ಆಡಿಯೋ ಬಿಡುಗಡೆ ಕಾರ್ಯಕ್ರಮಗಳ ಕುರಿತಂತೆ ಸದ್ಯದಲ್ಲೇ ಹೆಚ್ಚಿನ ಮಾಹಿತಿ ನೀಡಲಾಗುವುದು ಎಂದು ಹೇಳಿದರು, ಸ್ವಾಮಿನಾಥನ್ ಅವರ ಸಂಗೀತ, ಸುನೀತ್ ಹಲಗೇರಿ ಅವರ ಛಾಯಾಗ್ರಹಣ, ಉಜ್ವಾಲ್ ಚಂದ್ರ ಅವರ ಸಂಕಲನ, ತ್ರಿಲೋಕ್ ತ್ರಿವಿಕ್ರಮ ಅವರ ಸಂಭಾಷಣೆ ಈ ಚಿತ್ರಕ್ಕಿದೆ.



ತೆನಾಲಿ ಡಿಎಎಲ್‌ಎಲ್‌ಬಿ ಚಿತ್ರಕ್ಕೆ ಚಾಲನೆ





ಈ ಹಿಂದೆ ನಮೋ ಭೂತಾತ್ಮ, ಕಥೆ ಚಿತ್ರಕಥೆ ನಿರ್ದೇಶನ ಪುಟ್ಟಣ್ಣ, ಡೀಲ್‌ರಾಜಾ, ಕೋಣದಂಥ ವಿಭಿನ್ನ ಚಿತ್ರಗಳಲ್ಲಿ ನಟಿಸಿ ಗುರುತಿಸಿಕೊಂಡಿರುವ ನಟ, ಸೆನ್ಸೇಷನಲ್ ಸ್ಟಾರ್ ಕೋಮಲ್ ಕುಮಾರ್ ಅವರು ಬಹಳ ದಿನಗಳ ನಂತರ ಅಭಿಮಾನಿಗಳ ಮುಂದೆ ಬರಲು ಸಜ್ಜಾಗಿದ್ದಾರೆ. ಹೌದು, ಕೋಮಲ್‌ಕುಮಾರ್ ನಾಯಕನಾಗಿ ನಟಿಸುತ್ತಿರುವ ಹೊಸ ಸಿನಿಮಾ ತೆನಾಲಿ ಡಿಎಎಲ್‌ಎಲ್‌ಬಿ ಚಿತ್ರದ ಮುಹೂರ್ತ ಸಮಾರಂಭ ಗುರುವಾರ ನೆರವೇರಿದೆ. ಸಿದ್ದುವ್ ಸಿದ್ದು ಅವರು ಈ ಚಿತ್ರಕ್ಕೆ ಕಥೆ ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ.

ಜಗ್ಗೇಶ್‌ರಿಂದ ತಮ್ಮ ಕೋಮಲ್‌ಗೆ ಕರಿ ಕೋಟು ಗಿಫ್ಟ್

ವಿಜಯನಗರದ ಆದಿಚುಂಚನಗಿರಿ ಮಠದ ಆವರಣದಲ್ಲಿ ಈ ಹೊಸ ಚಿತ್ರದ ಮುಹೂರ್ತ ಸಮಾರಂಭ ನೆರವೇರಿದೆ. ಕೋಮಲ್ ಕುಮಾರ್ ಅಭಿನಯದ ತೆನಾಲಿ ಡಿಎಎಲ್‌ಎಲ್‌ಬಿ ಚಿತ್ರಕ್ಕೆ ಸಹೋದರ, ಹಿರಿಯ ನಟ ಜಗ್ಗೇಶ್ ಅವರು ಕ್ಲಾಪ್ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಆದಿಚುಂಚನಗಿರಿ ಮಠಾಧೀಶರಾದ ನಿರ್ಮಲಾನಂದ ಮಹಾಸ್ವಾಮೀಜಿ ಅವರೂ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಇನ್ನು ತೆನಾಲಿ ಡಿಎಎಲ್‌ಎಲ್‌ಬಿ ಚಿತ್ರದ ಟೈಟಲ್ಲೇ ಹೇಳುವ ಹಾಗೆ ನಾಯಕ ಕೋಮಲ್ ಕುಮಾರ್ ಈ ಸಿನಿಮಾದಲ್ಲಿ ಒಬ್ಬ ಲಾಯರ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ನಿಜ ಜೀವನದಲ್ಲೂ ಲಾ ಓದಿಕೊಂಡಿರುವ ಕೋಮಲ್‌ಕುಮಾರ್ ಇದೀಗ ಸಿನಿಮಾದಲ್ಲೂ ಕರಿ ಕೋಟು ಹಾಕಿದ್ದಾರೆ. ಚಿತ್ರದ ಮುಹೂರ್ತದ ನಂತರ ಸಹೋದರ ನಟ ಜಗ್ಗೇಶ್ ಅವರು ತಮ್ಮ ಕೋಮಲ್‌ಗೆ ಕಪ್ಪು ಕೋಟನ್ನು ಗಿಫ್ಟ್ ಆಗಿ ನೀಡಿದರು.

ನಂತರ ಮಾತನಾಡಿದ ನಟ ಜಗ್ಗೇಶ್, ಆತ ನಿಜ ಜೀವನದಲ್ಲೂ ವಕೀಲಿ ಓದಿಕೊಂಡಿದ್ದಾನೆ, ಆತ ಸಿನಿಮಾರಂಗದ ಕಡೆ ಬರೆದಿದ್ದರೆ ಒಳ್ಳೇ ಲಾಯರ್ ಆಗಿರ್ತಿದ್ದ, ಕೋಟಿ ಹಾಕಿ ಮಾಡಿದರಷ್ಟೇ ಸಿನಿಮಾ ಅಲ್ಲ, ಎಲ್ಲ ಚಿತ್ರಗಳನ್ನೂ ನೋಡಿ ಉಳಿಸಬೇಕು, ಒಳ್ಳೆಯ ಕಂಟೆಂಟ್ ಇರುವ ಸಿನಿಮಾ ಇದಾಗಿದೆ ಎಂದು ತಮ್ಮನ ಸಿನಿಮಾಗೆ ಶುಭ ಹಾರೈಸಿದರು.

ನಂತರ ನಾಯಕನಟ ಕೋಮಲ್ ಕುಮಾರ್ ಮಾತನಾಡಿ, 'ಲಾಯರ್ ಆಗಬೇಕು ಎನ್ನುವುದು ನನ್ನ ತಂದೆಯ ಕನಸಾಗಿತ್ತು. ಈಗ ನನ್ನ ತಂದೆ ಸಮಾನರಾದ ನಮ್ಮಣ್ಣ ಕರಿಕೋಟನ್ನು ಕೊಟ್ಟಿದ್ದಾರೆ, ರಿಯಲ್ ಆಗಿ ಆಗದಿದ್ದ ಕೆಲಸವನ್ನು ರೀಲ್‌ನಲ್ಲಿ ನೆರವೇರಿಸುತ್ತಿದ್ದೇನೆ, ಚಿತ್ರದಲ್ಲಿ ಇದೇ ಕರಿಕೋಟು ಧರಿಸಿ ಆಕ್ಟ್ ಮಾಡುತ್ತಿದ್ದೇನೆ’ ಎಂದು ಹೇಳಿದರು.


ತೆನಾಲಿ ಡಿಎಎಲ್‌ಎಲ್‌ಬಿ ಚಿತ್ರದಲ್ಲಿ ಕೋಮಲ್ ಜತೆ ನಾಯಕಿಯಾಗಿ ಕಾಜಲ್‌ಕುಂದರ್ ಅವರು ಕಾಣಿಸಿಕೊಳ್ಳುತ್ತಿದ್ದಾರೆ. ಮೊದಲಬಾರಿಗೆ ಕೋಮಲ್ ಅವರ ಜೊತೆ ನಾಯಕಿಯಾಗಿ ನಟಿಸುತ್ತಿದ್ದೇನೆ, ಪಾತ್ರದ ಬಗ್ಗೆ ಈಗಲೇ ಜಾಸ್ತಿ ಹೇಳಲು ಸಾಧ್ಯವಿಲ್ಲ' ಎಂದು ಹೇಳಿದರು.



ಇನ್ನು ಈ ಸಿನಿಮಾದಲ್ಲಿ ಮತ್ತೋರ್ವ ನಟಿ ಅಕ್ಷಿತಾ ಬೋಪಯ್ಯ ಸಹ ಕಾಣಿಸಿಕೊಳ್ಳುತ್ತಿದ್ದಾರೆ. ಈ ಚಿತ್ರಕ್ಕೆ ನಿರ್ದೇಶಕ ಸಿದ್ದುವ್ ಸಿದ್ದು ಸೇರಿದಂತೆ ಸಂತೋಷ್ ಮಾಯಪ್ಪ, ಪ್ರದೀಪ್‌ಕುಮಾರ್ ಮಹಾಲಿಂಗಯ್ಯ, ರೇಣುಕಾ ಪ್ರಸಾದ್ ಅವರುಗಳು ಬಂಡವಾಳ ಹಾಕಿದ್ದಾರೆ. ರಿತ್ವಿಕ್ ಮುರಳಿಧರನ್ ಅವರು ಈ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡುತ್ತಿದ್ದು, ಉದಯ್ ಲೀಲಾ ಅವರ ಕ್ಯಾಮೆರಾ ವರ್ಕ್ ತೆನಾಲಿ ಡಿಎಎಲ್‌ಎಲ್‌ಬಿ ಚಿತ್ರಕ್ಕಿದೆ.

ವೈರಲ್ ಆಯ್ತು ರಜನಿಕಾಂತ್ ಕಂಡಕ್ಟರ್ ಐಡಿ

ಭಾರತೀಯ ಚಿತ್ರರಂಗ ಕಂಡ ಅಪರೂಪದ ನಟ ರಜನಿಕಾಂತ್. ಬೆಂಗಳೂರಿನಲ್ಲಿ ಹುಟ್ಟಿಬೆಳೆದ ಅವರು ಕನ್ನಡ, ತಮಿಳು ಸಿನಿಮಾಗಳಲ್ಲಿ ನಟಿಸಿ ದೇಶಾದ್ಯಂತ ಜನರ ಮನ ಗೆದ್ದವರು. ತಮ್ಮ ವಿಭಿನ್ನ ಸ್ಟೈಲ್, ಮ್ಯಾನರಿಸಂ ಹಾಗೂ ನಟನೆಯ ಮೂಲಕ ಸೂಪರ್‌ಸ್ಟಾರ್ ಪಟ್ಟಕ್ಕೇರಿದವರು. ಬೆಂಗಳೂರಿನಲ್ಲಿ ಬಿಟಿಎಸ್ ಬಸ್‌ಕಂಡಕ್ಟರ್ ಆಗಿದ್ದ ಶಿವಾಜಿರಾವ್ ಗಾಯಕ್‌ವಾಡ್ ನಂತರ ಮದ್ರಾಸ್ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಕಲಿತು ಚಿತ್ರರಂಗ ಪ್ರವೇಶಿಸಿದರು. ಸದ್ಯ ರಜನಿಕಾಂತ್ ಅವರ ಆಗಿನ ಬಸ್ ಕಂಡಕ್ಟರ್ ಐಡಿ ಕಾರ್ಡ್ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗ್ತಿದೆ. ಬೆಂಗಳೂರು ಸಾರಿಗೆ ಸಿಬ್ಬಂದಿ ಐಡಿ ಕಾರ್ಡ್. ಹೆಸರು- ಶಿವಾಜಿ ರಾವ್ ಗಾಯಕ್‌ವಾಡ್, ಶ್ರೀನಗರ ಡಿಪೊ, ರೂಟ್ ನಂ 10ಎ, ಎಂಪ್ಲಾಯಿ ಐಡಿ ಬಿಟಿಎಸ್/71/134, ಕೆಲಸಕ್ಕೆ ಸೇರಿದ ದಿನ 18-06-1971, ಜನ್ಮದಿನ 12-12-1950, ಬ್ಲಡ್ ಗ್ರೂಪ್ -ಬಿ+, ತಿಂಗಳ ಸಂಬಳ 275 ರೂ. ಎಂದು ನಮೂದಿಸಿರುವುದನ್ನು ನೋಡಬಹುದು.



ಬಸ್ ಕಂಡಕ್ಟರ್ ಆಗಿದ್ದಾಗಲೇ ರಜನಿಕಾಂತ್ ತಮ್ಮ ಸ್ಟೈಲ್ ಮೂಲಕ ಗಮನ ಸೆಳೆಯುತ್ತಿದ್ದರು. ವಿಷಲ್ ಹಾಕಿ ಬಸ್ ನಿಲ್ಲಿಸಲು ಸೂಚನೆ ಕೊಡುತ್ತಿದ್ದರು, ನಿಧಾನವಾಗಿ ಚಲಿಸುತ್ತಿದ್ದ ಬಸ್‌ನ್ನು ಓಡಿಬಂದು ಹತ್ತುತ್ತಿದ್ದರು, ಸ್ಟೈಲಾಗಿ ಟಿಕೆಟ್ ಹರಿಯುತ್ತಿದ್ದರು.

ಆಗ ಮೆಜೆಸ್ಟಿಕ್‌ನಿಂದ ಶ್ರೀನಗರ 10ಎ ಮಾರ್ಗದಲ್ಲಿ ಪ್ರಯಾಣಿಸುತ್ತಿದ್ದವರು ಇವತ್ತಿಗೂ ಕಂಡಕ್ಟರ್ ಶಿವಾಜಿಯನ್ನು ಮರೆತಿಲ್ಲ.

ಇವತ್ತು ಸೂಪರ್‌ಸ್ಟಾರ್ ಆಗಿದ್ದರೂ, ಭಾರತದ ಪ್ರಭಾವಿ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರೂ ನೂರಾರು ಕೋಟಿ ಆಸ್ತಿ ಒಡೆಯನಾಗಿದ್ದರೂ ರಜನಿಕಾಂತ್ ಮಾತ್ರ ಹಳೆಯ ಯಾವುದನ್ನು ಮರೆತಿಲ್ಲ. ಆಗಾಗ್ಗೆ ಬೆಂಗಳೂರಿಗೆ ಬರ್ತಾರೆ. ತಾವು ಚಿಕ್ಕಂದಿನಿಂದ ಆಡಿದ, ಓದಿಬೆಳೆದ ದಿನಗಳನ್ನು ಮೆಲುಕು ಹಾಕ್ತಾರೆ. ಅವತ್ತು ಬಸ್ ಕಂಡಕ್ಟರ್ ಆಗಿದ್ದಾಗ ತನ್ನ ಜೊತೆ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದ ರಾಜ್ ಬಹದ್ದೂರ್ ಅವರಜೊತೆ ಸ್ನೇಹವನ್ನು ಉಳಿಸಿಕೊಂಡಿದ್ದಾರೆ. 3 ವರ್ಷಗಳ ಹಿಂದೆ ಬೆಂಗಳೂರಿನ ಜಯನಗರದ ಬಿಎಂಟಿಸಿ ಬಸ್ ಡಿಪೋ ಸಂಖ್ಯೆ 4ಕ್ಕೆ ರಜನಿಕಾಂತ್ ಭೇಟಿ ನೀಡಿದ್ದರು. ಸ್ನೇಹಿತ ರಾಜ್ ಬಹದ್ದೂರ್ ಜೊತೆ ಹೋಗಿ ಕೆಲ ಹೊತ್ತು ಸಮಯ ಕಳೆದಿದ್ದರು. ಅಲ್ಲಿರುವ ಸಿಬ್ಬಂದಿ ಜೊತೆ ಫೋಟೊ ಕ್ಲಿಕ್ಕಿಸಿಕೊಂಡಿದ್ದರು.

ಪ್ರಾಕೃಪ ಸಹಕಾರಿಯ ಸಹಾಯಕ ವ್ಯವಸ್ಥಾಪಕ ಷಡಾಕ್ಷರಿಗೆ ಬೀಳ್ಕೊಡುಗೆ



• **ಹೊಸದುರ್ಗ:** ತಾಲೂಕಿನ ಸಾಣೇಹಳ್ಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸಹಾಯಕ ವ್ಯವಸ್ಥಾಪಕರಾಗಿ ಸುಮಾರು 25 ವರ್ಷಗಳ ಕಾಲ ಸೇವೆ ಸಲ್ಲಿಸಿದ ಎಸ್.ಸಿ. ಷಡಾಕ್ಷರಿ ಅವರ ಬೀಳ್ಕೊಡುಗೆ ಸಮಾರಂಭವು ಸಂಘದ ಆವರಣದಲ್ಲಿ ನಡೆಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಎಸ್.ಸಿ. ಷಡಾಕ್ಷರಿ ಅವರು, ಕಳೆದ 25 ವರ್ಷಗಳಿಂದ ಈ ಸಂಘವು ಸಾರ್ವಜನಿಕರಿಗೆ ಹಾಗೂ ರೈತರಿಗೆ ನೀಡುತ್ತಿರುವಸೇವೆಯನ್ನುಹತ್ತಿರದಿಂದ ಕಂಡಿದ್ದೇನೆ. ನನ್ನ ಸೇವಾ ಅವಧಿಯಲ್ಲಿ ಹಲವು ಏಳು ಬೀಳುಗಳನ್ನು ಎದುರಿಸಿದ್ದರೂ ಸಂಘವು ಸದಾ ರೈತರ ಪರವಾಗಿ ಕಾರ್ಯನಿರ್ವಹಿಸಿದೆ ಎಂದು ಹೇಳಿದರು.

ಲಾಕ್‌ಡೌನ್‌ನಂತಹ ಸಂಕಷ್ಟದ ಪರಿಸ್ಥಿತಿಯಲ್ಲಿಯೂ ಸಹಕಾರ ಸಂಘವು ಸದಸ್ಯರು ಹಾಗೂ ರೈತರ ಕೈಹಿಡಿದು ಆರ್ಥಿಕ ನೆರವು ನೀಡುವ ಕೆಲಸ ಮಾಡಿದೆ. ಆ ಸಂದರ್ಭವನ್ನು ಮರೆಯಲು ಸಾಧ್ಯವಿಲ್ಲ ಎಂದರು.

ಆರಂಭದಲ್ಲಿ ಸಂಘದ ಆರ್ಥಿಕ ನಿರ್ವಹಣೆಯಲ್ಲಿ ಕೆಲವು ಸವಾಲುಗಳಿದ್ದವು. ಆದರೆ ನಂತರದ ದಿನಗಳಲ್ಲಿ ಸಂಘವು ಪ್ರಗತಿಪರವಾಗಿ ಕಾರ್ಯನಿರ್ವಹಿಸಲು ಆರಂಭಿಸಿತು. ಪ್ರಸ್ತುತ ಆಡಳಿತ ಮಂಡಳಿ ಸಾಲ ಮರುಪಾವತಿ, ನವೀಕರಣ ಹಾಗೂ ಹೊಸ ಸಾಲ ವಿತರಣೆಯ ಪ್ರಕ್ರಿಯೆಗಳನ್ನು ಪಾರದರ್ಶಕವಾಗಿ ಮತ್ತು ವ್ಯವಸ್ಥಿತವಾಗಿ ನಿರ್ವಹಿಸುತ್ತಿದೆ. ಇದೇ ಕಾರಣಕ್ಕೆ ಸಂಘವು ತಾಲೂಕಿನಲ್ಲೇ ಉತ್ತಮ ಹೆಸರು ಗಳಿಸಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಇದೇ ವೇಳೆ ನಿವೃತ್ತಿ ಹೊಂದಿದ ಎಸ್.ಸಿ. ಷಡಾಕ್ಷರಿ ಅವರನ್ನು ಸಂಘದ ಆಡಳಿತ ಮಂಡಳಿ, ಗಣ್ಯರು ಹಾಗೂ ಗ್ರಾಮಸ್ಥರು ಆತ್ಮೀಯವಾಗಿ ಸನ್ಮಾನಿಸಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್ವರಪ್ಪ, ಪಿಡಿಓ ಲಿಂಗರಾಜ್, ಚಂದ್ರಶೇಖರಯ್ಯ, ನಾಗಲಿಂಗಯ್ಯ, ಬಸವರಾಜಪ್ಪ, ಸಂಘದ ಅಧ್ಯಕ್ಷ ಏಕಾಂತಪ್ಪ, ಕಾರ್ಯದರ್ಶಿ ಕುಬೇಂದ್ರಪ್ಪ ಉಪಸ್ಥಿತರಿದ್ದರು.

ತಿಪ್ಪಣ್ಣಪ್ಪ ಕಮಕನೂರ್‌ಗೆ ಸಚಿವ ಸ್ಥಾನ ನೀಡಿ: ಗಂಗಾಮತ ಸಂಘ ಒತ್ತಾಯ

• **ಶಿವಮೊಗ್ಗ:** ಹಿಂದುಳಿದ ವರ್ಗಗಳಿಗೆ ಸೇರಿದ ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ್ ಅವರಿಗೆ ಮಂತ್ರಿ ಮಂಡಳದಲ್ಲಿ ಸಚಿವ ಸ್ಥಾನ ನೀಡುವಂತೆ ಜಿಲ್ಲಾ ಗಂಗಾಮತ ಸಂಘ ಆಗ್ರಹಿಸಿದೆ.

ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಡಿ.ಬಿ. ಕೆಂಚಪ್ಪ, ತಿಪ್ಪಣ್ಣಪ್ಪ ಕಮಕನೂರ್ ಅವರ ಪರಿಷತ್ ಸದಸ್ಯತ್ವ ಅವಧಿ ಜೂನ್ 2026ಕ್ಕೆ ಪೂರ್ಣಗೊಳ್ಳಲಿದೆ. ಇವರ ಸದಸ್ಯತ್ವದ ಅವಧಿಯನ್ನು ಮುಂದಿನ ಆರು ವರ್ಷಕ್ಕೆ ವಿಸ್ತರಿಸುವುದೂ ಸೇರಿದಂತೆ ಅವರಿಗೆ ನಿಯೋಜಿತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಂತ್ರಿ ಮಂಡಲದಲ್ಲಿ ಸ್ಥಾನ ನೀಡುವಂತೆ ಕೋರಿದರು. ಗಂಗಾಮತ, ಬೆಸ್ತ, ಕೋಲಿ, ಕಬ್ಬಲಿಗ ಸಮಾಜದ ಏಕೈಕ ಶಾಸಕರಾಗಿರುವ ಇವರು ಸಾಮಾಜಿಕ ನ್ಯಾಯಕ್ಕಾಗಿ ಕಳೆದ ಅನೇಕ ವರ್ಷಗಳಿಂದ ಹೋರಾಡುತ್ತಾ ಬಂದಿದ್ದಾರೆ. ಆಡಳಿತದ ಅನುಭವ ಹೊಂದಿದ್ದಾರೆ. ಇಂತಹ ಅನುಭವಿ ಮತ್ತು ಜನಪರ ಕಾಳಜಿಯುಳ್ಳ ನಾಯಕರ ಸೇವೆ ಸಮಾಜಕ್ಕೆ ಅಗತ್ಯವಾಗಿದೆ. ಆದ್ದರಿಂದ ಇವರ ಅಧಿಕಾರಾವಧಿಯನ್ನು ಮುಂದಿನ ಆರು ವರ್ಷಗಳಿಗೆ ಮುಂದುವರಿಸುವುದೂ ಸೇರಿದಂತೆ ನೂತನ ಸಚಿವ ಸಂಪುಟದಲ್ಲಿ ಇವರಿಗೆ ಸ್ಥಾನ ಕೊಡಬೇಕು ಎಂದು ಆಗ್ರಹಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಸತ್ಯನಾರಾಯಣ ಹೆಚ್.ಎಂ, ಎಸ್.ಬಿ. ಅಶೋಕ್ ಕುಮಾರ್, ಎ.ಹಾಲೇಶಪ್ಪ, ಸತೀಶ್ ಗಾಂಧಿಬಸಪ್ಪ, ಜಗನ್ನಾಥ್, ಅಣ್ಣಪ್ಪ, ಹೆಚ್.ಎಂ.ರಂಗನಾಥ್, ಚೋರಡಿ ರಾಜೇಶ್, ಹನುಮೇಶ್ ಮೊದಲಾದವರು ಉಪಸ್ಥಿತರಿದ್ದರು.

ಸಿಎಂ ರಾಜೀನಾಮೆ ಘನತೆಗೆ ಹಿಡಿದ ಕೈಗನ್ನಡಿ: ಶೇಷಾದ್ರಿ

• **ಶಿವಮೊಗ್ಗ:** ಸಿದ್ದರಾಮಯ್ಯ ಅವರು ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವುದು ಅವರ ವ್ಯಕ್ತಿತ್ವದ ಘನತೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದಮಾಜಿ ಉಪಾಧ್ಯಕ್ಷ ಎಸ್.ಪಿ. ಶೇಷಾದ್ರಿ ಹೇಳಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಸಿದ್ದರಾಮಯ್ಯ ಅವರು ಸಾಮಾಜಿಕ ನ್ಯಾಯದ ಹರಿಕಾರರಾಗಿ ಶೋಷಿತರ, ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ ಧ್ವನಿಯಾಗಿ ನಿಂತ'ವ'ರ'ು. ಅ ವ ' ರ ' ು ಅಧಿಕಾರಕ್ಕಿಂತ ನೈತಿಕತೆ ಮುಖ್ಯ ಎಂದು ಇಡೀ ದೇಶಕ್ಕೆ ಸಾರಿದ್ದಾರೆ. ಅನ್ನಭಾಗ್ಯ, ಶಕ್ತಿ, ಗೃಹ ಜ್ಯೋತಿ, ಗೃಹಲಕ್ಷ್ಮಿ, ಯುವನಿಧಿ ಮೂಲಕ ಕೋಟ್ಯಂತರ ಕುಟುಂಬಗಳಬದುಕಿಗೆಬೆಳಕಾದರು. ಕೊಟ್ಟಮಾತಿಗೆತಪ್ಪದೆ, ನುಡಿದಂತೆ ನಡೆದ ಮನುಷ್ಯ ಪ್ರೇಮಿ ಎಂದಿದ್ದಾರೆ. ಅವರು ರಾಜೀನಾಮೆ ಕೊಟ್ಟರೂ ಜನರ ಹೃದಯ ಸಿಂಹಾಸನದಲ್ಲಿ ಸದಾ ಮುಖ್ಯಮಂತ್ರಿಯಾಗಿಯೇ ಇರುತ್ತಾರೆ, ಸಿದ್ದರಾಮಯ್ಯ ಅವರ ತ್ಯಾಗ, ಬದ್ಧತೆ, ಪ್ರಾಮಾಣಿಕತೆಗೆ ಎಲ್ಲಾ ಪಕ್ಷದವರೂ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ ಎಂದು ಎಸ್.ಪಿ. ಶೇಷಾದ್ರಿ ತಿಳಿಸಿದ್ದಾರೆ.

ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಆನ್‌ಲೈನ್ ಅರ್ಜಿ

• **ಶಿವಮೊಗ್ಗ:** 2026-27ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ ಮತ್ತು ಪ.ಜಾ, ಪ.ವರ್ಗಕ್ಕೆ ಸೇರಿದ ಪಿ.ಯು.ಸಿ., ಸಮಾನಾಂತರ ಡಿಪ್ಲೊಮಾ, ಐ.ಟಿ.ಐ. ಕೋರ್ಸಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಆನ್‌ಲೈನ್ ಅರ್ಜಿ ಆಹ್ವಾನಿಸಿದೆ. ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ಮಿತಿ ಪ್ರವರ್ಗ-1, ಎಸ್ ಸಿ ಎಸ್ ಟಿಯವರಿಗೆ ರೂ. 2.50 ಲಕ್ಷ ಹಾಗೂ ಪ್ರವರ್ಗ-2ಎ,2ಬಿ,3ಎ,3ಬಿ ವಿದ್ಯಾರ್ಥಿಗಳಿಗೆ 1 ಲಕ್ಷದೊಳಗಿರಬೇಕು. ಆಸಕ್ತರು ವೆಬ್ ಸೈಟ್ <https://shp.karnataka.gov.in/bcwd ರಲ್ಲಿ ಜೂ.15 ರೊಳಗಾಗಿ ಅರ್ಜಿ ಸಲ್ಲಿಸುವಂತೆ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗಾಗಿ ವೆಬ್ ಸೈಟ್ <https://bcwd.karnataka.gov.in/ ಪಡೆಯುವುದು ಮತ್ತು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಇಮೇಲ್ ಮುಖಾಂತರ ಅಥವಾ ಜಿಲ್ಲಾ-ತಾಲೂಕು ಅಧಿಕಾರಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸುವುದು ಹಾಗೂ ಮೊ.ಸಂ.: 8050770004 ನ್ನು ಸಂಪರ್ಕಿಸುವುದು.

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ

ಗ್ರಾ.ಕು.ನೀ ಮತ್ತು ನೈರ್ಮಲ್ಯ ಇಲಾಖೆ, ನ್ಯಾಯಾಲಯದ ರಸ್ತೆ
ಚಾಮರಾಜನಗರ ವಿಭಾಗ, ಚಾಮರಾಜನಗರ
Ph : Office & EE - 08226-226054 E-mail: eerdwsd.chn2014gmail.com

ಟೆಂಡರ್ ಪ್ರಕಟಣೆ

ಸಂಖ್ಯೆ : 01 / 2026-27 ದಿನಾಂಕ : 29.05.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಚಾಮರಾಜನಗರ ವಿಭಾಗ, ಚಾಮರಾಜನಗರ ರವರಿಂದ 2026-27 Construction of 50KL Over Head Tanks of Gundlupete Taluk (2 Packages) in Chamarajanagara District, ಕಾಮಗಾರಿಯ ಅಂದಾಜು ಮೊತ್ತವು ರೂ. 30.00 ಲಕ್ಷದಿಂದ ರೂ. 45.00 ಲಕ್ಷ ಮಿತಿಯೊಳಗೆ ಇರುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟ ಎಲ್ಲಾ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಆವೃತ್ತಿ- 2.0 kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ದಿನಾಂಕ ಮತ್ತು ಸಮಯ. 29.05.2026 ಮಧ್ಯಾಹ್ನ 3.00 ನಂತರ ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 08.06.2026, ಸಂಜೆ 17.00, ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 09.06.2026 ಬೆಳಿಗ್ಗೆ 11.00 ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 09.06.2026 ಬೆಳಿಗ್ಗೆ 11.00 ಮತ್ತು ಆರ್ಥಿಕ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಗ್ರಾ.ಕು.ನೀ ನೈರ್ಮಲ್ಯ ಇಲಾಖೆ,
ಚಾಮರಾಜನಗರ ವಿಭಾಗ, ಚಾಮರಾಜನಗರ

ಸಂ : ವಾಸಾಸಂಇ : ಚಾ.ನಗರ : 136:2026-27

ರೈತರಿಗೆ ಶುಭ ಸುದ್ದಿ

ಭಾರತ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆ ಹೊರಡಿಸಿದ ಆದೇಶ ಸಂಖ್ಯೆ S.O.2900(E), ದಿನಾಂಕ: 24-10-2015, ಅನುಸಾರ, ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಕೆಳಗಿನ 100% ಜಲದಲ್ಲಿ ಕರಗುವ ಮಿಶ್ರ ರಸಗೊಬ್ಬರಗಳನ್ನು (ದ್ರವ /ಗ್ರಾನುಲರ್ ರೂಪದಲ್ಲಿ) ಮಾರುಕಟ್ಟೆಗೆ ತರಲು ಉದ್ದೇಶಿಸಲಾಗಿದೆ.

ಮಾರುಕಟ್ಟೆಗೊಳಿಸಿದವರು: ಎಂ/ಎಸ್ ಕಿಸಾನ್ ಪ್ಲಾಂಟ್ಕೇರ್ ಪ್ರೈವೇಟ್ ಲಿಮಿಟೆಡ್, ಮೊದಲ ಮಹಡಿ, ಬಿಲ್ಡಿಂಗ್ ನಂ./ಫ್ಲಾಟ್ ನಂ.: 1-1, ಶಾಪ್ ನಂ. 2, APMC ಯಾರ್ಡ್, ಅಮರಗೋಳ್, 2ನೇ ಮೇನ್ ರಸ್ತೆ, ಹುಬ್ಬಳ್ಳಿ, ಜಿಲ್ಲೆ: ಧಾರವಾಡ, ಕರ್ನಾಟಕ - 580025.
ಇಮೇಲ್: kisanplantcare27@gmail.com, ದೂರವಾಣಿ: 7207892229

ಕ್ರಮ ಸಂಖ್ಯೆ	ರಸಗೊಬ್ಬರ	ಪ್ರಕಾರಪೋಷಕಾಂಶ ಶೇಕಡಾವಾರು
1	N:P:K	19:19:19
2	N:P:K	00:00:50
3	N:P:K:Mg:B	15:05:30:2:0.02
4	N:P:K	24:24:16
5	N:P:K	15:08:35
6	N:P:K	13:40:13
7	N:P:K:S	16:00:09:19
8	N:P:K	10:05:30
9	N:P:K	28:28:00
10	N:P:K:S	9:27:18:7.5
11	N:P:K	20:20:20

ಈ ರಸಗೊಬ್ಬರಗಳು ಬೆಳೆಗಳ ಅಭಿವೃದ್ಧಿಗೆ ಹಾಗೂ ಹೆಚ್ಚಿನ ಉತ್ಪಾದನೆಗೆ ರೈತರಿಗೆ ಸಹಾಯಕವಾಗುತ್ತವೆ.

ತಯಾರಿಸಿದವರು : ಎಂ/ಎಸ್ ಕಿಸಾನ್ ಪ್ಲಾಂಟ್ಕೇರ್ ಪ್ರೈವೇಟ್ ಲಿಮಿಟೆಡ್ ಪ್ಲಾಟ್ ನಂ. 46, ಸರ್ವೇ ನಂ. 682 ರಿಂದ 717, ಐಪಿ ದಂಡು ಮಲ್ಕಾಪುರ, ಚೌಟುಪ್ಪಲ್ ಮಂಡಲ, ದಂಡು ಮಲ್ಕಾಪುರ ಇಂಡಸ್ಟ್ರಿಯಲ್ ಪಾರ್ಕ್, ಯಾದಾದ್ರಿ ಭುವನಗಿರಿ ಜಿಲ್ಲೆ, ತೆಲಂಗಾಣ - 508252. ದಿನಾಂಕ: 30-05-2026

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ,
ಬೆಂಗಳೂರು-560001, ಕರ್ನಾಟಕ,
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080-25586321
E-mail: ho@kspcb.gov.in, Website: https://kspcb.karnataka.gov.in

ಮಾನಿಮಂ/338/ಹಿಪಅ/ಗಣಿ/ಪಸಾಸ/2026-27/802 ದಿನಾಂಕ : 29.05.2026

ಪರಿಸರ ಸಾರ್ವಜನಿಕ ಸಭೆಗಾಗಿ ಅಧಿಸೂಚನೆ

ಶ್ರೀ. ಶರಣಬಸವ ಬಿನ್ ಜಂಬಣ್ಣ ಇವರು ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕು ಚೀಕಲಪರ್ವಿ ಬ್ಲಾಕ್-04 ಗ್ರಾಮದ ಸರ್ವೆ ನಂ. 1 ಮತ್ತು 2/1ರ ಸಮೀಪದಲ್ಲಿರುವ ತುಂಗಭದ್ರ ನದಿಪಾತ್ರ ಯೋಜನೆಯ ಸಾಮಾನ್ಯ ಮರಳು ಬ್ಲಾಕ್-ಆರ್.ಎಸ್.ಬಿ.-63ರಲ್ಲಿ ಒಟ್ಟು 5.0585 ಹೆಕ್ಟೇರ್ (12.20 ಎಕರೆ) ಪ್ರದೇಶದಲ್ಲಿ ವಾರ್ಷಿಕ 83,550 ಟನ್ ಉತ್ಪಾದನಾ ಸಾಮರ್ಥ್ಯದ ನದಿ ಮರಳು ಗಣಿಗಾರಿಕೆ ಯೋಜನೆಯನ್ನು 5ವರ್ಷ ಅವಧಿಗೆ ಕೈಗೊಳ್ಳಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006 ಮತ್ತು ತಿದ್ದುಪಡಿಗಳಂತೆ ಬಿ1 ವರ್ಗದ ಚಟುವಟಿಕೆ 1(ಎ) - 'ಖನಿಜಗಳ ಗಣಿಗಾರಿಕೆ' ವರ್ಗವೆಂದು ಪರಿಗಣಿಸಲಾಗಿದೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಿಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ: SEIAA 32 MIN 2026, ದಿನಾಂಕ: 03.03.2026 ಹಾಗೂ ಯೋಜನದಾರರು ನೀಡಿದ ನಿವೇದನೆಯ ಪತ್ರ ದಿನಾಂಕ:20.03.2026ರ ಪ್ರಕಾರ ಮತ್ತು ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ರಾಯಚೂರು, ಇವರ ಪತ್ರ ದಿನಾಂಕ: 21.05.2026ರಲ್ಲಿ ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿವೆ.

1. **ಕಂಪನಿಯ ಹೆಸರು ಮತ್ತು ವಿಳಾಸ** : ಶ್ರೀ. ಶರಣಬಸವ ಬಿನ್ ಜಂಬಣ್ಣ, # 1, ಆಲ್ದಾಳ್, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ-584 102.
2. **ಉದ್ದೇಶಿತ ಯೋಜನೆಯ ಸ್ಥಳ** : ಸರ್ವೆ ನಂ. 1 ಮತ್ತು 2/1ರ ಸಮೀಪದಲ್ಲಿರುವ ತುಂಗಭದ್ರಾ ನದಿಪಾತ್ರ ಯೋಜನೆಯ ಸಾಮಾನ್ಯ ಮರಳು ಬ್ಲಾಕ್-ಆರ್.ಎಸ್.ಬಿ.-63, ಚಿಕಲಪರ್ವಿ ಬ್ಲಾಕ್-04 ಗ್ರಾಮ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ.
3. **ಉದ್ದೇಶಿತ ಯೋಜನೆಯ ವಿವರ** : ವಾರ್ಷಿಕ 83,550 ಟನ್ ಉತ್ಪಾದನಾ ಸಾಮರ್ಥ್ಯದ ನದಿ ಮರಳು ಗಣಿಗಾರಿಕೆ ಯೋಜನೆಯನ್ನು 5ವರ್ಷ ಅವಧಿಗೆ ಕೈಗೊಳ್ಳಲು ಉದ್ದೇಶಿಸಿರುತ್ತಾರೆ.
4. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ : ದಿನಾಂಕ : 30.06.2026 (ಮಂಗಳವಾರ), ಸಮಯ : ಬೆಳಿಗ್ಗೆ 10:30 ಗಂಟೆ, ಸ್ಥಳ: ಗುರು ವಿರೂಪಾಕ್ಷೇಶ್ವರ ಕಲ್ಯಾಣ ಮಂಟಪ, ಚಿಕಲಪರ್ವಿ ಗ್ರಾಮ, ಮಾದ್ಲಾಪುರ ಗ್ರಾಮ ಪಂಚಾಯಿತಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ.**
5. **ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ** : (ಅ) ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು ಜಿಲ್ಲೆ, ರಾಯಚೂರು. (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ರಾಯಚೂರು ಜಿಲ್ಲೆ, ರಾಯಚೂರು. (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಚೂರು ಜಿಲ್ಲೆ, ರಾಯಚೂರು. (ಈ) ತಹಶೀಲ್ದಾರರ ಕಾರ್ಯಾಲಯ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ. (ಉ) ಗಣಿ ಮತ್ತು ಭೂವಿಜ್ಞಾನ ಇಲಾಖೆ, ರಾಯಚೂರು ಜಿಲ್ಲೆ. (ಊ) ನಗರ ಸಭೆ ಕಾರ್ಯಾಲಯ, ಮಾನ್ವಿ, ರಾಯಚೂರು ಜಿಲ್ಲೆ. (ಋ) ಗ್ರಾಮ ಪಂಚಾಯತ್ ಕಾರ್ಯಾಲಯ, ಮಾದ್ಲಾಪುರ, ಮಾನ್ವಿ ತಾಲ್ಲೂಕು. (ಎ) ವಲಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಿಜಯನಗರ. (ಏ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಯಚೂರು. (ಐ) ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಕರ್ನಾಟಕ, ಬೆಂಗಳೂರು-560 001. (ಒ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಮಹಡಿ, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು-560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ-ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ರಾಯಚೂರು) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: **https://kspcb.karnataka.gov.in/** ನಲ್ಲಿ ಪಡೆಯಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ.

ಆಸ್ತಿ ಅಧಿಕಾರಿಯವರ ಕಛೇರಿ, ಇರುವಕ್ಕಿ, ಆನಂದಪುರ-577412, ಶಿವಮೊಗ್ಗ ಜಿಲ್ಲೆ
ದೂರವಾಣಿ : 9480838979, ಇ-ಮೇಲ್: eo@uahs.edu.in

ಸಂಖ್ಯೆ: ಕೆಶಿನಾಕೃತೋವಿವಿ(ಇ)/ಆ.ಅ/ಉಖಅ/06/2026-27 ದಿನಾಂಕ : 27.05.2026

ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ನಿರ್ದೇಶಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿಗೆ ಅವಶ್ಯಕವಿರುವ ಲ್ಯಾಪ್‌ಟಾಪ್‌ಗಳನ್ನು ಸರಬರಾಜು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ-3 ನಿಬಂಧನೆಗೊಳಪಟ್ಟಂತೆ ನೋಂದಯಿಸಲ್ಪಟ್ಟ ಆಸಕ್ತಿಯುಳ್ಳ ಅರ್ಹ ಕಂಪನಿಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನೋಟಿಫಿಕೇಷನ್, ಶೆಡ್ಯೂಲ್ ಹಾಗೂ ಟೆಂಡರ್‌ನ ವಿವರಗಳು ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ: (1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ 16.06.2026 ಸಂಜೆ 4.00 ಗಂಟೆಯವರೆಗೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 17.06.2026 ಸಂಜೆ 4.30 ಗಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 19.06.2026 ಬೆಳಿಗ್ಗೆ 10.00 ಗಂಟೆಗೆ.

ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಭಾಗವಹಿಸಲು ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಪಡೆದುಕೊಳ್ಳಬೇಕು ಹೆಚ್ಚಿನ ವಿವರಗಳಿಗಾಗಿ ಇ-ಪೋರ್ಟಲ್ ವೆಬ್‌ಸೈಟ್ ಇ-ಮೇಲ್ @ hphelpdesk.blr@intarvo.com ಅಥವಾ ಸಹಾಯವಾಣಿ ಸಂಖ್ಯೆ : 91-940214000 ಕೆಲಸದ ಎಲ್ಲಾ ದಿವಸಗಳಲ್ಲೂ ಮತ್ತು ಉಗ್ರಾಣ ಖರೀದಿ ಅಧಿಕಾರಿ, ಕೇಂದ್ರ ಉಗ್ರಾಣ, ಕೆಶಿನಾಕೃತೋವಿವಿ, ಇರುವಕ್ಕಿ, ಆನಂದಪುರ -577412, ಸಾಗರ ತಾಲ್ಲೂಕು, ಶಿವಮೊಗ್ಗ ಇವರನ್ನು ಸಂಪರ್ಕಿಸಬಹುದು.

ಸಹಿ/-
ಆಸ್ತಿ ಅಧಿಕಾರಿಗಳು, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇರುವಕ್ಕಿ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ.130-05/ಥ್ಯೇಂಕಾರ್/2026-27

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ.ಹೆಚ್. ಮರಿಗೌಡ ರಸ್ತೆ ಬೆಂಗಳೂರು-560 029
ಫೋನ್: 25536567/26096832/910/922 ಫ್ಯಾಕ್ಸ್: 080-25536105
E-mail: purchase@kmf.coop

ಸಂ. ಕಹಾಮ/ಖರೀದಿ/NPFP/ಇ-ಪ್ರೊಕ್./ಟೆಂಡರ್-928/2026 ದಿನಾಂಕ: 27.05.2026

ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾ ಮಂಡಳಿ ಬೆಂಗಳೂರು ಈ ಕೆಳಗೆ ತಿಳಿಸಿದ ಸೇವೆಯನ್ನು ಪಡೆಯಲು ದ್ವೈವಾರ್ಷಿಕ ಅವಧಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Sl. No.	Item Description	Unit	Approximate qty For the period of Two Years	EMD Amount (Rs.)
1	Transportation of Nandini Packaging Film from NPFP, Bangalore to Unions/Units of KMF (in 3MTs/ 6MTs/ 10MTs Vehicle)	MTs	7200	5,40,000/-

ಇ-ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ 18.06.2026 ರಂದು 03.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.
ಇನ್ನಿತರ ವಿವರಗಳನ್ನು ಟೆಂಡರ್‌ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸಾಮಾಜಿಕ ಅರಣ್ಯ ಉಪ-ವಿಭಾಗ, ವಿಜಯಪುರ

ಸಂಖ್ಯೆ: ವಿಜೆಪಿ/ಸಾಅವಿ/ಇ-ಪ್ರೊಕ್ಯೂರ್‌ಮೆಂಟ್/ಕ.ಟೆಂ/2026-27
ದಿನಾಂಕ: 29.05.2026

ಸಂಕ್ಷಿಪ್ತ ಮರು ಟೆಂಡರ್ ಪ್ರಕಟಣೆ

ವಿಜಯಪುರ ಸಾಮಾಜಿಕ ಅರಣ್ಯ ಉಪ-ವಿಭಾಗದ ಅಧೀನ ಸಾಮಾಜಿಕ ಅರಣ್ಯ ವಲಯಗಳಲ್ಲಿ 2026-27 ನೇ ಸಾಲಿನಲ್ಲಿ ಕೈಗೊಳ್ಳುವ ವಿವಿಧ ಯೋಜನೆಗಳಡಿ ಅನುದಾನ ನಿರೀಕ್ಷೆಯ ಮೇರೆಗೆ ನೆಡುತೋಪು ನಿರ್ಮಾಣ ಹಾಗೂ 14x20 ಅಳತೆಯ ಸಸಿಗಳನ್ನು ಬೆಳೆಸುವ ಕಾಮಗಾರಿಗಳಿಗೆ ಮರು ಟೆಂಡರ್‌ನ್ನು ದಿನಾಂಕ: 29.05.2026 ರಿಂದ 06.06.2026 ರವರೆಗೆ ಅರ್ಹ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಅರಣ್ಯೀಕರಣ ಕಾಮಗಾರಿಗಳಿಗೆ ಮರು ಟೆಂಡರ್‌ನ್ನು ಕರೆಯಲಾಗಿದೆ ಹಾಗೂ (ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: **08.06.2026 ರಂದು ಬೆಳಿಗ್ಗೆ 11.00 ಘಂಟೆಗೆ**) ಭಾಗವಹಿಸಲಿಚ್ಚಿಸುವವರು ತಮಗೆ ಅನುಕೂಲವಾಗುವ ಟೆಂಡರ್ ವಿವರಗಳನ್ನು www.kppp.karnataka.gov.in ಮೂಲಕ ಟೆಂಡರ್ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/116/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ
ಕೃಷಿ ಇಲಾಖೆ ಜಿ.ಪಂ.ಚಿತ್ರದುರ್ಗ
ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಮೊಳಕಾಲ್ಮೂರು

ದೂರವಾಣಿ ಸಂಖ್ಯೆ:08198-200033
Email:agriculture.mlk@gmail.com

ಸಂ:ಸಕೃನಿ/ಮೊ/ತಾ/ಟೆಂಡರ್/ಪ್ರಕಟಣೆ/2026-27 ದಿನಾಂಕ:26.05.2026.

ಇ-ಟೆಂಡರ್ ಪ್ರಕಟಣೆ

ಮೊಳಕಾಲ್ಮೂರು ತಾಲ್ಲೂಕು ದೇವಸಮುದ್ರ ಹೋಬಳಿಯ ರಾಂಪುರ ಗ್ರಾಮದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಲ್ಲಿರುವ, ಅವಧಿ ಮುಗಿದಿರುವ ಅನುಪಯುಕ್ತ ವಿವಿಧ ಕೃಷಿ ಯಂತ್ರೋಪಕರಣಗಳ ವಿಲೇವಾರಿಗಾಗಿ ಇ-ಟೆಂಡರ್ ಮೂಲಕ ಆಹ್ವಾನಿಸಲಾಗಿದೆ.

(1) ಟೆಂಡರ್ ಪ್ರಕಟಣೆ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದ ದಿನಾಂಕ. 26.05.2026 ಮಧ್ಯಾಹ್ನ 2.05 ಗಂಟೆ (2) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 25.06.2026 ಸಂಜೆ 5.00 ಗಂಟೆ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ. 29.06.2026 ಬೆಳಗ್ಗೆ 11.00 ಗಂಟೆ (4) ಟೆಂಡರ್ ಮೊತ್ತ ರೂ.701182/- (5) ಇ.ಎಂ.ಡಿ ಮೊತ್ತ ರೂ.14000/- (6) ಟೆಂಡರ್ ರೆಫರೆನ್ಸ್ ನಂ. AD/2026-27/SE0544
ಷರಾ: ಸ್ಥಳ-ಸಕೃನಿ ಕಛೇರಿ ಮೊಳಕಾಲ್ಮೂರು ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

DIPR/CTA/KSMCA/130/2026-27

ಸಹಿ/- ಸಹಾಯಕ ಕೃಷಿ ನಿರ್ದೇಶಕರು
ಮೊಳಕಾಲ್ಮೂರು

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 26096832/910/854 ಫ್ಯಾಕ್ಸ್: 080-25536105
ಇ-ಮೇಲ್: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್-919/2026-27 ದಿನಾಂಕ: 29.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ, ಬೆಂಗಳೂರು ಈ ಕೆಳಕಂಡ ವಿವರಗಳನ್ವಯ ಸೇವಾದಾರರನ್ನು ಗುರುತಿಸಲು ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಬೇಟಿ ನೀಡಿ ಪಡೆಯಬಹುದಾಗಿದೆ.

Sl. No.	Description	Approximate Nos.	Nominal EMD (Rs.)
1	Providing health Insurance coverage for the following 1. KMF Employees and their direct dependents, 2. Workmen Compensation policy covering casual and contract labours at all units of KMF, 3. Group Personnel Accident Policy covering KMF employees and 4. Public Liability Policy covering KMF and Its Units.	As per tender document	1,000/-

ಟೆಂಡರ್ ದಾಖಲೆಗಳನ್ನು ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು. ಯಾವುದೇ Addendum/Corrigendum ಹೊರಡಿಸಿದಲ್ಲಿ, ಅದು ಕೇವಲ KPPP ವೆಬ್‌ಸೈಟ್ https://kppp.karnataka.gov.in ನಲ್ಲಿ ಮಾತ್ರ ಲಭ್ಯವಾಗುತ್ತದೆ.

ಟೆಂಡರ್ ಪ್ರಾರಂಭವಾಗುವ ದಿನಾಂಕ : 29.05.2026 ರಿಂದ. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 05.06.2026 ರಂದು ಬೆಳಿಗ್ಗೆ 11.00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 12.06.2026 ರ ಸಂಜೆ 5.30 ಗಂಟೆ ಒಳಗಾಗಿ. ತಾಂತ್ರಿಕ ಟೆಂಡರ್ ತೆರಯುವ ದಿನಾಂಕ : 15.06.2026 ರಂದು ಬೆಳಿಗ್ಗೆ 11.00 ಗಂಟೆಗೆ. ವಾಣಿಜ್ಯ ಟೆಂಡರ್ ತೆರಯುವ ದಿನಾಂಕ : ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ.

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ, ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು - 10.
(Ph. No: 0821-2979772 E-mail:-khsdrp.divmys@gmail.com)

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವಿಭಾಗ ವ್ಯಾಪ್ತಿಗೆ ಒಳಪಡುವ ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಮೂರನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. 4 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಕನಿಷ್ಟ ಅಂದಾಜು ಮೊತ್ತ ರೂ.53,63 ರಿಂದ ಗರಿಷ್ಟ ಅಂದಾಜು ಮೊತ್ತ ರೂ.54.83 ಲಕ್ಷಗಳಾಗಿರುತ್ತವೆ.

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: **1)** ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 08.06.2026 ರಂದು 16.00 ಗಂಟೆಯವರೆಗೆ. **2)** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): 09.06.2026 ರಂದು 16.30 ಗಂಟೆಗೆ. ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸೂಚನೆ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು

ಸಹಿ/- ಕಾರ್ಯಪಾಲಕ ಅಭಿಯಂತರರು,
ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.

DIPR/DDMYS/239/KSMCA/176/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ
ಕಾರ್ಯಾಲಯ, ಅಥಣಿ-591304, ತಾ:ಅಥಣಿ ಜಿ:ಬೆಳಗಾವಿ (ಕರ್ನಾಟಕ)

ಸಂ.ಕನೀನಿನಿ/ಎಚ್.ಬಿ.ಸಿ/ಪಿಬಿ/ಕೆರೆ/ಬಾಬಾನಗರ/2026-27/595
ದಿನಾಂಕ: 26-05-2026

ಅಲ್ಪಾವಧಿ ಟೆಂಡರ್ ಅಧಿಸೂಚನೆ ಕರೆ-2

(ಕೆ.ಪಿ.ಪಿ. ಪ್ರೋಟಲ್-ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ **ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ಅಥಣಿ ತಾ:ಅಥಣಿ ಜಿ:ಬೆಳಗಾವಿ** ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಸಿ-4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, **A Valid Copy of the Registration of the firm/Company with the Register of companies** ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ **(as per KTPP act 2000)** ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ **www.kpp-portal.karnataka.gov.in** ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರಗಿಟ್ಟ ಅಂದಾಜು ಮೊತ್ತ ರೂ. 109.96 ಲಕ್ಷಗಳು

1) ಇ-ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ: 30-05-2026 ರ 10.30 ಬೆಳಿಗ್ಗೆ ರಿಂದ 06-06-2026 ರ ಸಾಯಂಕಾಲ 4.00 ಗಂಟೆ ವರಗೆ 2) ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: 04-06-2026 ರ ಸಾಯಂಕಾಲ 4.00 ಗಂಟೆ ವರೆಗೆ 3) ಪೂರ್ಣವಾಗಿ ತುಂಬಿದ ಇ-ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 30-05-2026ರ 10.30 ಬೆಳಿಗ್ಗೆ ರಿಂದ 06-06-2026 ರ ಸಾಯಂಕಾಲ 4.00 ಗಂಟೆ ವರಗೆ 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 08-06-2026 ರ ಬೆಳಿಗ್ಗೆ 11.00 ಗಂಟೆವರೆಗೆ. (ಎಚ್.ಬಿ.ಸಿ ವಿಭಾಗ ಕಚೇರಿ ಅಥಣಿಯಲ್ಲಿ) 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 10-02-2026 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೊದನೆ ನಂತರ).

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ-ಸಂಗ್ರಹಣಾ ಕೋಶ ವೆಬ್‌ಸೈಟ್ **http//:www.kppp. karnataka.gov.in/kpp-portal/index.seam link** ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಕನೀನಿನಿ ಎಚ್.ಬಿ.ಸಿ ವಿಭಾಗ, ಅಥಣಿ..

ಡಿಐಪಿಆರ್/ಬೆಳಗಾವಿ/339/ಮಣಿಪಾಲ್/2026-27

ಮಾನ್ಯ 5ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಶಿವಮೊಗ್ಗ

ಸಿ.ಮಿಸ್.ನಂ : 222/2026

ಅರ್ಜಿದಾರರು: 1) ದಿ॥ ಜಯಬಾಯಿ ಕೋಂ ಲೇಟ್ ಪಿರ್ಯಾನಾಯ್ಕ, ಪೌತಿವಾರಸುದಾರರು. 1(ಎ) ಶಾರದ ಬಾಯಿ ಬಿನ್ ಲೇಟ್ ಪಿರ್ಯಾನಾಯ್ಕ, 68 ವರ್ಷ, ವಾಸ: ದುರ್ಗಾ ಸದನ, #45, ಎ-ಬ್ಲಾಕ್, ಟೂರಿಸಮ್ ಆಫೀಸ್ ಹತ್ತಿರ, ಗೋಪಾಳಗೌಡ ಬಡಾವಣೆ ಪೊಲೀಸ್ ಲೇಔಟ್, ಶಿವಮೊಗ್ಗ. 1(ಬಿ) ನವೀನ್ ಕುಮಾರ್ ಪಿ ಬಿನ್ ದಿ ಪಿರ್ಯಾನಾಯ್ಕ, ಪ್ರಾಯ-66 ವರ್ಷ, ವಾಸ: ದುರ್ಗಾ ಸದನ,-45, ಎ-ಬ್ಲಾಕ್, ಟೂರಿಸಮ್ ಆಫೀಸ್ ಹತ್ತಿರ, ಗೋಪಾಳಗೌಡ ಬಡಾವಣೆ, ಪೊಲೀಸ್ ಲೇಔಟ್, ಶಿವಮೊಗ್ಗ. 2) ದಿ॥ಜಯಬಾಯಿ ಕೋಂ ಲೇಟ್ ಪಿರ್ಯಾನಾಯ್ಕ, ಪೌತಿವಾರಸುದಾರರು. 2(ಎ)ಪಾಪಾನಾಯ್ಕ ಬಿನ್ ದಿ॥ ಪಿರ್ಯಾನಾಯ್ಕ, 60 ವರ್ಷ ವಾಸ: ಹೊಸಹಳ್ಳಿ, ಶಿವಮೊಗ್ಗ ತಾಲ್ಲೂಕು. 2(ಬಿ) ದಿ॥ಅಮೀನ ಕೋಂ ಬಾಬಾನಾಯ್ಕ ಬಿನ್ ಲೇಟ್ ಪಿರ್ಯಾನಾಯ್ಕ, ಪೌತಿವಾರಸುದಾರರು. 2(ಬಿ) (1)ಪುಷ್ಪ ಬಿನ್ ಬಾಬಾನಾಯ್ಕ 41 ವರ್ಷ, ವಾಸ: #566,ಚಿನ್ನಸಮುದ್ರ ನೇರಲಗಿ, ದಾವಣಗೆರೆ. 2(ಬಿ) (2) ಮಂಜನಾಯ್ಕ ಬಿನ್ ಬಾಬಾನಾಯ್ಕ 37 ವರ್ಷ, ವಾಸ: ಲಕ್ಷ್ಮೀಪುರ, ಹೊಸಹಳ್ಳಿ,ಶಿವಮೊಗ್ಗ ತಾಲ್ಲೂಕು. 2(ಸಿ) ಜಯಮ್ಮ ಬಿನ್ ದಿ॥ ಪಿರ್ಯಾನಾಯ್ಕ, ಕೋಂ ದಾವನಾಯ್ಕ 43 ವರ್ಷ, ವಾಸ: ಲಕ್ಷ್ಮೀಪುರ ಹೊಸಹಳ್ಳಿ, ಶಿವಮೊಗ್ಗ ತಾಲ್ಲೂಕು. 2(ಡಿ). ಸುಮಬಾಯಿ ಬಿನ್ ದಿ॥ ಪಿರ್ಯಾನಾಯ್ಕ, ಕೋಂ ಸತೀಶ, 50 ವರ್ಷ, ವಾಸ: ಲಕ್ಷ್ಮೀಪುರ ಹೊಸಹಳ್ಳಿ, ಶಿವಮೊಗ್ಗ ತಾಲ್ಲೂಕು. 2(ಇ) ಬಾಬುನಾಯ್ಕ ಬಿನ್ ದಿ ಪಿರ್ಯಾನಾಯ್ಕ, 52 ವರ್ಷ, ವಾಸ:#534, ಜಿ-ಬ್ಲಾಕ್, ಆಶ್ರಯ ಬಡಾವಣೆ, ಬೊಮ್ಮನಕಟ್ಟೆ, ಶಿವಮೊಗ್ಗ. 2(ಎಫ್) ಲತಾ @ ಲತಿಫಾ ಬಿನ್ ದಿ॥ ಪಿರ್ಯಾನಾಯ್ಕ, ಕೋಂ ಅಬ್ದುಲ್ 43 ವರ್ಷ, ವಾಸ: ಲಕ್ಷ್ಮೀಪುರ ಹೊಸಹಳ್ಳಿ, ಶಿವಮೊಗ್ಗ ತಾಲ್ಲೂಕು. 2(ಜಿ) ಉಮೇಶ ಬಿನ್ ಲೇಟ್ ಪಿರ್ಯಾನಾಯ್ಕ 48 ವರ್ಷ, ವಾಸ: ಲಕ್ಷ್ಮೀಪುರ, ಹೊಸಹಳ್ಳಿ ಶಿವಮೊಗ್ಗ ತಾಲ್ಲೂಕು. 2(ಹೆಚ್) ಆಶಾಬಾಯಿ ಬಿನ್ ದಿ॥ ಪಿರ್ಯಾನಾಯ್ಕ, ಕೋಂ ಮಹೇಶನಾಯ್ಕ 40 ವರ್ಷ ವಾಸ: #509, ಜಿ-ಬ್ಲಾಕ್, ಆಶ್ರಯ ಬಡಾವಣೆ, ಬೊಮ್ಮನಕಟ್ಟೆ, ಶಿವಮೊಗ್ಗ.

ವಿರುದ್ಧ

ಎದುರುದಾರರು : ತಹಶೀಲ್ದಾರ್, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ.

ಸಾರ್ವಜನಿಕ ಪ್ರಕಟಣೆ


ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಅರ್ಜಿಯನ್ನು ಸಲ್ಲಿಸಿ, ಅರ್ಜಿದಾರರ ತಂದೆಯಾದ **ಪಿರ್ಯಾನಾಯ್ಕ ಬಿನ್ ರಾಮನಾಯ್ಕ** ಇವರು **ದಿನಾಂಕ:28-04-2005** ರಂದು ಮರಣ ಹೊಂದಿದ್ದು, ಆ ಸಂಬಂಧ ಮರಣ ಸಮರ್ಥನಾ ಪತ್ರ ಪಡೆಯಲು ಆದೇಶಿಸಬೇಕೆಂದು ಮೇಲ್ಕಂಡ ನ್ಯಾಯಾಲಯದಲ್ಲಿ ಕೋರಿಕೊಂಡಿರುತ್ತಾರೆ. ಸದರಿ ಮರಣ ಸಮರ್ಥನಾ ಪತ್ರ ನೀಡುವಲ್ಲಿ ಯಾರದ್ದಾದರೂ ತಂಟೆ ತಕರಾರು ಇದ್ದಲ್ಲಿ ಮೇಲ್ಕಂಡ ನ್ಯಾಯಾಲಯದಲ್ಲಿ **ದಿನಾಂಕ:04-07-2026 ರಂದು ಬೆಳಿಗ್ಗೆ 11 ಗಂಟೆಗೆ** ತಾವಾಗಲೀ ತಮ್ಮ ಅನುಮತಿ ಪಡೆದ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸುವುದು. ತಪ್ಪಿದಲ್ಲಿ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುವುದು ಎಂದು ತಿಳಿಯುವುದು.

ಅರ್ಜಿದಾರರ ಪರ ವಕೀಲರು
ವಿಜಯ್ ಬಿ.ಶೆಟ್ಟಿ
ವಕೀಲರು, ಶಿವಮೊಗ್ಗ
ದಿನಾಂಕ: 29-05-2026

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/-ಶಿರಸ್ತೇದಾರರು,
ಮಾನ್ಯ 5ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಶಿವಮೊಗ್ಗ

Hosadigantha kannada daily Printed & Published by P.S. Prakash on behalf of Jnanabharathi Prakashana Limited. Printed at Digantha Mudrana, New Thirthahalli Road, Shivamogga - 577201 and Published at 'Madhura Nilaya', 4th Cross, Durgigudi, Park Extension, Shivamogga 577202. Ph: (08182) 401752, 8861209076. Editor : P.S. Prakash, Group Editor : Vinayak S. Bhat.





ಕಿರುಸುದ್ದಿ

ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್: ವಿನೇಶ್‌ಗೆ ಸ್ಪರ್ಧಿಸಲು ಅನುಮತಿ

• **ಹೊಸದಿಲ್ಲಿ:** ಕುಸ್ತಿಪಟು ವಿನೇಶ್ ಫೋಗಾಟ್ ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ. ಈ ಮೂಲಕ ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವ ವಿನೇಶ್ ಫೋಗಾಟ್ ಬಯಕೆಗೆ ಇಂಬು ದೊರೆತಂತಾಗಿದೆ. ಇದಕ್ಕೆ ಮುನ್ನ ದಿಲ್ಲಿ ಹೈಕೋರ್ಟ್ ವಿನೇಶ್‌ಗೆ ಆಯ್ಕೆ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲು ಅನುಮತಿ ನೀಡಿತ್ತು. ಅದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿಗೆ ಹೋಗಿದ್ದ ಭಾರತೀಯ ಕುಸ್ತಿ ಒಕ್ಕೂಟವು, ಹೈಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ನೀಡಬೇಕೆಂದು ಕೋರಿತ್ತು. ಈ ಕುರಿತು ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಲು ನಿರಾಕರಿಸಿತು. ಆದರೆ ಹೈಕೋರ್ಟ್ ತನ್ನ ತೀರ್ಪಿನ ವೇಳೆ ವ್ಯಕ್ತಪಡಿಸಿದ ಹಲವಾರು ಅಭಿಪ್ರಾಯಗಳಿಗೆ ಸುಪ್ರೀಂ ಅಸಮ್ಮತಿ ಸೂಚಿಸಿದೆ. ತಾನು ಈಗ ನೀಡಿರುವ ಆದೇಶವು ಹೈಕೋರ್ಟಿನ ಆದೇಶವನ್ನು ಪುರಸ್ಕರಿಸಿದಂತಲ್ಲ ಎಂದು ಅದು ಹೇಳಿದೆ.

ಮೇ.30ರಿಂದ ಆಯ್ಕೆ ಟ್ರಯಲ್ಸ್ ಶುರುವಾಗಲಿದೆ. ವಿನೇಶ್ ಫೋಗಾಟ್ ಕುಸ್ತಿ ಒಕ್ಕೂಟದ ನಿಯಮಗಳನ್ನು ಒಪ್ಪಿಕೊಳ್ಳದ ಕಾರಣ ಅವರನ್ನು ಆಯ್ಕೆ ಟ್ರಯಲ್ಸ್‌ನಲ್ಲಿ ಪಾಲ್ಗೊಳ್ಳಲು ಕುಸ್ತಿ ಒಕ್ಕೂಟವು ನಿರಾಕರಿಸಿತ್ತು. ಅದರ ವಿರುದ್ಧ ಫೋಗಾಟ್ ನ್ಯಾಯಾಲಯದ ಮೊರೆ ಹೋಗಿದ್ದರು. ವಿನೇಶ್ ಫೋಗಾಟ್ ಅವರು ಡೋಪಿಂಗ್ ಪರೀಕ್ಷೆಗೆ ಒಳಪಡಲು ನಿರಾಕರಿಸುವುದಕ್ಕೆ ಕುಸ್ತಿ ಒಕ್ಕೂಟವು ಪ್ರಧಾನವಾಗಿ ಆಕ್ಷೇಪ ವ್ಯಕ್ತಪಡಿಸುತ್ತಿದೆ. ನ್ಯಾಯಾಲಯ ಕೂಡ ಈ ವಿಚಾರದಲ್ಲಿ ಫೋಗಾಟ್‌ರ ವರ್ತನೆಗೆ ಅಸಮಾಧಾನ ಸೂಚಿಸಿತು.

100 ಮೀ. ಓಟ: ಭಾರತಕ್ಕೆ ಕಂಚು

• **ಹೊಸದಿಲ್ಲಿ:** ಭಾರತದ ನಿಪಮ್ 20ರ ಕೆಳಹರಯದ ಏಷ್ಯನ್ ಗೇಮ್ಸ್‌ನ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಕಂಚಿನ ಪದಕ ಪಡೆದಿದ್ದಾರೆ. ಭಾರತವು ಅಂತಾರಾಷ್ಟ್ರೀಯ ಕ್ರೀಡಾಕೂಟದಲ್ಲಿ 100 ಮೀಟರ್ ಮಹಿಳಾ ವಿಭಾಗದ ಸ್ಪರ್ಧೆಯಲ್ಲಿ ಪದಕವೊಂದನ್ನು ಗೆಲ್ಲುತ್ತಿರುವುದು 25 ವರ್ಷಗಳ ಬಳಿಕವಾಗಿದೆ. ನಿಪಮ್ 11.62 ಸೆಕೆಂಡುಗಳಲ್ಲಿ ಗುರಿ ತಲುಪಿ ಮೂರನೆಯ ಸ್ಥಾನ ಪಡೆದರು. ಕತಾರ್‌ನ ದಾನಾ ನೂರ್ ಚಿನ್ನ ಗಳಿಸಿದರೆ,



ಚೀನಾದ ಕ್ಸಿನ್‌ಕ್ಸುವಾನ್ ಬೆಳ್ಳಿ ಪಡೆದರು. ಉತ್ತರ ಪ್ರದೇಶದವರಾದ ನಿಪಮ್ 100 ಮೀಟರ್ ಓಟದಲ್ಲಿ ರಾಷ್ಟ್ರೀಯ ದಾಖಲೆ ಹೊಂದಿದ್ದಾರೆ.

ಫೀಫಾ ವಿಶ್ವಕಪ್: ಅರ್ಜೆಂಟೀನಾ ತಂಡ ಪ್ರಕಟ, ಮೆಸ್ಸಿ ನಾಯಕ

• **ಚೆನ್ನೈ:** 2026ರ ಫೀಫಾ ಫುಟ್ಬಾಲ್ ವಿಶ್ವಕಪ್‌ಗೆ 26 ಸದಸ್ಯರ ಅರ್ಜೆಂಟೀನಾ ತಂಡವನ್ನು ಕೋಚ್ ಲಿಯೊನೆಲ್ ಸ್ಕಲೋನಿ ಪ್ರಕಟಿಸಿದ್ದು, 38 ವರ್ಷದ ಲಿಯೊನೆಲ್ ಮೆಸ್ಸಿ ಹಾಲಿ ಚಾಂಪಿಯನ್ ಅರ್ಜೆಂಟೀನಾ ತಂಡವನ್ನು ಮುನ್ನಡೆಸಲಿದ್ದಾರೆ. ಕಳೆದ ಬಾರಿ 2022ರ ಕತಾರ್ ವಿಶ್ವಕಪ್‌ನಲ್ಲಿ ತಮ್ಮ ನಾಯಕತ್ವದಲ್ಲಿ ಅರ್ಜೆಂಟೀನಾ ಗೆಲ್ಲಿಸಿ ಟ್ರೋಫಿಗೆ ಮುತ್ತಿಟ್ಟಿದ್ದರು. ಈ ಬಾರಿ ಬಹುಶಃ ಮೆಸ್ಸಿ ಕೊನೆಯ ವಿಶ್ವಕಪ್ ಆಗಿರುವ ಸಾಧ್ಯತೆಯಿದೆ. ಆದರೆ ಗಾಯದಿಂದ ಬಳಲುತ್ತಿದ್ದ ಮೆಸ್ಸಿ ವಿಶ್ವಕಪ್ ಆಡುತ್ತಾರೋ ಇಲ್ಲವೋ ಎಂಬ ಊಹಾಪೋಹಗಳಿದ್ದವು. ಎಲ್ಲದಕ್ಕೂ ಕೋಚ್ ಸ್ಕಲೋನಿ ತೆರೆ ಎಳೆದಿದ್ದಾರೆ. ಇಂಟರ್ ಮಯಾಮಿ ಕ್ಲಬ್ ಪರ ಮೇಜರ್ ಲೀಗ್ ಆಡುತ್ತಿದ್ದಾಗ ಮೆಸ್ಸಿ ಗಾಯಗೊಂಡಿದ್ದರು.

ಐಪಿಎಲ್‌ನಲ್ಲಿ ಸ್ಮಾರ್ಟ್‌ಗ್ಲಾಸ್ ಬಳಕೆ ನಿಷೇಧಿಸಿದ ಬಿಸಿಸಿಐ

• **ಹೊಸದಿಲ್ಲಿ:** ಐಪಿಎಲ್‌ನಲ್ಲಿ ಆಟಗಾರರು ಹಾಗೂ ಪಂದ್ಯಾಧಿಕಾರಿಗಳು ಸ್ಮಾರ್ಟ್ ಸನ್‌ಗ್ಲಾಸ್ ಬಳಸುವುದನ್ನು ಬಿಸಿಸಿಐ ಭ್ರಷ್ಟಾಚಾರ ವಿರೋಧಿ ಘಟಕ (ಎಸಿಎಸ್‌ಯು) ನಿಷೇಧಿಸಿದೆ. ಈ ಸಾಧನಗಳಲ್ಲಿ ಲೈವ್ ಸ್ಟ್ರೀಮಿಂಗ್, ವಿಡಿಯೋ ಕಾಲ್ ಹಾಗೂ ಸಂದೇಶ ವಿನಿಮಯದಂತಹ ಸುಧಾರಿತ ಸಂವಹನ ಸೌಲಭ್ಯಗಳಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ. ಲೀಗ್ ಫ್ರಾಂಚೈಸಿಗಳಿಗೆ ನೀಡಿದ ಸಲಹಾ ಪತ್ರದಲ್ಲಿ, ಕೆಲವು ಕಂಪನಿಗಳು ಆಟಗಾರರು ಹಾಗೂ ಸಹಾಯಕ ಸಿಬ್ಬಂದಿಗೆ ಸ್ಮಾರ್ಟ್ ಸನ್‌ಗ್ಲಾಸ್‌ಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಈ ಸಾಧನಗಳಲ್ಲಿ ಲೈವ್ ಸ್ಟ್ರೀಮಿಂಗ್, ಸಂದೇಶ ಕಳುಹಿಸುವುದು ಮತ್ತು ಸ್ವೀಕರಿಸುವುದು, ಮೊಬೈಲ್ ಡೇಟಾ ಅಥವಾ ವೈ-ಫೈ ಮೂಲಕ ಆಡಿಯೋ ಹಾಗೂ ವಿಡಿಯೋ ಕರೆ ಮಾಡುವ ಸಾಮರ್ಥ್ಯಗಳಿವೆ. ಆದ್ದರಿಂದ, ಆಟಗಾರರು ಮತ್ತು ಪಂದ್ಯಾಧಿಕಾರಿಗಳು ಸ್ಮಾರ್ಟ್ ಗಾಗಲ್ಸ್‌ಗಳನ್ನು ಹೊಂದಿರುವುದು ಅಥವಾ ಬಳಸುವುದು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ ಎಂದು ಬಿಸಿಸಿಐ ಸ್ಪಷ್ಟಪಡಿಸಿದೆ.

ಮಹಿಳಾ ಹಾಕಿ: ಆಸ್ಟ್ರೇಲಿಯಾ ವಿರುದ್ಧ ಭಾರತಕ್ಕೆ 2-0 ಜಯ

• **ಪರ್ತ್:** ಮಹಿಳಾ ನೇಷನ್ಸ್ ಕಪ್ ಹಾಕಿ ಪಂದ್ಯಾವಳಿಗೆ ಮುನ್ನ ಆಸ್ಟ್ರೇಲಿಯಾ ಪ್ರವಾಸದಲ್ಲಿರುವ ಭಾರತೀಯ ಮಹಿಳಾ ಹಾಕಿ ತಂಡವು ಆತಿಥೇಯರ ವಿರುದ್ಧ ಶುಕ್ರವಾರದ ಸ್ನೇಹ ಪಂದ್ಯದಲ್ಲಿ 2-0 ಗೋಲ್‌ಗಳಿಂದ ಗೆಲುವು ಸಾಧಿಸಿದೆ. ನಾಲ್ಕು ಪಂದ್ಯಗಳ ಹಾಕಿ ಸರಣಿಯಲ್ಲಿ ಭಾರತ ವನಿತೆಯರು 2-1 ಗೆಲುವಿನ ಮುನ್ನಡೆ ದಾಖಲಿಸಿದರು.

ಸಾಯಿ ಸುದರ್ಶನ್ 58 ರನ್, ನಾಯಕ ಶುಬ್ಮನ್ 104 ರನ್ | ವೈಭವ್ ಹೋರಾಟ ವ್ಯರ್ಥ

ನಾಳೆ ಆರ್‌ಸಿಬಿ-ಗುಜರಾತ್ ಫೈನಲ್!

• **ಚಂಡೀಗಢ:** ರಾಜಸ್ಥಾನ ನೀಡಿದ 215 ರನ್ ಸವಾಲನ್ನು ಸುಲಭದಲ್ಲಿ ಬೆನ್ನತ್ತಿದ ಶುಬ್ಮನ್ ಗಿಲ್ ನೇತೃತ್ವದ ಗುಜರಾತ್ ಟೈಟಾನ್ಸ್ ಐಪಿಎಲ್ 2026ರ ಫೈನಲ್ ಪ್ರವೇಶಿಸಿದೆ. ತಾವೇ ಫೈನಲಿಸ್ಟ್, ಐಪಿಎಲ್ ಟ್ರೋಫಿ ಗೆಲ್ಲೋದು ಎಂಬ ರೀತಿಯಲ್ಲಿ ಗುಜರಾತ್ ಫೈನಲ್‌ಗೆ ಗಜಗಾಂಭೀರ್ಯದಿಂದ ಫೈನಲ್‌ಗೆ ಲಗ್ಗೆ ಇಟ್ಟಿದ್ದು, ಮೇ 31ರಂದು ಭಾನುವಾರ ನಡೆಯುವ ಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡವನ್ನು ಎದುರಿಸಲಿದೆ.

ಪವರ್‌ಪ್ಲೇ 6 ಓವರ್‌ಗಳಲ್ಲಿ ಗುಜರಾತ್ ವಿಕೆಟ್‌ನಷ್ಟವಿಲ್ಲದೆ ಭರ್ಜರಿ 69 ರನ್ ಸ್ಕೋರ್ ಮಾಡುವ ಮೂಲಕ ಪ್ರಾಬಲ್ಯ ಮೆರೆದಿತ್ತು. ಆತ್ಮವಿಶ್ವಾಸದಿಂದ ಬ್ಯಾಟ್ ಬೀಸಿದ ಗುಜರಾತ್ ನಾಯಕ ಶುಬ್ಮನ್ ಗಿಲ್ ಮತ್ತು ಸಾಯಿ ಸುದರ್ಶನ್ ರಾಜಸ್ಥಾನ ಡಗೌಟ್, ಅಭಿಮಾನಿಗಳಲ್ಲಿ ನಿರಾಸೆ ಮೂಡಿಸಿದರು. ಸೂರ್ಯವಂಶಿ ಬ್ಯಾಟಿಂಗ್ ಮರೆಸುವಂತೆ ಬ್ಯಾಟೆತ್ತಿ ಎತ್ತಿ ಹೊಡೆದ ಇಬ್ಬರು ಆರಂಭಿಕರು ಮೊದಲ ವಿಕೆಟ್‌ಗೆ 12.5 ಓವರ್‌ಗಳಲ್ಲಿ 167 ರನ್ ಪೇರಿಸಿದರು. ದ್ವಿತೀಯ ಕ್ವಾಲಿಫೈಯರ್‌ನಲ್ಲಿ ಸೂರ್ಯವಂಶಿ ಸ್ಫೋಟಕ 96 ರನ್, ಜಡೇಜಾ ಅಜೇಯ 45 ರನ್ ಹಾಗೂ ಇನ್ನಿಂಗ್ಸ್ ಕೊನೆಯಲ್ಲಿ ಫೆರೇರಾ ನೀಡಿದ ಅದ್ಭುತ ಫಿನಿಶಿಂಗ್ ಟಚ್ ನೆರವಿನಿಂದ ರಾಜಸ್ಥಾನ ರಾಯಲ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 214 ರನ್ ಕಲೆಹಾಕಿತು. ಟಾಸ್ ಗೆದ್ದ ರಾಜಸ್ಥಾನ ರಾಯಲ್ಸ್ ಬ್ಯಾಟಿಂಗ್ ಆಯ್ದುಕೊಂಡಿತು. ಮೊದಲ ಓವರ್‌ನಲ್ಲಿಯೇ ವೇಗಿ ಮೊಹಮ್ಮದ್ ಸಿರಾಜ್ ವಿಕೆಟ್ ಕಬಳಿಸಿದರು.

ಕಳೆದ ಪಂದ್ಯದಲ್ಲಿ 21 ಎಸೆತಗಳಲ್ಲಿ ಅರ್ಧ ಶತಕ ದಾಖಲಿಸಿದ್ದ ಧ್ರುವ್ ಜ್ಯುರೆಲ್(7) ಕಗಿಸೊ ರಬಾಡ ವೇಗದ ಬಲೆಗೆ ಸಿಲುಕಿದರು. ಒಟ್ಟಿನಲ್ಲಿ ಯಾವುದೇ ರಾಯಲ್ ಬ್ಯಾಟರ್ ಹೆಚ್ಚು ಹೊತ್ತು ನಿಂತಿಲ್ಲ.

ಸುದರ್ಶನ ಮತ್ತೊಮ್ಮೆ ಹಿಟ್ ವಿಕೆಟ್!: ಸ್ಫೋಟಕ ಆಟವಾಡಿದ ಸುದರ್ಶಮ್ 58 ರನ್ ಗಳಿಸಿದ್ದಾಗ ಸತತ 2ನೇ ಬಾರಿಗೆ ಹಿಟ್ ವಿಕೆಟ್ ಆಗಿದ್ದಾರೆ. ಇದು ಐಪಿಎಲ್ ಇತಿಹಾಸದ 15ನೇ ಹಾಗೂ ಸುದರ್ಶನ್ ಅವರ 3ನೇ ಹಿಟ್‌ವಿಕೆಟ್.



- 46 ರನ್ ಗಳಿಸಿದ್ದಾಗ ಸುದರ್ಶನ್‌ರಿಂದ ವೈಭವ್‌ಗೆ ಜೀವದಾನ
- ಎಲಿಮಿನೇಟರ್‌ನಲ್ಲಿ ವೈಭವ್ 97, ಕ್ವಾಲಿಫೈಯರ್ -2ನಲ್ಲಿ 96 ರನ್

ಮತ್ತೊಮ್ಮೆ ವೈಭವ್ ಶತಕವಂಚಿತ

ಯಾರ್ಕರ್ ಎಸೆದರೂ ಸುತ್ತಿಗೆಯಲ್ಲಿ ಹೊಡೆದಂತೆ ಚೆಂಡನ್ನು ಬೌಂಡರಿ ಗಟ್ಟುವ ವೈಭವ್ ಜಿಟಿ ಬೌಲರ್‌ಗಳನ್ನು ಕಾಡಿದರು. ರಬಾಡ, ಸಿರಾಜ್, ಹೋಲ್ಡರ್‌ರಂತಹ ವೇಗಿಗಳಿಗೆ ಕರುಣೆ ತೋರಿಸದೆ ಬೌಂಡರಿ ಸಿಕ್ಸರ್‌ಗಳನ್ನು ಚಚ್ಚಿದರು. ನಿರಂತರ ವಿಕೆಟ್‌ಗಳನ್ನು ಕಳೆದುಕೊಂಡ ರಾಜಸ್ಥಾನದ ರನ್‌ರೇಟ್ ಕಾಯ್ದುಕೊಂಡು ಆಪದ್ಬಾಂಧವನಾದರು. ದ್ವಿತೀಯ ಕ್ವಾಲಿಫೈಯರ್‌ನಲ್ಲಿ ಜಿಟಿ ವಿರುದ್ಧ ವೈಭವ್ ಆಟವು 90ರ ದಶಕದ ಸಚಿನ್ ತೆಂಡುಲ್ಕರ್ ಆಟವನ್ನು ನೆನಪಿಸಿದ್ದು ಸುಳ್ಳಲ್ಲ. ಹಿಂದಿನ ಇನ್ನಿಂಗ್ಸ್‌ಗಳಿಗೂ ಈ ಇನ್ನಿಂಗ್ಸ್‌ಗೂ ಅಜಗಜಾಂತರ ವ್ಯತ್ಯಾಸ ಕಂಡುಬಂದಿತ್ತು. ತಂಡದ ಇತರ ಬ್ಯಾಟರ್‌ಗಳ ವೈಫಲ್ಯದ ಜವಾಬ್ದಾರಿ ಹೆಗಲಿಗೇರಿಸಿಕೊಂಡ 15ರ ಪೋರ ತಮ್ಮ ಬ್ಯಾಟ್ ಎತ್ತಿ ಬೀಸುತ್ತಿದ್ದ ಪರ ಯಾವ ಕ್ರಿಕೆಟ್ ಅಭಿಮಾನಿಯೂ ಮರೆಯುವಂತಿಲ್ಲ. ಕೆಲವೊಂದು ಹೊಡೆತಗಳೂ ಮಿಸ್‌ಹಿಟ್ ಆಗಿ ಆಗಸದೆತ್ತರ ಹೋಗಿ ಬಿದ್ದರೂ ಯಾವ ಕ್ಷೇತ್ರರಕ್ಷಕರಿಲ್ಲದ ಜಾಗಗಳಲ್ಲಿ ಬಿದ್ದಿದ್ದರಿಂದ ವೈಭವ್ ಔಟಾಗಲಿಲ್ಲ. ಆದರೆ ರಬಾಡ ಎಸೆದ ಶಾರ್ಟ್ ಎಸೆತವನ್ನು ಬಲವಾಗಿ ಹೊಡೆಯುವ ಪ್ರಯತ್ನದಲ್ಲಿ ಡೀಪ್ ಥರ್ಡ್ ಮ್ಯಾನ್ ಕ್ಷೇತ್ರದಲ್ಲಿ ಪ್ರಸಿದ್ಧ್‌ಗೆ ಸುಲಭ ಕ್ಯಾಚಿತ್ತರು. ವೈಭವ್ ಔಟಾಗುತ್ತಿದ್ದಂತೆ ಒಂದು ಕ್ಷಣ ಸಂಪೂರ್ಣ ನಿಶ್ಶಬ್ದ ಆವರಿಸಿದ್ದು, ಆಮೇಲೆ ಪ್ರೇಕ್ಷಕರ ಕರತಾಡನ ಲಭಿಸಿತು. ಕಳೆದ ಪಂದ್ಯದಂತೆ ಮತ್ತೊಮ್ಮೆ ಶತಕ ಪೂರೈಸುವಲ್ಲಿ ವಿಫಲರಾದರು. 47 ಎಸೆತಗಳಿಂದ 96 ರನ್ ಗಳಿಸಿದ್ದ ಅವರು 7 ಸಿಕ್ಸರ್ ಮತ್ತು 8 ಬೌಂಡರಿ ಬಾರಿಸಿದ್ದರು. ಕೆಲವು ಇನ್ನಿಂಗ್ಸ್ ಶತಕಗಳಿಗೂ ಮೀರಿದ್ದು, ವೈಭವ್ ಔಟಾದಾಗ ರಾಯಲ್ಸ್ ಸ್ಕೋರ್ 172ಕ್ಕೆ 6.

ದುಬಾರಿ ಕೊನೆಯ ಓವರ್: 4 ಸಿಕ್ಸರ್!

ಲೆಗ್‌ಸ್ಪಿನ್ನರ್ ರಶೀದ್ ಖಾನ್ ಎಸೆದ ಇನ್ನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಡೊನೊವನ್ ಫೆರೇರಾ ಸತತ 3 ಸಿಕ್ಸರ್‌ಗಳನ್ನು ಬಾರಿಸುವ ಮೂಲಕ ರಾಯಲ್ಸ್ ಸ್ಕೋರ್ 200ರ ಗಡಿ ದಾಟಿಸಿದರು. ಕೊನೆಯ ಎಸೆತದಲ್ಲಿ ಇನ್ನೊಂದು ಸಿಕ್ಸರ್ ಹೊಡೆದ ಫೆರೇರಾ 11 ಎಸೆತಗಳನ್ನು ಎದುರಿಸಿ 38 ರನ್ ಚಚ್ಚಿದರು. ಮುರಿಯದ 7ನೇ ವಿಕೆಟ್‌ಗೆ ಫೆರೇರಾ ಮತ್ತು ಜಡೇಜಾ 16 ಎಸೆತಗಳಿಂದ ಭರ್ಜರಿ 42 ರನ್ ಸೇರಿಸಿದರು. ರಶೀದ್ ಎಸೆದ ಕೊನೆಯ ಓವರ್‌ನಲ್ಲೇ 27 ರನ್ ಹರಿದುಬಂತು. ಅದರಲ್ಲಿ 4 ಸಿಕ್ಸರ್ ಸಹಿತ 26 ರನ್ ಫೆರೇರಾ ಬಾರಿಸಿದ್ದರು.

ಶುಬ್ಮನ್ ಗಿಲ್ ಸ್ಫೋಟಕ ಶತಕ!

ಇತ್ತೀಚೆಗೆ 2026ರ ಭಾರತ ಟಿ20 ವಿಶ್ವಕಪ್ ತಂಡದಲ್ಲಿ ಆಯ್ಕೆಯಾಗದ ಏಕದಿನ, ಟೆಸ್ಟ್ ತಂಡದ ನಾಯಕ ಶುಬ್ಮನ್ ಗಿಲ್ ತಮ್ಮನ್ನು ಟಿ20ಗೆ ಅನ್‌ಫಿಟ್ ಎಂದವರಿಗೆ ಸ್ಫೋಟಕ ಶತಕದ ಮೂಲಕ ತಕ್ಕ ಪ್ರತ್ಯುತ್ತರ ನೀಡಿದ್ದಾರೆ. 200+ ಸ್ಟ್ರೈಕ್‌ರೇಟ್‌ನಲ್ಲಿ 49 ಎಸೆತಗಳಲ್ಲೇ ಶತಕ ದಾಖಲಿಸಿದ್ದಾರೆ. ಜಿಟಿ ನಾಯಕನಾಗಿ ಶತಕ ದಾಖಲಿಸಿದ್ದಷ್ಟೇ ಅಲ್ಲದೆ ಜಿಟಿ ತಂಡವನ್ನು 3ನೇ ಬಾರಿಗೆ ಫೈನಲ್ ಗೇರಿಸಿದ್ದಾರೆ.



ಮೊದಲ ಟಿ20: ಮಂದನಾ ಪಡೆಗೆ 38 ರನ್ ಗೆಲುವು

• **ಲಂಡನ್:** ಭಾರತೀಯ ಮಹಿಳೆಯರು ಇಂಗ್ಲೆಂಡ್ ವಿರುದ್ಧದ ಮೊದಲ ಟಿ20 ಪಂದ್ಯವನ್ನು 38 ರನ್‌ಗಳಿಂದ ಜಯಿಸಿ ಸರಣಿಯಲ್ಲಿ ಮುನ್ನಡೆ ಸಾಧಿಸಿದ್ದಾರೆ.

ಮೊದಲು ಬ್ಯಾಟ್ ಮಾಡಿದ ಭಾರತವು ನಿಧಾನ ಆರಂಭ ತೋರಿದರೂ ಬಳಿಕ 7ವಿಕೆಟ್ ಕಳಕೊಂಡು 188 ರನ್ ಗಳಿಸಲು ಶಕ್ತವಾಯಿತು. ಇದಕ್ಕುತ್ತರವಾಗಿ ಇಂಗ್ಲೆಂಡ್ 8 ವಿಕೆಟಿಗೆ 150 ರನ್ ಗಳಿಸಲಷ್ಟೆ ಶಕ್ತವಾಯಿತು. ಭಾರತವು ಮೊದಲ ಓವರಿನಲ್ಲೆ ಸ್ಮೃತಿ ಮಂಧಾನ ಮತ್ತು ಶೆಫಾಲಿ ಅವರನ್ನು ಕಳಕೊಂಡರೂ ಯಸ್ತಿಕಾ ಭಾಟಿಯಾ (54) ಮತ್ತು ಜೆಮಿಮಾ ರೋಡ್ರಿಗಸ್ (69) ಮೂರನೇ ವಿಕೆಟ್‌ಗೆ 76 ಎಸೆತಗಳಲ್ಲಿ 126 ರನ್ ಕಲೆಹಾಕುವ ಮೂಲಕ ತಂಡಕ್ಕೆ ಆಸರೆ ನೀಡಿದರು. ಇಬ್ಬರೂ 31 ಎಸೆತಗಳಲ್ಲಿ ಅರ್ಧ ಶತಕ ಪೂರೈಸಿದ್ದರು. 2024ರ ಏಪ್ರಿಲ್ ಬಳಿಕ ಯಸ್ತಿಕಾ ಮೊದಲ ಟಿ20 ಆಡಿದ್ದರು. ವೇಗಿ ಲೌರೆನ್ ಬೆಲ್ ಪ್ರಮುಖ ವಿಕೆಟ್‌ಗಳನ್ನು ಕಬಳಿಸಿದ್ದರು. ದೀಪ್ತಿ ಶರ್ಮಾ 22 ರನ್ ಗಳಿಸಿದರು. ಇಂಗ್ಲೆಂಡ್ ಪರ 48 ಎಸೆತಗಳಿಂದ 67 ರನ್ ಹೊಡೆದ ಜೋನ್ಸ್‌ವೊಬ್ಬರೆ ಹೋರಾಟ ಪ್ರದರ್ಶಿಸಿದ್ದರು. ಭಾರತದ ಪರವಾಗಿ ಪದಾರ್ಪಣಾ ಪಂದ್ಯವನ್ನಾಡಿದ ನಂದಿನಿ ಶರ್ಮಾ 3 ವಿಕೆಟ್ ಹಾಗೂ ಕ್ರಾಂತಿ ಗೌಡ 2 ವಿಕೆಟ್ ಗಳಿಸಿದರು. ಮೂರು ಪಂದ್ಯಗಳ ಟಿ20 ಸರಣಿಯಲ್ಲಿ ಸ್ಮೃತಿ ಮಂದನಾ ನೇತೃತ್ವದ ಭಾರತ 1-0 ಮುನ್ನಡೆಯನ್ನು ಸಾಧಿಸಿದೆ. ಮುಂದಿನ ತಿಂಗಳು (ಜೂ.12ರಿಂದ) ಆರಂಭವಾಗುವ ಮಹಿಳಾ ಟಿ20 ವಿಶ್ವಕಪ್‌ಗೂ ಮುನ್ನ ಇದು ಭಾರತದ ಕೊನೆಯ ಸರಣಿಯಾಗಿದೆ. ಜೂ.14ರಂದು ಭಾರತೀಯರು ಪಾಕಿಸ್ತಾನ ವನಿತೆಯರನ್ನು ಎದುರಿಸಲಿದ್ದಾರೆ.



ಸಂಕ್ಷಿಪ್ತ ಸ್ಕೋರ್

ಭಾರತ 188/7(20): ಜೆಮಿಮಾ 69(40), ಯಸ್ತಿಕಾ 54(40), ಲೌರೆನ್ ಬೆಲ್ 34ಕ್ಕೆ 3.
ಇಂಗ್ಲೆಂಡ್ 150/8(20): ಜೋನ್ಸ್ 67(48), ನಂದಿನಿ 34ಕ್ಕೆ 3, ಕ್ರಾಂತಿ 24ಕ್ಕೆ 2.
ಪಂದ್ಯಶ್ರೇಷ್ಠ: ಜೆಮಿಮಾ ರಾಡ್ರಿಗ್ಸ್

- ಪದಾರ್ಪಣಾ ಪಂದ್ಯದಲ್ಲಿ 3ವಿಕೆಟ್ ಕಬಳಿಸಿದ ನಂದಿನಿ
- ಸಿಡಿದ ಜೆಮಿಮಾ, ಯಸ್ತಿಕಾ ಚೊಚ್ಚಲ ಅರ್ಧ ಶತಕ

ಮುಂಬೈ ಇಂಡಿಯನ್ಸ್ ತೊರೆಯಲಿರುವ ಪಾಂಡ್ಯ

ಚೆನ್ನೈಗೆ ಹಾರ್ದಿಕ್ ಸ್ವಾಗತ?

• **ಮುಂಬೈ:** ಹಾರ್ದಿಕ್ ಪಾಂಡ್ಯ ಮುಂಬೈ ಇಂಡಿಯನ್ಸ್ ತೊರೆಯಲಿದ್ದಾರೆಂದು ವರದಿಯಾಗಿದೆ. ಮಾನಸಿಕವಾಗಿ ತೀವ್ರ ಒತ್ತಡ ಮತ್ತು ಮುಂಬೈ ನಿರ್ವಹಣೆಯಿಂದ ನಿರಾಶೆಗೆ ಒಳಗಾಗಿರುವ ಹಾರ್ದಿಕ್ ಫ್ರಾಂಚೈಸಿ ತೊರೆಯುವ ನಿರ್ಧಾರವನ್ನು ಫ್ರಾಂಚೈಸಿ ಮಾಲಕರಿಗೆ ಕೆಲದಿನಗಳ ಹಿಂದೆಯೇ ತಿಳಿಸಿದ್ದಾರೆನ್ನಲಾಗಿದೆ. ಮುಂಬೈ ಹಾರ್ದಿಕ್‌ರನ್ನು ಚೆನ್ನೈ ಸೂಪರ್ ಕಿಂಗ್ಸ್ ಜತೆ ವಿನಿಮಯ ಮಾಡಿಕೊಳ್ಳುವ ಸಾಧ್ಯತೆಯಿದೆ.



ಐಪಿಎಲ್ ಟೂರ್ನಿಯ ಮಧ್ಯಂತರದ ವೇಳೆಯೇ ಪಾಂಡ್ಯ ಈ ನಿರ್ಧಾರ ತಳೆದಿದ್ದಾರೆಂದು ಹೇಳಲಾಗುತ್ತಿದೆ. ಅವರು ಚೆನ್ನೈ ಸೂಪರ್ ಕಿಂಗ್ಸ್ ಸೇರಲಿದ್ದಾರೆಂಬ ಮಾತುಗಳೂ ಕೇಳಿಬರುತ್ತಿವೆ. ಇನ್ನೂ ಅಧಿಕೃತವಾಗಿಲ್ಲ. 32ರ ಹರೆಯದ ಪಾಂಡ್ಯಾ 2024ರಲ್ಲಿ ಮುಂಬೈ ಇಂಡಿಯನ್ಸ್ ನಾಯಕರಾಗಿ ನೇಮಕರಾಗಿದ್ದರು. ರೋಹಿತ್‌ರಿಂದ ಪಾಂಡ್ಯರಿಗೆ ನಾಯಕತ್ವ ವರ್ಗಾಯಿಸಿದ ಬಗ್ಗೆ ಆಗಲೇ ಅಸಮಾಧಾನದ ಮಾತುಗಳು ಕೇಳಿಬಂದಿದ್ದವು. ಕಳೆದ ವರ್ಷದ ಐಪಿಎಲ್‌ನಲ್ಲಿ ಮುಂಬೈ ಉತ್ತಮ ನಿರ್ವಹಣೆ ತೋರಿರಲಿಲ್ಲ. ಈ ಬಾರಿಯಂತೂ ಇನ್ನೂ ಕಳಪೆ ನಿರ್ವಹಣೆ ತೋರಿತ್ತು. ಪಾಂಡ್ಯ ಮತ್ತು ಮುಂಬೈ ಇಂಡಿಯನ್ಸ್ ಪರಸ್ಪರ ಬೇರ್ಪಡಲು ಸೌಹಾರ್ದಯುತವಾಗಿ ಸಮ್ಮತಿಸಿದ್ದಾರೆಂದು ಹೇಳಲಾಗಿದೆ. ಪಾಂಡ್ಯ ಮಾನಸಿಕವಾಗಿ ತುಂಬಾ ಒತ್ತಡಕ್ಕೆ ಒಳಗಾಗಿದ್ದಾರೆ ಮತ್ತು ಬಳಲಿದ್ದಾರೆ. ಜತೆಗೇ ಬೆನ್ನು ನೋವಿಗೂ ಒಳಗಾದರು. ತಂಡವು ಪ್ಲೇಆಫ್‌ಗೆ ಏರಲು ವಿಫಲವಾದ ಬಳಿಕ ಅವರು ಮುಂಬೈ ತೊರೆಯಲು ನಿರ್ಧರಿಸಿದರು ಎಂದು ಅವರನ್ನು ಬಲ್ಲ ಮೂಲಗಳು ಹೇಳಿವೆ. ಹಿರಿಯ ನಾಯಕರು ಪಾಂಡ್ಯ ಅವರಿಗೆ ಪೂರ್ಣ ಸಹಕಾರ ನೀಡಲಿಲ್ಲ, ಆಟದಲ್ಲೂ ಸಂಪೂರ್ಣ ನಿರ್ವಹಣೆ ತೋರಲಿಲ್ಲ, ಇದು ಪಾಂಡ್ಯಾಗೆ ನೋವು ತಂದಿತು ಎಂದು ಮೂಲಗಳು ತಿಳಿಸಿವೆ.

ಪಾಂಡ್ಯ ನಿರ್ಗಮನದಿಂದಾಗಿ ರೋಹಿತ್ ಶರ್ಮಾ ಅವರು ಮುಂದಿನ ವರ್ಷದ ಐಪಿಎಲ್‌ಗೆ ತಂಡದ ನಾಯಕರಾಗಿ ಪುನರಾಯ್ಕೆಗೊಳ್ಳುವ ಸಾಧ್ಯತೆಗಳೂ ಇವೆ.

ಸುಳಿವು ನೀಡಿದ ಹಾರ್ದಿಕ್

ಹಾರ್ದಿಕ್ ಮತ್ತವರ ಸ್ನೇಹಿತೆ ಮಹೀಕಾ ಶರ್ಮಾ ತಮ್ಮ ಇನ್‌ಸ್ಟಾಗ್ರಾಂನಲ್ಲಿ ಚೆನ್ನೈ ಸೇರುವ ಸುಳಿವು ನೀಡಿದ್ದಾರೆ. ಇತ್ತೀಚೆಗೆ 07:07 ಎಂಬ ಸಮಯದ ಸ್ಟೋರಿ ಹಾಗೂ ಹಾರ್ದಿಕ್ ಫ್ರಾನ್ಸ್ ಪ್ರವಾಸದ ಹೆಲಿಕಾಪ್ಟರ್ ರೈಡ್ ಚಿತ್ರಗಳನ್ನು ಹಂಚಿಕೊಂಡಿದ್ದರು. ಮಹೀಕಾ ಹೆಲಿಕಾಪ್ಟರ್ ಹೆಲಿಕಾಪ್ಟರ್ ಎಂದು ಕಾಮೆಂಟ್ ಮಾಡಿದ್ದರು. ಎಂಎಸ್ ಧೋನಿ ಜನ್ಮದಿನ ಜು.7 ಮತ್ತು ಅವರು ಹೆಲಿಕಾಪ್ಟರ್ ಶಾಟ್‌ಗೆ ಪ್ರಸಿದ್ಧರು.

ಕಳಪೆ ಪ್ರದರ್ಶನ, ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನ

ನಾಯಕತ್ವಕ್ಕೆ ರಿಷಬ್ ರಾಜೀನಾಮೆ

• **ಲಖನೌ:** ಐಪಿಎಲ್‌ನಲ್ಲಿ ಲಖನೌ ಸೂಪರ್ ಜೈಂಟ್‌ನ ಕಳಪೆ ನಿರ್ವಹಣೆಯ ಹೊಣೆ ಹೊತ್ತುಕೊಂಡಿರುವ ರಿಷಬ್ ಪಂತ್ ನಾಯಕತ್ವ ತ್ಯಜಿಸಿದ್ದಾರೆ. ಈ ಬಾರಿಯ ಐಪಿಎಲ್‌ನಲ್ಲಿ ಲಖನೌ ಸೂಪರ್ ಜೈಂಟ್ಸ್ ಕೇವಲ 4 ಜಯ ಸಾಧಿಸಿ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನ ಪಡೆದಿತ್ತು. ಕಳೆದ ವರ್ಷ ಕೂಡಾ ಎಲ್‌ಎಸ್‌ಜಿ ಗಳಿಸಿದ್ದು 7ನೇ ಸ್ಥಾನವನ್ನು.

ರಿಷಬ್ ಪಂತ್ ನಾಯಕನಾಗಿಯಷ್ಟೇ ಅಲ್ಲದೆ ಬ್ಯಾಟಿಂಗ್‌ನಲ್ಲೂ ವೈಫಲ್ಯ ಕಂಡಿದ್ದರು. 2025ರಲ್ಲಿ ಋತುವಿನಲ್ಲಿ ರಿಷಬ್ 133.16 ಸ್ಟ್ರೈಕ್ ರೇಟ್‌ನಲ್ಲಿ 269 ರನ್ ಗಳಿಸಿದ್ದರು. ಈ ವರ್ಷ ಅವರು ಗಳಿಸಲಾದುದು 138.05 ಸ್ಟ್ರೈಕ್ ರೇಟ್‌ನಲ್ಲಿ ಕೇವಲ 312 ರನ್‌ಗಳನ್ನು. 2025ರಲ್ಲಿ ಎಲ್‌ಎಸ್‌ಜಿ ರಿಷಬ್ ಅವರನ್ನು 27 ಕೋಟಿ ರೂ. ದುಬಾರಿ ಬೆಲೆಗೆ ಖರೀದಿಸಿತ್ತು. ಆದರೆ ಅವರು ತಮ್ಮ ಫ್ರಾಂಚೈಸಿಯ ನಿರೀಕ್ಷೆ ಉಳಿಸಿಕೊಳ್ಳಲು ಶಕ್ತರಾಗಲಿಲ್ಲ.



ಐಪಿಎಲ್‌ನ ಲೀಗ್ ಹಂತದ ಪಂದ್ಯ ಮುಗಿದ ಕೂಡಲೇ ಎಲ್‌ಎಸ್‌ಐ ನಿರ್ದೇಶಕ ಟಾಮ್ ಮೂಡಿ ಅವರು ನಾಯಕತ್ವ ಬದಲಾವಣೆಯ ಸುಳಿವು ನೀಡಿದ್ದರು. ರಿಷಬ್ ಪಂತ್ ಬದಲಿಗೆ ಬೇರೆಯವರನ್ನು ನಾಯಕನಾಗಿ ನೇಮಿಸುವುದಾಗಿ ಹೇಳಿದ್ದರು. ಅದರ ಬೆನ್ನಿಗೇ ಈಗ ರಿಷಬ್ ನಾಯಕತ್ವದಿಂದ ಕೆಳಗಿಳಿದಿದ್ದಾರೆ.

ಚಿರಾಗ್-ರಾಂಕಿರೆಡ್ಡಿ ಸೆಮಿಫೈನಲ್ ಎಂಟ್ರಿ

• **ಸಿಂಗಾಪುರ:** ಸಿಂಗಾಪುರ ಓಪನ್ ಬ್ಯಾಡ್ಮಿಂಟನ್‌ನಲ್ಲಿ ಶುಕ್ರವಾರ ಭಾರತವು ಮಿಶ್ರಫಲ ಅನುಭವಿಸಿತು. ಮಹಿಳಾ ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧು ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಹೊರಬಿದ್ದರೆ, ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಸೆಮಿಫೈನಲ್‌ಗೆ ಪ್ರವೇಶ ಪಡೆಯಿತು.

ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರಿಬ್ಬರೂ ಕ್ವಾರ್ಟರ್ ಫೈನಲಿನಲ್ಲಿ ಮಲೇಶಿಯಾದ ಕಾಂಗ್ ಕಾಯಿ ಕ್ಸಿಂಗ್ ಮತ್ತು ಆರೋನ್ ಥಾಯ್ ಜೋಡಿಯ ವಿರುದ್ಧ 19-21, 21-17, 21-13 ಸೆಟ್‌ಗಳ ಪ್ರಯಾಸದ ಗೆಲುವು ಕಂಡರು. ಮೊದಲ ಸೆಟ್‌ನಲ್ಲಿ ಭಾರತೀಯ ಜೋಡಿ ಕಠಿಣ ಸವಾಲು ನೀಡಿದರೂ ಸೋಲು ಕಾಣಬೇಕಾಯಿತು. ಆದರೆ ಎರಡನೇ ಮತ್ತು ಮೂರನೇ ಸೆಟ್‌ನಲ್ಲಿ ಪ್ರತಿಹೋರಾಟ ನೀಡಿ ಗೆಲುವು ಸಾಧಿಸಲು ಸಫಲರಾದರು. ಇದೇ ವೇಳೆ, ಪಿ.ವಿ. ಸಿಂಧು ಅವರ ಜೈತ್ರಯಾತ್ರೆಯು ಕ್ವಾರ್ಟರ್ ಫೈನಲ್‌ನಲ್ಲಿ ಅಂತ್ಯ ಕಂಡಿತು. ಅವರು ಒಲಿಂಪಿಕ್ ಚಾಂಪಿಯನ್ ಹಾಗೂ ವಿಶ್ವ ನಂಬರ್ 1 ಆಟಗಾರ್ತಿ ಆನ್ ಸೆ ಯಂಗ್ ವಿರುದ್ಧ 17-21, 14-21 ನೇರ ಸೆಟ್‌ಗಳ ಸೋಲು ಕಂಡರು. ಸಿಂಧು ಮೊದಲ ಸೆಟ್‌ನಲ್ಲಿ ಹೋರಾಟಕಾರಿ ಮನೋಭಾವ ಪ್ರದರ್ಶಿಸಿದರಾದರೂ ಎದುರಾಳಿಯ ಆಕ್ರಮಣಕಾರಿ ಆಟದೆದುರು ಕೊನೆಗೂ ಮಣಿಯಬೇಕಾಯಿತು. ಎರಡನೇ ಸೆಟ್‌ನಲ್ಲಿ ಯಂಗ್ ಸುಲಭ ಜಯ ಸಾಧಿಸಿದರು.

ಸಿಂಗಾಪುರ ಓಪನ್: ಪಿವಿ ಸಿಂಧು ಜೈತ್ರಯಾತ್ರೆ ಅಂತ್ಯ

ಏಷ್ಯನ್ ಅಥ್ಲೆಟಿಕ್ಸ್: ಹಲವು ಪದಕಗಳನ್ನು ಗೆದ್ದ ಭಾರತ



ಹಾಂಕಾಂಗ್: ಭಾರತದ ಹಲವು ಕ್ರೀಡಾಪಟುಗಳು ಚೀನಾದಲ್ಲಿ ನಡೆಯುತ್ತಿರುವ 20ರ ಕೆಳಹರಯದ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಪದಕಗಳನ್ನು ಗೆದ್ದು ಮಿಂಚಿದ್ದಾರೆ. ವನಿತೆಯರ ಡಿಸ್ಕಸ್ ಎಸೆತದಲ್ಲಿ ಅಮಾನತ್ (52.27 ಮೀ.) ಸ್ವರ್ಣ, ಪುರುಷರ ಡೆಕಾಥ್ಲಾನ್‌ನಲ್ಲಿ 7,185 ಅಂಕಗಳನ್ನು ಸಂಪಾದಿಸಿದ ರಾಹುಲ್ ಸ್ವರ್ಣ ಮತ್ತು 6854 ಅಂಕಗಳನ್ನು ಸಂಪಾದಿಸಿದ ಉಪ್ಕಾರ್ ರಜತ ಪದಕ ಗೆದ್ದರು. ಮಹಿಳೆಯರ 400 ಮೀ. ಓಟದಲ್ಲಿ ನೀರು ಪಾಠಕ್ 53.23 ಸೆಕೆಂಡುಗಳಲ್ಲಿ ಗುರಿಮುಟ್ಟಿ ಕಂಚು ಗೆದ್ದಿದ್ದಾರೆ. ಪುರುಷರ 5000 ಮೀ. ಓಟ ನಡಿಗೆಯಲ್ಲಿ ನಿತಿನ್ ಗುಪ್ತಾ ಸ್ವರ್ಣ ಮತ್ತು ಮಹಿಳೆಯರ ಟ್ರಿಪಲ್ ಜಂಪ್ ಸ್ಪರ್ಧೆಯಲ್ಲಿ ಸಾಧನಾ ರವಿ 12.84 ಮೀ. ಜಿಗಿತದೊಂದಿಗೆ ರಜತ ಪದಕ ಗೆದ್ದುಕೊಂಡರು.

ವನಿತೆಯರ ಎತ್ತರ ಜಿಗಿತ (ಹೈಜಂಪ್) ಸ್ಪರ್ಧೆಯಲ್ಲಿ ಭಾರತದ ಪೂಜಾ 1.93 ಮೀ. ಜಿಗಿತದೊಂದಿಗೆ ಸ್ವರ್ಣ ಪದಕ ಗೆದ್ದಿದ್ದಾರೆ. ಭಾರತದ ಪಾಲಿಗೆ ಇದೊಂದು ಐತಿಹಾಸಿಕ ಜಿಗಿತವಾಗಿದೆ.

ಸಮುದ್ರದ ಅಲೆಯ ನಡುವೆ ರೋಮಾಂಚಕ ಪ್ರದರ್ಶನ

• **ಮಂಗಳೂರು:** ಮಂಗಳೂರಿನ ತಣ್ಣೀರ್‌ಭಾವಿ ಬ್ಲೂ ಬೇ ಇಕೋ ಬೀಚ್‌ನಲ್ಲಿ ಶುಕ್ರವಾರ ಏಳನೇ ಆವೃತ್ತಿಯ ಎನ್‌ಎಂಪಿಎ ಇಂಡಿಯನ್ ಓಪನ್ ಆಫ್ ಸರ್ಫಿಂಗ್ ಆರಂಭಗೊಂಡಿದ್ದು, ಸರ್ಫರ್‌ಗಳು ಸಮುದ್ರದ ಅಲೆಗಳ ನಡುವೆ ಅದ್ಭುತ ಪ್ರದರ್ಶನ ನೀಡುವ ಮೂಲಕ ಅಲ್ಲಿ ಸೇರಿದ್ದವರನ್ನು ಚಕಿತರನ್ನಾಗಿಸಿದರು. ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ಸರ್ಫರ್‌ಗಳು ಸಮುದ್ರ ಅಲೆಗಳ ಮಧ್ಯೆ ತಮ್ಮ ಕೌಶಲ್ಯ ಪ್ರದರ್ಶಿಸಿ ಪ್ರೇಕ್ಷಕರ ಮನಗೆದ್ದರು.

ಮೊದಲ ದಿನ ಭಾರತದ ಶ್ರೇಷ್ಠ ಸರ್ಫರ್‌ಗಳು ತಮ್ಮ ಸಾಮರ್ಥ್ಯವನ್ನು ತೋರಿದರು. ಉದ್ಘಾಟನಾ ಸಮಾರಂಭದಲ್ಲಿ ಮಾಜಿ ಸಚಿವ ಅಭಯಚಂದ್ರ ಜೈನ್, ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ದಿಲೀಪ್ ಕುಮಾರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಉಪ ನಿರ್ದೇಶಕ ಪ್ರದೀಪ್ ಡಿಸೋಜ, ಸರ್ಫಿಂಗ್ ಫೆಡರೇಷನ್ ಆಫ್ ಇಂಡಿಯಾದ ಉಪಾಧ್ಯಕ್ಷ ರಾಮ್ ಮೋಹನ್ ಪರಾಂಜಪೆ, ಕರ್ನಾಟಕ ಸರ್ಫಿಂಗ್ ಅಸೋಸಿಯೇಷನ್‌ನ ಉಪಾಧ್ಯಕ್ಷ ದೀಕ್ಷಿತ್ ಸುವರ್ಣ, ಕಾರ್ಯದರ್ಶಿ ಶಮಂತ್ ಕುಮಾರ್, ಸರ್ಫಿಂಗ್ ಸ್ವಾಮಿ ಫೌಂಡೇಶನ್‌ನ ಅಧ್ಯಕ್ಷ ಧನಂಜಯ್ ಶೆಟ್ಟಿ ಮತ್ತು ಭಾರತೀಯ ಕ್ರೀಡಾ ಪ್ರಾಧಿಕಾರದ ಅಥ್ಲೀಟ್ ರಿಲೇಷನ್ಸ್ ಮ್ಯಾನೇಜರ್ ಸೌರಭ್ ವರ್ಮಾ ಉಪಸ್ಥಿತರಿದ್ದರು.



ಇಂಡಿಯನ್ ಓಪನ್ ಆಫ್ ಸರ್ಫಿಂಗ್ 2026, ಭಾರತದ ಸರ್ಫರ್‌ಗಳ ಉತ್ತಮ ಸಾಧನೆ

ಸರ್ಫಿಂಗ್ ಮೊದಲ ದಿನದ ಫಲಿತಾಂಶ: ರಾಷ್ಟ್ರೀಯ ಸರ್ಫಿಂಗ್‌ನ ಮೊದಲ ದಿನದ ಸ್ಪರ್ಧೆಗಳು ಪುರುಷರ ಮತ್ತು ಮಹಿಳೆಯರ ಮುಕ್ತ ವಿಭಾಗ ಹಾಗೂ 18 ವರ್ಷದೊಳಗಿನ ಬಾಲಕರು ಮತ್ತು 14 ವರ್ಷದೊಳಗಿನ ಬಾಲಕರ ವಿಭಾಗಗಳಲ್ಲಿ ನಡೆದವು.


ಮಹಿಳೆಯರ ಓಪನ್ ವಿಭಾಗದಲ್ಲಿ ಕಮಾಲಿ ಮೂರ್ತಿ, ಶುಗರ್ ಶಾಂತಿ ಬನಾಸ್ಸೆ, ಇಶಿತಾ ಮಾಳವೀಯ, ದೇವಿ ರಾಮನಾಥನ್, ಸಾನ್ವಿ ಹೆಗ್ಡೆ ಮತ್ತು ಸೃಷ್ಟಿ ಸೆಲ್ವಂ ಸೆಮಿಫೈನಲ್ ತಲುಪಿದ್ದು, ಈ ಪಂದ್ಯಗಳು ಚಾಂಪಿಯನ್‌ಶಿಪ್‌ನ ಅಂತಿಮ ದಿನದಂದು ನಡೆಯಲಿವೆ. ಪುರುಷರ ಓಪನ್ ವಿಭಾಗದಲ್ಲಿ 12 ಹೀಟ್ಸ್‌ಗಳ ಮೊದಲ ಸುತ್ತು ಪೂರ್ಣಗೊಂಡರೆ, ಮಹಿಳೆಯರ ಓಪನ್ ವಿಭಾಗವು ಕ್ವಾರ್ಟರ್ ಫೈನಲ್ ಹಂತವನ್ನು ತಲುಪಿತು. ಜೂನಿಯರ್ ವಿಭಾಗಗಳಲ್ಲೂ ತೀವ್ರ ಪೈಪೋಟಿ ಕಂಡುಬಂದಿದ್ದು, 18 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಮೊದಲ ಸುತ್ತಿನ ಹೀಟ್ಸ್‌ಗಳು ನಡೆದವು ಹಾಗೂ ಹೊಸದಾಗಿ ಪರಿಚಯಿಸಲಾದ 14 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ಪಂದ್ಯಗಳು ನಡೆದವು.

ಪ್ರಮುಖ ಪ್ರದರ್ಶನ: ಕಿಶೋರ್ ಕುಮಾರ್ (12.90 ಅಂಕ), ರಮೇಶ್ ಬೂದಿಹಾಳ್ (12.57), ತಯಿನ್ ಅರುಣ್ (12.10), ಸಂಜಯ್ ಕುಮಾರ್ ಎಸ್ (11.84), ಅಜೀಶ್ ಅಲಿ (11.74), ಅಖಿಲನ್ ಎಸ್ (11.66), ಶಿವರಾಜ್ ಬಾಬು (11.33), ಸಂಜಯ್ ಸೆಲ್ವಮಣಿ (11.33), ಹರೀಶ್ ಎಮ್ (10.27), ಶ್ರೀಕಾಂತ್ ಡಿ (9.33), ರುಬೆನ್ ವಿ (7.93) ಮತ್ತು ಸೋಮ ಶೇಖ (7.30) ಅಂಕಗಳನ್ನು ಪಡೆದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ

5999



ಎಡದಿಂದ ಬಲಕ್ಕೆ

2.ತನ್ನಲ್ಲಿ ತಾನು ಸಂತೋಷಗೊಳ್ಳುವದು (4)
4.ಬೀಸುತ್ತಿರುವ ವಾಯು (2)
5.ತೀವ್ರವಾದ ಆಸೆಯಿಲ್ಲಿ ತಿರುಗಿದೆ (3)
6.ಕಣ್ಣಿನಲ್ಲಿ ಬೆಂಕಿಯುಳ್ಳವನು-ಶಿವ (5)
9.ಭಾರತೀಯ ನಾಟ್ಯಶಾಸ್ತ್ರದ ಒಂಬತ್ತು ಭಾವಗಳು (4)
10.ಸೇರುವಿಕೆ-ಕೂಡುವಿಕೆಯಿದು (4)
13.ಸಂಪತ್ತಿನ ಅಧಿದೇವತೆ-ಲಕ್ಷ್ಮಿ (5)
15.ಮನೆಯ ಮೇಲಿನ ಅಂತಸ್ತು (3)
17.ಕೊಡದೇ ಉಳಿಸಿಕೊಂಡದ್ದು (2)
18. ಸಂಗೀತದಲ್ಲಿನ ಕಾಲಗಣನೆ (4)

ಮೇಲಿನಿಂದ ಕೆಳಕ್ಕೆ

1.ಬೀಳುವುದು-ಪತನ ಎಂಬರ್ಥದ ಶಬ್ದ (2)
2.ಗಡಿಬಿಡಿಯಿಂದ ಕೆಲಸ ಮಾಡುವವನು (5)
3.ಶಾಲೆಗೆ ಬಿಡುವು ಇರುವ ದಿವಸ (4)
4.ಮಂತ್ರವಿದ್ಯೆ-ಮಾಯಾಜಾಲವಿದು (3)
7.ಕೃಷ್ಣನ ಸಾಕುತಾಯಿಯ ಹೆಸರು (4)
8.ಹೆಚ್ಚು ತಿಳಿದುಕೊಳ್ಳಬೇಕೆಂಬ ಅಪೇಕ್ಷೆ (4)
11.ಮರ್ಯಾದೆ-ಅವಮರ್ಯಾದೆ ಕೂಡಿ ಕಾಣುತ್ತಿವೆ (5)
12. ಬಲಿಷ್ಠವಾದ ಎಂಬರ್ಥದ ಶಬ್ದ (4)
14. ಬೆಳಕಿನ ರಶ್ಮಿ ತಲೆಕೆಳಗಾಗಿದೆ (3)
16. ಕಂದಮೂಲದ ಸಮಾನಪದ (2)

5998 ಉತ್ತರ

ಎಡದಿಂದ ಬಲಕ್ಕೆ:
3.ಜಾಜ್ವಲ್ಯಮಾನ
5.ಹಡಗು 6.ಲಕ್ಷ್ಮಣ
8.ಅಂಕಣ 9.ವಾಕ್ಯ
10.ಘೋರ 13.ಜ್ಯಾಮಿತಿ
15.ಪದವಿ 17.ಚಾದರ
18.ದಿನಬಳಕೆ

ಮೇಲಿನಿಂದ ಕೆಳಕ್ಕೆ :
1.ತಹತಹಿಸು 2.ಅಂಗುಲ
4.ಮಾಲಿಕ 7.ಗಣ
8.ಅಂಜೂರ 9.ವಾಕ್ಪತಿ
11.ತಲೆಹರಟೆ 12.ಪಾಪ
14.ಮಿಥುನ 16.ವಿಚಾರ